ವಿಶ್ವವಾಣಿ
ವಿಶ್ವಾಸವೇ ವಿಶ್ವ

ಇದೋ ನಿಮಗೊಂದು ಅಪೂರ್ವ ಆಹ್ವಾನ

ಟ್ರಾವೆಲ್ ಡಾಕ್ಯುಮೆಂಟರಿ ಕಂಟೆಸ್ಟ್

ನಿಮ್ಮ ನೆಚ್ಚಿನ ಪ್ರವಾಸಿ ತಾಣದ ದೃಶ್ಯಕಥಾನಕವನ್ನು ನಿಮ್ಮದೇ ಶೈಲಿಯಲ್ಲಿ ಅದ್ಭುತವಾಗಿ ನೀವು ರೂಪಿಸಬಲ್ಲಿರಾ?

ನೀವು ಮಾಡಬೇಕಾಗಿರೋದು ಇಷ್ಟೇ, ನಿಮಗಿಷ್ಟದ ಅಥವಾ ನಿಮ್ಮ ಸುತ್ತಲಿನ ಯಾವುದೇ ಪ್ರವಾಸಿ ಸ್ಥಳದ ವಿಡಿಯೋ ಶೂಟ್ ಮಾಡಿ. ಅದನ್ನು ಎಡಿಟ್ ಮಾಡಿ, ವಾಯ್ಸ್ ಓವರ್ ಅಥವಾ ನಿರೂಪಣೆ ನೀಡಿ 8-10 ನಿಮಿಷಗಳ ಆಕರ್ಷಕ ಡಾಕ್ಯುಮೆಂಟರಿಯನ್ನಾಗಿ ರೂಪಿಸಿ. ಆ ಡಾಕ್ಯುಮೆಂಟರಿಯನ್ನು ನಮಗೆ ಕಳುಹಿಸಿಕೊಡಿ.

ನಿಮ್ಮ ಪ್ರವಾಸದ ಅನುಭವವನ್ನು ಗೆಲುವಿನ ಕಥೆಯನ್ನಾಗಿ ರೂಪಿಸಿ!

ಅತ್ಯುತ್ತಮ ಡಾಕ್ಯುಮೆಂಟರಿಗೆ ಆಕರ್ಷಕ ನಗದು ಬಹುಮಾನ

ಪ್ರಥಮ ಬಹುಮಾನ

₹ 50,000

ದ್ವಿತೀಯ ಬಹುಮಾನ

₹ 25,000

ತೃತೀಯ ಬಹುಮಾನ

₹ 15,000

3 ಪ್ರೋತ್ಸಾಹದಾಯಕ ಬಹುಮಾನ: ತಲಾ ₹**5000**

ಡಾಕ್ಯುಮೆಂಟರಿ ಸಲ್ಲಿಸಲು ಕೊನೆಯ ದಿನಾಂಕ:
20 ಏಪ್ರಿಲ್ 2025

ನಿಯಮಗಳು

- **ಡಾಕ್ಯುಮೆಂಟರಿಯ ಅವಧಿ:** ಕನಿಷ್ಠ ಎಂಟು ನಿಮಿಷ, ಗರಿಷ್ಠ ಹತ್ತು ನಿಮಿಷ.
- **ವಿಡಿಯೋ ಗುಣಮಟ್ಟ:** ಕನಿಷ್ಠ 1080p (HD)
- ತೀರ್ಪುಗಾರರ ತೀರ್ಮಾನವೇ ಅಂತಿಮ..
- ವಿಡಿಯೋಗಳನ್ನು **wetransfer** ಅಥವಾ **pcloud** ಮೂಲಕ ಕಳಿಸುವುದು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

+91 63622 93229
connect@vishwavani.news
#TravelDocumentaryContest #WinBig

ಸೂಚನೆ:
ಸ್ಪರ್ಧೆಗೆ ಕಳುಹಿಸಲಾದ ಡಾಕ್ಯುಮೆಂಟರಿ ವಿಶ್ವವಾಣಿ ಸಂಸ್ಥೆಯ ಬೌದ್ಧಿಕ ಸ್ವತ್ತು ಆಗಿರುತ್ತದೆ

ಬಂದ್‌ಗೆ ಅಥಣಿಯಲ್ಲಿ ಮಿಶ್ರ ಪ್ರತಿಕ್ರಿಯೆ

ಕರವೇ ಕಾರ್ಯಕರ್ತರಿಂದ ಪ್ರತಿಭಟನಾ ಮೆರವಣಿಗೆ | ನಾಡದ್ರೋಹಿ ಕೃತ್ಯ ಎಸಗುವವರನ್ನು ಗಡಿಪಾರು ಮಾಡಿ

ಅಥಣಿ: ರಾಜ್ಯದಲ್ಲಿ ಪುಂಡಾಟಿಕೆ ನಡೆಸುತ್ತಿರುವ ಎಂಇಎಸ್ ನಿಷೇಧ ಸೇರಿದಂತೆ ನೆನೆಗುದಿಗೆ ಬಿದ್ದಿರುವ ಕಳಸಾ ಬಂಡೂರಿ ನಾಲೆ, ಮೇಕೆದಾಟು ಯೋಜನೆ, ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ ಅಭಿವೃದ್ಧಿ ಆದ್ಯತೆ ಸೇರಿದಂತೆ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಮಾಜಿ ಶಾಸಕ, ಕನ್ನಡಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಕರೆ ನೀಡಿದ ಕರ್ನಾಟಕ ಬಂದ್‌ಗೆ ಅಥಣಿ ಪಟ್ಟಣದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಪಟ್ಟಣದ ಬಹುತೇಕ ವ್ಯಾಪಾರಿಗಳು ತಮ್ಮ ಅಂಗಡಿ ಮುಗ್ಗಟ್ಟುಗಳನ್ನು ಬಂದ್ ಮಾಡಿ ಕನ್ನಡಪರ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಶಾಲಾ ಕಾಲೇಜುಗಳು ಮತ್ತು ಸಾರಿಗೆ ವ್ಯವಸ್ಥೆ ಸೇರಿದಂತೆ ತುರ್ತು ಸೇವೆಗಳು ಎಂದಿನಂತೆ ಕಾರ್ಯನಿರ್ವಹಿಸಿದವು. ಬೆಳಗ್ಗೆ 10 ಗಂಟೆಯ ನಂತರ ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರು ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಸಮಾವೇಶಗೊಂಡು ಬೈಕ್ ರ್‍ಯಾಲಿ ನಡೆಸುತ್ತಿದ್ದಂತೆ ಅಲ್ಲಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿದ್ದ ಅಂಗಡಿಕಾರರು ಅಂಗಡಿಗಳನ್ನು ಬಂದ್ ಮಾಡಿ ಕರ್ನಾಟಕ ಬಂದ್ ಗೆ ಬೆಂಬಲ ವ್ಯಕ್ತಪಡಿಸಿದರು. ನಂತರ ಪಟ್ಟಣದ ಡಾ. ಬಿ ಆರ್ ಅಂಬೇಡ್ಕರ್ ವೃತ್ತದಲ್ಲಿ ಜಮಾಯಿಸಿದ ಕರವೇ ಕಾರ್ಯಕರ್ತರು ಕೆಲಹೊತ್ತು ಜೇವರ್ಗಿ - ಸಂಕೇಶ್ವರ ರಾಜ್ಯ ಹೆದ್ದಾರಿಯನ್ನು ತಡೆದು ಪ್ರತಿಭಟಿಸಿದರು.

ಅಥಣಿ ಪಟ್ಟಣದಲ್ಲಿ ಬಂದ್ ಹಿನ್ನೆಲೆಯಲ್ಲಿ ಕರವೇ ಕಾರ್ಯಕರ್ತರು ಪ್ರತಿಭಟಿಸಿ ತಹಸೀಲ್ದಾರ್ ಮೂಲಕ ರಾಜ್ಯ ಸರಕಾರಕ್ಕೆ ಮನವಿ ಸಲ್ಲಿಸಿದರು. ವಕೀಲರಾದ ವಿನಯ್ ಪಾಟೀಲ್ ಇದ್ದರು.

ಈ ವೇಳೆ ಪ್ರತಿಭಟನೆಯ ನೇತೃತ್ವ ವಹಿಸಿದ್ದ ಕರ್ನಾಟಕ ರಕ್ಷಣಾ ವೇದಿಕೆ ಶಿವರಾಮೇಗೌಡ ಬಣದ ಚಿಕ್ಕೋಡಿ ವಿಭಾಗೀಯ ಅಧ್ಯಕ್ಷ ವಿನಯಗೌಡ ಪಾಟೀಲ ಮಾತನಾಡಿ, ಬೆಳಗಾವಿ ಗಡಿ ವಿಚಾರವಾಗಿ ಮತ್ತು ಎಂಇಎಸ್ ಮತ್ತು ಶಿವಸೇನೆ ಕಾರ್ಯಕರ್ತರು ಮೇಲಿಂದ ಮೇಲೆ ಕನ್ನಡಿಗರ ಮೇಲೆ ನಡೆಸುತ್ತಿರುವ ದೌರ್ಜನ್ಯವನ್ನು ಕರವೇ ಸಂಘಟನೆಯಿಂದ ತೀವ್ರವಾಗಿ ಖಂಡಿಸುತ್ತೇವೆ. ಮರಾಠಿಗರ ಪುಂಡಾಟಿಕೆಯನ್ನು ಹತ್ತಿಕ್ಕುವಲ್ಲಿ ಸರಕಾರ ಬಿಟ್ಟ ಕ್ರಮ ಕೈಗೊಳ್ಳಬೇಕು. ಕನ್ನಡ ನಾಡಿನ ಅನ್ನ ನೀರು ಸೇವಿಸಿ ನಾಡದ್ರೋಹಿ ಕೃತ್ಯಕ್ಕೆ ಸಿಗುವವರನ್ನು ಗಡಿಪಾರು ಮಾಡಬೇಕೆಂದು ಸರಕಾರವನ್ನು ಅಗ್ರಹಿಸಿದರು.

ಅಥಣಿ ತಾಲೂಕ ಘಟಕದ ಕರವೇ ಅಧ್ಯಕ್ಷ ಉದಯ ಮಾಕಾಣಿ ಮಾತನಾಡಿ ಬೆಳಗಾವಿಯಲ್ಲಿ ಮೇಲಿಂದ ಮೇಲೆ ನಾಡ ದ್ರೋಹಿ ಕತ್ತೆಗೆ ಸಿಗುತ್ತಿರುವ ಮರಾಠಿಗರ ವಿರುದ್ಧ ಕಾನೂನು ರೀತಿ ಶಿಸ್ತು ಕ್ರಮ ಕೈಗೊಳ್ಳಬೇಕು. ಕೂಡಲೇ ರಾಜ್ಯದಲ್ಲಿರುವ ಎಂಇಎಸ್ ಮತ್ತು ಶಿವಸೇನೆ ಸಂಘಟನೆಗಳನ್ನ ನಿಷೇಧಿಸಬೇಕು.

ಉತ್ತರ ಕರ್ನಾಟಕದ ಬಹುದಿನಗಳ ನೀರಾವರಿ ಯೋಜನೆಗಳಾಗಿರುವ ಮಹದಾಯಿ ಕಳಸಾ ಬಂಡೂರಿ ಯೋಜನೆ, ಮೇಕೆದಾಟು ಯೋಜನೆಯ ಸರ್ಕಾರ ತುರಿತಗತಿಯಲ್ಲಿ ಅನುಷ್ಠಾನಗೊಳಿಸಬೇಕು. ಕನ್ನಡಿಗರಿಗೆ ಉದ್ಯೋಗಾವಕಾಶಗಳನ್ನು ನೀಡುವಲ್ಲಿ ವಿಶೇಷ ಮೀಸಲಾತಿಯ ಕಾಯಿದೆಯನ್ನು ಜಾರಿಗೆ ತರಬೇಕು ಎಂದು ಅಗ್ರಹಿಸಿದರು.

ರೈತ ಸಂಘದ ಅಧ್ಯಕ್ಷ ಮಹಾದೇವ ಮಡಿವಾಳ ಮಾತನಾಡಿ ಯಾವುದೇ ಸರಕಾರಗಳು ಬಂದರೂ ನಮ್ಮ ರೈತ ಕುಲಕ್ಕೆ ಅನ್ಯಾಯವಾಗುತ್ತಿದೆ. ನಾವು ಕಷ್ಟಪಟ್ಟು ಬೆಳೆದ ಬೆಳೆಗಳಿಗೆ ಸೂಕ್ತವಾದ ಬೆಲೆ ಸಿಗುತ್ತಿಲ್ಲ. ಕಬ್ಬಿನ ಕಾರ್ಖಾನೆಗಳು ತೂಕದಲ್ಲಿ ಮೋಸ, ಸೂಕ್ತವಾದದ್ದರ ನೀಡುತ್ತಿಲ್ಲ ಎಂದು ಸರಕಾರಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು. ನಂತರ ಉಪತಹಸಿಲ್ದಾರ ಬಿ.ವೈ.ಹೊಸಕೇರಿ ಅವರ ಮುಖಾಂತರ ರಾಜ್ಯ ಸರಕಾರಕ್ಕೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕರವೇ ಉಪಾಧ್ಯಕ್ಷರಾದ ಸಿದ್ದು ಹಂಡಗಿ, ಅನಿಲ ಒಡೆಯರ, ಸುಕುಮಾರ ಮಾದರ, ರಾಜು ವಾಘಮೋರೆ, ಅನಿಲ ಭಜಂತ್ರಿ, ಅಶೋಕ ಗೌರಗೊಂಡ, ಅನಿಲ ಪಾಟೀಲ, ಗಿರೀಶ ಭಾಮನೆ, ಶೋಭಾ ಮಾಳಿ, ಹನುಮವ್ವ ದಂಡಗಿ, ಸುರೇಖಾ ಜಾನಕಿ, ಸುನಿಲ ಸಂಕ, ಶಂಕರ ಮಗದುಮ ಸಿದ್ದು ಮಾಳಿ, ವಿಲಾಸ ಕುಲಕರ್ಣಿ, ಪರಶುರಾಮ ಕಾಂಬಳೆ, ಮುತ್ತುರಾಜ ಗೊಲ್ಲರ ಸೇರಿದಂತೆ ಇನ್ನಿತರರು ಹೋರಾಟದಲ್ಲಿ ಭಾಗವಹಿಸಿದ್ದರು. ಅಥಣಿ ಪಿಎಸ್ಐ ಗಿರಿಮಲ್ಲಪ್ಪ ಉಪ್ಪಾರ ಹಾಗೂ ಅವರ ಸಿಬ್ಬಂದಿ ಸೂಕ್ತ ಬಂದೋಬಸ್ತ್ ಏರ್ಪಡಿಸಿದ್ದರು.

> ಯಾವುದೇ ಸರಕಾರಗಳು ಬಂದರೂ ನಮ್ಮ ರೈತ ಕುಲಕ್ಕೆ ಅನ್ಯಾಯವಾಗುತ್ತಿದೆ. ನಾವು ಕಷ್ಟಪಟ್ಟು ಬೆಳೆದ ಬೆಳೆಗಳಿಗೆ ಸೂಕ್ತವಾದ ಬೆಲೆ ಸಿಗುತ್ತಿಲ್ಲ. ಕಬ್ಬಿನ ಕಾರ್ಖಾನೆಗಳು ತೂಕದಲ್ಲಿ ಮೋಸ, ಸೂಕ್ತವಾದದ್ದರ ನೀಡುತ್ತಿಲ್ಲ.
> ಮಹಾದೇವ ಮಡಿವಾಳ, ರೈತ ಸಂಘದ ಅಧ್ಯಕ್ಷ

ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಅಂಗಡಿ ಮುಗ್ಗಟ್ಟುಗಳ ಬಂದ್ ಮಾಡಿರುವ ದೃಶ್ಯ.

ಪುರಸಭೆ: ಉಳಿತಾಯ ಬಜೆಟ್ ಮಂಡನೆ

ರಾಮದುರ್ಗ: 2025-26ನೇ ಸಾಲಿನ ಮುಂದಿನ ಒಂದು ವರ್ಷದ ರಾಮದುರ್ಗ ಪುರಸಭೆಯ ಸುಮಾರು 4 ಲಕ್ಷ 98 ಸಾವಿರ ಉಳಿತಾಯ ಬಜೆಟ್ ಶುಕ್ರವಾರ ನಡೆದ ಪುರಸಭೆ ಸಾಮಾನ್ಯ ಸಭೆಯಲ್ಲಿ ಮಂಡನೆಯಾಯಿತು.

ಒಟ್ಟು ರು. 33,81,009 ಪುರಸಭೆಗೆ ವಿವಿಧ ಮೂಲಗಳಿಂದ ಜಮೆ ಆಗಲಿದ್ದು, ರು.33,76,009 ವಿವಿಧ ಕೆಲಸಗಳಿಗೆ ವೆಚ್ಚ ಮಾಡಲಾಗಿ ಸುಮಾರು ರು. 4,98,000 ಉಳಿತಾಯ ಬಜೆಟ್‌ಗೆ ಸಭೆಯಲ್ಲಿ ಪುರಸಭೆ ಅಧ್ಯಕ್ಷೆ ಲಕ್ಷ್ಮೀ ಕಡಕೋಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪುರಸಭೆ ಸ್ಥಾಯಿ ಸಮಿತಿ ಚೇರಮನ್ ಸಿದ್ರಾಮಪ್ಪ ಬೆಂಬಳಗಿ ಬಜೆಟ್ ಮಂಡಿಸಿ ಸಭೆಯಒಪ್ಪಿಗೆ ಪಡೆದರು.

ರಾಜ್ಯ ಮತ್ತು ಕೇಂದ್ರ ಸರಕಾರ ಹಾಗೂ ಸ್ಥಳೀಯವಾಗಿ ಪುರಸಭೆಗೆ ಸಂಗ್ರಹವಾಗುವ ವಿವಿಧ ರೀತಿಯ ತೆರಿಗೆ ಸೇರಿ ರು. 125475000,ರಾಜಸ್ವಸ್ವೀಕೃತಿ ರು.5378000 ಬಂಡವಾಳ ಸ್ವೀಕೃತಿ, ರು. 158876009 ಅಸಾಧಾರಣ ಸ್ವೀಕೃತಿ ಸೇರಿದಂತೆ ಪುರಸಭೆಗ 'ಒಟ್ಟು ರು. 33,81,009 ಅನುದಾನ ಹರಿದು ಬರುವ ನಿರೀಕ್ಷೆ ಹೊಂದಲಾಗಿದೆ.

ವಿವಿಧ ವಾರ್ಡ್‌ಗಳಲ್ಲಿ ಪುರಸಭೆಯಿಂದ ಕೈಗೊಳ್ಳುವ ಅಭಿವೃದ್ಧಿ ಕಾಮಗಾರಿಗಳು, ಸಿಬ್ಬಂದಿ ವೇತನ, ಕುಡಿಯುವ ನೀರಿಗಾಗಿ ಮಾಡುವ ವೆಚ್ಚ, ಬೀದಿ ದೀಪಗಳ ನಿರ್ವಹಣೆ ಒಳಗೊಂಡು ರು. ರಾಜಸ್ವದಲ್ಲಿ ರು. 12297700 ವೆಚ್ಚ, ಬಂಡವಾಳ ಖಾತೆಯಲ್ಲಿ ರು. 55780000 ವೆಚ್ಚ, ಅಸಾಧಾರಣದಲ್ಲಿ ರು. 158876009 ವೆಚ್ಚ ಮಾಡುವುದು ಮಾಡಿ, ರು.4,98000 ಉಳಿತಾಯ ಬಜೆಟ್‌ಗೆ ಸರ್ವ ಸದಸ್ಯರು ಸಮ್ಮತಿ ಸೂಚಿಸಿದರು.

ಪಟ್ಟಣದ ಪುರಸಭೆ ಸಭಾ ಭವನದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ 2025-26ನೇ ಸಾಲಿನ ಬಜೆಟ್ ಮಂಡಿಸಲಾಯಿತು.

ರಾಜ್ಯ ಹಣಕಾಸು ಆಯೋಗಕ್ಕೆ ಪುರಸಭೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಸುಮಾರು 9 ಲಕ್ಷ ಹಾಗೂ ಕೇಂದ್ರ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ ಪುರಸಭೆ ವ್ಯಾಪ್ತಿಯಲ್ಲಿ ರು.185 ಲಕ್ಷ ವೆಚ್ಚದಲ್ಲಿ ವಿವಿಧ ಕೆಲಸಗಳಗಳ ನಿರ್ವಹಣೆಗೆ ಸಭೆಯಲ್ಲಿ ಅಧಿಕಾರಿಗಳು ಕ್ರಿಯಾಯೋಜನೆಗೆ ತಯಾರಿಸಿ, ಆಯೋಗಳಿಗೆ ಸಲ್ಲಿಸಲು ನಿರ್ಧರಿಸಲಾಯಿತು.

2025-26ನೇ ಸಾಲಿನ ಆಸ್ತಿ ತೆರಿಗೆ ಶೇ. 3ರಷ್ಟ ಹೆಚ್ಚಿಸಲು ಸಭೆಯಲ್ಲಿಚರ್ಚೆ ಮಾಡಿಅನುಮೋದನೆಪಡೆದು, ಮನೆ ಮನೆಗೆ ಪೂರೈಕೆಯಾಗುವ ಶುದ್ಧಕುಡಿಯುವ ನೀರಿನ ಪ್ರತಿ ತಿಂಗಳು ರು. 80 ಹೆಚ್ಚಾಗುತ್ತಿದ್ದುಅದನ್ನು ಸುಮಾರು ರು. 70ಕ್ಕೆ ಇಳಿಸಲು ಸದಸ್ಯರುಸಭೆಯಲ್ಲಿ ಒತ್ತಾಯಿಸಿದರು.

ಪುರಸಭೆ ಅಧ್ಯಕ್ಷ ಲಕ್ಷ್ಮೀ ಕಡಕೋಳ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪುರಸಭೆಉಪಾಧ್ಯಕ್ಷೆ ಸರಿತಾಧೂತ, ಸ್ಥಾಯಿ ಸಮಿತಿಯ ಅಧ್ಯಕ್ಷ ಸಿದ್ರಾಮಪ್ಪ ಬೆಂಬಳಗಿ, ಮುಖ್ಯಾಧಿಕಾರಿ ಈರಣ್ಣ ಗುಡದಾರಿ ಸೇರಿದಂತೆ ಪುರಸಭೆ ಸದಸ್ಯರು ಹಾಗೂ ಅಧಿಕಾರಿಗಳು ಇದ್ದರು.

ಯುವ ಪೀಳಿಗೆಗೆ ಬಯಲಾಟ ಕಲೆ ಪರಿಚಯಿಸಿ

ಮೂಡಲಗಿ: ಬಯಲಾಟವು ಮನರಂಜನೆಯೊಂದಿಗೆ ಬದುಕಿನ ವಿವೇಕ, ನೈತಿಕತೆ, ಸೌಹಾರ್ದ ಮನೋಭಾವ, ಕೂಡುಬಾಳ್ವೆ ಮುಂತಾದ ಮೌಲ್ಯಗಳನ್ನು ಪ್ರಸಾರ ಮಾಡುತ್ತ ಬಂದಿದ್ದು, ಗ್ರಾಮೀಣ ಪ್ರದೇಶದ ಎಲ್ಲಾ ಜಾತಿ-ಧರ್ಮಗಳ ಜನ ಸೇರಿ ಈ ಕಲೆಯನ್ನು ಸಂರಕ್ಷಿಸಿಕೊಂಡು ಬಂದಿರುವುದರಿಂದ ಬಯಲಾಟ ಜಾತ್ಯಾತೀತ ಕಲೆಯಾಗಿ ಬೆಳೆದಿದೆ ಎಂದು ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷ ಪ್ರೊ. ಕೆ.ಆರ್ .ದುರ್ಗಾದಾಸ ಹೇಳಿದರು.

ತಾಲೂಕಿನ ಅರಭಾವಿ ಗ್ರಾಮದ ಬಲಭೀಮ ದೇವಸ್ಥಾನದ ಬಯಲು ರಂಗ ಮಂದಿರದಲ್ಲಿ ಕರ್ನಾಟಕ ಬಯಲಾಟ ಅಕಾಡೆಮಿಯ ವತಿಯಿಂದ ಜರುಗಿದ ರಾಜ್ಯಮಟ್ಟದ ದೊಡ್ಡಾಟ-ಸಣ್ಣಾಟ ಸಂಭ್ರಮ ವಿಚಾರ ಸಂಕಿರಣ ಹಾಡುಗಾರಿಕೆ-ಪ್ರದರ್ಶನ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅವರು, ಸಣ್ಣಾಟ-ದೊಡ್ಡಾಟಗಳ ತವರೂರಾದ ಬೆಳಗಾವಿ ಮತ್ತು ಕಲಬುರ್ಗಿ ವಿಭಾಗಗಳ ಜಿಲ್ಲೆಯಲ್ಲಿರುವ ಕಲಾವಿದರ ಸಾಧನೆಗಳ ಮಾಹಿತಿ ಸಂಗ್ರಹ ಕಾರ್ಯವನ್ನು ಆರಂಭಿಸಲಾಗಿದ್ದು, ದೊಡ್ಡಾಟ-ಸಣ್ಣಾಟ ಬಯಲಾಟಗಳ ಕಲೆಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದು ಅನಿವಾರ್ಯವಿದೆ. ಕಲಾವಿದರನ್ನು ಸಮಾಜದಲ್ಲಿ ಗೌರವದಿಂದ ಕಾಣುವಂತಾಗಬೇಕು. ಬಯಲಾಟ ಕಲೆ ಸಾಮಾನ್ಯವಾದುದಲ್ಲ ಅದು ನಾಡಿನ ಶ್ರೀಮಂತ ಕಲೆಯಾಗಿದ್ದು, ಪ್ರತಿ ಗ್ರಾಮಸ್ಥರು ಇಂತಹ ಕಲೆಗಳ ಪ್ರದರ್ಶನಕ್ಕೆ ಆದ್ಯತೆ ನೀಡಿದಾಗ ಈ ಕಲೆಗಳು ಉಳಿಯಲು ಸಾಧ್ಯವಾಗುತ್ತದೆಂದರು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಜಾನಪದ ಚಿಂತಕ ಪ್ರೊ. ಗುರುಪಾದ ಮರೆಗುದ್ದಿ ಅವರು ದೊಡ್ಡಾಟ-ಸಣ್ಣಾಟಗಳು ನಮ್ಮ ಭಾಗದ ಸಾಂಸ್ಕೃತಿಕ ಅನನ್ಯತೆಯನ್ನು ಸಾರುವ ಕಲೆಯಾಗಿವೆ. ಗ್ರಾಮೀಣರು ಈ ಕಲೆಗಳನ್ನು ಆಟಗಳು ಎಂದು ಕರೆಯುತ್ತಾರೆ. ಸುಮಾರು 15ನೇ ಶತಮಾನದ ಸಂದರ್ಭದಿಂದಲೂ ಕರ್ನಾಟಕದಲ್ಲಿ ದೊಡ್ಡಾಟ-ಸಣ್ಣಾಟಗಳು ಪ್ರದರ್ಶಿಸಲ್ಪಡುತ್ತಿದ್ದವು. ಉತ್ತರ ಕರ್ನಾಟಕದಲ್ಲಿ ಸುಮಾರು 450 ಕ್ಕೂ ಹೆಚ್ಚು ದೊಡ್ಡಾಟ-ಸಣ್ಣಾಟಗಳಿದ್ದವೆಂದು ಹೇಳಿದರು.

ದೊಡ್ಡಾಟ-ಸಣ್ಣಾಟ ಸಂಭ್ರಮ ಸಮಾರಂಭವನ್ನು ಡಾ. ಗುರುಪಾದ ಮರೆಗುದ್ದಿ ಉದ್ಘಾಟಿಸಿದರು.

ಜಾನಪದ ಸಾಹಿತಿ ಡಾ.ರಾಜು ಕಂಬಾರ, ಬೆಳಗಾವಿ ಜಿಲ್ಲಾ ಸಂಶೋಧನ ಸಹಾಯಕಿ ಡಾ. ವಿದ್ಯಾ ಪಾಟನಕರ ಅವರು ಮಾತನಾಡಿದರು.

ಈರಲಟ್ಟಿಯ ಪರಮೇಶ್ವರ ಸಣ್ಣಾಟ ಜಾನಪದ ಕಲಾವಿದರ ಸಂಘದಿಂದ ಸಣ್ಣಾಟ ಪದಗಳ ಹಾಡುಗಾರಿಕೆ ನಡೆಯಿತು. ಶೀತಾಲಹರಿ ಗ್ರಾಮದ ಹೊನ್ನಮ್ಮದೇವಿ ದೊಡ್ಡಾಟ ಸಂಘದ-ರತಿ ಕಲ್ಯಾಣ, ನಂದಗಾಂವದ ದುರ್ಗಾದೇವಿ ಜಾನಪದ ಬಯಲಾಟ ಸಂಘದ ರಾಧಾನಾಟ ಮತ್ತು ರಾಜಾಪೂರದ ಪಾಂಡುರಂಗ ಬಯಲಾಟಗಳು ಪ್ರದರ್ಶನಗೊಂಡವು. ಸಮಾರಂಭದಲ್ಲಿ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಕಲಾವಿದೆ ಕೆಂಪವ್ವ ಹರಿಜನ, ಸದಸ್ಯ ಸಂಚಾಲಕ ಭೀಮಪ್ಪ ಹುದ್ದಾರ, ದೊಡ್ಡಾಟ ಸಂಚಾಲಕ ಅಮರ ಶೆಟ್ಟಿ ಮುಂತಾದವರಿದ್ದರು.

ಬಿಐ ಔದ್ಯೋಗಿಕ ಕ್ಷೇತ್ರದ ಆಶಾಕಿರಣ

ಬೆಳಗಾವಿ: ಸಣ್ಣ ಸ್ಟಾರ್ಟಪ್‌ಗಳಿಂದ ಹಿಡಿದು ದೊಡ್ಡ ಗಾತ್ರದ ಉದ್ಯಮಗಳ ವ್ಯವಹಾರಗಳನ್ನು ಸಮರ್ಥವಾಗಿ ನಿರ್ವಹಿಸುವ ಪವರ್ ಬಿ.ಐ. ಔದ್ಯೋಗಿಕ ಕ್ಷೇತ್ರದ ಆಶಾಕಿರಣವಾಗಿದೆ ಎಂದು ದತ್ತಾಂಶ ಕಂಪನಿಯ ಅಧಿಕಾರಿ ರೇಖಾ ಗುರವ್ವಗೋಳ ಅಭಿಮತ ವ್ಯಕ್ತಪಡಿಸಿದರು.

ಅವರು ಇತ್ತೀಚೆಗೆ ಎಸ್.ಜಿ.ಬಾಳೆಕುಂದ್ರಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮೂರು ದಿನಗಳ ಕಾಲ ಆಯೋಜಿಸಿದ್ದ ಡೇಟಾ ಅನಾಲಿಟಿಕ್ಸ್ ಮತ್ತು ಪವರ್ ಬಿ.ಐ. ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡು ಮಾತನಾಡಿದರು. ಮುಂದುವರಿದು ಮಾತನಾಡಿದ ಅವರು ವಿದ್ಯಾರ್ಥಿಗಳು ಇಂಜಿನಿಯರಿಂಗ್ ಪದವಿಯ ನಂತರ ಪವರ್ ಬಿಐ ಅಧ್ಯಯನ ಮಾಡಲು ಅಂತರಾಜ್ಯ ಹಾಗೂ ವಿದೇಶಗಳಿಗೆ ತೆರಳುವ ಬದಲು ತಂತ್ರಜ್ಞಾನ ಬಳಸಿ ಪದವಿ ಹಂತದಲ್ಲಿಯೇ ಪವರ್ ಬಿ ಐ ಅಧ್ಯಯನ ಮಾಡಿದರೆ ಭವಿಷ್ಯದಲ್ಲಿ ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗ ಪಡೆಯಲು ಸಹಕಾರಿಯಾಗುತ್ತದೆ ಎಂದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಚಾರ್ಯ ಡಾ. ಬಿ.ಆರ್. ಪಟಗುಂದಿ ಸ್ಥಳೀಯವಾಗಿ ಉದ್ಯೋಗಾವಕಾಶ ಹೆಚ್ಚಿಸಲು ಕಾಲೇಜಿನಿಂದ ವಿವಿಧ ತರಬೇತಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಹಾಗೂ ತ್ವರಿತವಾಗಿ ಬೆಳೆಯುತ್ತಿರುವ ಉದ್ಯೋಗಕ್ಷೇತ್ರದಲ್ಲಿ ಡೇಟಾ ಅನಾಲಿಟಿಕ್ಸ್ ಮತ್ತು ಪವರ್ ಃಖ ಪಾತ್ರವು ಮಹತ್ವ ಪಡೆದಿದೆ. ಎಲ್ಲರೂ ಆಸಕ್ತಿಯಿಂದ ಈ ಆಧುನಿಕ ತಂತ್ರಜ್ಞಾನವನ್ನು ಕಲಿಯಬೇಕು ಎಂದರು.

ಪವರ್ ಬಿ.ಐ. ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡು ದತ್ತಾಂಶ ಕಂಪನಿಯ ಅಧಿಕಾರಿ ರೇಖಾ ಗುರವ್ವಗೋಳ ಅವರು ಮಾತನಾಡಿದರು.

ಕಾರ್ಯಾಗಾರದಲ್ಲಿ ಪವರ್ ಬಿ.ಐ. ಡೆಸ್ಕ್‌ಟಾಪ್, ಡ್ಯಾಕ್ಸ ಫಂಕ್ಷನ್‌ಗಳು, ಡೇಟಾ ಮಾಡೆಲಿಂಗ್, ರಿಪೋರ್ಟ್ ವಿಸುಲೈಸೇಶನ್, ಇಂಟರಾಕ್ಟಿವ್ ಡ್ಯಾಶ್ ಬೋರ್ಡ್ ಮುಂತಾದ ವಿಷಯಗಳ ಕುರಿತು ತರಬೇತಿ ನೀಡಲಾಯಿತು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಸ್ವತಂತ್ರ ಪ್ರಾಜೆಕ್ಟ್ ನೀಡಿ ಅತ್ಯುತ್ತಮ ಯೋಜನೆಗಳನ್ನು ಆಯ್ಕೆ ಮಾಡಿ ಬಹುಮಾನ ನೀಡಿ ಗೌರವಿಸಲಾಯಿತು. ಪ್ರಾಧ್ಯಾಪಕರಾದ ಅನಿತಾ ಪಾಟೀಲ್, ಸುಜಯ್ ಗೆಜ್ಜಿ, ಪ್ರತೀಕ ಬಡಗವಿ ಉಪಸ್ಥಿತರಿದ್ದರು. ಪ್ರಾಧ್ಯಾಪಕ ಡಾ. ಶಂಕರಗೌಡ ಪಾಟೀಲ ಸ್ವಾಗತಿಸಿದರು. ಅನಿತಾ ಪಾಟೀಲ ವಂದಿಸಿದರು.

ಚನ್ನಮ್ಮ ವಿವಿಗೆ ಹತ್ತು ವಿದ್ಯಾರ್ಥಿನಿಯರು ಬ್ಲೂ ಆಗಿ ಆಯ್ಕೆ

ಚನ್ನಮ್ಮನ ಕಿತ್ತೂರು: ಇಲ್ಲಿನ ಸರಕಾರಿ ಪ್ರಥಮ ದರ್ಜೆ ಪದವಿ ಕಾಲೇಜಿನಲ್ಲಿ ಈಚೆಗೆ ನಡೆದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಡಿಯ ಏಕ ವಲಯ ಅಂತರ್ ಕಾಲೇಜುಗಳ ಬಾಲ್ ಬಾಡ್ಮಿಂಟನ್ ಮಹಿಳೆಯರ ಪಂದ್ಯಾವಳಿಯಲ್ಲಿ ವಿವಿಧ ಕಾಲೇಜುಗಳ ಹತ್ತು ವಿದ್ಯಾರ್ಥಿನಿಯರು ಬ್ಲೂ ಆಗಿ ಆಯ್ಕೆಯಾಗಿದ್ದಾರೆ.

ತಾಳಿಕೋಟಿಯ ಎಸ್. ಕೆ. ಕಾಲೇಜಿನ ರಂಜಿತಾ ಪಾಟೀಲ,ಅಂಬಿಕಾ ಹೋಟಗಾರ, ಸೌಮ್ಯ ಪಾಟೀಲ, ಹುನಗುಂದದ ಜಿಎಫ್ ಜಿಸಿ ಕಾಲೇಜಿನ ಲಕ್ಷ್ಮಿ ಎಂ. ಲಕ್ಷ್ಮಿ ಪಾಶ್ಚಾಪುರ, ಪ್ರೀತಿ ಗೌಡರ, ಬೆಳಗಾವಿ ಲಿಂಗರಾಜ ಕಾಲೇಜಿನ ಅನ್ನಪೂರ್ಣ ಕುಂಬಾರ, ಚಿಕ್ಕೋಡಿ ಬಿಕೆ. ಕಾಲೇಜಿನ ಅಮೂಲ್ಯ ಹೂವಪ್ಪಗೋಳ, ರಾಮದುರ್ಗ ಜಿಎಫ್ ಜಿಸಿ ಕಾಲೇಜಿನ ಉಮ್ಮಿಸಾನೀಯಾ ನಾಸೀಪುರ, ಚಡಚಣದ ಎಸ್ ಎಸ್‌ವಿಸಿ ಕಾಲೇಜಿನ ಪೂಜಾ ಸೋಲನಕರ ರಾಣಿ ಚನ್ನಮ್ಮ ವಿವಿ ಬ್ಲೂ ಆಗಿ ಆಯ್ಕೆ ಮಾಡಲಾಯಿತು ಎಂದು ಕಾಲೇಜು ಪ್ರಕಟಣೆ ತಿಳಿಸಿದೆ.

ವಿವಿಧ ಕಾಲೇಜುಗಳ ಹತ್ತು ವಿದ್ಯಾರ್ಥಿನಿಯರು ಬ್ಲೂ ಆಗಿ ಆಯ್ಕೆಯಾಗಿದ್ದಾರೆ.

ಪಂದ್ಯಾವಳಿಯಲ್ಲಿ ತಾಳಿಕೋಟಿಯ ಸರಕಾರಿ ಕಾಲೇಜು ಪ್ರಥಮ, ಕಿತ್ತೂರು ಕಾಲೇಜು ದ್ವಿತೀಯ, ಹುನಗುಂದ ಕಾಲೇಜು ತೃತೀಯ ಸ್ಥಾನ ಪಡೆಯಿತು. ಇದೇ ವೇಳೆ ಬಾಲ್ ಬಾಡ್ಮಿಂಟನ್ ತಂಡದ ಆಯ್ಕೆಯೂ ನಡೆಯಿತು.

ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಪ್ರೊ. ಎನ್. ಎಸ್. ಗಲಗಲಿ, ಪಟ್ಟಣ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಕಿರಣ ಪಾಟೀಲ, ಪ್ರಾಚಾರ್ಯ ಕವಿತಾ ಕುಲಕರ್ಣಿ, ಐಕ್ಯೂಎಸಿ ಸಂಚಾಲಕಿ ಸುಜಾತಾ ತಲ್ಲೂರ, ದೈಹಿಕ ಶಿಕ್ಷಣ ನಿರ್ದೇಶಕ ಲಕ್ಕಪ್ಪ ಬೂದನವರ, ಪ್ರೊ. ರಾಮಕೃಷ್ಣ ಇಳಕಲ್, ಪ್ರೊ. ಶಿವಾಜಿ ಗುಡಾಜಿ, ಸಿಬ್ಬಂದಿ ಇದ್ದರು.

ಕಂಪ್ಯೂಟರ್ ಕುರಿತ ಉಚಿತ ಕಾರ್ಯಾಗಾರ

ಕಾಗವಾಡ: ಯಾವುದೇ ಕೆಲಸವಾದರೂ ಬದ್ಧತೆಯಿಂದ ಮಾಡಿದರೆ ಯಶಸ್ಸು ಹುಡುಕಿಕೊಂಡು ಬರುತ್ತದೆ. ವೃತ್ತಿ ಜೊತೆಗೆ ಕಾರ್ಯತತ್ಪರತೆಯನ್ನು ರೂಢಿಸಿಕೊಳ್ಳಬೇಕು. ಅಂದಾಗ ಮಾತ್ರ ಯಾವುದೇ ತರಬೇತಿ ಯಶಸ್ವಿಯಾಗುವುದಕ್ಕೆ ಸಾಧ್ಯವೆಂದು ಪ್ರಾ. ಡಾ. ಎಸ್.ಎ. ಕರ್ಕಿ ಹೇಳಿದರು.

ಅವರು, ಶುಕ್ರವಾರ ದಿ. 21 ರಂದು ಪಟ್ಟಣದ ಶಿವಾನಂದ ಮಹಾವಿದ್ಯಾಲಯದ ಐಕ್ಯೂಎಸಿ ಪ್ರಾಯೋಜಿತ, ವೃತ್ತಿ ಮಾರ್ಗದರ್ಶನ ಹಾಗೂ ಉದ್ಯೋಗಕೋಶ, ಗಣಕ ವಿಜ್ಞಾನ ವಿಭಾಗ, ಮಹಿಳಾ ಸಮಿತಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣಅಭಿವೃದ್ಧಿ ಇಲಾಖೆ ಇವುಗಳ ಸಂಯುಕ್ತಾಶ್ರಯದಲ್ಲಿ ತಾಲೂಕಿನ ಆಯ್ದ ಅಂಗನವಾಡಿ ಕಾರ್ಯಕರ್ತೆಯರಿಗೆ 7 ದಿನಗಳ ಉಚಿತ ಕಂಪ್ಯೂಟರ ಮತ್ತು ಸೈಬರ್ ಸೆಕ್ಯೂರಿಟಿ ಎಂಬ ವಿಷಯದ ಕುರಿತು ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಮುಖ್ಯ ಅತಿಥಿಯಾಗಿ ಮಹಾವಿದ್ಯಾಲಯದ ಆಡಳಿತಾಧಿಕಾರಿ ಮೆ.ವ್ಹಿ.ಎಸ್. ತುಗಶೆಟ್ಟಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮಹಾವಿದ್ಯಾಲ ಯದ ಕಾರ್ಯದರ್ಶಿ ಪ್ರೊ.ಬಿ.ಎ. ಪಾಟೀಲ, ಅಂಗನವಾಡಿ ಕಾರ್ಯಕರ್ತೆಯರ ಮೇಲ್ವಿಚಾರಕಿ ಸುಜಾತಾ ಪಾಟೀಲ, ತರಬೇತಿ ಸಂಯೋಜಕ ಡಾ. ಚಂದ್ರಶೇಖರ ವೈ., ಮಾತನಾಡಿದರು.

ಬೆಳಗಾವಿ ಮಹಾನಗರ ಪಾಲಿಕೆಯ ನೂತನ ಮೇಯರ್ ಮಂಗೇಶ್ ಪವಾರ ಮತ್ತು ಉಪಮೇಯರ ವಾಣಿ ಜೋಶಿ ಆಯ್ಕೆಯಾದ ಬೆನ್ನಲ್ಲೇ ಶನಿವಾರ ಸವದತ್ತಿ ಯಲ್ಲಮ್ಮ ದೇವಸ್ಥಾನಕ್ಕೆ ಕುಟುಂಬ ಸಮೇತ ಭೇಟಿ ನೀಡಿ ಶ್ರೀರೇಣುಕಾ ಯಲ್ಲಮ್ಮದೇವಿ ದರ್ಶನ ಪಡೆದರು. ನೂತನ ಮೇಯರ್ ಹಾಗೂ ಉಪಮೇಯರ್ ಅವರಿಗೆ ಸವದತ್ತಿ ಮಂಡಳ ಅಧ್ಯಕ್ಷ ವಿರುಪಾಕ್ಷ ಮಾಮನಿ ಹಾಗೂ ಬಿಜೆಪಿ ಕಾರ್ಯಕರ್ತರು ಅಭಿನಂದನೆ ಸಲ್ಲಿಸಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಪುಂಡಲೀಕ ಮಾದರ, ಆನಂದ ಲಮಾಣಿ, ಬಸವರಾಜ ಹನಸಿ, ರಾಜು ಸಾಲಿಮಠ, ವೀರು ಗುಡೆನ್ನವರ, ಗೀರಿಶ ದೇಸಾಯಿ ಹಾಗೂ ಬೆಳಗಾವಿ ಮಹಾನಗರ ಪಾಲಿಕೆಯ ಸದಸ್ಯರು ಹಾಗೂ ಕಾರ್ಯಕರ್ತರು ಉಪಸ್ಥಿತಿರಿದ್ದರು.

ಮಹಿಳೆಯರ ಮೇಲಿನ ಶೋಷಣೆ ನಿಲ್ಲಲಿ

ಬೈಲಹೊಂಗಲ: ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾ ಈ ಶ್ಲೋಕವನ್ನು ನಾವೆಲ್ಲ ಕೇಳುತ್ತಾ ಬಂದಿದ್ದರೂ ಇಂದಿನ ಕಾಲದಲ್ಲಿ ಸಹ ಮಹಿಳೆಯರ ಮೇಲೆ ಶೋಷಣೆ ನಿಲ್ಲದಿರುವುದು ವಿಷಾದನೀಯ ಎಂದು ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕಿ ಸೌಮ್ಯ ಬಾಪಟ್ ಹೇಳಿದರು.

ಅವರು ಪಟ್ಟಣದ ಗಣಾಚಾರಿ ಶಿಕ್ಷಣ ಸಂಸ್ಥೆಯ ಅಕ್ಕಮಹಾದೇವಿ ಮಹಿಳಾ ಪದವಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಶನಿವಾರ ಮಹಿಳಾ ದಿನಾಚರಣೆಯ ಅಂಗವಾಗಿ ರಾಷ್ಟ್ರೀಯ ಸೇವಾ ಯೋಜನೆಯ ಅಡಿಯಲ್ಲಿ ''ಮಹಿಳಾ ಸಂಸ್ಕೃತಿ ಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇಂದಿನ ಕಾರ್ಯಕ್ರಮ ನೋಡಿದಾಗ ನಮ್ಮ ನೆಲದ ಪರಂಪರೆಯನ್ನು, ಅದರ ಶ್ರೀಮಂತಿಕೆಯನ್ನು ನೆನಪಿಸುವ ವಿಶಿಷ್ಟ ಕಾರ್ಯವನ್ನು ಕಾಲೇಜಿನ ವಿದ್ಯಾರ್ಥಿನಿಯರು ಮಾಡಿರುವುದು ಪ್ರಶಂಸನೀಯ ಎಂದರು.

ಉಪವಿಭಾಗಾಧಿಕಾರಿ ಪ್ರಭಾವತಿ ಪಕೀರಪೂರ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ನಿರ್ದಿಷ್ಟ ಗುರಿ ಹೊಂದಿ ಅದನ್ನು ಸಾಧಿಸುವ ಛಲ ಹೊಂದಬೇಕು ಎಂದು ವಿದ್ಯಾರ್ಥಿನಿಯರಿಗೆ ಸಲಹೆ ನೀಡಿದರು.

ಮಹಿಳಾ ಸಂಸ್ಕೃತಿ ಹಬ್ಬ ಕಾರ್ಯಕ್ರಮವನ್ನು ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕಿ ಸೌಮ್ಯ ಬಾಪಟ್ ಅವರು ಉದ್ಘಾಟಿಸಿದರು.

ಪ್ರಾಚಾರ್ಯ ಡಾ. ಡಾ.ಸಿ.ಬಿ. ಗಣಾಚಾರಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆ ಮೇಲೆ ಅಪರ್ಣಾ ಗಣಾಚಾರಿ, ಕಿರುತೆರೆ ನಟಿ ರಾಜೇಶ್ವರಿ ದೇಶಪಾಂಡೆ, ಸರಿಗಮಪ ಸೀಸನ್ 21ರ ಸ್ಪರ್ಧಿ ಅನಘಾ ಪಾಟೀಲ ಇದ್ದರು.

ಶ್ರೇಯಾ ಭದ್ರಶೆಟ್ಟಿ ಸ್ವಾಗತಿಸಿದಳು, ಮೇಘಾನಾ ಅಂಗಡಿ ಮತ್ತು ನೀಶಾ ಮುಕಂದ ನಿರೂಪಿಸಿದರು. ವಿಜಯಲಕ್ಷ್ಮೀ ಉಳವಿ ವಂದಿಸಿದಳು. ವಿದ್ಯಾರ್ಥಿನಿಯರಿಂದ ಗ್ರಾಮೀಣ ಸೊಗಡನ್ನು ಬಿಂಬಿಸುವ ರೂಪಕಗಳನ್ನು ಪ್ರದರ್ಶಿಸುವುದರ ಮೂಲಕ ಮಹಿಳಾ ಸಂಸ್ಕೃತಿಕ ಉತ್ಸವವನ್ನೂ ಅದ್ದೂರಿಯಾಗಿ ಆಚರಿಸಲಾಯಿತು.

ಸಮಾಚಾರ ಸಣ್ಣದಲ್ಲ

ಯುಗಾದಿ ಕವಿಗೋಷ್ಠಿ ಮಾರ್ಚ್ 23ರಂದು

ಮೂಡಲಗಿ: ಮೂಡಲಗಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಯುಗಾದ ನಿಮಿತ್ತ ಜಿಲ್ಲಾ ಮಟ್ಟದ ಕವಿಗೋಷ್ಠಿ ಹಾಗೂ ಕಸಾಪ ಸಂಪಾದಿತ ಮೂಡಲಗಿ ತೇರು ಕವನ ಸಂಕಲ ಮತ್ತು ಅರುಣಕುಮಾರ ರಾಜಮಾನೆಯವರ ಮನದ ಮಾತು ಮಕ್ಕಳ ಕಥಾ ಸಂಕಲನದ ಬಿಡುಗಡೆಯು ಮಾ. 23ರಂದು ಬೆಳಿಗ್ಗೆ 10ಕ್ಕೆ ಪಟ್ಟಣದ ಮೂಡಲಗಿ ಶಿಕ್ಷಣ ಸಂಸ್ಥೆಯ ಕಲ್ಮೇಶ್ವಬೋಧ ಸ್ವಾಮೀಜಿ ಸಭಾಭವನದಲ್ಲಿ ಏರ್ಪಡಿಸಿರುವರು. ಸಮಾರಂಭದ ಅಧ್ಯಕ್ಷತೆಯನ್ನು ಡಾ. ಮಹಾದೇವ ಜಿಡ್ಡಿಮನಿ ವಹಿಸುವರು, ಉದ್ಘಾಟಕರಾಗಿ ಬೆಳಗಾವಿಯ ಜನಪದ ವಿದ್ವಾಂಸ ಡಾ.ಬಸವರಾಜ ಜಗಜಂಪಿ ಭಾಗವಹಿಸುವರು. ಕೃತಿ ಬಿಡುಗಡೆಯನ್ನು ಮೂಡಲಗಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವೆಂಕಟೇಶ ಸೋನವಾಲರ ಮತ್ತು ಸಾಹಿತಿ ಬಾಲಶೇಖರ ಬಂದಿ ನೆರವೇರಿಸುವರು. ಕೃತಿ ಪರಿಚಯವನ್ನು ಕನ್ನಡ ಪ್ರಾಧ್ಯಾಪಕ ಶಿವಕುಮಾರ ಕೋಡಿಹಾಳ ಮಾಡುವರು. ಮುಖ್ಯ ಅತಿಥಿಗಳಾಗಿ ಭಾಸ್ಕರ ಸಣ್ಣಕ್ಕಿ, ಸಂಗಮೇಶ ಗುಜಗೊಂಡ, ಈಶ್ವರ ಕತ್ತಿ, ಎಸ್.ಎಂ. ಕಮದಾಳ, ಸಿದ್ರಾಮ ದ್ಯಾಗಾನಟ್ಟಿ, ಶಬೀರ ಡಾಂಗೆ, ಮಹಾದೇವ ಪೋತರಾಜ, ಅರುಣಕುಮಾರ ರಾಜಮಾನೆ, ಚಿದಾನಂದ ಹೂಗಾರ ಭಾಗವಹಿಸುವರು ಎಂದು ಕಸಾಪ ಅಧ್ಯಕ್ಷ ಸಂಜಯ ಶಿಂಧಿಹಟ್ಟಿ ತಿಳಿಸಿದ್ದಾರೆ.

ಜಲಸಂಪತ್ತು ಉಳಿಸುವುದು ಅವಶ್ಯ

ಬೆಳಗಾವಿ: ಡಾ ರಾಮ ಮನೋಹರ ಲೋಹಿಯಾ ಶಿಕ್ಷಣ ಸಂಸ್ಥೆಯ ಶ್ರೀಸಿದ್ದೇಶ್ವರ ಕಲಾ ಪದವಿ ಮಹಾವಿದ್ಯಾಲಯ ಹಾರೂಗೇರಿ ಹಾಗೂ ಐ ಕ್ಯೂ ಎ ಸಿ ಹಾಗೂ ಎನ್ ಎಸ್ ಎಸ್ ಘಟಕಗಳ ಆಶ್ರಯದಲ್ಲಿ ಇಂದು ವಿಶ್ವ ಜಲ ದಿನ ಕಾರ್ಯಕ್ರಮ ಆಚರಿಸಲಾಯಿತು ಸಮಾರಂಭದ ಮುಖ್ಯಅತಿಥಿಗಳಾಗಿ ಶ್ರೀ ಸಿದ್ದೇಶ್ವರ ಕಲಾ ಪದವಿ ಮಹಾವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಸಾಹಿತಿ ಟಿ ಎಸ್ ಒಂಟಗೂಡಿ ಮಾತನಾಡಿ ಜಲಸಂಪತ್ತಿಗಿಂತ ಶ್ರೇಷ್ಠವಾದ ಸಂಪತ್ತು ಮತ್ತೊಂದಿಲ್ಲ ಎಂದರು. ಸಮಾರಂಭದ ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಚಾರ್ಯರಾದ ಎಸ್ ಪಿ ಸೈದಾಪೂರ ವಹಿಸಿಕೊಂಡು ಪ್ರಾಸ್ತಾವಿಕ ನುಡಿಗಳ ನಾಡಿದರು. ಸಂಸ್ಥೆಯ ಆಡಳಿತಾಧಿಕಾರಿಗಳಾದ ಶ್ರೀಮತಿ ಎಂ.ಎನ್ ಚೌಗಲಾ ಗೌರವ ಅತಿಥಿಗಳಾಗಿ ಉಪಸ್ಥಿತರಿದ್ದರು. ವೇದಿಕೆಯ ಮೇಲೆ ಎಂ ಡಿ ಹಳಬರ ಎಂ ಬಿ ಹೊಸಪೇಟಿ ಎಸ್ ಬಿ ಕಡಕಬಾವಿ ಆರ್ ಡಿ ಗಸ್ತಿ ಕರಣಿಕ ಮಲ್ಲೇಶ ಕಾಂಬಳೆ ಸಿದ್ದೇಶ್ವರ ಪ್ರೌಢಶಾಲೆ ಮುಖ್ಯೋಪಾಧ್ಯಾಯ ವಿಜಯ್ ಕಂಬಾರ್ ಪ್ರಾಥಮಿಕ ಶಾಲೆಯ ಪ್ರಧಾನ ಗುರುಗಳಾದ ಎಸ್ ಜಿ ರಾಯಬಾಕರ ಸೇರಿದಂತೆ ಎಲ್ಲಾ ಪ್ರಾಧ್ಯಾಪಕ ಮಿತ್ರರು ಹಾಗೂ ವಿದ್ಯಾರ್ಥಿವೃಂದ ಹಾಜರಿದ್ದರು ಕಾರ್ಯಕ್ರಮವನ್ನು ಗಜಾನಂದ ಬಿದರಿ ಸ್ವಾಗತಿಸಿದರು ವಿಠ್ಠಲ ಸರಿಕರ ನಿರೂಪಿಸಿದರು ಕುಮಾರಿ ಶಾರದಾ ಬಾನಿ ವಂದಿಸಿದರು.

ರಾಜ್ಯಮಟ್ಟದ ಸಮಾವೇಶ ಪೂರ್ವಭಾವಿ ಸಭೆ

ಕೊಲ್ಹಾರ: ಪಟ್ಟಣದಲ್ಲಿ ಎಂಪಿಎಸ್ ಶಾಲಾ ಸಭಾಂಗಣದಲ್ಲಿ ಶನಿವಾರ ಕರ್ನಾಟಕ ರಾಜ್ಯ ಸರಕಾರಿ ನಿವೃತ್ತ ನೌಕರರ ಸಂಘ ತಾಲೂಕು ಘಟಕದಿಂದ ರಾಜ್ಯ ಮಟ್ಟದ ಕಾರ್ಯಾಗಾರ ಹಾಗೂ ಬೃಹತ್ ಸಮಾವೇಶದ ಪೂರ್ವಭಾವಿ ಸಭೆ ಜರುಗಿತು. ತಾಲೂಕು ಕರ್ನಾಟಕ ರಾಜ್ಯ ಸರಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಕೆ.ಯು ಗಿಡ್ಡಪ್ಪಗೋಳ ಮಾತನಾಡಿ 2022ರ ಜೂ.1ರಿಂದ 2024ರ ಜೂ.31ರವರಿಗೆ ನಿವೃತ್ತಿ ಹೊಂದಿದ ನೌಕರರಿಗೆ 7ನೇ ವೇತನ ಆಯೋಗದ ಸೌಲಭ್ಯ ಸಿಗದಿದ್ದಕ್ಕೆ ಎಪ್ರಿಲ್ 3 ರ ಗುರುವಾರ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಹಾಗೂ ಎಪ್ರಿಲ್ 4 ರ ಶುಕ್ರವಾರ ಮುಂಜಾನೆ 10 ಗಂಟೆಗೆ ರಾಜ್ಯ ಮಟ್ಟದ ಕಾರ್ಯಾಗಾರ ಮತ್ತು ಬೃಹತ್ ಸಮಾವೇಶವನ್ನು ಬೆಂಗಳೂರಿನ ಪ್ರಿನ್ಸಸ್ ಶೈನ್ (ಗೇಟ್ ನಂ-9) ಅರಮನೆ ಆವರಣದಲ್ಲಿ ಹಮ್ಮಿಕೊಂಡಿದ್ದು, ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಸ್ಮರಣ ಸಂಚಿಕೆ ಬಿಡುಗಡೆ ಮಾಡುವರು.

ನೀರನ್ನು ಮಿತವಾಗಿ ಬಳಸಿ, ಉಳಿಸಿ

ವಿಜಯಪುರ: ಮುಂದಿನ ಪೀಳಿಗೆಗೆ ನೀರಿನ ಅಭಾವ ತಡೆಯಲು ನೀರನ್ನು ಮಿತವಾಗಿ ಬಳಸುವ ಹಾಗೂ ಪುನರ್ ಬಳಕೆ ಮಾಡುವ ಪರಿಪಾಠ ಇಂದಿನ ಮಕ್ಕಳು ರೂಢಿಸಿಕೊಳ್ಳಬೇಕು ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು. ಶನಿವಾರದಂದು ತಾಲೂಕಿನ ನಾಗಠಾಣ ಗ್ರಾಮದ ಶ್ರೀಮಲ್ಲಿಕಾರ್ಜುನ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ 'ವಿಶ್ವ ಜಲ ದಿನಾಚರಣೆ' ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಶಂಕರ ಹುಣಶ್ಯಾಳ ಮಾತನಾಡಿದರು. ಸಂಸ್ಥೆಯ ಕಾರ್ಯದರ್ಶಿ ಸುನಂದಾ ಹುಣಶ್ಯಾಳ, ಶಿಕ್ಷಕರಾದ ಎಂ ಎಸ್ ಪಾಪನಾಳಮಠ, ರಾಘು ಮೊಗಳ, ನವೀನ ಬಂಡೆನ್ನವರ, ಸಚಿನ ಅವಟಿ, ಜಯಶ್ರೀ ಬಂಗಾರಿ, ಮಧುಮತಿ ನಿಕ್ಕಂ, ಸರೋಜಿನಿ ಕಟ್ಟಿಮನಿ, ರೇಣುಕಾ ಭಜಂತ್ರಿ, ಎಂ ಎಸ್ ಬಾಗಲಕೋಟ, ಎಂ ಎಂ ವಾಡೇದ, ಎಂ ವ್ಹಿ ಭಜಂತ್ರಿ ಸೇರಿದಂತೆ ಶಾಲಾ ಮಕ್ಕಳು ಭಾಗವಹಿಸಿದ್ದರು.

{ಶಿವಾನಂದ ಪಾಟೀಲ್} ಸಚಿವ

ಅಗ್ನಿ ದುರಂತದಲ್ಲಿ ಸಂಭವಿಸುವ ಕಬ್ಬಿನ ಹಾನಿಗೆ ಪರಿಹಾರ ನೀಡಲು ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯಿಂದ ನಿಧಿ ಸ್ಥಾಪಿಸಲಿದ್ದು, ಈ ವರ್ಷದಿಂದಲೇ 50 ಲಕ್ಷ ರು. ತೆಗೆದಿರಿಸಲಾಗುವುದು. ಗರಿಷ್ಠ ಐದು ಎಕರೆ ಮಿತಿಯಲ್ಲಿ ಪರಿಹಾರ ನೀಡಲಿದ್ದು, ನಂತರ ಈ ಪರಿಹಾರ ಯೋಜನೆಯನ್ನು ವಿಸ್ತರಣೆ ಮಾಡಲಾಗುವುದು.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಆರ್‌ಸಿಬಿ ಶುಭಾರಂಭ

ರಜತ್ ಪಾಟೀದಾರ್ ನಾಯಕತ್ವದಲ್ಲಿ ಮೊದಲ ಪಂದ್ಯವಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು 7 ವಿಕೆಟ್‌ಗಳಿಂದ ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಸೋಲಿಸುವ ಮೂಲಕ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು. ವಿರಾಟ್ ಕೊಹ್ಲಿ ಔಟಾಗದೇ 59 ರನ್ ಸಿಡಿಸುವ ಮೂಲಕ 56ನೇ ಅರ್ಧಶತಕ ದಾಖಲಿಸಿದರು.

ಶಾಸಕರ ಅಮಾನತು, ಕ್ಷೇತ್ರದ ಜನತೆಗೆ ಮಾಡಿದ ಅಪಮಾನ

ವಿಶ್ವೇಶ್ವರ ಹೆಗಡೆ ಕಾಗೇರಿ

ಆರು ತಿಂಗಳ ಅವಧಿಗೆ 18 ಶಾಸಕರನ್ನು ಅಮಾನತು ಮಾಡಿರುವುದು ಶಾಸಕರಿಗೆ ಮಾಡಿರುವ ಅಪಮಾನಕ್ಕಿಂತ, ಅವರನ್ನು ಗೆಲ್ಲಿಸಿರುವ ಲಕ್ಷಾಂತರ ಜನರಿಗೆ ಮಾಡಿರುವ ಅಪಮಾನ ಹಾಗೂ ಅನ್ಯಾಯ. ಈ ರೀತಿಯ ಕಠಿಣ ತೀರ್ಮಾನವನ್ನು ತೆಗೆದುಕೊಂಡಿರುವುದು ಸರಿಯಲ್ಲ. ಕೂಡಲೇ ತಿದ್ದುಪಡಿ ಮಾಡಬೇಕು ಎಂದು ಮಾಜಿ ವಿಧಾನಸಭಾಧ್ಯಕ್ಷ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಆಗ್ರಹಿಸಿದ್ದಾರೆ. ಬಜೆಟ್ ಮೇಲಿನ ಚರ್ಚೆಯ ವೇಳೆ ಬಿಜೆಪಿ ಶಾಸಕರು ಸ್ಪೀಕರ್ ಪೀಠದಲ್ಲಿ ನಿಂತಿದ್ದು ಹಾಗೂ ಪೇಪರ್ ಎಸೆದ ಕಾರಣಕ್ಕೆ ಅಧಿವೇಶನದ ಕೊನೆಯ ದಿನ 18 ಬಿಜೆಪಿ ಶಾಸಕರನ್ನು ಆರು ತಿಂಗಳ ಅವಧಿಗೆ ಅಮಾನತುಗೊಳಿಸಲಾಗಿದೆ. ಈ ನಡೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಕಾಗೇರಿ ಅವರು, ಕೂಡಲೇ ಈ ತೀರ್ಮಾನವನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದ್ದಾರೆ. 'ವಿಶ್ವವಾಣಿ'ಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಶಾಸಕರ ಅಮಾನತಿಗೆ ಸಂಬಂಧಿಸಿದಂತೆ ಹಲವು ಆಯಾಮಗಳಲ್ಲಿ ಮಾತನಾಡಿದ್ದಾರೆ. ಸಂದರ್ಶನದ ಪೂರ್ಣಪಾಠ ಇಲ್ಲಿದೆ.

ಸಂದರ್ಶನ :
ರಂಜಿತ್ ಎಚ್. ಅಶ್ವತ್ಥ



● ಶಾಸಕರ ಅಮಾನತಿನ ಅವಶ್ಯಕತೆ ಇತ್ತೇ?

ಕರ್ನಾಟಕದ ವಿಧಾನಮಂಡಲಕ್ಕೆ ತನ್ನದೇಯಾದ ಇತಿಹಾಸವಿದೆ. ಇಡೀ ವಿಶ್ವಕ್ಕೆ ಸಂಸತ್ ಅನ್ನು ಮೊದಲು ಪರಿಚಯಿಸಿದ್ದು ಬಸವಣ್ಣನವರ ಅನುಭವ ಮಂಟಪ. ಈಗಿನ ವಿಧಾನ ಪರಿಷತ್ ಅನ್ನು ಆರಂಭಿಸಿದ್ದು ಮೈಸೂರು ಒಡೆಯರ್ ಅವರು. ಅವರ ಅವಧಿಯಲ್ಲಿ ಪ್ರಜಾಪ್ರತಿನಿಧಿ ಸಭೆಯ ಮೂಲಕ ಇಡೀ ದೇಶಕ್ಕೆ ಸಂಸದೀಯ ವ್ಯವಸ್ಥೆಯನ್ನು ಪರಿಚಯಿಸಿದ್ದರು. ಇನ್ನು ಈ ಕರ್ನಾಟಕದ ಮಾದರಿ ಸಂಸದೀಯ ವ್ಯವಸ್ಥೆಗೆ ಅನೇಕರು ತಮ್ಮದೇಯಾದ ಕೊಡುಗೆ ನೀಡಿದ್ದಾರೆ. ಆದರೆ ಇಂತಹ ಇತಿಹಾಸ ಹೊಂದಿರುವ ಸದನದಲ್ಲಿ ಈ ರೀತಿಯ ಕಠಿಣ ಕ್ರಮ ಸರಿಯಲ್ಲ. ಅದರಲ್ಲಿಯೂ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಅವರಿರುವ ಸಮಯದಲ್ಲಿ ಇಂತಹ ನಿರ್ಣಯ ಸೂಕ್ತವಲ್ಲ.

● ಶಾಸಕರನ್ನು ಅಮಾನತು ಮಾಡಲು ಅವಕಾಶವಿದೆಯೇ?

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಲಕ್ಷಾಂತರ ಜನರಿಂದ ಆಯ್ಕೆಯಾಗುವ ಶಾಸಕರನ್ನು ಯಾವ ರೀತಿಯಲ್ಲಿ ನಡೆಸಿಕೊಳ್ಳಬೇಕು ಎನ್ನುವುದಕ್ಕೆ ಸಾಕಷ್ಟು ನಿಯಮಾವಳಿಗಳಿವೆ. ಈ ಯಾವ ನಿಮಯಗಳಲ್ಲಿಯೂ ಈ ಪ್ರಮಾಣದ ಶಿಕ್ಷೆ ನೀಡಲು ಅವಕಾಶವಿಲ್ಲ. ಒಂದು ವೇಳೆ ಯಾವುದಾದರೂ ಶಾಸಕರು ತಪ್ಪು ಮಾಡಿದರೆ, ಅಪರಾಧ ಎಸಗಿದರೆ ಶಿಕ್ಷೆ ನೀಡಲು ನ್ಯಾಯಾಲಯಗಳಿವೆ. ಆದರೆ ಸಭಾಧ್ಯಕ್ಷರು ಈ ರೀತಿಯ ಕಠಿಣ ಕ್ರಮ ಕೈಗೊಳ್ಳುವುದು ಸರಿಯಲ್ಲ. ಶಾಸಕರು ಯಾರಾದರೂ ಸದನ ನಿಯಮವನ್ನು ಮೀರಿದರೆ, ಸಭಾಧ್ಯಕ್ಷರಾದವರು ಆ ದಿನದ ಕಲಾಪಕ್ಕೆ ಅಥವಾ ಆಯಾ ಅಧಿವೇಶನದ ಮುಕ್ತಾಯದವರೆಗೆ ಹೊರಹಾಕಲು ಅವಕಾಶವಿದೆ. ಅದು ಸಹ, ಶಾಸಕರಿಗೆ ತಿಳಿವಳಿಕೆ ನೀಡಲು ಅಥವಾ ಜಾಗೃತಿ ಮೂಡಿಸುವ ಪ್ರಯತ್ನವೇ ಹೊರತು, ಶಿಕ್ಷೆ ನೀಡುವುದಕ್ಕೆ ಅಲ್ಲ. ಸಭಾಧ್ಯಕ್ಷರಾದವರು ಶಾಸಕರ ವಿರುದ್ಧ ಯಾವುದೇ ರೀತಿಯ ತೀರ್ಮಾನ ಕೈಗೊಂಡರೂ ಲಕ್ಷಾಂತರ ಜನರ ಭಾವನೆಯನ್ನು ವ್ಯಕ್ತಪಡಿಸುವುದಕ್ಕೆಂದೇ ಆಯ್ಕೆಯಾಗುವ ಜನಪ್ರತಿನಿಧಿಯ ಹಕ್ಕನ್ನು ಹತ್ತಿಕ್ಕುವ ರೀತಿಯಲ್ಲಿರಬಾರದು. ಒಂದು ವೇಳೆ ಯಾರಾದರೂ ತಪ್ಪು ಮಾಡಿದರೆ ಅದನ್ನು ಸರಿಪಡಿಸುವುದಕ್ಕೆ ಎಲ್ಲರೂ ಸೇರಿ ಪ್ರಯತ್ನಿಸಬೇಕೇ ಹೊರತು, ಈ ರೀತಿ ಮಾಡಬಾರದು.

> ಯಾವುದೇ ಶಾಸಕ ಅಶಿಸ್ತು ತೋರಿದರೆ ಆ ದಿನದ ಮಟ್ಟಿಗೆ, ಆ ಕಲಾಪದ ಮಟ್ಟಿಗೆ ಹೊರಹಾಕುವುದನ್ನು ನೋಡಿದ್ದೇವೆ. ಆದರೆ ಆರು ತಿಂಗಳ ಕಾಲ ಅಮಾನತು ಮಾಡಿದರೆ ಹೇಗೆ? ಸಭೆ ನಡೆಸುವಂತಿಲ್ಲ, ಅಧಿಕಾರಿಗಳಿಗೆ ಸೂಚನೆ ನೀಡುವಂತಿಲ್ಲ ಎನ್ನುವ ನಿಯಮವನ್ನು ಹಾಕಿದ್ದಾರೆ. ಹೀಗಾದರೆ, ಅಮಾನತಿನ ಅವಧಿ ಮುಗಿಯುವ ವೇಳೆಗೆ ಅಧಿಕಾರಿಗಳು ಶಾಸಕರ ಮಾತು ಕೇಳುವರೇ? ಕ್ಷೇತ್ರದ ಅಭಿವೃದ್ಧಿ ಸಾಧ್ಯವೇ?
>
> **– ವಿಶ್ವೇಶ್ವರ ಹೆಗಡೆ ಕಾಗೇರಿ**
> ಸಂಸದರು, ಮಾಜಿ ವಿಧಾನಸಭಾಧ್ಯಕ್ಷರು

● '6 ತಿಂಗಳು ಅಮಾನತು' ಎಂಬುದನ್ನು ಕೇಳಿದಾಗ ಏನನಿಸಿತು?

ಶುಕ್ರವಾರದ ವಿಧಾನಸಭಾ ಕಲಾಪದಲ್ಲಿ ಸಭಾಧ್ಯಕ್ಷರು ಕೈಗೊಂಡಿರುವ ತೀರ್ಮಾನ ಕಠಿಣ ನಿರ್ಣಯ. ಸಂಸದೀಯ ವ್ಯವಸ್ಥೆಯಲ್ಲಿ ದಶಕಗಳ ಕಾಲ ಇರುವ ಹಿರಿಯ ನಾಯಕರಾದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾನೂನು ಸಚಿವ ಎಚ್.ಕೆ.ಪಾಟೀಲ್ ಅವರಂತಹ ಹಿರಿಯರು ಇದ್ದಾಗ ಈ ರೀತಿಯ ಕಠಿಣ ನಿರ್ಣಯವನ್ನು ಹೇಗೆ ಒಪ್ಪಿದ್ದಾರೋ ಗೊತ್ತಿಲ್ಲ. ವಿಧಾನಸಭಾಧ್ಯಕ್ಷರಾದವರಿಗೆ, ಅನುಭವದ ಕೊರತೆಯಿರುತ್ತದೆ. ಆದರೆ ಅವರಿಗೆ ತಿಳಿಹೇಳಬೇಕಾಗಿರುವುದು ಹಿರಿಯರ ಕರ್ತವ್ಯ. ಆದ್ದರಿಂದ ಈ ನಿರ್ಣಯಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳು ಹಾಗೂ ಎಚ್.ಕೆ.ಪಾಟೀಲ್ ಅವರೊಂದಿಗೆ ಮಾತನಾಡಿದ್ದೇನೆ. ಈ ನಿರ್ಣಯವನ್ನು ಹಿಂಪಡೆಯಲು ಅಥವಾ ತಿದ್ದುಪಡಿ ಮಾಡಲು ಮನವಿ ಮಾಡಿದ್ದೇನೆ. ಏಕೆಂದರೆ, ಶುಕ್ರವಾರದ ತೀರ್ಮಾನ ಯಾವುದೋ ಒಬ್ಬ ಶಾಸಕರ ಪ್ರಶ್ನೆಯಲ್ಲ. ಬದಲಿಗೆ ಇಡೀ ಸಂಸದೀಯ ವ್ಯವಸ್ಥೆಯ ಪ್ರಶ್ನೆಯಾಗಿದೆ. ಸಭಾಧ್ಯಕ್ಷ ಸ್ಥಾನದ ಪ್ರಶ್ನೆಯಾಗಿದೆ. ಆದ್ದರಿಂದ ಈ ಎರಡರ ಗೌರವವನ್ನು ಕಾಪಾಡುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು.

● ಹಾಗಾದರೆ, ನಿನ್ನೆಯ ಘಟನೆ ನಡೆದಿದ್ದು ಏಕೆ ಅನಿಸುತ್ತದೆ?

ಈ ಪ್ರಕರಣವನ್ನು ಮೇಲ್ನೋಟಕ್ಕೆ ನೋಡಿದರೆ, ರಾಜಕೀಯ ಒತ್ತಡದಿಂದ ಆಗಿರುವ ನಿರ್ಣಯ ಎನಿಸುವುದು ಸ್ಪಷ್ಟ. ಈ ಘಟನೆಯಲ್ಲಿ ಸ್ಪೀಕರ್ ಅನುಭವದ ಕೊರತೆಯಿಂದ ಈ ತೀರ್ಮಾನ ಕೈಗೊಂಡಿದ್ದರೂ ಸಿದ್ದರಾಮಯ್ಯ ಹಾಗೂ ಎಚ್.ಕೆ.ಪಾಟೀಲ್ ಅವರು ಪ್ರಭುದ್ಧತೆಯನ್ನು ತೋರಿಸಬೇಕಿತ್ತು. ಈ ರೀತಿಯ ಕೆಟ್ಟ ಪರಂಪರೆಗೆ ನಾಂದಿಹಾಡಲು ಬಿಡಬಾರದಿತ್ತು. ಸಭಾಧ್ಯಕ್ಷ ಸ್ಥಾನದಲ್ಲಿ ಕೂತು ತೆಗೆದುಕೊಳ್ಳುವ ತೀರ್ಮಾನಗಳು ರಾಜಕೀಯ ಸೇಡು, ಸಿಟ್ಟು ತೀರಿಸಿಕೊಳ್ಳುವುದಕ್ಕೆ ಆಗಬಾರದು.

● ಈ ಘಟನೆಯಲ್ಲಿ ನಿಮಗೆ ಅಚ್ಚರಿ ಮೂಡಿಸಿದ್ದು ಯಾವುದು?

ಮೊದಲಿಗೆ ಆರು ತಿಂಗಳು ಶಾಸಕರನ್ನು ಅಮಾನತು ಮಾಡಿದ್ದೇ ಅಚ್ಚರಿಯಾಯಿತು. ಆದರೆ ಅದಕ್ಕಿಂತ ಶಾಕ್ ಆಗಿದ್ದು, ಅಮಾನತುಗೊಂಡಿರುವ 18 ಶಾಸಕರಿಗೆ ವಿಧಿಸಿರುವ ಷರತ್ತುಗಳು. ಈ ಷರತ್ತುಗಳು ಶಾಸಕರಿಗೆ ನೀಡುವ ಶಿಕ್ಷೆಗಿಂತ ಹೆಚ್ಚಾಗಿ, ಕ್ಷೇತ್ರದ ಜನತೆಗೆ ನೀಡಿದ ಶಿಕ್ಷೆ ಎನ್ನಬಹುದು. ಈ ರೀತಿ ಶಾಸಕರು ಸಭೆ ನಡೆಸಬಾರದು, ಅಧಿಕಾರಿಗಳು ಸೂಚನೆ ಪಡೆಯಬಾರದು, ಮೊಗಸಾಲೆಗೆ ಬರಬಾರದು ಎನ್ನುವುದು ಯಾವ ರೀತಿಯ ಕ್ರಮ? ಈ ರೀತಿಯ ಕಠಿಣ ಷರತ್ತುಗಳನ್ನು ವಿಧಿಸಲು ಅವರೇನು ಕ್ರಿಮಿನಲ್‌ಗಳಾ?

→ 4

ಸೊಂಪಾದ ಪುಟಗಳು



ಇಕಿಗಾಯಿ ಅರಿಯದೇ ಜಪಾನ್ ಸರಿಯಾಗಿ ಅರ್ಥವಾಗು-ವುದುಂಟೇ?
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್

6



ಸುಭಾಷಿತ: ಮರೆಯಾಗುತ್ತಿರುವ ಸಾರಭೂತ ಸಾಹಿತ್ಯ
ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಕೊಂಡ

7

ದಾರಿದೀಪೋಕ್ತಿ

ನಮ್ಮ ಮಕ್ಕಳ ಮೇಲೆ ಹಣವನ್ನು ಖರ್ಚು ಮಾಡುವುದಕ್ಕಿಂತ, ನಮ್ಮ ಸಮಯವನ್ನು ಅವರ ಮೇಲೆ ಖರ್ಚು ಮಾಡುವುದು ಒಳ್ಳೆಯದು. ಅವರಿಗೆ ನಾವು ಜತೆಗಿರುವುದಕ್ಕಿಂತ ಹೆಚ್ಚಿನ ಸಂತೋಷ ಬೇರೆ ಯಾವುದರಿಂದಲೂ ಸಿಗುವುದಿಲ್ಲ.

ವಕ್ರತುಂಡೋಕ್ತಿ



ಕೆಲವರು ಶೋಕಗೀತೆ ಹಾಡಿದರೆ ಅಳು ಬರುತ್ತದೆ, ಉಳಿದ ಹಾಡುಗಳನ್ನು ಹಾಡಿದರೂ.

ಮಾತಂದ್ರೆ ಮಾತು

ದೇವರು ಎಲ್ಲರಿಗೂ 24 ಗಂಟೆ ಕೊಟ್ಟಿದ್ದಾನೆ. ಜನರು ಉತ್ಸಾಹದಿಂದ ಏನನ್ನಾದರೂ ಮಾಡಲು ಮುಂದಾದಾಗ ಸಮಯ ಎಂಬುದು ಎಂದಿಗೂ ಮಿತಿಯಾಗುವುದಿಲ್ಲ.

- ಸುಧಾ ಮೂರ್ತಿ
ರಾಜ್ಯಸಭಾ ಸದಸ್ಯೆ

ಫನ್‌ತರಂಗ

- ರಘುಪತಿ ಶೃಂಗೇರಿ -



ಟ್ರ್ಯಾಪ್ ಸಂತ್ರಸ್ತರಿಂದ ಹೈಗೆ ದೂರು ಸಲ್ಲಿಸಲು ಸಿದ್ಧತೆ
ಮರ್ಯಾದೆಗೆ ಹೆದರಿ ದೂರು ಕೊಡಲು ಹಿಂದೇಟು

ದೆಹಲಿ ತಲುಪಲಿದೆ ಹನಿಟ್ರ್ಯಾಪ್ ಗಲಾಟೆ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಕಳೆದ ಮೂರು ದಿನಗಳಿಂದ ತೀವ್ರ ವಿವಾದಕ್ಕೆ ಕಾರಣವಾಗಿರುವ ಹನಿಟ್ರ್ಯಾಪ್ ಪ್ರಕರಣ ಶೀಘ್ರದಲ್ಲಿಯೇ ದೆಹಲಿ ತಲುಪುವುದು ನಿಶ್ಚಿತ ಎನ್ನಲಾಗಿದೆ.

ಸಹಕಾರ ಸಚಿವ ಕೆ.ಎನ್.ರಾಜಣ್ಣ ವಿರುದ್ಧ ನಡೆದಿರುವ ಹನಿಟ್ರ್ಯಾಪ್ ಪ್ರಯತ್ನದ ಹಿಂದಿರುವ ಶಕ್ತಿಯ ಬಗ್ಗೆ ತನಿಖೆ ನಡೆಸುವ ಮೊದಲೇ, ಹೈಕಮಾಂಡ್‌ಗೆ ದೂರು ನೀಡಲು ರಾಜಣ್ಣ ತೀರ್ಮಾನಿಸಿದ್ದು, ಶೀಘ್ರದಲ್ಲಿಯೇ ದೆಹಲಿಗೆ ತೆರಳಲಿದ್ದಾರೆ ಎಂದು ತಿಳಿದುಬಂದಿದೆ.

ಮೇಲ್ನೋಟಕ್ಕೆ ರಾಜಣ್ಣ ಅವರು ತಮ್ಮ ಮೇಲೆ ನಡೆದಿರುವ ಹನಿಟ್ರ್ಯಾಪ್ ಪ್ರಯತ್ನದ ಬಗ್ಗೆ ವಿವರಣೆ ನೀಡಲಿದ್ದಾರೆ ಎನ್ನಲಾಗಿದೆ. ಆದರೆ ಸ್ವಪಕ್ಷೀಯರೇ ಈ ಸುಳಿಯಲ್ಲಿ ರಾಜಣ್ಣ ಅವರನ್ನು ಸಿಲುಕಿಸಲು ಪ್ರಯತ್ನಿಸಿದ್ದಾರೆ ಎನ್ನುವ ಆರೋಪವಿರುವುದರಿಂದ, ಈ ಬಗ್ಗೆ ವಿವರಣೆಯೊಂದಿಗೆ ದೂರು ನೀಡುವ ಸಾಧ್ಯತೆಯಿದೆ ಎನ್ನಲಾಗಿದೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ರಾಜಣ್ಣ, ಹೈಕಮಾಂಡ್‌ಗೆ ಯಾವುದಾದರೂ ಸಿ.ಡಿ. ತೆಗೆದುಕೊಂಡು ಹೋಗಿ ಕೊಟ್ಟರೆ ಮೊದಲೇ ಅವರಿಗೆ ಗೊತ್ತಿರಬೇಕಲ್ಲ. ನಾನು ಯಾವುದೇ ರೀತಿಯ ಲೋಪ ಎಸಗಿಲ್ಲ ಎನ್ನುವುದನ್ನು ತಿಳಿಸಬೇಕಿದೆ. ದೂರು ಬಂದರೆ ದೆಹಲಿ ನಾಯಕರು ನಂಬಬಾರದು ಹಾಗೂ ನನ್ನ ಮೇಲೆ ಕ್ರಮ ತೆಗೆದುಕೊಳ್ಳುವ ಮುನ್ನ ನನ್ನನ್ನು ಒಮ್ಮೆ ಹೈಕಮಾಂಡ್ ಕೇಳಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಈ ಮೂಲಕ ಹೈಕಮಾಂಡ್‌ಗೆ ವರದಿ ಸಲ್ಲಿಸಲಿದ್ದಾರೆ ಎಂದು ಅಂದಾಜಿಸಲಾಗಿದೆ.

ಟ್ರ್ಯಾಪ್‌ನ ಬಗ್ಗೆ ಅಧಿಕೃತ ದೂರು ದಾಖಲಾಗಿಲ್ಲ: ವಿಧಾನಸಭೆಯಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹನಿಟ್ರ್ಯಾಪ್‌ಗೆ ಸಂಬಂಧಿಸಿದಂತೆ ಉನ್ನತ ಮಟ್ಟದ ತನಿಖೆಯ ಭರವಸೆ ನೀಡಿದ್ದಾರೆ. ಆದರೆ ತನಿಖೆಗೆ ಸಂಬಂಧಿಸಿದಂತೆ ಯಾವುದೇ ಪ್ರಗತಿ ಕಾಣದಿರುವುದಕ್ಕೆ 'ತಾಂತ್ರಿಕ' ಕಾರಣ ಎದುರಾಗಿದೆ ಎನ್ನಲಾಗಿದೆ.

ಹೌದು, ಯಾವುದೇ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಬೇಕೆಂದರೆ ಅದಕ್ಕೆ ಸಂತ್ರಸ್ತರಿಂದ ಅಧಿಕೃತ ದೂರು ದಾಖಲಾಗಬೇಕು. ಈ ಪ್ರಕರಣದಲ್ಲಿ ಹನಿಟ್ರ್ಯಾಪ್‌ಗೆ ಒಳಗಾಗಿರುವ 48 ನಾಯಕರಲ್ಲಿ ಯಾರಾದರೂ ಒಬ್ಬರು ಅಧಿಕೃತ ದೂರು ನೀಡಬೇಕು. ಕಲಾಪದಲ್ಲಿ ದೂರು ನೀಡುವುದಾಗಿ ಸಚಿವ ರಾಜಣ್ಣ ಹೇಳಿದ್ದರೂ ಅಧಿಕೃತವಾಗಿ ದೂರು ದಾಖಲಿಸಿಲ್ಲ.

→ 4

ನಾನು ಯಾವತ್ತೂ ಕೂಡ ಕೆಟ್ಟದ್ದನ್ನು ಬಯಸಲ್ಲ. ಕೆಟ್ಟದ್ದನ್ನು ಬಯಸಿದವರು ಉದ್ಧಾರ ಆಗಿಲ್ಲ. ನನಗೆ ಆದ ರೀತಿ ಯಾರಿಗೂ ಆಗಬಾರದು. ಈ ರೀತಿ ತೇಜೋವಧೆ ಮಾಡುವುದು ಭೂಷಣ ತರಲ್ಲ. ಅಧಿಕಾರದ ಆಸೆಗಾಗಿ ವಿಷಕನ್ಯೆಯರನ್ನು ಬಳಸುವುದು ಈ ಹಿಂದಿನಿಂದಲೂ ಇತಿಹಾಸದಲ್ಲಿ ನಡೆದುಕೊಂಡು ಬಂದಿದೆ.

– ಕೆ.ಎನ್.ರಾಜಣ್ಣ, ಸಹಕಾರ ಸಚಿವ

ಹನಿಟ್ರ್ಯಾಪ್ ಕೇಸ್‌ಗೆ ಸಂಬಂಧಿಸಿದಂತೆ ಸಚಿವ ಕೆ.ಎನ್.ರಾಜಣ್ಣ ಅವರು ದೂರು ದಾಖಲಿಸಿದರೆ ತನಿಖೆ ನಡೆಯುತ್ತದೆ. ದೂರು ನೀಡಲು ಸಮಯವಿದೆ. ಘರ್ಜಿಸುವ ಹುಲಿಗಳನ್ನೇ ಹನಿಟ್ರ್ಯಾಪ್ ಮಾಡಲಾಗುತ್ತಿದೆ. ಈ ಪ್ರಕರಣ ಸಿಬಿಐಗೆ ನೀಡುವ ಅಗತ್ಯವಿಲ್ಲ. ದೂರು ದಾಖಲಿಸಿದರೆ ಪೊಲೀಸರೇ ತನಿಖೆ ನಡೆಸುತ್ತಾರೆ.

– ಸತೀಶ್ ಜಾರಕಿಹೊಳಿ, ಸಚಿವ

ರಾಜಣ್ಣ ಸ್ವಭಾವ ಗೊತ್ತಿದೆ. ಹಾಯ್ ಅಂದರೆ, ರಾಜಣ್ಣ ಅವರು ಹಲೋ ಎನ್ನುವ ಬದಲು ವಾಟ್ ಅಂತಾರೆ. ಕೆಲವರು ಬಂದು ಸುಮ್ಮ ಸುಮ್ಮನೇ ಟ್ರ್ಯಾಪ್ ಮಾಡೋ ಉದ್ದೇಶ ಇರುತ್ತೆ. ರಾಜಣ್ಣರಿಗೆ ಹಲೋ ಗಿಲೋ ನಡೆಯಲ್ಲ. ಈ ಟ್ರ್ಯಾಪ್‌ನ ಕ್ಯಾಮೆರಾಮ್ಯಾನ್, ನಿರ್ದೇಶಕ, ನಿರ್ಮಾಪಕನ ವಿರುದ್ಧ ಕ್ರಮವಾಗಲಿ.

– ಎಂ.ಬಿ.ಪಾಟೀಲ್, ಸಚಿವ

ಸಿಎಂ ಬಗ್ಗೆ ಮಾತನಾಡಿದರೆ ಕೆಲವರಿಗೆ ಹೊಟ್ಟೆ ಕಿಚ್ಚು ಆಗಬಹುದು. ಸಣ್ಣ ಮನಸ್ಸಿನ ಜನರಿಗೆ ಆ ತರಹದ ಮನಸ್ಥಿತಿಯಿದೆ. ಹನಿಟ್ರ್ಯಾಪ್ ಮಾಡುವವರಿಗೆ ಸಿಎಂ ಪರ-ವಿರುದ್ಧ ಎಂಬುದು ಯಾವುದೂ ಇರಲ್ಲ. ನಾವು ಸಿಎಂ ಪರ ಇರುವುದಕ್ಕೆ ಟಾರ್ಗೆಟ್ ಆಗುತ್ತೇವೆ ಎಂಬ ವಾದ ನಾನಂತೂ ಒಪ್ಪುವುದಿಲ್ಲ.

– ಎಚ್.ಸಿ.ಮಹದೇವಪ್ಪ, ಸಚಿವ

ಬಂದ್‌ಗೆ ಆಂಶಿಕ ಪ್ರತಿಕ್ರಿಯೆ

ಹೋರಾಟಗಾರರ ಬಂಧನ, ಬಿಡುಗಡೆ
ಎಂಇಎಸ್, ಶಿವಸೇನಾ ಪ್ರತಿಕೃತಿ ದಹನ

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್ ಚಾಲಕ, ನಿರ್ವಾಹಕರ ಮೇಲೆ ಮಹಾ ರಾಷ್ಟ್ರದ ಶಿವ ಸೇನೆ ಮತ್ತು ಎಂಇಎಸ್ ಕಾರ್ಯಕರ್ತರ ದೌರ್ಜನ್ಯ ಖಂಡಿಸಿ ಕನ್ನಡಪರ ಸಂಘಟನೆಗಳು ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ಜನರು ಸ್ಪಂದಿಸಿಲ್ಲ. ವಾಟಾಳ್ ನಾಗರಾಜ್ ಮತ್ತಿತರರು ಕರೆ ನೀಡಿದ್ದ ಬಂದ್‌ಗೆ ಇತರ ಕನ್ನಡಪರ ಸಂಘಟನೆಗಳು ನೈತಿಕ ಬೆಂಬಲ ಸೂಚಿಸಿದ್ದವು. ರಾಜ್ಯದ ಯಾವುದೇ ಸ್ಥಳಗಳಲ್ಲಿ ಬಂದ್ ಆಗಿಲ್ಲ. ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತ, ಮೆಜೆಸ್ಟಿಕ್ ಬಸ್ ನಿಲ್ದಾಣ, ಪುರಭವನದ ಬಳಿ ಸಣ್ಣ ಮಟ್ಟದ ಪ್ರತಿಭಟನೆಗಳು ನಡೆದವು.

ಮೈಸೂರು, ಮಂಡ್ಯ, ಬೆಳಗಾವಿ, ಹುಬ್ಬಳ್ಳಿ, ಬಾಗಲಕೋಟೆ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಬೈಕ್ ರ‍್ಯಾಲಿ ನಡೆಸಿ, ಅಂಗಡಿ ಮುಚ್ಚಿಸಿದರು. ಅವರನ್ನು ಪೊಲೀಸರು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದರು. ಉಳಿದಂತೆ ವಿವಿಧೆಡೆ ಎಂಇಎಸ್, ಶಿವಸೇನಾ ಪ್ರತಿಕೃತಿ ದಹಿಸಿ ಪ್ರತಿಭಟನೆ ನಡೆದಿವೆ. ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳದಲ್ಲಿ ಬಂದ್‌ನ ಯಾವುದೇ ಲಕ್ಷಣಗಳು ಕಂಡು ಬರಲಿಲ್ಲ. ಜನಜೀವನ ಎಂದಿನಂತಿತ್ತು. ಬಂದ್‌ಗೆ ಕರೆ ಕೊಟ್ಟಿದ್ದ ಹಿನ್ನೆಲೆಯಲ್ಲಿ ಬೀದರ್ ನಗರ ಸೇರಿದಂತೆ ಜಿಲ್ಲೆಯ ಮೂಲಕ ಸಂಚರಿಸಿದ ಮಹಾರಾಷ್ಟ್ರ ಸಾರಿಗೆ ಸಂಸ್ಥೆಯ ಬಸ್‌ಗಳಿಗೆ ಪೊಲೀಸ್ ಭದ್ರತೆ ಕಲ್ಪಿಸಲಾಗಿತ್ತು.

ಮನವಿ ಮಾಡಿದರೆ ಶಾಸಕರ ಅಮಾನತು ಮರುಪರಿಶೀಲನೆ

ಪೀಠದ ಗೌರವ ರಕ್ಷಣೆ ನಿಟ್ಟಿನಲ್ಲಿ ನಿರ್ಧಾರ: ಖಾದರ್

ಬೆಂಗಳೂರು: 18 ಶಾಸಕರ ಅಮಾನತು ರಾಜ್ಯ ರಾಜಕೀಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದ್ದು, ಬಿಜೆಪಿಯು ಹೋರಾಟಕ್ಕೆ ಸಿದ್ಧತೆ ನಡೆಸಿಕೊಂಡಿದೆ. ಆದರೆ ಈ ನಡುವೆ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, 'ಮನವಿ ಮಾಡಿದರೆ ಅಮಾನತು ಮರುಪರಿಶೀಲನೆ ಮಾಡಬಹುದು' ಎನ್ನುವ ಮೂಲಕ ಅಮಾನತ್ತನ್ನು ಸಡಿಲಿಕೆ ಮಾಡುವ ಸುಳಿವು ನೀಡಿದ್ದಾರೆ.

ಆರು ತಿಂಗಳ ಕಾಲ ಅಮಾನತು ಮಾಡಿದ ಬೆನ್ನಲ್ಲೇ, ಹಿರಿಯ ರಾಜಕಾರಣಿಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಕೇವಲ ಬಿಜೆಪಿಗರು ಮಾತ್ರವಲ್ಲದೇ, ಕಾಂಗ್ರೆಸ್‌ನ ಕೆಲ ನಾಯಕರು ವಿರೋಧಿಸಿದ್ದಾರೆ. ಆದ್ದರಿಂದ ಇದೀಗ ಈ ತೀರ್ಮಾನವನ್ನು ಮರುಪರಿಶೀಲಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ಈ ನಡುವೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸ್ಪೀಕರ್ ಯು.ಟಿ. ಖಾದರ್, ಯಾವುದೇ ವೈಯಕ್ತಿಕ ಕಾರಣಕ್ಕೆ ಈ ತೀರ್ಮಾನ ಕೈಗೊಂಡಿಲ್ಲ. ಬದಲಿಗೆ, ಸಭಾಧ್ಯಕ್ಷ ಪೀಠದ ಗೌರವ ಉಳಿಸುವ ಉದ್ದೇಶದಿಂದ ಈ ತೀರ್ಮಾನ ಅನಿವಾರ್ಯವಾಗಿತ್ತು ಎಂದು ಸ್ಪಷ್ಟಪಡಿಸಿದ್ದಾರೆ. ಜನರಿಂದ ಆಯ್ಕೆಯಾಗಿ ಬಂದವರು, ಅದಕ್ಕೆ ತಕ್ಕಂತೆ ಇರಬೇಕು. ಪೀಠಕ್ಕೆ ಅಗೌರವ ತಂದಿದ್ದನ್ನು ಸಹಿಸಲು ಸಾಧ್ಯ ಇದೆಯಾ? ಎಂದರು.

→ 4

- ಅಮಾನತು ಮಾಡಿರುವುದು ವೈಯಕ್ತಿಕ ಕಾರಣಕ್ಕಲ್ಲ
- ಸದನದಲ್ಲಿ ಅಧ್ಯಕ್ಷರ ಪೀಠಕ್ಕಿಂತ ದೊಡ್ಡವರು ಯಾರೂ ಇಲ್ಲ
- ಅವರ ಕಾನೂನು ಹೋರಾಟದ ಬಗ್ಗೆ ನಾನು ಪ್ರತಿಕ್ರಿಯಿಸಲ್ಲ

ರಾಜ್ಯಾದ್ಯಂತ ಹೋರಾಟ: ಬಿಜೆಪಿ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ಸ್ಪೀಕರ್ ನಮ್ಮ ಶಾಸಕರನ್ನು ಅಮಾನತು ಮಾಡಿ ರಾಜ್ಯ ಸರಕಾರದ ತಾಳಕ್ಕೆ ತಕ್ಕಂತೆ ಕುಣಿದಿದ್ದಾರೆ. ಇದು ಖಂಡನೀಯ. 18 ಶಾಸಕರ ಅಮಾನತು ಆದೇಶ ಹಿಂಪಡೆಯಬೇಕು. 6 ತಿಂಗಳ ಕಾಲ ಅಮಾನತುಗೊಳಿಸುವ ಕುರಿತ ನಿರ್ಧಾರ ಸಂಪೂರ್ಣವಾಗಿ ಕಾನೂನು ಬಾಹಿರ, ಅಸಾಂವಿಧಾನಾತ್ಮಕ, ಏಕಪಕ್ಷೀಯ ಹಾಗೂ ಮನಸೋ ಇಚ್ಛೆಯಿಂದ ತೆಗೆದುಕೊಂಡ ತೀರ್ಮಾನ. ಸ್ಪೀಕರ್ ಅವರು ಶಾಸಕರಿಗೆ ಮಾತ್ರವಲ್ಲ, ಕ್ಷೇತ್ರದ ಜನರಿಗೆ ಅವಮಾನ ಮಾಡಿದ್ದಾರೆ. ಅಲ್ಪಸಂಖ್ಯಾತರನ್ನು ಖುಷಿಪಡಿಸಲು ಮೀಸಲಾತಿ ಕೊಟ್ಟ ಸರಕಾರದ ನಿರ್ಧಾರವನ್ನು ಬಿಜೆಪಿ ವಿರೋಧಿಸುತ್ತದೆ. ಸದನದ ಒಳಗೆ ಮತ್ತು ಹೊರಗೆ ಇದರ ವಿರುದ್ಧ ಹೋರಾಟ ನಡೆಸಿ ಇದನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯುತ್ತೇವೆ ಎಂದರು. ಕ್ಷೇತ್ರಾಭಿವೃದ್ಧಿಗೆ ಎರಡು ಕಾಸು ಬಿಡುಗಡೆ ಮಾಡುವ ಯೋಗ್ಯತೆ ಸರಕಾರಕ್ಕೆ ಇಲ್ಲ ಎಂದು ಹರಿಹಾಯ್ದರು.

ಕ್ಷೇತ್ರ ಪುನರ್‌ವಿಂಗಡಣೆ ಒಗ್ಗಟ್ಟು ಪ್ರದರ್ಶನಕ್ಕೆ ಕರೆ

ಚೆನ್ನೈನಲ್ಲಿ ಶನಿವಾರ ನಡೆದ ಜೆಎಸಿ ಸಭೆಯಲ್ಲಿ ಎಂ.ಕೆ.ಸ್ಟಾಲಿನ್, ಪಿಣರಾಯಿ ವಿಜಯನ್, ರೇವಂತ ರೆಡ್ಡಿ, ಭಗವಂತ ಮಾನ್, ಡಿ.ಕೆ.ಶಿವಕುಮಾರ್, ಟಿ.ಆರ್.ಬಾಲು, ಕೆ.ಟಿ.ರಾಮ ರಾವ್ ಇದ್ದರು.

ಚೆನ್ನೈ: ಕ್ಷೇತ್ರ ಪುನರ್‌ವಿಂಗಡನೆ ಪ್ರಕ್ರಿಯೆಗೆ ಮುಂದಾಗಿರುವ ಕೇಂದ್ರವು, ಲೋಕಸಭೆಯಲ್ಲಿ ದಕ್ಷಿಣದ ರಾಜ್ಯಗಳ ಪ್ರಾತಿನಿಧ್ಯವನ್ನು ಕುಂಠಿತಗೊಳಿಸುವ ಷಡ್ಯಂತ್ರ ನಡೆಸಿದೆ. ಇದನ್ನು ಪ್ರತಿಭಟಿಸುವಲ್ಲಿ ಪ್ರತಿಪಕ್ಷಗಳು ಒಗ್ಗಟ್ಟಾಗಿ ಹೋರಾಡಬೇಕಿದೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹೇಳಿದ್ದಾರೆ.

ಕೇಂದ್ರ ಸರಕಾರ ಸದ್ಯದಲ್ಲೇ ಕೈಗೊಳ್ಳಲಿರುವ ಕ್ಷೇತ್ರ ಮರು ವಿಂಗಡಣೆ ಪ್ರಕ್ರಿಯೆ ಕುರಿತು ಚರ್ಚಿಸಲು 'ನ್ಯಾಯೋಚಿತ ಕ್ಷೇತ್ರ ಪುನರ್ ವಿಂಗಡಣೆಗಾಗಿ ಜಂಟಿ ಕ್ರಿಯಾ ಸಮಿತಿ' ಚೆನ್ನೈನಲ್ಲಿ ಶನಿವಾರ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, ನ್ಯಾಯಯುತವಾದ ಕ್ಷೇತ್ರ ಪುನರ್‌ವಿಂಗಡಣೆ ಪ್ರಕ್ರಿಯೆಗೆ ಕಾನೂನು ತಜ್ಞರ ಸಮಿತಿ ರಚಿಸುವ ಅಗತ್ಯವಿದೆ. ಜತೆಗೆ ಕಾನೂನಿನ ಮಾರ್ಗದಲ್ಲೇ ರಾಜಕೀಯ ಹೆಜ್ಜೆಗಳನ್ನಿಡುವ ಕುರಿತು ಸಮಿತಿಯ ಸದಸ್ಯರು ತಮ್ಮ ಅಮೂಲ್ಯ ಸಲಹೆಗಳನ್ನು ನೀಡಬೇಕು. ನಾವು ಒಗ್ಗಟ್ಟಿನಿಂದ ಹೋರಾಡಿದರೆ ಮಾತ್ರ ಗೆಲುವು ಸಾಧಿಸಲು ಸಾಧ್ಯ ಎಂದಿದ್ದಾರೆ.

ಕ್ಷೇತ್ರ ಮರುವಿಂಗಡನೆಗೆ ಸಂಬಂಧಿಸಿದಂತೆ ಪ್ರತಿಪಕ್ಷಗಳು ಆಯೋಜಿಸಿರುವ ಜಂಟಿ ಕಾರ್ಯಪಡೆ ಸಮಿತಿಯ ಮುಂದಿನ ಸಭೆಯು ಹೈದರಾಬಾದ್‌ನಲ್ಲಿ ನಡೆಯಲಿದೆ ಎಂದು ಇದೇ ವೇಳೆ ಹೇಳಿದರು.

ಮಿನರಲ್ ವಾಟರ್ ಬಾಟಲಿ ಮರು ಖರೀದಿಗೆ ಖಂಡ್ರೆ ಸೂಚನೆ

ಪ್ಲಾಸ್ಟಿಕ್ ಬಾಟಲಿ ಮರು ಬಳಕೆಗೆ ಕ್ರಮ

ಬೆಂಗಳೂರು: ಮಿನರಲ್ ನೀರಿನ ಬಾಟಲಿಯನ್ನು ಬಳಸಿದ ಬಳಿಕ ಎಲ್ಲೆಂದರಲ್ಲಿ ಬಿಸಾಡುವುದರಿಂದ ಉಂಟಾಗುವ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಪರಿಸರ ಇಲಾಖೆಯು ಬಾಟಲಿಗಳ ಮರು ಖರೀದಿಗೆ ನಿಯಮ ರೂಪಿಸಲು ಮುಂದಾಗಿದೆ.

ಈ ಬಗ್ಗೆ ಪರಿಸರ ಮತ್ತು ಜೀವಿಶಾಸ್ತ್ರ ಸಚಿವ ಈಶ್ವರ್ ಖಂಡ್ರೆ, ಅಧಿಕಾರಿಗಳಿಗೆ ಸೂಚನೆ ನೀಡಿದ್ದು, ನೀರಿನ ಬಾಟಲಿ ಮಾರುವ ಮಳಿಗೆಗಳು ಕಡ್ಡಾಯವಾಗಿ ಖಾಲಿ ನೀರಿನ ಬಾಟಲಿಗೆ ಕನಿಷ್ಠ ಬೆಲೆ ನೀಡಿ ಮರು ಖರೀದಿಸುವಂತೆ ನಿಯಮ ರೂಪಿಸಲು ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರಿಗೆ ಸೂಚನೆ ನೀಡಿದ್ದಾರೆ. ಬಾಟಲಿಗಳ ಮೂಲಕ ಕುಡಿಯುವ ನೀರನ್ನು ಮಾರಾಟ ಮಾಡುವ ಕಂಪನಿಗಳಿಗೆ ಆ ಪ್ಲಾಸ್ಟಿಕ್ ಬಾಟಲಿಯ ವೈಜ್ಞಾನಿಕ ವಿಲೇವಾರಿಯ ಜವಾಬ್ದಾರಿಯೂ ಇರುತ್ತದೆ. ಈ ಹಿನ್ನೆಲೆಯಲ್ಲಿ ಖಾಲಿ ಬಾಟಲಿಗಳನ್ನು ಕನಿಷ್ಠ ದರ ನೀಡಿ ಮರಳಿ ಖರೀದಿಸುವಂತೆ ನಿಯಮ ರೂಪಿಸಿದಲ್ಲಿ ಪ್ಲಾಸ್ಟಿಕ್ ಬಾಟಲಿಯ ಹಾವಳಿ ತಡೆಯಲು ಸಾಧ್ಯ ಎಂದು ಅಭಿಪ್ರಾಯಪಟ್ಟಿದ್ದಾರೆ.

ರಸ್ತೆಯ ಬದಿಯಲ್ಲಿ ಎಲ್ಲೆಂದರಲ್ಲಿ ಬಿದ್ದು ಪರಿಸರ ಹಾಳು ಮಾಡುತ್ತಿರುವ ಖನಿಜ ಯುಕ್ತ ನೀರಿನ ಬಾಟಲಿಗೆ ಮೊದಲಿಗೆ ಕಡಿವಾಣ ಹಾಕಬೇಕಾಗಿದೆ. ನೀರಿನ ಬಾಟಲಿ ಖರೀದಿಸಲು ಬರುವ ಗ್ರಾಹಕರಿಂದ ಚಿಲ್ಲರೆ ಮಳಿಗೆಗಳು ಯಾವುದೇ ಕಂಪನಿಯ ನೀರಿನ ಬಾಟಲಿ ನೀಡಿದರೂ ಅದಕ್ಕೆ ಕನಿಷ್ಠ ಬೆಲೆ ನೀಡಿ, ಅಷ್ಟು ದರ ಕಡಿತ ಮಾಡಿ ಹೊಸ ಬಾಟಲಿ ಮಾರಾಟ ಮಾಡುವಂತೆ ಮತ್ತು ಈ ರೀತಿ ಸಂಗ್ರಹಿಸಲಾದ ಖಾಲಿ ಬಾಟಲಿಗಳನ್ನು ನೀರು ಮಾರಾಟ ಮಾಡುವ ಕಂಪನಿಗಳೇ ಹಿಂಪಡೆದು, ವಿಲೇವಾರಿ ಮಾಡುವುದನ್ನು ಕಡ್ಡಾಯಗೊಳಿಸಲು ಸೂಚಿಸಿದ್ದಾರೆ.

ಉತ್ಪಾದಕರ ವಿಸ್ತರಿತ ಜವಾಬ್ದಾರಿಯಂತೆ ಯಾವುದೇ ಉತ್ಪನ್ನವನ್ನು ತಯಾರಿಸುವವರು, ತಮ್ಮ ಉತ್ಪನ್ನಗಳಿಂದ ಪರಿಸರ ಮೇಲಾಗುವ ಪರಿಣಾಮಗಳನ್ನು ಉತ್ಪನ್ನವು ಗ್ರಾಹಕರ ಕೈಸೇರಿದ ನಂತರವೂ ನಿರ್ವಹಿಸುವ ಜವಾಬ್ದಾರಿ ಹೊಂದಿರುತ್ತಾರೆ ಎಂದರು.

- ಪರಿಸರಕ್ಕೆ ಮಾರಕವಾಗುವ ಬಾಟಲಿಗಳ ಮರುಬಳಕೆಗೆ ಸೂಚನೆ
- ಕನಿಷ್ಠ ಬೆಲೆ ನೀಡಿ ನೀರಿನ ಬಾಟಲಿ ಹಿಂಪಡೆಯಬೇಕು
- ಬಾಟಲಿಗಳನ್ನು ಉತ್ಪಾದಕರೇ ವಿಲೇವಾರಿ ಮಾಡಬೇಕು

ಮಣ್ಣಲ್ಲಿ ಮಣ್ಣಾಗದ, ನೀರಿನಲ್ಲಿ ಕರಗದ, ಸುಟ್ಟರೆ ಪ್ರಾಣವಾಯುವಿಗೆ ವಿಷಕಾರಿ ಅಂಶಗಳನ್ನು ಸೇರ್ಪಡೆ ಮಾಡುವ ಪ್ಲಾಸ್ಟಿಕ್ ಪರಿಸರಕ್ಕೆ ಅಷ್ಟೇ ಅಲ್ಲದೆ ಜನ, ಜಾನುವಾರಗಳ ಆರೋಗ್ಯಕ್ಕೂ ಮಾರಕವಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ನಿರ್ದಿಷ್ಟ ಏಕ ಬಳಕೆ ಪ್ಲಾಸ್ಟಿಕ್ ತಯಾರಿಕೆ, ದಾಸ್ತಾನು, ಮಾರಾಟ, ಬಳಕೆಯನ್ನು ನಿಷೇಧಿಸಿದ್ದು, ರಾಜ್ಯ ಸರಕಾರ ಕೂಡ ಈ ಸಂಬಂಧ ನಿಯಮಗಳನ್ನು ರೂಪಿಸಿದೆ. ಆದಾಗ್ಯೂ ಏಕ ಬಳಕೆ ಪ್ಲಾಸ್ಟಿಕ್ ಉತ್ಪನ್ನಗಳು ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾಗುತ್ತಿದ್ದು, ಪರಿಸರಕ್ಕೆ ಹಾನಿ ಆಗುತ್ತಿರುವುದನ್ನು ಸರಕಾರ ಗಂಭೀರವಾಗಿ ಪರಿಗಣಿಸಿದೆ.

– ಈಶ್ವರ್ ಖಂಡ್ರೆ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವ

ಸ್ಥಳೀಯ ಭಾಷೆಯಲ್ಲೇ ಪತ್ರ ವ್ಯವಹಾರ



ದೆಹಲಿ: ಹಿಂದಿ ಭಾಷೆ ಹೇರಿಕೆ ವಿಚಾರ'ವಾಗಿ ದಕ್ಷಿಣದ ರಾಜ್ಯಗಳು ಮತ್ತು ಕೇಂದ್ರ ಸರಕಾರದ ನಡುವೆ ಸಮರ ಜೋರಾಗಿರುವ ಬೆನ್ನಲ್ಲೇ ಕೇಂದ್ರ ಸಚಿವ ಅಮಿತ್ ಶಾ ಅವರು ಡಿಸೆಂಬರ್‌ನಿಂದ ಕರ್ನಾಟಕ ಸೇರಿದಂತೆ ಇತರ ರಾಜ್ಯಗಳ ಜತೆ ಸ್ಥಳೀಯ ಭಾಷೆ ಯಲ್ಲಿಯೇ ಪತ್ರ ವ್ಯವಹಾರ ನಡೆಸಲಾ ಗುತ್ತದೆ ಎಂದು ಘೋಷಿಸಿದ್ದಾರೆ.

ಕರ್ನಾಟಕ ಸರಕಾರದ ಜತೆ ಕನ್ನಡದಲ್ಲಿ, ತಮಿಳುನಾಡು ಸರಕಾರದ ಜತೆ ತಮಿಳು ಹಾಗೂ ಇತರ ರಾಜ್ಯಗಳ ಜತೆ ಅಲ್ಲಿನ ಭಾಷೆಯಲ್ಲೇ ಸಂವಹನ ನಡೆಸಲಾಗುವುದು.

ಮುಖ್ಯಮಂತ್ರಿಗಳು, ಸಚಿವರು ಮತ್ತು ಸಂಸತ್ ಸದಸ್ಯರೊಂದಿಗೆ ಅವರದೇ ಭಾಷೆಯಲ್ಲಿ ಪತ್ರವ್ಯವಹಾರ ಮಾಡಲಾಗುವುದು. ತಮ್ಮ ಭ್ರಷ್ಟಾಚಾರವನ್ನು ಮರೆಮಾಚಲು ಭಾಷೆಯ ಹೆಸರಿನಲ್ಲಿ ರಾಜಕೀಯ ನಡೆಸುವವರಿಗೆ ಇದು ಬಲವಾದ ಪ್ರತ್ಯುತ್ತರವಾಗಿದೆ ಎಂದು ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಕುರ್ಜು ಕೆಳಗೆ ಸಿಲುಕಿ ಒಬ್ಬ ಸಾವು

ಬೆಂಗಳೂರು ಗ್ರಾಮಾಂತರ: ಮದ್ದೂರಮ್ಮ ಜಾತ್ರೆಯಲ್ಲಿ ಕುರ್ಜುಗಳು (ತೇರು) ಧರೆಗುರುಳಿದ ಘಟನೆ ಆನೇಕಲ್ ತಾಲೂಕಿನಲ್ಲಿ ನಡೆದಿದೆ. ಕುರ್ಜು ಕೆಳಗೆ ಸಿಲುಕಿ ಒಬ್ಬ ದಾರುಣ ಸಾವನ್ನಪ್ಪಿದ್ದಾರೆ. ಆನೇಕಲ್ ತಾಲೂಕಿನ ಹುಸ್ಕೂರು ಮದ್ದೂರಮ್ಮ ದೇವಿ ಜಾತ್ರೆಯಲ್ಲಿ ಈ ದುರ್ಘಟನೆ ನಡೆದಿದೆ. ಜಾತ್ರೆಗೆ ಗ್ರಾಮಗಳಿಂದ 150 ಕ್ಕೂ ಹೆಚ್ಚು ಅಡಿ ಎತ್ತರದ ಕುರ್ಜುಗಳು ಆಗಮಿಸಿದ್ದವು. ತೇರು ಎಳೆದು ತರುವ ಸಂದರ್ಭದಲ್ಲಿ ಅವಘಡ ಸಂಭವಿಸಿದೆ. ಮದ್ದೂರಮ್ಮ ಜಾತ್ರೆಗೆ ನೂರಾರು ವರ್ಷಗಳ ಇತಿಹಾಸವಿದೆ. ಟ್ರ್ಯಾಕ್ಟರ್ ಹಾಗೂ ನೂರಾರು ಎತ್ತುಗಳ ಮೂಲಕ ಎಳೆದು ತರುವ ಹೆಸರಾಂತ ಜಾತ್ರೆ ಇದು. ಪ್ರತಿಷ್ಠೆಗೆ ಅತೀ ಎತ್ತರ ತೇರು ಕಟ್ಟಿ ಎಳೆದು ತರುವ ಜಾತ್ರೆ ನೋಡಲು ಲಕ್ಷಾಂತರ ಜನ ಆಗಮಿಸುತ್ತಿದ್ದರು. ಗಾಳಿ ಸಹಿತ ಮಳೆಯಿಂದಾಗಿ ಆಯತಪ್ಪಿ ತೇರು ಬಿದ್ದಿದೆ. ತೇರಿನಲ್ಲಿ ಇದ್ದ ಹಲವರಿಗೆ ಗಾಯಗಳಾಗಿವೆ. ಕಳೆದ ವರ್ಷ ಹೀಲಲಿಗೆ ತೇರು ಬಿದ್ದಿತ್ತು. ಶನಿವಾರ ಗಾಳಿ ಮಳೆ ಹೆಚ್ಚಾಗಿ ಸುರಿದ ಹಿನ್ನೆಲೆ ಅವಘಡ ಸಂಭವಿಸಿದೆ.

ಕಾಡಿನಲ್ಲಿ 4 ತಿಂಗಳ ಹೆಣ್ಣು ಶಿಶು ಪತ್ತೆ

ಬೆಳ್ತಂಗಡಿ: ಬೆಳಾಲು ಕೊಡೋಳುಕೆರೆ ಎಂಬಲ್ಲಿ ನಾಲ್ಕು ತಿಂಗಳ ಹೆಣ್ಣು ಶಿಶುವನ್ನು ಕಾಡಿನ ಮಧ್ಯೆ ಬಿಟ್ಟು ಹೋದ ಘಟನೆ ಶನಿವಾರ ಬೆಳಗ್ಗೆ ಕಂಡುಬಂದಿದೆ. ಮುಂಡ್ರೊಟ್ಟು ರಸ್ತೆಯ ಕೊಡೋಳುಕೆರೆ ಕಾಡಿನಲ್ಲಿ ಮಗುವೊಂದು ಅಳುವ ಶಬ್ದ ದಾರಿಹೋಕ ಮಹಿಳೆಗೆ ಕೇಳಿದ್ದು, ತಕ್ಷಣ ಅವರು ಸಂಬಂಧ ಪಟ್ಟವರಿಗೆ ತಿಳಿಸಿದ್ದಾರೆ. ಹಸುಗೂಸನ್ನು ರಕ್ಷಿಸಲಾಗಿದ್ದು, ಆರೋಗ್ಯಕರವಾಗಿದೆ ಎಂದು ತಿಳಿದುಬಂದಿದೆ. ಧರ್ಮಸ್ಥಳ ಪೊಲೀಸರು ಮತ್ತು ಆರೋಗ್ಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ದೌಡಾಯಿಸಿದ್ದು, ಮಹಿಳಾ ಮತ್ತು ಮಕ್ಕಳ ಇಲಾಖಾ ಬರುವಿಕೆಗಾಗಿ ಕಾಯುತ್ತಿದ್ದಾರೆ. ಮುಂದೆ ಮಗುವಿಗೆ ಚಿಕಿತ್ಸೆ ಒದಗಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಬೆಳಾಲು ಗ್ರಾ.ಪಂ. ಅಧ್ಯಕ್ಷೆ ವಿದ್ಯಾ ಶ್ರೀನಿವಾಸ್ ಗೌಡ ತಿಳಿಸಿದ್ದಾರೆ.

ವಾಹನಗಳ ಸಂಚಾರ, ವ್ಯಾಪಾರ-ವಹಿವಾಟು ಎಂದಿನಂತೆ | ಹಲವೆಡೆ ಕನ್ನಡ ಪರ ಸಂಘಟನೆಗಳ ಪ್ರತಿಭಟನೆ,ಎಂಇಎಸ್ ನಿಷೇಧಕ್ಕೆ ಆಗ್ರಹ

ಕರ್ನಾಟಕ ಬಂದ್: ರಾಜ್ಯದ ಬಹುತೇಕ ಕಡೆ ನೀರಸ

ಬೆಂಗಳೂರು: ಮರಾಠಿಗರ ದುರ್ವರ್ತನೆ ವಿರುದ್ಧ ಕನ್ನಡಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ರಾಜ್ಯಾದ್ಯಂತ ಶನಿವಾರ ನೀಡಿದ್ದ ಬಂದ್‌ಗೆ ಕರೆಗೆ ಕೆಲವು ಜಿಲ್ಲೆಗಳಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ಬಹುತೇಕ ಕಡೆ ಅಂಗಡಿ-ಮುಂಗಟ್ಟುಗಳು ಬಹುತೇಕ ತೆರೆದಿದ್ದವು. ಬಸ್ ಹಾಗೂ ಇತರ ವಾಹನಗಳ ಸಂಚಾರ ಎಂದಿನಂತಿತ್ತು. ಹಿನ್ನೆಲೆಯಲ್ಲಿ ಬೆಳಗಾವಿ, ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಬಂದ್‌ಗೆ ಅಥಣಿಯಲ್ಲಿ ಮಿಶ್ರ ಪ್ರತಿಕ್ರಿಯೆ: ರಾಜ್ಯದಲ್ಲಿ ಪುಂಡಾಟಿಕೆ ನಡೆಸುತ್ತಿರುವ ಎಂಇಎಸ್ ನಿಷೇಧ ಸೇರಿದಂತೆ ನೆನೆಗುದಿಗೆ ಬಿದ್ದಿರುವ ಕಳಸಾ ಬಂಡೂರಿ ನಾಲೆ, ಮೇಕೆದಾಟು ಯೋಜನೆ, ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ ಅಭಿವೃದ್ಧಿ ಆದ್ಯತೆ ಮೊದಲಾದ ಬೇಡಿಕೆಗಳಿಗೆ ಆಗ್ರಹಿಸಿ ಕರೆ ನೀಡಿದ ಕರ್ನಾಟಕ ಬಂದ್‌ಗೆ ಅಥಣಿಯಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿತ್ತು.

> **ಕಳೆದ 30 ವರ್ಷಗಳ ಹಿಂದೆ ಇದ್ದ ಕನ್ನಡ ಮರಾಠಿ ಭಾಷಿಕರ ಸಂಘರ್ಷ ಈಗಿಲ್ಲ. ಸರಕಾರ ಯೋಜನೆ ಮತ್ತು ಕಾರ್ಯಕ್ರಮ ಹಾಕಿಕೊಂಡು ಭಾಷಾ ಸಂಘರ್ಷ ನಿಯಂತ್ರಿಸುವುದೇ ಒಳ್ಳೆಯದು.ಎಂಇಎಸ್ ನಿಷೇಧಿಸುವುದರಿಂದ ವಿವಾದಕ್ಕೆ ಪರಿಹಾರ ಸಿಗಲ್ಲ. ಬ್ಯಾನ್ ಮಾಡಿದರೇ, ಮತ್ತೇ ಬೇರೆ ಹೆಸರಿನಲ್ಲಿ ಸಂಘಟನೆಗಳನ್ನು ಹುಟ್ಟುಹಾಕಿ ಸಕ್ರಿಯವಾಗುವ ಸಾಧ್ಯತೆಗಳಿವೆ.**
> – **ಸತೀಶ್ ಜಾರಕಿಹೊಳಿ**, ಸಚಿವ

ಬಳ್ಳಾರಿಯಲ್ಲಿ ಬೆಂಬಲ ಇಲ್ಲ: ಬಳ್ಳಾರಿಯಲ್ಲಿ ಎಂದಿನಂತೆ ಅಂಗಡಿ-ಮಳಿಗೆಗಳ ವ್ಯಾಪಾರ ಎಂದಿನಂದಿತ್ತು. ಬಸ್, ಆಟೋ ಹಾಗೂ ಇತರ ವಾಹನಗಳ ಸಂಚಾರ ಸಹಜವಾಗಿತ್ತು. ಬಂದ್‌ಗೆ ಬೆಂಬಲವಾಗಿ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು, ರಾಯಲ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಅಥಣಿಯಲ್ಲಿ ಅಂಗಡಿ ಮುಗ್ಗಟ್ಟುಗಳು ಬಂದ್.

ಕನ್ನಡ ಹೋರಾಟಗಾರರು ವಶಕ್ಕೆ

ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಮೈಸೂರು, ದಾವಣಗೆರೆ, ಆನೇಕಲ್ ಸೇರಿದಂತೆ ಹಲವೆಡೆ ಬಸ್ ತಡೆದ ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರನ್ನು ವಶಕ್ಕೆ ಪಡೆಯಲಾಗಿದೆ. ದಾವಣಗೆರೆಯ ಎಎಸ್‌ಪಿ ಮಂಜುನಾಥ್ ಅವರ ನೇತೃತ್ವದಲ್ಲಿ ನಗರದ ಜಯದೇವ ವೃತ್ತದಲ್ಲಿ ಪ್ರತಿಭಟನೆ ಮಾಡುತ್ತಿದ್ದ 20ಕ್ಕೂ ಹೆಚ್ಚು ಹೋರಾಟಗಾರರನ್ನು ವಶಕ್ಕೆ ಪಡೆಯಲಾಗಿತ್ತು. ಹಾಗೆಯೇ ಆನೇಕಲ್‌ನ ಬಸ್ ನಿಲ್ದಾಣದಲ್ಲಿ ಬಸ್ ಅಡ್ಡಗಟ್ಟಿ ರಸ್ತೆ ಮಧ್ಯೆ ಮಲಗಿ ಪ್ರತಿಭಟನೆಗೆ ಮುಂದಾದ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿದ್ದರು.

ಮೈಸೂರಿನಲ್ಲಿ ಪ್ರತಿಭಟನೆ: ಮೈಸೂರಿನಲ್ಲಿ ಬಂದ್ ಆಚರಣೆ ಪ್ರತಿಭಟನೆಗಷ್ಟೇ ಬಂದ್ ಸೀಮಿತವಾಗಿತ್ತು. ಬೆಳಗ್ಗೆ ರಸ್ತೆತಡೆ ಮಾಡಿದ ಕನ್ನಡಪರ ಹೋರಾಟಗಾರರನ್ನು ಪೊಲೀಸರು ವಶಕ್ಕೆ ಪಡೆದರು. ಬಳಿಕ ಎಂದಿನಂತೆ ಕೆಎಸ್‌ಆರ್‌ಟಿಸಿ ಬಸ್ ಸಂಚಾರ, ವ್ಯಾಪಾರ- ವಹಿವಾಟ ನಡೆದು, ಬಂದ್ ಕರೆಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿತ್ತು.

ವಿಜಯಪುರದಲ್ಲೂ ನೀರಸ ಪ್ರತಿಕ್ರಿಯೆ: ವಿಜಯಪುರ ಜಿಲ್ಲೆಯಲ್ಲಿ ಬಂದ್‌ಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ವಿವಿಧ ಕನ್ನಡಪರ ಸಂಘಟನೆಗಳು ಹಾಗೂ ಇತರ ಸಂಘ ಸಂಸ್ಥೆಗಳು ಸಾಂಕೇತಿಕವಾಗಿ ಬಂಗ್‌ಗೆ ಬೆಂಬಲ ನೀಡಿದ್ದವು. ಸರಕಾರಿ ಹಾಗೂ ಖಾಸಗಿ ಬಸ್‌ಗಳ ಸಂಚಾರ ಸಹಜ ಸ್ಥಿತಿಯಲ್ಲಿತ್ತು. ಹಾಗೆಯೇ ಹೋಟೆಲ್, ಬಾರ್- ರೆಸ್ಟೋರೆಂಟ್ ,ಮಾಲ್, ಚಿತ್ರಮಂದಿರಗಳು ಬಂದ್‌ಗೆ ಬೆಂಬಲ ನೀಡಿಲ್ಲ.

ಶಿವಮೊಗ್ಗ ಸಹಜಸ್ಥಿತಿ: ಕರ್ನಾಟಕ ಬಂದ್‌ಗೆ ಶಿವಮೊಗ್ಗ ಜಿಲ್ಲೆಯಲ್ಲಿ ನಿರೀಕ್ಷಿತ ಬೆಂಬಲ ಸಿಗಲಿಲ್ಲ. ಬೆಳಗ್ಗೆಯಿಂದಲೇ ಸರಕಾರಿ ಹಾಗೂ ಖಾಸಗಿ ಬಸ್‌ಗಳು ತಮ್ಮ ಸಂಚಾರ ಎಂದಿನಂತಿತ್ತು. ಪ್ರಾರಂಭಿಸಿವೆ. ಅಂಗಡಿ-ಮುಂಗಟ್ಟುಗಳ ವ್ಯಾಪಾರ ವಹಿವಾಟು ಸಾಮಾನ್ಯವಾಗಿತ್ತು. ಬಂದ್‌ಗೆ ಜಿಲ್ಲೆಯಲ್ಲಿ ಯಾವುದೇ ಕನ್ನಡಪರ ಹಾಗೂ ಇತರ ಸಂಘಟನೆಗಳು ಬೆಂಬಲ ನೀಡದ ಕಾರಣ ಬಂದ್‌ಗೆ ಸಾರ್ವಜನಿಕರು ಸ್ಪಂದಿಸಲಿಲ್ಲ.

ಮಹಾರಾಷ್ಟ್ರ ಚಾಲಕರಿಗೆ ಹೂ ನೀಡಿದ ಕರವೇ

ಕರ್ನಾಟಕ ಬಂದ್ ಹಿನ್ನೆಲೆ ಕರವೇ ಯುವಶಕ್ತಿ ಸಂಘಟನೆ ಕಾರ್ಯಕರ್ತರು ಅಧ್ಯಕ್ಷ ವಿಜಯ ಕುಮಾರ ನೇತೃತ್ವದಲ್ಲಿ ಕೊಪ್ಪಳ ತಾಲೂಕು ಹಿಟ್ನಾಳ ಟೋಲ್ ಬಳಿ ಪ್ರತಿಭಟನೆ ನಡೆಸಿದರು. ಮಹಾರಾಷ್ಟ್ರ ಮೂಲದ ಲಾರಿ ಮತ್ತು ವಾಹನ ತಡೆದು, ಎಂಇಎಸ್ ಹಾಗೂ ಶಿವಸೇನೆ ವಿರುದ್ಧ ಧಿಕ್ಕಾರ ಕೂಗಿ, ಕನ್ನಡ ಪರ ಘೋಷಣೆ ಹಾಕಿದರು. ಕನ್ನಡ ಪರ ಸಂಘಟನೆ ಕಾರ್ಯಕರ್ತರು ಕೆಲ ಹೊತ್ತು ಮಹಾರಾಷ್ಟ್ರದ ಲಾರಿ ಚಾಲಕರಿಗೆ ತರಾಟೆ ತಗೆದು ಕೊಂಡರು. ಅಷ್ಟೇ ಅಲ್ಲದೇ , ಚಾಲಕರಿಗೆ ಹೂ ಕೊಟ್ಟು ವಾರ್ನಿಂಗ್ ಕೂಡ ನೀಡಿದ್ದಾರೆ. ಕರ್ನಾಟಕದ ಜನ ಶಾಂತಿ ಪ್ರೀಯರು. ಹೀಗಾಗಿ ನಾವು ಗುಲಾಬಿ ಹೂ ನೀಡುತ್ತೇವೆ. ಮುಂದೆ ಮಹಾರಾಷ್ಟ್ರದ ಪುಂಡಾಟಿಕೆ ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಬಸ್ ಸಂಚಾರ ತಡೆಯಲು ಯತ್ನಿಸಿದ ಐವರ ಬಂಧನ

ದಾವಣಗೆಯಲ್ಲಿ ಕೆಎಸ್‌ಆರ್‌ಟಿಸಿ ನಿರ್ವಾಹಕರೊಬ್ಬರ ಮೇಲೆ ಮರಾಠಿಗರು ನಡೆಸಿದ ಹಲ್ಲೆಯನ್ನು ಖಂಡಿಸಿ ಕನ್ನಡಪರ ಸಂಘಟನೆಗಳು ಶನಿವಾರ ಕರೆ ನೀಡಿದ ಬಂದ್‌ಗೆ ಜಿಲ್ಲೆಯಲ್ಲಿ ಬೆಂಬಲ ವ್ಯಕ್ತವಾಗಿಲ್ಲ. ಬಸ್ ಸಂಚಾರ ತಡೆಯಲು ಯತ್ನಿಸಿದ ಐವರನ್ನು ಪೊಲೀಸರು ಬಂದಿಸಿದ್ದು, ಹೋರಾಟವು ಪ್ರತಿಭಟನೆಗೆ ಸೀಮಿತಗೊಂಡಿತು. ದಾವಣಗೆರೆ ನಗರವೂ ಸೇರಿದಂತೆ ಜಿಲ್ಲೆಯಲ್ಲಿ ಜನಜೀವನ ಸಹಜವಾಗಿತ್ತು. ಅಶೋಕ ರಸ್ತೆ ಹೊರತುಪಡಿಸಿ ಎಲ್ಲೆಡೆ ಅಂಗಡಿಗಳು ಬಾಗಿಲು ತೆರೆದಿತ್ತು, ಕೆಎಸ್‌ಆರ್‌ಟಿಸಿ ಮತ್ತು ಖಾಸಗಿ ಬಸ್ ಸಂಚಾರ ಇತ್ತು.

ಶಾಸಕರ ಅಮಾನತು, ಕ್ಷೇತ್ರದ ಜನತೆಗೆ ಮಾಡಿದ ಅಪಮಾನ

← ಮೊದಲಪುಟದಿಂದ

- **ನೀವು ಸಭಾಧ್ಯಕ್ಷರಾಗಿದ್ದಾಗ ಈ ರೀತಿ ಘಟನೆ ನಡೆದಿರಲಿಲ್ಲವೇ?**

ನಾನು ಸಭಾಧ್ಯಕ್ಷರಾಗಿದ್ದಾಗ ಎನ್ನುವುದಕ್ಕಿಂತ ಕರ್ನಾಟಕ ವಿಧಾನಮಂಡಲದಲ್ಲಿ, ದೇಶದ ವಿವಿಧ ರಾಜ್ಯಗಳ ಕಲಾಪದಲ್ಲಿ ಇದಕ್ಕಿಂತ ಹತ್ತಾರು ಕೆಟ್ಟ ರೀತಿಯ ಘಟನೆಗಳು ನಡೆದಿವೆ. ಆದರೆ ಯಾರೂ ಈ ರೀತಿಯ ನಿರ್ಣಯ ಕೈಗೊಂಡಿರಲಿಲ್ಲ. ಈ ಹಿಂದೆ ಸಿದ್ದರಾಮಯ್ಯ ಅವರೇ ಸದನದ ಬಾಗಿಲನ್ನು ಒದ್ದು ಒಳ ಪ್ರವೇಶ ಮಾಡಿರಲಿಲ್ಲವೇ? ವಿಧಾನ ಪರಿಷತ್‌ನಲ್ಲಿ ಸಭಾಪತಿಗಳು ಒಳಬಾರದಂತೆ ತಡೆದು, ಪೀಠದಲ್ಲಿದ್ದ ಉಪ ಸಭಾಪತಿಯನ್ನು ಎಳೆದಾಡಿ, ಇನ್ಯಾರೋ ಕೂತಿದ್ದ ಘಟನೆ ನಡೆದಿದೆ. ಇನ್ನು ಈ ಹಿಂದೆ ಕಾಂಗ್ರೆಸ್‌ನವರೇ, ಪೇಪರ್ ವೇಟ್ ಅನ್ನು ಸ್ಪೀಕರ್‌ಗೆ ಎಸೆದಿದ್ದ ಘಟನೆ ನಡೆದಿದೆ. ಅಂತಹ ಗಂಭೀರ ಘಟನೆಯ ವೇಳೆಯೂ, ಶಾಸಕರನ್ನು ಆರು ತಿಂಗಳ ಕಾಲ ಅಮಾನತು ಮಾಡಿದ ಉದಾಹರಣೆ ಇಲ್ಲ. ಅಂತಹ ಸಮಯದಲ್ಲಿ ಶುಕ್ರವಾರದ ಘಟನೆ ಸಾಮಾನ್ಯವಾಗಿ ನಡೆಯುವ ಪ್ರಕ್ರಿಯೆ.

- **ಸ್ಪೀಕರ್ ತೀರ್ಮಾನವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಬಹುದೇ?**

ಖಂಡಿತವಾಗಿಯೂ ಸ್ಪೀಕರ್ ನಡೆಯನ್ನು ನ್ಯಾಯಾಲಯಗಳಲ್ಲಿ ಪ್ರಶ್ನಿಸಬಹುದು. ಈ ಹಿಂದಿನ ಹಲವು ಘಟನೆಗಳು ವಿವಿಧ ರಾಜ್ಯಗಳಲ್ಲಿ ಸಭಾಧ್ಯಕ್ಷರು ಮಾಡಿರುವ ಅಮಾನತುಗಳನ್ನು ನ್ಯಾಯಾಲಯಗಳು ತಿರಸ್ಕರಿಸಿರುವ ಉದಾಹರಣೆ ಇವೆ. ಮುಂದಿನ ದಿನಗಳಲ್ಲಿ ಅಮಾನತಾಗಿರುವ ಶಾಸಕರು, ಪ್ರಕರಣವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಬಹುದು.

- **ಪೀಠದ ಘನತೆ ಉಳಿಸಲು ಅಮಾನತು ಎನ್ನುತ್ತಾರಲ್ಲ?**

ಈ ಪ್ರಕರಣವನ್ನು ನಾವು ಯಾವ ರೀತಿಯಲ್ಲಾದರೂ ನೋಡಬಹುದು. ಆದರೆ ಸ್ಥಾನದ ಗೌರವವನ್ನು ಉಳಿಸುವ ನಿಟ್ಟಿನಲ್ಲಿ ಶುಕ್ರವಾರದ ತೀರ್ಮಾನ ಸರಿಯಲ್ಲ. ಕೂಡಲೇ ಈ ತೀರ್ಮಾನವನ್ನು ತಿದ್ದುಪಡಿ ಮಾಡಬೇಕು. ಇನ್ನು ಈ ಪ್ರಕರಣದಲ್ಲಿ ರಾಜಕಾರಣಿಗಳು ಯಾವುದೇ ತೀರ್ಮಾನ ಕೈಗೊಳ್ಳಬಹುದು. ಆದರೆ ಅಧಿಕಾರಿಗಳು ರಾಜಕಾರಣಿಗಳನ್ನು ಗೈಡ್ ಮಾಡಬೇಕಿತ್ತು. ರಾಜಕಾರಣಿಗಳು ಹೇಳುವುದಕ್ಕೆಲ್ಲ 'ಯೆಸ್..ಯೆಸ್' ಅಂದರೆ ಈ ರೀತಿಯಾಗುತ್ತದೆ. ಈ ರೀತಿಯ ಷರತ್ತು ವಿಧಿಸಿದರೆ ನ್ಯಾಯಾಲಯದಲ್ಲಿ ಪ್ರಕರಣ ನಿಲ್ಲುವುದಿಲ್ಲ. ಆದ್ದರಿಂದ ಯಾವುದೇ ಒತ್ತಡಕ್ಕೆ ಮಣಿಯಬೇಡಿ ಎಂದು ಸಲಹೆ ನೀಡಬೇಕಿತ್ತು. ಆದರೆ ಅದನ್ನು ಮಾಡಿಲ್ಲ ಎನಿಸುತ್ತದೆ.

ಜಾತಿನಿಂದನೆ ಕೇಸ್ ವಾಪಸ್ ಪಡೆಯಿರಿ

ಉಡುಪಿ: ಮಲ್ಪೆಯಲ್ಲಿ ಕೆಲ ದಿನಗಳ ಹಿಂದೆ ನಡೆದ ಘಟನೆ ಸಂಬಂಧ ಮಹಿಳಾ ಮೀನುಗಾರರ ಮೇಲೆ ಹಾಕಿರುವ ಜಾತಿನಿಂದನೆ ಪ್ರಕರಣವನ್ನು ತಕ್ಷಣವೇ ವಾಪಸ್ ಪಡೆದು ಎರಡು ದಿನದಲ್ಲಿ ಅವರಿಗೆ ಜಾಮೀನು ಸಿಗುವಂತೆ ಆಗಬೇಕು. ಇಲ್ಲದಿದ್ದರೆ ದ.ಕ.ಜಿಲ್ಲಾಧಿಕಾರಿ ಕಚೇರಿ ಅಥವಾ ಎಸ್ಪಿ ಕಚೇರಿ ಎದುರು ಬೃಹತ್ ಪ್ರತಿಭಟನೆ ನಡೆಸಲಿದ್ದೇವೆ ಎಂದು ಮೀನುಗಾರರ ಸಂಘಟನೆಗಳು ಎಚ್ಚರಿಕೆ ನೀಡಿವೆ.

ಮಲ್ಪೆ ಮೀನುಗಾರರ ಸಂಘದ ವತಿಯಿಂದ ಮಲ್ಪೆ ಬಂದರಿನಲ್ಲಿ ಶನಿವಾರ ಬೃಹತ್ ಪ್ರತಿಭಟನೆ ನಡೆಯಿತು. ಸಂಘದ ಅಧ್ಯಕ್ಷ ದಯಾನಂದ ಸುವರ್ಣ, ಶಾಸಕ ಯಶಪಾಲ್ ಸುವರ್ಣ, ಮಾಜಿ ಸಚಿವ ಪ್ರಮೋದ್ ಮಧ್ವರಾಜ್, ಮಾಜಿ ಶಾಸಕ ಕೆ. ರಘುಪತಿ ಭಟ್, ಮೊಗವೀರ ಮಹಾಜನ ಸಂಘದ ಅಧ್ಯಕ್ಷ ಜಯ ಸಿ.ಕೋಟ್ಯಾನ್, ಕಾಂಗ್ರೆಸ್ ಮುಖಂಡರಾದ ಪ್ರಸಾದ್ ರಾಜ್ ಕಾಂಚನ್, ರಮೇಶ್ ಕಾಂಚನ್ ಮೊದಲಾದವರು ಭಾಗವಹಿಸಿ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾತಿ ನಿಂದನೆಯಡಿ ಕೇಸ್ ದಾಖಲಿಸುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದರು.

ಜಾತಿನಿಂದನೆ ಆಗಿಲ್ಲ: ಈ ಕೂಡಲೇ ಅದನ್ನು ತಿದ್ದುಪಡಿ ಮಾಡಬೇಕು. ಈ ಪ್ರಕರಣದಲ್ಲಿ ಎಲ್ಲಿಯೂ ಜಾತಿನಿಂದನೆಯಾಗಿಲ್ಲ. ಯಾರಿಗೂ ಯಾರ ಜಾತಿಯೂ ತಿಳಿದಿಲ್ಲ. ಮಲ್ಪೆ ಬಂದರಿನಲ್ಲಿ ಜಾತಿ, ಮತ, ಧರ್ಮ ಬೇಧವಿಲ್ಲದೇ ಎಲ್ಲರೂ ಒಂದಾಗಿ ಕಾರ್ಯನಿರ್ವಹಿಸುತ್ತಿದ್ದು, ಕೂಡಲೇ ಜಾತಿ ನಿಂದನೆ ಪ್ರಕರಣ ವಾಪಸ್ ಪಡೆಯಬೇಕು ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಎಡಿಸಿ ಅಬೀದ್ ಗದ್ಯಾಳ್, ಅಡಿಷನಲ್ ಎಸ್‌ಪಿ ಸಿದ್ದಲಿಂಗಪ್ಪ ಆಗಮಿಸಿ ಮೀನುಗಾರರಿಂದ ಮನವಿ ಸ್ವೀಕರಿಸಿದರು. ಪ್ರತಿಭಟನೆ ಹಿನ್ನೆಲೆಯಲ್ಲಿ ಮಲ್ಪೆ ಪೇಟೆ ಸ್ವಯಂಪ್ರೇರಿತವಾಗಿ ಬಂದ್ ಆಗಿತ್ತು. ಅಂಗಡಿ-ಮುಂಗಟ್ಟು ಮಾಲೀಕರು ಪ್ರತಿಭಟನೆಗೆ ಬೆಂಬಲ ಸೂಚಿಸಿ ಬಂದ್ ಮಾಡಿದ್ದರು.

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.
ಪ್ರಕಟಣೆ ಸಂ: ಐಎಫ್‌ಟಿ-34/ಎಇ-1/2024-25 ದಿನಾಂಕ:- 21.03.2025
ಕೆಪಿಪಿಪಿ ಟೆಂಡರ್ ಪ್ರಕಟಣೆ
ಉಲ್ಲೇಖ : ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ-34/ಎಇ-1/2024-25 ದಿನಾಂಕ: 21.03.2025.
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ಜಗಳೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ-2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ **ಲೆಕ್ಕಶೀರ್ಷಿಕೆ : 3054-04-105-0-01-200 ಜಿಲ್ಲಾ ರಸ್ತೆಗಳು ಸೇತುವೆಗಳು-ನಿರ್ವಹಣಾ ವೆಚ್ಚದಡಿ ಜಗಳೂರು ತಾಲ್ಲೂಕು ಅಣಜಿ-ಸೊಕ್ಕೆ ರಸ್ತೆಯ ಕಿ.ಮೀ. 7.50 ಎಲ್.ಎಲ್.ಸಿ ದುರಸ್ತಿ ಕಾಮಗಾರಿ. ರೂ. 35.00 ಲಕ್ಷ ಮತ್ತು ಜಗಳೂರು ತಾಲ್ಲೂಕು ಜಗಳೂರು ತಾಲ್ಲೂಕು ಜಗಳೂರು-ಕಡಬಕಟ್ಟೆ ರಸ್ತೆ ಕಿ.ಮೀ. 5.90 ಮತ್ತು 6.30ರಲ್ಲಿನ ಅಡ್ಡ ಮೋರಿಗಳ ಮರು ನಿರ್ಮಾಣ ಹಾಗೂ ಕಿ.ಮೀ. 14.50 ರಿಂದ 17.40ರವರೆಗೆ ಅಡ್ಡ ಮೋರಿಗಳ ದುರಸ್ತಿ ಕಾಮಗಾರಿ (ಅರಿಶಿನಗುಂಡಿ ಗ್ರಾಮದ ಹತ್ತಿರ) ರೂ. 25.00 ಲಕ್ಷ.** ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಏಕ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.
ಕಾಮಗಾರಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 07.04.2025 ಸಂಜೆ 4.00 ಗಂಟೆಯವರೆಗೆ, ಬಿಡ್‌ಗಳನ್ನು ತೆರೆಯುವ ದಿನಾಂಕ 08.04.2025 ಸಂಜೆ 4.30 ಗಂಟೆಯವರೆಗೆ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.
ವಾಸಾಇ/ಡಿವಿಜಿ/873/ ಕೆಎಸ್‌ಎಂಸಿಎ/2024-25
ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಮೈಸೂರು-570 022.
ಸಂ.ಕಾಅ/ಗ್ರಾಕುನೀ&ನೈವಿ/ಮೈ/ಇ-ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ-ಟೆಂಡರ್ ಪ್ರಕಟಣೆ ಸಂಖ್ಯೆ. 23/2024-25 ದಿನಾಂಕ:20.03.2025
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿದ 3ನೇ ದರ್ಜೆ ಗುತ್ತಿಗೆದಾರರು ಮತ್ತು ಮೇಲ್ಪಟ್ಟು ಟೆಂಡರ್ ನಮೂನೆ ರೀತ್ಯಾ (ದ್ವಿ ಲಕೋಟೆ ಪದ್ಧತಿಯಂತೆ),
1.Providing services of Manpower on outsource basis for Rural Drinking Water and Sanitation Division, Mysore ಕಾಮಗಾರಿಯ ಅಂದಾಜು ಮೊತ್ತ ರೂ. (83.00 ಲಕ್ಷ)
2.Providing services of Manpower on outsource basis for Laboratory Employees of Mysuru District Lab K.R Nagara and H.D Kote Taluk Lab on outsource basis for Rural Drinking Water and Sanitation Division, Mysore ಕಾಮಗಾರಿಯ ಅಂದಾಜು ಮೊತ್ತ ರೂ. (41.82 ಲಕ್ಷ) ಇ-ಪ್ರಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ನಿಗಧಿತ ಅವಧಿ **ದಿನಾಂಕ: 20.03.2025 ರಿಂದ 27.03.2025 ರವರೆಗೆ, ಟೆಂಡರ್ ತೆರೆಯುವ ದಿನಾಂಕ: 28.03.2025 ರ ಸಂಜೆ 5.30 ಘಂಟೆಯ ನಂತರ.** ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ **(e-procurement portal)** ವೆಬ್ ಸೈಟ್‌ನಲ್ಲಿ ಪಡೆಯಬಹುದು. **https://eprockarnataka.gov.in** ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (**ಫೋನ್ ನಂ.0821-2460495**) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ, ಮೈಸೂರು.
DIPR-DD-MYS/1481/KSMCA-1108 /2024-25

ಹಾಸನ: ಪ್ರತ್ಯೇಕ ದುರಂತ ನಾಲ್ವರು ಜಲಸಮಾಧಿ

ಹಾಸನ: ಜಿಲ್ಲೆಯಲ್ಲಿ ಸಂಭವಿಸಿರುವ ಎರಡು ಪ್ರತ್ಯೇಕ ಜಲ ದುರಂತದಲ್ಲಿ ಇಬ್ಬರು ಯುವಕರು ಸೇರಿ ನಾಲ್ವರು ಜಲ ಸಮಾಧಿಯಾಗಿದ್ದಾರೆ. ಸಕಲೇಶಪುರ ತಾಲೂಕಿನ ಹೆನ್ನಲಿ ಗ್ರಾಮದ ಹೇಮಾವತಿ ನದಿಯಲ್ಲಿ ಈಜಲು ತೆರಳಿದ್ದ ಇಬ್ಬರು ಯುವಕರು ನೀರು ಪಾಲಾಗಿದ್ದಾರೆ. ಮೃತರನ್ನು ಭರತ್ (27) ಮತ್ತು ಪ್ರಕಾಶ್ (29) ಎಂದು ಗುರುತಿಸಲಾಗಿದೆ. ಪ್ರಕಾಶ್ ಸಕಲೇಶಪುರದ ಕಾಟಳ್ಳಿ ಮೂಲದವನಾಗಿದ್ದಾನೆ. ಭರತ್ ಚಿಕ್ಕಮಗಳೂರು ಜಿಲ್ಲೆಯ ಹಾಂದಿ ಗ್ರಾಮದ ನಿವಾಸಿಯಾಗಿದ್ದಾನೆ.

ಬಿಸಿಲು ಹೆಚ್ಚಾಗಿದ್ದ ಹಿನ್ನೆಲೆಯಲ್ಲಿ ಈ ಇಬ್ಬರೂ ಸ್ನೇಹಿತರು ಹೇಮಾವತಿ ನದಿಯಲ್ಲಿ ಈಜಲು ತೆರಳಿದ್ದರು. ಈ ವೇಳೆ ಸರಿಯಾಗಿ ಈಜು ಬಾರದ ಕಾರಣ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಸುದ್ದಿ ತಿಳಿದು ಸ್ಥಳಕ್ಕೆ ದೌಡಾಯಿಸಿದ ಅಗ್ನಿ ಶಾಮಕದಳ ಸಿಬ್ಬಂದಿ, ಸ್ಥಳೀಯರ ನೆರವಿನಿಂದ ಮೃತದೇಹಗಳನ್ನು ಹೊರ ತೆಗೆದಿದ್ದಾರೆ. ಸಕಲೇಶಪುರ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ. ಮತ್ತೊಂದೆಡೆ ಆಕಸ್ಮಿಕವಾಗಿ ಕೆರೆಗೆ ಬಿದ್ದು ಇಬ್ಬರು ಸಾವನ್ನಪ್ಪಿರುವ ಘಟನೆ ಅರಕಲಗೂಡು ತಾಲೂಕಿನ ಮಣಜೂರು ಗ್ರಾಮದಲ್ಲಿ ನಡೆದಿದೆ. ಲಕ್ಷ್ಮಣ (46), ರವಿ (40) ಮೃತ ದುರ್ದೈವಿಗಳು. ಮಣಜೂರು ಕೆರೆಯ ಬಳಿ ತೆರಳಿದ್ದ ಲಕ್ಷ್ಮಣ ಹಾಗೂ ರವಿ ಇಬ್ಬರಲ್ಲಿ ಒಬ್ಬರು ಕಾಲು ಜಾರಿ ಕೆರೆಗೆ ಬಿದ್ದಿದ್ದಾರೆ. ಒಬ್ಬನನ್ನು ರಕ್ಷಿಸಲು ಹೋದ ಮತ್ತೊಬ್ಬ ಸಹ ನೀರಿನಲ್ಲಿ ಮುಳುಗಿದ್ದಾನೆ ಎನ್ನಲಾಗಿದೆ.

ಆರೋಪಿ ಕಾಲಿಗೆ ಗುಂಡೇಟು

ಮೈಸೂರು: ಸ್ಥಳ ಮಹಜರು ವೇಳೆ ಪೊಲೀಸರ ಮೇಲೆ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದ ಆರೋಪಿ ಮೇಲೆ ಪೊಲೀಸರು ಗುಂಡು ಹಾರಿಸಿದ್ದಾರೆ. ಜಯಪುರ ಪೊಲೀಸ್ ಠಾಣಾ ವ್ಯಾಪ್ತಿಯ ಗುಜ್ಜೇಗೌಡನಪುರ ಗ್ರಾಮದ ಬಳಿ ಘಟನೆ ನಡೆದಿದ್ದು, ಕೇರಳ ಮೂಲದ ಆರೋಪಿ ಆದರ್ಶ್ ಎಂಬಾತನೇ ಗುಂಡೇಟು ತಿಂದು ಆಸ್ಪತ್ರೆಗೆ ದಾಖಲಾಗಿದ್ದಾನೆ. ದರೋಡೆ ಪ್ರಕರಣವೊಂದರಲ್ಲಿ ಭಾಗಿಯಾಗಿದ್ದ ಆರೋಪಿ ಕಾಲಿಗೆ ಪೊಲೀಸರು ಗುಂಡು ಹಾರಿಸಿದ್ದಾರೆ. ಮಹಜರು ನಡೆಸುವ ವೇಳೆ ಪೊಲೀಸರ ಮೇಲೆ ಹಲ್ಲೆ ನಡೆಸಿ ಪರಾರಿ ಆಗಲು ಯತ್ನಿಸಿದ ಹಿನ್ನಲೆ ಆತ್ಮರಕ್ಷಣೆಗಾಗಿ ಪೊಲೀಸರು ಆರೋಪಿ ಕಾಲಿಗೆ ಗುಂಡು ಹಾರಿಸಿ ಹಿಡಿದಿದ್ದಾರೆ.

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ,
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ವಿಭಾಗೀಯ ವ್ಯವಸ್ಥಾಪಕರ ಕಛೇರಿ ಜಿಂಕೆವನ, ಕೆ.ಎಂ.ರಸ್ತೆ,
ಚಿಕ್ಕಮಗಳೂರು-577102.
Ph.No.:08262-295901 ಇ-ಮೇಲ್: dmkfdcckm901@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ
1)KFDC/DM/CKM/E&T/TUNo-26/2024-25/596 Date:18.03.2025 ರಲ್ಲಿ ಈ ವಿಭಾಗದ ಸಖರಾಯಪಟ್ಟಣ-1985 ನೇ ಸಾಲಿನ ನೆಡುತೋಪಿನಲ್ಲಿ ಮೆದುಮರಗಳನ್ನು ಕತ್ತಾವಣೆ ಮಾಡಿ ಸಿಪ್ಪೆ ಸಹಿತ ಲಾರಿಗಳಿಗೆ ಲೋಡ್ ಮಾಡುವ ಕಾಮಗಾರಿ ನಿರ್ವಹಿಸಲು ನೋಂದಾಯಿತ ಅರಣ್ಯ ಗುತ್ತಿಗೆದಾರರಿಗೆ ದರಗಳನ್ನು ಸೂಚಿಸಲು ದಿನಾಂಕ: 27.03.2025 ರ 7:30 ಗಂಟೆ ರವರೆಗೆ ಅಲ್ಪಾವಧಿ ಟೆಂಡರ್ ಸಲ್ಲಿಸಲು ಇ-ಟೆಂಡರ್‌ನ್ನು ಅಹ್ವಾನಿಸಲಾಗಿದೆ. 2) 2025 ನೇ ಸಾಲಿನ ಮಳೆಗಾಲದಲ್ಲಿ ಹೊಸದಾಗಿ ನೆಡುತೋಪು ಬೆಳೆಸಲು ಆಯ್ಕೆ ಮಾಡಿರುವ ಸಖರಾಯಪಟ್ಟಣ-1985 ನೇ ಸಾಲಿನ ನೆಡುತೋಪು ಪ್ರದೇಶದಲ್ಲಿ ಸ್ವಂತ ಖರ್ಚಿನಲ್ಲಿ ಅಂದಾಜು ಒಟ್ಟು 85 ಎಂ.ಟಿ. ನೀಲಗಿರಿ ಕೂಳೆ / ಬುಡಗಳನ್ನು ಕಿತ್ತು ಸಂಗ್ರಹಿಸಿಕೊಂಡು ಸ್ವಂತ ಖರ್ಚಿನಲ್ಲಿ ವಿಲೇವಾರಿ ಮಾಡಿಕೊಳ್ಳಲು ನೋಂದಾಯಿತ ಆರಣ್ಯ ಗುತ್ತಿಗೆದಾರರಿಂದ ನಿರ್ವಹಿಸಲು ದಿನಾಂಕ: 27.03.2025 ರ 17:30 ಗಂಟೆವರೆಗೆ ಟೆಂಡರ್ ಸಲ್ಲಿಸಲು ಇ-ಟೆಂಡನ್ನು ಅಹ್ವಾನಿಸಲಾಗಿದೆ. ಆಸಕ್ತ ಗುತ್ತಿಗೆದಾರರು ಟೆಂಡರ್‌ನ ವಿವರಗಳಿಗೆ www.kppp.karnataka.gov.in ನಲ್ಲಿ ಮಾಹಿತಿ ಪಡೆದು ಟೆಂಡರ್, ಸಲ್ಲಿಸಬಹುದಾಗಿದೆ. ಟೆಂಡರ್/ಬಹಿರಂಗ ಹರಾಜಿನ ವಿವರಗಳಿಗಾಗಿ ಕೆಲಸದ ವೇಳೆಯಲ್ಲಿ ಮೇಲಿನ ವಿಳಾಸವನ್ನು ಸಂಪರ್ಕಿಸಬಹುದಾಗಿರುತ್ತದೆ.
ಸಹಿ/- ವಿಭಾಗೀಯ ವ್ಯವಸ್ಥಾಪಕರು ಕ.ಅ.ಅ.ನಿ.ನಿ., ಚಿಕ್ಕಮಗಳೂರು.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/24-25/191/1935

ದೆಹಲಿ ತಲುಪಲಿದೆ ಹನಿಟ್ರ್ಯಾಪ್ ಗಲಾಟೆ

← ಮೊದಲಪುಟದಿಂದ

ಆದ್ದರಿಂದ ಈ ದೂರು ದಾಖಲಾಗುವ ತನಕ ತನಿಖೆಯಲ್ಲಿ ಪ್ರಗತಿ ಕಾಣಿಸುವುದಿಲ್ಲ. ಒಂದು ವೇಳೆ ರಾಜಣ್ಣ ಅವರು ಹೇಳಿ ದಂತೆ ಮೂರು ದಿನಗಳ ಬಳಿಕ ದೂರು ನೀಡಿ, ಉನ್ನತಮಟ್ಟದ ತನಿಖೆಗೆ ಆದೇಶಿಸಿದರೂ ಸಂತ್ರಸ್ತರು ಬಂದು ಹೇಳಿಕೆ ನೀಡಬೇಕು. ಇನ್ನು ರಾಜಣ್ಣ ಅವರು ದೂರು ನೀಡಿದರೂ, ಹನಿಟ್ರಾಪ್‌ಗೆ ಪ್ರಯತ್ನಿಸಲಾಗಿದೆ ಎಂದು ಹೇಳಬಹುದು. ಆದರೆ ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿರುವ ನಾಯಕರು ಮುಂದೆ ಬಂದು ಅಧಿಕೃತವಾಗಿ ದೂರು ನೀಡಲು ಸಾಧ್ಯವೇ? ಎನ್ನುವ ಪ್ರಶ್ನೆಗಳಿವೆ. 'ಮರ್ಯಾದೆ'ಗೆ ಅಂಜಿ ಎಷ್ಟು ಮಂದಿ ಮುಂದೆ ಬರಲಿದ್ದಾರೆ ಎನ್ನುವುದು ಈಗಿರುವ ಪ್ರಶ್ನೆಯಾಗಿದೆ. ಅಧಿಕೃತ ವಾಗಿ ಹನಿಬಲೆಗೆ ಬಿದ್ದಿರುವವರು ದೂರು ನೀಡದೇ, ಹೇಳಿಕೆ ನೀಡದಿದ್ದರೆ ದೂರು ದಾಖಲಾಗುವುದು ಕಷ್ಟ ಎನ್ನಲಾಗಿದೆ.

ಬಡ್ಡಿ ವ್ಯವಹಾರ: ದಂಪತಿ ಬಂಧನ

ಹಾವೇರಿ: ಅಕ್ರಮ ಬಡ್ಡಿ ವ್ಯವಹಾರ ನಡೆಸುತ್ತಿದ್ದ ಆರೋಪದಡಿ ದಂಪತಿಯನ್ನು ಹಾನಗಲ್ ಠಾಣೆ ಪೊಲೀಸರು ಬಂಧಿಸಿದ್ದು, ಅವರಿಂದ 7 ಖಾಲಿ ಚೆಕ್ ಜಪ್ತಿ ಮಾಡಿದ್ದಾರೆ. ಹಾನಗಲ್ ತಾಲೂಕಿನ ಬೊಮ್ಮನಹಳ್ಳಿ ಗ್ರಾಮದ ಭಾಗ್ಯ ಗುಡಿಗಾರ ಹಾಗೂ ಅವರ ಪತಿ ರಮೇಶನನ್ನು ಬಂಧಿಸಲಾಗಿದೆ. ಇಬ್ಬರೂ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಹಾನಗಲ್ ಠಾಣೆ ಪೊಲೀಸರು ಹೇಳಿದರು. ಆರೋಪಿಗಳು ಹಲವು ದಿನಗಳಿಂದ ಅಕ್ರಮ ಬಡ್ಡಿ ವ್ಯವಹಾರ ಮಾಡುತ್ತಿದ್ದರೆಂಬ ಆರೋಪವಿದೆ. ಬೊಮ್ಮನಹಳ್ಳಿಯ ಖ್ವಾಜಾಮುದ್ದೀನ್ ಬಾಷಾಸಾಬ್ ಶಿಗ್ಗಾಂವ (31) ಅವರು ಆರೋಪಿಗಳ ವಿರುದ್ಧ ದೂರು ನೀಡಿದ್ದರು.

ಮಹಿಳೆಯರ ಮುಖಕ್ಕೆ ಸಿಗರೇಟ್ ಹೊಗೆ

ಗಂಗಾವತಿ: ವಾಯುವಿಹಾರಕ್ಕಾಗಿ ಬಂದಿದ್ದ ಯುವತಿಯರು, ಮಹಿಳೆಯರ ಮುಖಕ್ಕೆ ಕೆಲ ಕಿಡಿಗೇಡಿಗಳು ಸಿಗರೇಟು ಸೇದಿದ ಬಳಿಕ ಹೊಗೆ ಬಿಟ್ಟು ಅಸಭ್ಯ ವರ್ತನೆ ತೋರಿದ ಘಟನೆ ಗಂಗಾವತಿಯ ಎಂಎನ್‌ಎಂ ಶಾಲೆಯ ಬಳಿ ಶುಕ್ರವಾರ ರಾತ್ರಿ ನಡೆದಿದೆ.

ಘಟನೆ ಬೆಳಕಿಗೆ ಬರುತ್ತಿದ್ದಂತೆಯೇ ವಾಯುವಿಹಾರದಲ್ಲಿ ತೊಡಗಿದ್ದ ಸಾರ್ವಜನಿಕರು ಗುಂಪಾಗಿ ಕಿಡಿಗೇಡಿ ಯುವಕರನ್ನು ಹಿಡಿದು ತರಾಟೆಗೆ ತೆಗೆದುಕೊಂಡಿದ್ದಾರೆ. ಬಳಿಕ ಕೂಡಿ ಹಾಕಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಈ ವೇಳೆ, ಇಬ್ಬರು ಯುವಕರು ತಪ್ಪಿಸಿಕೊಂಡು ಓಡಿಹೋಗಿದ್ದಾರೆ. ಘಟನೆಯಿಂದಾಗಿ ಸ್ಥಳದಲ್ಲಿ ಕೆಲಕಾಲ ಆತಂಕಕಾರಿ ವಾತಾವರಣ ನಿರ್ಮಾಣವಾಗಿತ್ತು. ಕುವೆಂಪು ಬಡಾವಣೆ ಮತ್ತು ಜಯನಗರದ ಮಧ್ಯೆ ಇರುವ ನೂತನ ವಸತಿ ಲೇಔಟ್‌ನಲ್ಲಿ ಶುಕ್ರವಾರ ರಾತ್ರಿ 9 ಗಂಟೆಯ ನಂತರ ಮಹಿಳೆಯರು ವಾಯುವಿಹಾರದಲ್ಲಿ ತೊಡಗಿದ್ದಾಗ ಈ ಘಟನೆ ನಡೆದಿದೆ. ರಸ್ತೆಬದಿಯಲ್ಲಿ ಕುಳಿತಿದ್ದ ಯುವಕರು ಸಿಗರೇಟು ಸೇದಿ, ಅದೇ ಮಾರ್ಗದಲ್ಲಿ ಹೋಗುತ್ತಿದ್ದ ಮಹಿಳೆಯರ ಮುಖಕ್ಕೆ ಸಿಗರೇಟಿನ ಹೊಗೆ ಬಿಟ್ಟಿದ್ದಾರೆ.

ಕೇಳಲು ನೀವ್ಯಾರು..?: ಈ ಬಗ್ಗೆ ಮಹಿಳೆಯರು ಪ್ರಶ್ನಿಸಿದ್ದಕ್ಕೆ 'ನಮ್ಮ ಹಣದಲ್ಲಿ ನಾವು ಸೇದುತ್ತೇವೆ. ಕೇಳಲು ನೀವ್ಯಾರು . ಮುಖಕ್ಕೆ ಹೊಗೆ ಬರಬಾರದು ಎಂದರೆ ಈ ರಸ್ತೆಯಲ್ಲಿ ಓಡಾಡಬಾರದು' ಎಂದು ಉದ್ಧಟತನದಿಂದ ವರ್ತಿಸಿದ ಯುವಕರು, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ.

ಇದರಿಂದ ಕೋಪಗೊಂಡ ಮಹಿಳೆಯರು, ಯುವಕರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಂತೆಯೇ ಜನರು ಜಮಾಯಿಸಿ ಯುವಕರನ್ನು ಹಿಡಿಯಲು ಯತ್ನಿಸಿದ್ದಾರೆ. ಈ ಪೈಕಿ ಇಬ್ಬರು ತಪ್ಪಿಸಿಕೊಂಡು ಓಡಿಹೋಗಿದ್ದಾರೆ.

ವಾಯುವಿಹಾರಿಗಳೊಂದಿಗೆ ಅಸಭ್ಯವಾಗಿ ವರ್ತಿಸಿದ ಯುವಕರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಗಂಗಾವತಿಯ ನೂರಾರು ಜನರು ಪೊಲೀಸರಿಗೆ ದೂರು ಸಲ್ಲಿಸಿದರು.

> **ಖಾಸಗಿ ಲೇಔಟ್‌ಗಳಲ್ಲಿ ಸಿಸಿ ಕ್ಯಾಮೆರಾ ಹಾಕಿಸುವಂತೆ ನಗರಸಭೆಗೆ ಸೂಚನೆ ನೀಡಲಾಗುವುದು. ಹೆಚ್ಚಿನ ಭದ್ರತೆ ನೀಡಲು ಪೊಲೀಸ್ ಗಸ್ತು ನಿಯೋಜಿಸಲಾಗುವುದು. ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆ.**
> -**ಸಿದ್ದಲಿಂಗಪ್ಪಗೌಡ ಪಾಟೀಲ್**, ಡಿವೈಎಸ್ಪಿ

ಪುಂಡಾಟ ಮೆರೆದಿದ್ದ ಅಧಿಕಾರಿಗೆ ಸನ್ಮಾನ

ಬೆಳಗಾವಿ: ಮರಾಠಿ ಭಾಷೆಯಲ್ಲಿ ಮಾತನಾಡುವಂತೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಅವಾಚ್ಯ ಪದಗಳಿಂದ ನಿಂದಿಸಿದ್ದ ಆರೋಪಿಗೆ ಎಂಇಎಸ್ ಮುಖಂಡರು ಸನ್ಮಾನಿಸಿ ಪುಂಡಾಟ ಮೆರೆದ ಘಟನೆ ನಡೆದಿದೆ. ಬೆಳಗಾವಿ ತಾಲೂಕಿನ ಕಿಣಯೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನಾಗೇಂದ್ರ ಪತ್ತಾರ ಅವರಿಗೆ ಇದೇ ಗ್ರಾಮದ ಯುವಕ ತಿಪ್ಪಣ್ಣ ಸುಭಾಷ ಡೊಕ್ರೆ ಎಂಬಾತ ಮರಾಠಿ ಭಾಷೆಯಲ್ಲಿ ಮಾತನಾಡುವಂತೆ ಅವಾಚ್ಯ ಪದಗಳಿಂದ ನಿಂದಿಸಿ ಅವಹೇಳನ ಮಾಡಿದ್ದ ಆರೋಪಿ ವಿರುದ್ಧ ಪ್ರಕರಣ ದಾಖಲಾಗಿತ್ತು. ಅವಹೇಳನಕಾರಿ ಪದಬಳಿಸಿ ಪುಂಡಾಟ ಮೆರೆದಿದ್ದ ಆರೋಪಿಯನ್ನು ಶುಕ್ರವಾರ ಮಹಾರಾಷ್ಟ್ರ ಏಕೀಕರಣದ ಸಮಿತಿ ಯುವ ಮುಖಂಡ ಶುಭಂ ಶೆಳಕೆ ಸೇರಿದಂತೆ ಅನೇಕರು ಸನ್ಮಾನಿಸಿದ್ದಾರೆ. ಈ ಸಂದರ್ಭದಲ್ಲಿ ಶುಭಂ ಶೆಳಕೆ ನಾಡ ವಿರೋಧಿ ಮಾತನಾಡಿದ್ದು, ಕನ್ನಡಿಗರ ಆಕ್ರೋಶಕ್ಕೆ ಕಾರಣವಾಗಿದೆ.

ಮರಾಠಿ ಭಾಷೆಯಲ್ಲಿ ಮಾತನಾಡುವಂತೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಅವಾಚ್ಯ ಪದಗಳಿಂದ ನಿಂದಿಸಿದ್ದ ಆರೋಪಿಗೆ ಎಂಇಎಸ್ ಮುಖಂಡರು ಸನ್ಮಾನಿಸಿರುವುದು.

ಟ್ವೀಟೂ-ಖಾರಾ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಶಕ್ತಿ ಯೋಜನೆಯಿಂದ ರಸ್ತೆ ಸಾರಿಗೆ ನಿಗಮದ ಬಸ್‌ಗಳಲ್ಲಿ ಪ್ರಯಾಣಿಸುವವರ ಸಂಖ್ಯೆ ಹೆಚ್ಚಾಗಿದೆ. ಹೀಗಾಗಿ ಪ್ರಯಾಣಿಕರಿಗೆ ಉತ್ತಮ ಸೇವೆ ಒದಗಿಸಲು ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ಕೈಗೊಂಡಿದ್ದೇವೆ. ಬಜೆಟ್‌ನಲ್ಲಿ ಸಾರಿಗೆ ನಿಗಮಗಳಿಗೆ 1,000 ಬಸ್‌ಗಳನ್ನು ಜೆಸಿಸಿ ಮೂಲಕ ಒದಗಿಸುವ ಬಗ್ಗೆ ಘೋಷಿಸಲಾಗಿತ್ತು. ಇದನ್ನು ಪರಿಷ್ಕರಿಸಿ 2,000 ಹೊಸ ಬಸ್‌ಗಳನ್ನು ಖರೀದಿಸಲು ನಿರ್ಧರಿಸಲಾಗಿದೆ.

ಯತಿಗೌಡ ಎಚ್.ಆರ್., ಬೆಂಗಳೂರು

ಕೆಎಸ್‌ಆರ್‌ಟಿಸಿ, ಬಿಎಂಟಿಸಿಗೆ ಮೊದಲು ಬಾಕಿ ಇರೋ ಶಕ್ತಿ ಹಣ ಕೊಡಿ. 'ರೋಡ್', ಮೋರಿ, ಸರಕಾರಿ ಶಾಲೆ, ಬಾಕಿ ಇರುವ ಕಾಮಗಾರಿ, ಸರಕಾರಿ ನೌಕರರಿಗೆ ಸಂಬಳ, ರಾಜ್ಯದ ಸಾಲ ತೀರಿಸುವ ' ಈ ಕೆಲಸಗಳಿಗೆ ಉಪಯೋಗಿಸಿ

5 ಕೋಟಿ ರು. ಕಾಮಗಾರಿ ಪೂರ್ಣ: ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ | ಪ್ರತಿ ಶನಿವಾರ, ಭಾನುವಾರ ಸಂಜೆ 6.30ಕ್ಕೆ ಆಡಳಿತ ಕೇಂದ್ರಕ್ಕೆ ದೀಪಗಳ ಅಲಂಕಾರ

ವಿಧಾನಸೌಧಕ್ಕೆ ಶಾಶ್ವತ ವಿದ್ಯುತ್ ದೀಪಾಲಂಕಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಧಾನಸೌಧಕ್ಕೆ ಶಾಶ್ವತ ವಿದ್ಯುತ್ ದೀಪಾಲಂಕಾರ ಮಾಡಲಾಗುವುದು ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಸೌಧದ ಆವರಣದಲ್ಲಿ ಪುಸ್ತಕ ಮೇಳ ಆಯೋಜಿಸಿದ್ದ ಸಂದರ್ಭದಲ್ಲಿಯೇ ವಿಧಾನಸೌಧಕ್ಕೆ ಶಾಶ್ವತ ವಿದ್ಯುತ್ ದೀಪದ ಅಲಂಕಾರ ಕಾಮಗಾರಿ ಆರಂಭಗೊಂಡಿದ್ದು ಪೂರ್ಣಗೊಂಡಿದೆ. ಏಪ್ರಿಲ್ ಮೊದಲ ವಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಉದ್ಘಾಟಿಸಲಿದ್ದಾರೆ ಎಂದರು.

ದೀಪಾಲಂಕಾರಕ್ಕೆ 5ಕೋಟಿ ರು.ವೆಚ್ಚವಾಗುತ್ತಿದೆ. ಪ್ರತಿ ಶನಿವಾರ, ಭಾನುವಾರ ಸಂಜೆ 6.30ಕ್ಕೆ ದೀಪಾಲಂಕಾರ ಮಾಡಲಾಗುತ್ತದೆ. ರಾಷ್ಟ್ರೀಯ ಹಬ್ಬಗಳಾದ ಸ್ವಾತಂತ್ರ್ಯ ದಿನಾಚರಣೆ, ಗಣ ರಾಜ್ಯೋತ್ಸವ, ಗಾಂಧಿ ಜಯಂತಿ ಹಾಗೂ ಕನ್ನಡ ರಾಜ್ಯೋತ್ಸವ ಸಂದರ್ಭಗಳಲ್ಲಿ ವಿದ್ಯುತ್ ದೀಪಾಲಂಕಾರವಿರುತ್ತದೆ. ಇದರಿಂದ ಜನರಿಗೆ ವಿಧಾನಸೌಧದ ವೀಕ್ಷಣೆ ಮಾಡಲು ಅನುಕೂಲವಾಗುತ್ತದೆ ಎಂದರು.

ಭಾನುವಾರ ವಿಧಾನಸೌಧ ವೀಕ್ಷಣೆಗೆ ಅವಕಾಶ: ಮೊದಲ ಬಾರಿಗೆ ವಿಧಾನಸೌಧದ ಆವರಣದಲ್ಲಿ ಆಯೋಜಿಸಿದ್ದ ಪುಸ್ತಕಮೇಳಕ್ಕೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದ್ದು, ಪ್ರತಿ ವರ್ಷ ಪುಸ್ತಕ ಮೇಳ ಮಾಡಲಾಗುವುದು. ಬೆಳಗಾವಿಯಲ್ಲಿ ಅಧಿವೇಶನ ಸಂದರ್ಭದಲ್ಲಿ ಪುಸ್ತಕಮೇಳ ಮಾಡಬೇಕೆಂಬ ಬೇಡಿಕೆಯಿದ್ದು, ದನ್ನು ಪರಿಶೀಲಿಸಲಾಗುವುದು. ಭದ್ರತೆ ಹೆಸರಿನಲ್ಲಿ ಜನರನ್ನು ವಿಧಾನಸೌಧ ವೀಕ್ಷಣೆಯಿಂದ ದೂರವಿಡುವುದು ಸರಿಯಲ್ಲ. ಎಲ್ಲರನ್ನೂ ವೈರಿ, ಶತ್ರು ಅಥವಾ ಕಳ್ಳರಂತೆ ನೋಡಬಾರದು. ಶೇ.1ರಷ್ಟು ಸಮಾಜಘಾತಕ ಶಕ್ತಿಗಳು ಇರಬಹುದು. ಅವರಿಗೆ ಹೆದರಿ ಶೇ.99ರಷ್ಟು ಜನರಿಗೆ ವಂಚಿತರನ್ನಾಗಿ ಮಾಡಬಾರದು. ಪುಸ್ತಕಮೇಳ ಸಂದರ್ಭದಲ್ಲಿ ವಿಧಾನಸೌಧ, ವಿಧಾನಸಭೆಯ ಮೊಗಸಾಲೆ ಸಭಾಂಗಣವನ್ನು ವೀಕ್ಷಣೆ ಮಾಡಿ ಬಹಳಷ್ಟು ಜನರು ಖುಷಿಪಟ್ಟಿದ್ದಾರೆ. ಪ್ರತಿ ಭಾನುವಾರ ವಿಧಾನಸೌಧದ ವೀಕ್ಷಣೆಗೆ ಅವಕಾಶ ನೀಡುವ ಬಗ್ಗೆಯೂ ಚಿಂತನೆಯಿದೆ ಎಂದರು.

ಬೆಳಗಾವಿಯಲ್ಲಿ ಶಾಸಕರ ಭವನ: ಪೊಲೀಸರು ಇರುವುದೇ ಸಮಾಜಘಾತಕ ಶಕ್ತಿಗಳನ್ನು ಪತ್ತೆಹಚ್ಚಲು. ಆಧುನಿಕ ತಂತ್ರಜ್ಞಾನ ಬಳಸಿಕೊಂಡು ತಪಾಸಣೆ ಮಾಡಲಿ. ಆದರೆ ಸಾಮಾನ್ಯ ಜನರ ವೀಕ್ಷಣೆಗೆ ತೊಂದರೆ ಕೊಡುವುದು ಬೇಡ. ವಿಧಾನಸಭೆಯ ಸಭಾಂಗಣ ವೀಕ್ಷಿಸಿದ ಒಬ್ಬರು ಕುಂಭಮೇಳಕ್ಕೆ ಹೋಗುವುದಕ್ಕಿಂತಲೂ ಹೆಚ್ಚಿನ ಖುಷಿಯಾಗಿದೆ ಎಂದು ಹೇಳಿದ್ದಾರೆ ಎಂದರು. ಬೆಳಗಾವಿಯಲ್ಲಿ ಪ್ರತಿವರ್ಷ ಚಳಿಗಾಲದ ಅಧಿವೇಶನ ನಡೆಯುತ್ತದೆ. ಆ ಸಂದರ್ಭದಲ್ಲಿ ಮುಖ್ಯಮಂತ್ರಿ, ಸಚಿವರು, ಅಧಿಕಾರಿಗಳ ವಾಸ್ತವ್ಯಕ್ಕೆ ಅನುಕೂಲವಾಗುವ ಬಹುಉಪಯೋಗಿ ಕಟ್ಟಡವನ್ನು ನಿರ್ಮಿಸುವ ಉದ್ದೇಶವಿದೆ. ಬೆಂಗಳೂರಿನ ಕುಮಾರಕೃಪ ಅತಿಥಿಗೃಹದ ಮಾದರಿಯಲ್ಲಿ 300 ಕೊಠಡಿಗಳ ಶಾಸಕರ ಭವನ ನಿರ್ಮಿಸುವ ಉದ್ದೇಶವಿದೆ. ಈ ಬಗ್ಗೆ ಲೋಕೋಪಯೋಗಿ ಹಾಗೂ ಪ್ರವಾಸೋದ್ಯಮ ಸಚಿವರೊಂದಿಗೆ ಚರ್ಚಿಸಿ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು ಎಂದರು. ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮತ್ತು ತಮ್ಮ ನಡುವೆ ಭಿನ್ನಾಭಿಪ್ರಾಯವಿಲ್ಲ. ಒಗ್ಗಟ್ಟಿನಿಂದ ಇದ್ದೇವೆ ಎಂದು ಖಾದರ್ ಸ್ಪಷ್ಟವಾಗಿ ಹೇಳಿದರು.

15ದಿನಗಳ ಕಾಲ ವಿಧಾನಸಭೆಯ ಕಲಾಪ ನಡೆದಿದ್ದು, 99 ಗಂಟೆ 34 ನಿಮಿಷಗಳ ಕಾಲ ಕಾರ್ಯಕಲಾಪ ನಡೆದಿದೆ. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದಲ್ಲಿ 14 ಸದಸ್ಯರುಗಳು ಒಟ್ಟು 08 ಗಂಟೆ 02 ನಿಮಿಷಗಳ ಕಾಲ ಭಾಗವಹಿಸಿದ್ದಾರೆ. ವಂದನಾ ನಿರ್ಣಯದ ಪ್ರಸ್ತಾವವನ್ನು ಮಾರ್ಚ್ 17 ರಂದು ಅಂಗೀಕರಿಸಲಾಗಿದೆ. ಆಯವ್ಯಯದ ಸಾಮಾನ್ಯ ಚರ್ಚೆಯಲ್ಲಿ 80 ಶಾಸಕರು ಒಟ್ಟು 28 ಗಂಟೆ 56 ನಿಮಿಷಗಳ ಕಾಲ ಭಾಗವಹಿಸಿದ್ದಾರೆ.

-ಯು.ಟಿ. ಖಾದರ್, ವಿಧಾನಸಭಾಧ್ಯಕ್ಷ

ಹನಿಟ್ರ್ಯಾಪ್ ಬಗ್ಗೆ ಚರ್ಚೆಗೆ ಅವಕಾಶ

ಹನಿಟ್ರ್ಯಾಪ್ ವಿಚಾರಕ್ಕೆ ಪ್ರತಿಕ್ರಿಯಿಸಿದ ಸ್ಪೀಕರ್, ಬಿಜೆಪಿ ಹಿರಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಏಕಾಏಕಿ ಎದ್ದು ಮಾತನಾಡುವಾಗಲೂ ನಾನು ಅವಕಾಶ ಕೊಟ್ಟಿದ್ದೇನೆ. ಸಚಿವರು ಮಾತಾಡಿದರು, ಗೃಹ ಸಚಿವರೂ ಕೂಡ ಉತ್ತರ ಕೊಟ್ಟರು. ಎಲ್ಲರೂ ಕೂಡ ಒಗ್ಗಟ್ಟಿನಿಂದ ಸರಕಾರಕ್ಕೆ ತನಿಖೆಗೆ ಕೇಳಿದ್ದಾರೆ. ಅರ್ಧ ಗಂಟೆ ಚರ್ಚೆ ಬಳಿಕ ಗೃಹ ಸಚಿವರೇ ದೂರು ಬಂದ ಮೇಲೆ ತನಿಖೆ ಮಾಡುತ್ತೇವೆ ಎಂದು ಉತ್ತರ ನೀಡಿದರು. ಮರುದಿನ ಬೆಳಗ್ಗೆ ಸಿಎಂ 8.30 ಗಂಟೆಗೆ ಬಂದರು. ಪ್ರತಿಪಕ್ಷ ನಾಯಕರು ಚರ್ಚೆಗೆ ಬಂದಾಗ ನಾವು ಅವಕಾಶ ನೀಡಲಿಲ್ಲವೇ? ಸಿಎಂ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಡಾ. ಜಿ ಪರಮೇಶ್ವರ್ ಎರಡು ಬಾರಿ ಉತ್ತರ ಕೊಟ್ಟಿದ್ದಾರೆ. ಇಷ್ಟೆಲ್ಲ ಉತ್ತರ ಕೊಟ್ಟ ಮೇಲೂ ಪ್ರತಿಪಕ್ಷ ಸದಸ್ಯರು ಅಡ್ಡಿಪಡಿಸುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಸಿಎಂ ಸಿದ್ದರಾಮಯ್ಯ ಅವರಿಗೆ ಮಂಡಿನೋವಿದೆ ಎಂಬುದು ಗೊತ್ತಿದ್ದೂ ಕೂಡ ಪ್ರತಿಯೊಂದಕ್ಕೂ ಅಡ್ಡಿಪಡಿಸುವುದು ಸರಿ ಅನಿಸುತ್ತದೆಯೇ? ಧನ ವಿನಿಯೋಗ ಬಿಲ್ ಪಾಸ್ ಆಗಲೇ ಬಾರದೆಂದು ಮನಃಸ್ಥಿತಿ ಇಟ್ಟುಕೊಳ್ಳುವುದು ಸರಿಯೇ..? ಧನ ವಿನಿಯೋಗ ಬಿಲ್ ಪಾಸ್ ಆಗದೇ ಇದ್ದರೆ ಎಲ್ಲರಿಗೂ ಸಮಸ್ಯೆ ಅಲ್ಲವೇ? ಎಷ್ಟೇ ಗೊಂದಲ ಇದ್ದರೂ ಕೂಡ ನಾನು ಫೈನಾನ್ಸ್ ಬಿಲ್ ನಿಲ್ಲಿಸಿಲ್ಲ. ಅದಕ್ಕೆ ವಿಧೇಯಕ ಹರಿದು ಮುಖಕ್ಕೆ ಬಿಸಾಡುವುದು. ಬಂಡಲ್ ಪೇಪರ್ ಅನ್ನೇ ಮುಖಕ್ಕೆ ಬಿಸಾಡುವುದು ಸರಿಯೇ? ಇವರ ಗದ್ದಲ ಆಗುತ್ತದೆ. ಹೆದರಿಸುತ್ತಾರೆ, ಬೆದರಿಸುತ್ತಾರೆ ಅಂತ ಹೆದರಿದ್ದರೆ ಏನಾಗುತ್ತಿತ್ತು?. ಸಂವಿಧಾನಕ್ಕೆ ಗೌರವ ತರುವಂತಹದ್ದು ಎಲ್ಲರ ಕರ್ತವ್ಯ ಎಂದು ಹೇಳಿದರು.

ಸಮಾಚಾರ ಸಣ್ಣದಲ್ಲ

ರೈಲಿಗೆ ತಲೆಕೊಟ್ಟು ಎಎಸ್‌ಐ ಪುತ್ರಿ ಸಾವು

ಮಂಡ್ಯ: ಚಲಿಸುತ್ತಿದ್ದ ರೈಲಿಗೆ ತಲೆಕೊಟ್ಟು ಯುವತಿಯೊಬ್ಬಳು ಆತ್ಮಹತ್ಯೆಗೆ ಮಾಡಿಕೊಂಡ ಘಟನೆ ಮಂಡ್ಯದ ಬಂದೀಗೌಡ ಬಡಾವಣೆ ಸಮೀಪ ನಡೆದಿದೆ.

ಸಾವಿಗೆ ಶರಣಾದ ಯುವತಿಯನ್ನು ಮಂಡ್ಯದ ಸಶಸ್ತ್ರ ಮೀಸಲು ಪಡೆಯ ಎಎಸ್‌ಐ ಅನ್ಸರ್ ಪಾಷಾ ಅವರ ಪುತ್ರಿ ಸುಹಾನಾ (19) ಎಂದು ಗುರುತಿಸಲಾಗಿದೆ. ಆಕೆ ಮೈಸೂರಿನಲ್ಲಿ ಪ್ರಥಮ ವರ್ಷದ ಬಿ.ಎ.ವ್ಯಾಸಂಗ ಮಾಡುತ್ತಿದ್ದಳು. ಕಾಲೇಜು ಮುಗಿಸಿಕೊಂಡು ಮನೆಗೆ ಬಂದವಳು ಬೈಕ್ ತೆಗೆದುಕೊಂಡು ಹೋಗಿ ಬಂದೀಗೌಡ ಬಡಾವಣೆ ಬಳಿ ಚಾಮುಂಡಿ ಎಕ್ಸ್‌ಪ್ರೆಸ್ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಘಟನೆಗೆ ನಿಖರ ಕಾರಣ ಏನು ಎಂಬುದು ತಿಳಿದು ಬಂದಿಲ್ಲ. ಸ್ಥಳಕ್ಕೆ ಧಾವಿಸಿದ ಮಂಡ್ಯ ರೈಲ್ವೇ ಪೊಲೀಸರು, ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮಗಳನ್ನು ಕಳೆದುಕೊಂಡ ಕುಟುಂಬದವರ ಶೋಕ ಮುಗಿಲು ಮುಟ್ಟಿದೆ.

ರೇಬಿಸ್‌ಗೆ ಸುಳ್ಯದ ಮಹಿಳೆ ಬಲಿ



ಮಂಗಳೂರು: ರೇಬಿಸ್ ರೋಗಕ್ಕೆ ಸುಳ್ಯ ತಾಲೂಕಿನ ಸಂಪಾಜೆಯ ಮಹಿಳೆಯೊಬ್ಬರು ಮಂಗಳೂರಿನಲ್ಲಿ ಮೃತಪಟ್ಟಿದ್ದಾರೆ. ಸಂಪಾಜೆಯ ಕಲ್ಲುಗುಂಡಿ ಬಳಿಯ 42 ವರ್ಷದ ಮಹಿಳೆ ಮಾ.7 ರಂದು ಅರಂತೋಡಿಗೆ ತೋಟದ ಕೆಲಸಕ್ಕೆ ತೆರಳಿದ್ದರು. ಈ ಸಂದರ್ಭದಲ್ಲಿ ಬೀದಿಯಲ್ಲಿದ್ದ ನಾಯಿಮರಿ ಕಚ್ಚಿದೆ. ನಾಯಿಮರಿ ಕಚ್ಚಿದ್ದರೂ ಮಹಿಳೆ ಯಾರಿಗೂ ತಿಳಿಸದೆ, ಚಿಕಿತ್ಸೆ ಪಡೆಯದೆ ನಿರ್ಲಕ್ಷ್ಯ ವಹಿಸಿದ್ದರು. ಮಾ.17 ಮಹಿಳೆಗೆ ತೀವ್ರ ಹೊಟ್ಟೆ ನೋವು ಕಾಣಿಸಿಕೊಂಡಿದೆ. ಚಿಕಿತ್ಸೆಗಾಗಿ ಸುಳ್ಯದ ಸರಕಾರಿ ಆಸ್ಪತ್ರೆಗೆ ಬಂದಿದ್ದಾರೆ. ಈ ವೇಳೆ ನೀರನ್ನು ನೋಡಿ ಕಿರುಚಾಡಲು ಆರಂಭಿಸಿದ್ದಾರೆ. ವಿಚಿತ್ರ ವರ್ತನೆ ತೋರುತ್ತಿದ್ದ ಹಿನ್ನೆಲೆಯಲ್ಲಿ ಮಹಿಳೆ ಬಳಿ ಮತ್ತಷ್ಟು ಪ್ರಶ್ನೆ ಕೇಳಿದಾಗ ನಾಯಿ ಕಚ್ಚಿದ್ದನ್ನು ತಿಳಿಸಿದ್ದಾರೆ. ಪರಿಸ್ಥಿತಿ ಗಂಭೀರವಾಗಿದ್ದ ಕಾರಣ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಆಕೆ ಮಹಿಳೆ ಮೃತಪಟ್ಟಿದ್ದಾರೆ. ಮಹಿಳೆಗೆ ರೇಬಿಸ್ ಸೋಂಕು ತಗುಲಿದ್ದನ್ನು ವೈದ್ಯಕೀಯ ವರದಿ ದೃಢಪಡಿಸಿದೆ.

ಬಿಜೆಪಿ ವಿರುದ್ಧ ಕಿಡಿ

ಧಾರವಾಡ: ವಿಧಾನಸಭೆಯಲ್ಲಿ ಸಭಾಧ್ಯಕ್ಷರ ಬಗ್ಗೆ ಬಿಜೆಪಿ ಶಾಸಕರ ವರ್ತನೆಯನ್ನು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ತರಾಟೆಗೆ ತೆಗೆದುಕೊಂಡಿದ್ದಾರೆ. ಧಾರವಾಡದಲ್ಲಿ ಪ್ರತಿಕ್ರಿಯೆ ನೀಡಿದ ಸಚಿವರು, ಸದನದಲ್ಲಿ ಬಿಜೆಪಿ ಶಾಸಕರ ಗದ್ದಲ ದುರದೃಷ್ಟಕರ. ಆ ರೀತಿಯಾಗಿ ಪ್ರತಿಪಕ್ಷ ಶಾಸಕರು ಲಘುವಾಗಿ ವರ್ತಿಸಿದ್ದಾರೆ. ನಾನು 1989ರಿಂದ ಶಾಸಕನಾಗಿದ್ದೇನೆ. ಇಂತಹ ಘಟನೆ ನೋಡಿರಲಿಲ್ಲ. ಇದು ದುರದೃಷ್ಟಕರ. ಬಿಜೆಪಿಯವರಿಗೆ ಜಾತಿ, ಕೋಮು, ಧರ್ಮ ಅಷ್ಟೇ ಬೇಕು. ಅಭಿವೃದ್ಧಿ ಬೇಡ. ಹಣಕಾಸಿನ ವಿಧೇಯಕದ ಬಗ್ಗೆ ಅವರಿಗೆ ಮಾತನಾಡಲು ಆಗುವುದಿಲ್ಲ. ಗಲಾಟೆ ಎಬ್ಬಿಸೋದು, ಜಾತಿ, ಧರ್ಮದ ಬಗ್ಗೆ ಮಾತನಾಡುವುದೇ ಅವರ ಕೆಲಸ ಎಂದು ಕಿಡಿಕಾರಿದರು.

ಸಿದ್ದರಾಮಯ್ಯ ಓಲೈಕೆ ರಾಜಕಾರಣ

ದಾವಣಗೆರೆ: ಕರ್ನಾಟಕದಲ್ಲಿ ನಡೆಯುತ್ತಿರುವ ಸರಕಾರ ಯಾವ ದಿಕ್ಕಿನತ್ತ ಹೋಗುತ್ತಿದೆ ಎಂದು ಗೊತ್ತಾಗುತ್ತಿಲ್ಲ. ಆಡಳಿತ ಪಕ್ಷದ ಹಿರಿಯ ಸಚಿವರೊಬ್ಬರು ಅವರ ವಿರುದ್ಧ ಹನಿಟ್ರ್ಯಾಪ್ ಆಗಿದೆ ಎಂದು ಆರೋಪ ಮಾಡಿದ್ದಾರೆ. ಇದರ ಬಗ್ಗೆ ತನಿಖೆ ಮಾಡಲು ಅವರದ್ದೇ ಸರಕಾರದ ಗೃಹ ಸಚಿವರಿಗೆ ದೂರು ನೀಡುತ್ತಿದ್ದಾರೆ. ಇದು ನಿಜಕ್ಕೂ ವಿಪರ್ಯಾಸದ ಸಂಗತಿ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯ ಸರಕಾರದ ಬಳಿ ಸಿಡಿ ಫ್ಯಾಕ್ಟರಿ ಇದೆ ಎಂದು ಸದನದಲ್ಲಿ ಬಿಜೆಪಿ ಶಾಸಕರು ಆರೋಪಿದ್ದಾರೆ ಎಂದು ಹೇಳಿದರು.

ಮುಸ್ಲಿಂ ಓಲೈಕೆ, ಹಿಂದೂಗಳ ಅವಮಾನದ ವಿರುದ್ಧ ರಾಜ್ಯಾದ್ಯಂತ ಜನಜಾಗೃತಿ ಹೋರಾಟ: ವಿಜಯೇಂದ್ರ

ಶಾಸಕರ ಅಮಾನತು ಆದೇಶ ಹಿಂಪಡೆಯಿರಿ

ಬೆಂಗಳೂರು: ಸ್ಪೀಕರ್ ನಮ್ಮ ಶಾಸಕರನ್ನು ಅಮಾನತು ಮಾಡಿ ರಾಜ್ಯ ಸರಕಾರದ ತಾಳಕ್ಕೆ ತಕ್ಕಂತೆ ಕುಣಿದಿದ್ದಾರೆ. ಇದು ಖಂಡನೀಯ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ತಿಳಿಸಿದ್ದು, 18 ಶಾಸಕರ ಅಮಾನತು ಆದೇಶ ಹಿಂಪಡೆಯಬೇಕು ಎಂದು ಮನವಿ ಮಾಡಿದರು.

ಮಲ್ಲೇಶ್ವರದ ಬಿಜೆಪಿ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಿಜೆಪಿಯ 18 ಶಾಸಕರನ್ನು 6 ತಿಂಗಳ ಕಾಲ ಅಮಾನತುಗೊಳಿಸುವ ಕುರಿತ ನಿರ್ಧಾರ ಸಂಪೂರ್ಣವಾಗಿ ಕಾನೂನುಬಾಹಿರ, ಅಸಾಂವಿಧಾನಾತ್ಮಕ, ಏಕಪಕ್ಷೀಯ ಹಾಗೂ ಮನಸೋಇಚ್ಛೆ ಯಿಂದ ತೆಗೆದುಕೊಂಡ ತೀರ್ಮಾನ. ಸ್ಪೀಕರ್ ಅವರು ಶಾಸಕರು ಮಾತ್ರವಲ್ಲ ಕ್ಷೇತ್ರದ ಜನರಿಗೆ ಅವಮಾನ ಮಾಡಿದ್ದಾರೆ. ಅಲ್ಪಸಂಖ್ಯಾತರನ್ನು ಖುಷಿ ಪಡಿಸಲು ಮೀಸಲಾತಿ ಕೊಟ್ಟ ಸರಕಾರದ ನಿರ್ಧಾರವನ್ನು ಬಿಜೆಪಿ ವಿರೋಧಿಸುತ್ತದೆ. ಸದನದ ಒಳಗೆ ಮತ್ತು ಹೊರಗೆ ಇದರ ವಿರುದ್ಧ ಹೋರಾಟ ನಡೆಸಿ ಇದನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯುತ್ತೇವೆ ಎಂದರು.

18 ಶಾಸಕರು ಹಾಗಿದ್ದರೆ ಭಯೋತ್ಪಾದಕರೇ?: ಸ್ಪೀಕರ್ ಅವರು ನಮ್ಮ ರಕ್ಷಣೆಗೆ ಬರಬೇಕಿತ್ತು. 6 ತಿಂಗಳು 18 ಜನಪ್ರತಿನಿಧಿಗಳನ್ನು ಅಮಾನತು ಮಾಡುವ ಸ್ಪೀಕರ್ ಅವರ ನಡೆಯು ಸರಿಯಲ್ಲ. ಅಮಾನತಾದವರು ವಿಧಾನಸಭಾ ಲಾಬಿ, ಸಭಾಂಗಣ ಪ್ರವೇಶಿಸುವಂತಿಲ್ಲ ಎಂದಿದ್ದಾರೆ. ಹಾಗಿದ್ದರೆ ಅವರು ಭಯೋತ್ಪಾದಕರೇ, ನಕ್ಸಲೈಟರೇ ಎಂದು ಪ್ರಶ್ನಿಸಿದರಲ್ಲದೆ, ಸ್ಥಾಯಿ ಸಮಿತಿ ಸಭೆಯಲ್ಲಿ ಭಾಗವಹಿಸುವಂತಿಲ್ಲ ಎಂದು ತಿಳಿಸಿದ್ದಾರೆ. ಇದು ಶಾಸಕರ ಹಕ್ಕು ಮೊಟಕುಗೊಳಿಸುವ, ಹಕ್ಕು ಕಿತ್ತುಕೊಳ್ಳುವ ಕಾರ್ಯ. ಕ್ಷೇತ್ರಾಭಿವೃದ್ಧಿಗೆ ಎರಡು ಕಾಸು ಬಿಡುಗಡೆ ಮಾಡುವ ಯೋಗ್ಯತೆ ಸರಕಾರಕ್ಕೆ ಇಲ್ಲ. ಸ್ಪೀಕರ್ ಆದೇಶ ಅಸಾಂವಿಧಾನಾತ್ಮಕ, ಮನಸೋ ಇಚ್ಛೆಯದು ಎಂದು ಆರೋಪಿಸಿದರು.

ಲವ್ ಜಿಹಾದ್‌ಗೆ ಬಲಿ: ರಾಜ್ಯ- ದೇಶದಲ್ಲಿ ಹಿಂದೂ ಹೆಣ್ಮಕ್ಕಳು ಲವ್ ಜಿಹಾದ್‌ಗೆ ಬಲಿ ಆಗುತ್ತಿದ್ದಾರೆ. ಕಾಮಗಾರಿಯಲ್ಲಿ ಮುಸ್ಲಿಂ ಮೀಸಲಾತಿ ಅಸಾಂವಿಧಾನಿಕ. ಧರ್ಮ ಆಧಾರಿತ ಮೀಸಲಾತಿ ಕೊಡಲಾಗದು ಎಂದು ಸಂವಿಧಾನ ಸ್ಪಷ್ಟವಾಗಿ ತಿಳಿಸಿದೆ. ಇದನ್ನು ನಾವು ವಿರೋಧಿಸುತ್ತಿದ್ದೇವೆ. ಈ ಸಂಬಂಧ ಸುಪ್ರೀಂಕೋರ್ಟ್ ಸೇರಿ ವಿವಿಧ ಕೋರ್ಟ್‌ಗಳು ತೀರ್ಪು ನೀಡಿದೆ. ತೀರ್ಪುಗಳು ನಮ್ಮ ಅನುಭವಿ ಮುಖ್ಯಮಂತ್ರಿಗಳಿಗೆ ತಿಳಿದಿದೆ. ಇದು ಸಂವಿಧಾನ ವಿರೋಧಿ ಎಂಬುದು ಗೊತ್ತಿದ್ದರೂ ನಾಡಿನ ಹಿಂದೂಗಳ ಮೇಲೆ ದೌರ್ಜನ್ಯ- ಅವಮಾನ ಮಾಡುವ ನಿರ್ಧಾರ ಖಂಡಿತ ಅಕ್ಷಮ್ಯ ಅಪರಾಧ. ಈ ಸಂಬಂಧ ಹೋರಾಟದ ಕುರಿತು ಪಕ್ಷದ ಮುಖಂಡರ ಜತೆ ಚರ್ಚಿಸಿದ್ದೇವೆ. ಅತಿ ಶೀಘ್ರದಲ್ಲಿ ಹೋರಾಟದ ರೂಪುರೇಷೆ ಪ್ರಕಟಿಸುತ್ತೇವೆ. ಸದನದಲ್ಲಿ ಹಗಲು- ರಾತ್ರಿ ಧರಣಿ ಬಗ್ಗೆ ಚರ್ಚೆ ನಡೆದಿದೆ. ಜಿಲ್ಲೆಗಳಲ್ಲಿ ಸೋಮವಾರದಿಂದ ಹೋರಾಟ ನಡೆಯಲಿದೆ. ರಾಜ್ಯದಲ್ಲಿ ಜನಜಾಗೃತಿ ಮೂಡಿಸುವ ಹೋರಾಟ ನಡೆಸಲಾಗುವುದು ಎಂದರು.

ಮಲ್ಲೇಶ್ವರದ ಬಿಜೆಪಿ ಕಾರ್ಯಾಲಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮಾತನಾಡಿದರು.

ಹನಿಟ್ರ್ಯಾಪ್ ಕುರಿತ ಸಚಿವರ ಹೇಳಿಕೆ- ಮುಸ್ಲಿಮರಿಗೆ ಸಂವಿಧಾನ ವಿರೋಧಿಯಾಗಿ ಮೀಸಲಾತಿ ವಿಚಾರ ಮುಂದಿಟ್ಟು ನಾವು ಹೋರಾಟ ಮಾಡಿದ್ದೇವೆ. ಸ್ಪೀಕರ್ ನಡವಳಿಕೆ ತುಘಲಕ್ ದರ್ಬಾರ್‌ನಂತಿದೆ. ಹಿಟ್ಲರ್ ಸಂಸ್ಕೃತಿ ನೋಡುತ್ತಿದ್ದೇವೆ. ಸಿದ್ದರಾಮಯ್ಯನವರು ಬೂಟುಗಾಲು ಹಾಕಿ ಬಾಗಿಲು ಒದ್ದು ಹಾಕಿದ್ದು, ಜಮೀರ್ ಅಹ್ಮದ್ ಸ್ಪೀಕರ್ ಮೇಲೆ ಹಲ್ಲೆ ಮಾಡುವ ಪ್ರಯತ್ನ ನಡೆಸಿದ್ದನ್ನು ಸದನದಲ್ಲಿ ನೋಡಿದ್ದೇವೆ.

- ಆರ್.ಅಶೋಕ, ಪ್ರತಿಪಕ್ಷ ನಾಯಕ

ನಮ್ಮ ಶಾಸಕರು ಬಾವಿಗಿಳಿದು ಹೋರಾಟ ನಡೆಸುತ್ತಿರುವಾಗ ಏಕಾಏಕಿಯಾಗಿ ಅಮಾನತು ಮಾಡಿದ್ದು ಸಂಪೂರ್ಣ ಕಾನೂನುಬಾಹಿರ. ಸಂವಿಧಾನದ ಬಗ್ಗೆ ಪಾಠ ಹೇಳುವ, ಪದೇಪದೇ ಡಾ. ಅಂಬೇಡ್ಕರರ ಹೆಸರು ದುರುಪಯೋಗ ಪಡಿಸಿಕೊಳ್ಳುವ ಮುಖ್ಯಮಂತ್ರಿಗಳು, ಕಾಂಗ್ರೆಸ್ ಮುಖಂಡರು ಬಜೆಟ್‌ನಲ್ಲಿ ತೆಗೆದುಕೊಂಡ ನಿರ್ಧಾರಗಳು ಕೇವಲ ಅಲ್ಪಸಂಖ್ಯಾತರ ಓಲೈಕೆಯಷ್ಟೇ ಅಲ್ಲ. ಹಿಂದೂಗಳನ್ನು ಅಪಮಾನಿಸುವ ನಿರ್ಧಾರ

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಕೇಂದ್ರದ ಮಾಜಿ ಸಚಿವ ಎಂ. ವೀರಪ್ಪ ಮೊಯ್ಲಿ ಪ್ರತಿಪಾದನೆ

ಕ್ಷೇತ್ರ ಮರುವಿಂಗಡಣೆಗೆ ಜನಸಂಖ್ಯೆ ಮಾನದಂಡ ಬೇಡ

ಹುಬ್ಬಳ್ಳಿ: ಲೋಕಸಭೆ ಕ್ಷೇತ್ರಗಳ ಮರುವಿಂಗಡಣೆಗೆ ಜನಸಂಖ್ಯೆ ಪ್ರಮುಖ ಮಾನದಂಡ ಆಗಬಾರದು. ಭೌಗೋಳಿಕ ಅಂಶಗಳನ್ನು ಪರಿಗಣಿಸ ದಿದ್ದರೆ ದೇಶದ ಸಮಗ್ರತೆಗೆ ಭಂಗ ಬರುವ ಸಾಧ್ಯತೆಗಳಿವೆ ಎಂದು ಕೇಂದ್ರ ಮಾಜಿ ಸಚಿವ ಎಂ. ವೀರಪ್ಪ ಮೊಯ್ಲಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ದಕ್ಷಿಣ ರಾಜ್ಯಗಳಾದ ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರಪ್ರದೇಶ ಜನಸಂಖ್ಯೆ ನಿಯಂತ್ರಣಕ್ಕೆ ತರುವಲ್ಲಿ ಯಶಸ್ವಿಯಾಗಿವೆ. ಲೋಕಸಭೆ ಕ್ಷೇತ್ರ ಮರು ವಿಂಗಡಣೆಯಲ್ಲಿ ಜನಸಂಖ್ಯೆ ಮಾನದಂಡ ಸರಿಯಲ್ಲ. ಇದನ್ನು ಪರಿಗಣಿಸಿದರೆ ಈ ರಾಜ್ಯಗಳಿಗೆ ಅನ್ಯಾಯವಾಗ ಲಿದೆ ಎಂದು ಎಚ್ಚರಿಕೆ ಕೊಟ್ಟರು.

ರಾಷ್ಟ್ರದ ಹಿತದೃಷ್ಟಿಯಿಂದ ಜನಸಂಖ್ಯೆ ನಿಯಂತ್ರಣಕ್ಕೆ ತಂದಿದ್ದಕ್ಕೆ ಶಿಕ್ಷೆ ಕೊಟ್ಟಂತೆ ಆಗಲಿದೆ. ಜನಸಂಖ್ಯೆ ಮಾನದಂಡವನ್ನಾಗಿ ಪರಿಗಣಿಸಿದರೆ ಆಡಳಿತಾತ್ಮಕ ತೊಂದರೆ ಆಗಲಿದೆ. ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ ರಾಜ್ಯಗಳಿಗೆ ಲಾಭವಾಗಲಿದೆ ಎಂದರು.

ಸದನದಲ್ಲಿ ಹನಿಟ್ರ್ಯಾಪ್ ಗಂಭೀರ ಚರ್ಚೆ ವಿಚಾರವಾಗಿ ತಮ್ಮ ನಿಲುವು ತಿಳಿಸಿದ ಮೊಯ್ಲಿ, ಇಂತಹ ವಿಚಾರ ಹೊಸದೇನಲ್ಲ. ಪ್ರತಿಪಕ್ಷದವರು ಇಂತಹ ವಿಷಯಗಳನ್ನು ಹುಡುಕುತ್ತಲೇ ಇರುತ್ತಾರೆ. ಅವರ ಪ್ರಚೋದನೆಗೆ ಯಾರೂ ಒಳಗಾಗಬಾರದು. ಸದನದಲ್ಲಿ ಪ್ರತಿಪಕ್ಷದವರ ವರ್ತನೆ ಸರಿಯಲ್ಲ ಎಂದು ಸಮರ್ಥಿಸಿಕೊಂಡರು.

ಪಕ್ಷದಲ್ಲಿ ಪವರ್ ಶೇರಿಂಗ್ ವಿಚಾರ ಚರ್ಚೆ ಬೇಡ

ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆ ಚರ್ಚೆ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಪಕ್ಷದಲ್ಲಿ ಪವರ್ ಶೇರಿಂಗ್ ವಿಚಾರ ಚರ್ಚೆಗಳಾಗಬಾರದು. ಇಂತಹ ಚರ್ಚೆಗಳಿಂದ ಸರಕಾರಕ್ಕೆ ಅಭದ್ರತೆ ಕಾಡುವುದು ನಿಶ್ಚಿತ. ವಿಪಕ್ಷದವರು ಅದನ್ನೇ ಅಸ್ತ್ರವನ್ನಾಗಿ ಬಳಕೆ ಮಾಡುತ್ತಾರೆ. ಅಂತಹ ಪರಿಸ್ಥಿತಿ ತಂದುಕೊಳ್ಳುವುದು ಸರಿಯಲ್ಲ. ಅಧಿಕಾರ ಹಂಚಿಕೆ ವಿಚಾರ ಈ ಮೊದಲೇ ನಿರ್ಣಯವಾಗಿದೆಯೋ ಗೊತ್ತಿಲ್ಲ. ಆ ಬಗ್ಗೆ ಪಕ್ಷದ ಹೈಕಮಾಂಡ್ ನೋಡಿಕೊಳ್ಳುತ್ತದೆ. ಆದರೆ ಪಕ್ಷದಲ್ಲಿ ಈ ಆಂತರಿಕ ವಿಚಾರಗಳ ಬಗ್ಗೆ ಚರ್ಚೆ ನಡೆಸುವುದು ಸೂಕ್ತವಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆರೋಪ ದೂರೆಂದು ಪರಿಗಣಿಸಲು ಸಲಹೆ

ಗಂಭೀರ ವಿಷಯ: ಸಿ.ಟಿ. ರವಿ

ಚಿಕ್ಕಮಗಳೂರು: 48 ಜನ ಶಾಸಕರಿಗೆ ಹನಿಟ್ರ್ಯಾಪ್ ಸಿ.ಡಿ ವಿಚಾರ ವಿಧಾನಸಭೆಯಲ್ಲಿ ಆರೋಪಿಸಿದ್ದಾರೆ. ಇದು ಸಣ್ಣ ವಿಷಯವೇ? ಇದು ತಳ್ಳಿಹಾಕುವ ವಿಷಯವಲ್ಲ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಎಚ್ಚರಿಕೆ ಕೊಟ್ಟಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ನ್ಯಾಯಾಧೀಶರು, ಶಾಸಕರು, ಮುಖಂಡರು, ಮತ್ತು ಮಂತ್ರಿಗಳನ್ನು ಹನಿಟ್ರ್ಯಾಪ್ ಮಾಡಿಸಿ ಬ್ಲ್ಯಾಕ್ ಮೇಲ್ ಮಾಡಿದ ಆರೋಪ ಇದೆ ಎಂದರು.

ಶತ್ರುಗಳನ್ನು ಮಣಿಸಲು ರಾಜ-ಮಹಾರಾಜರು ಇದನ್ನು ಬಳಸಿಕೊಳ್ಳುತ್ತಿದ್ದರು. ಶತ್ರುದೇಶಗಳು ಬೇಹುಗಾರಿಕೆಗೆ ಸುಂದರ ಹೆಣ್ಣುಮಕ್ಕಳನ್ನು ಬಳಸಿಕೊಳ್ಳುತ್ತಿದ್ದರು. ಋಷಿ-ಮುನಿಗಳ ತಪಸ್ಸು ಭಂಗ ಮಾಡುವುದಕ್ಕೆ ದೇವಕನ್ಯೆಯರನ್ನು ಬಳಸಿಕೊಂಡಿದ್ದು ಪುರಾಣಗಳಲ್ಲಿವೆ ಎಂದು ರವಿ ವಿಶ್ಲೇಷಿಸಿದರು. ಹಿರಿಯ ಸಚಿವ, ಮತ್ತೊಬ್ಬ ಹಿರಿಯ ಸಚಿವನ ರಾಜಕೀಯ ಜೀವನ ಮುಗಿಸಲು ಈ ರೀತಿ ಮಾಡಿದ್ದನ್ನು ಗಂಭೀರವಾಗಿ ಪರಿಗಣಿಸಬೇಕು. ಯಾರೂ ದೂರು ನೀಡಿಲ್ಲ, ವಿಧಾನಸಭೆಯಲ್ಲಿ ಆರೋಪ ಮಾಡುವುದು ಸಾಮಾನ್ಯವೇ?. ಆ ಆರೋಪವನ್ನೇ ದೂರೆಂದು ಪರಿಗಣಿಸಿ ಸಿಬಿಐ ತನಿಖೆಗೆ ಆಗ್ರಹಿಸಿದ್ದೇನೆ ಎಂದು ತಿಳಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಪ್ಪು ಚುಕ್ಕೆ: ಸಚಿವ ರಾಜಣ್ಣ

ಹನಿಟ್ರ್ಯಾಪ್: ಎಚ್ಚರಿಕೆ ಇರಲಿ

ಕೋಲಾರ: ಹನಿಟ್ರ್ಯಾಪ್ ಮೊದಲೂ ಅಲ್ಲ, ಕೊನೆಯಂತೂ ಅಲ್ಲವೇ ಅಲ್ಲ, ವ್ಯಾಂದ್ಯಂ ಇರುತ್ತದೆ. ನಾವು ಎಚ್ಚರಿಕೆ ಇರಬೇಕಷ್ಟೇ ಎಂದು ಸಹಕಾರ ಸಚಿವ ರಾಜಣ್ಣ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಹನಿಟ್ರ್ಯಾಪ್ ಕುರಿತಾದ ಇಂಚಿಂಚು ಮಾಹಿತಿಯನ್ನು ವಿಧಾನಸಭೆಯಲ್ಲೇ ತೆರೆದಿಟ್ಟಿದ್ದೇನೆ. ಇಲ್ಲಿ ಹೆಚ್ಚಿನದಾಗಿ ಹೇಳುವುದು ಏನೂ ಇಲ್ಲ. ಅಧಿವೇಶನದಲ್ಲಿ ಪ್ರತಿಪಕ್ಷಗಳ ಗದ್ದಲ ಪೂರ್ವಯೋಜಿತ ಪಿತೂರಿಯಾಗಿದ್ದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಪ್ಪು ಚುಕ್ಕೆಯಾಗಿದೆ. ಜನಪರವಾದ ವಿಚಾರದಲ್ಲಿ ಗಲಾಟೆ ನಡೆಸದಿದ್ದರೆ ಸರಿ ಆಗುತ್ತಿತ್ತು. ಆದರೆ ಬಜೆಟ್ ಮೇಲಿನ ಉತ್ತರಕ್ಕೆ ಅಡ್ಡಿಪಡಿಸಿದ್ದು ಹೇಯ. ಗಲಾಟೆ ಆರಂಭ ಮಾಡಿದ ತಕ್ಷಣ ಸಸ್ಪೆಂಡ್ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ತಡವಾದರೂ ಸ್ಪೀಕರ್ ಉತ್ತಮ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ನುಡಿದರು.

ಬಂದ್ ಕುರಿತಂತೆ ಪ್ರತಿಕ್ರಿಯಿಸಿದ ಸಚಿವ ರಾಜಣ್ಣ ಅವರು ಬೆಂಗಳೂರಿನಲ್ಲಿ ಬಂದ್ ಮಾಡಿದರೆ ಬೆಳಗಾವಿಯಲ್ಲಿ ಕನ್ನಡಿಗರಿಗೆ ರಕ್ಷಣ ಸಿಗುತ್ತದೆಯೇ ಎಂದು ಮರು ಪ್ರಶ್ನಿಸಿದರು.

ಸಚಿವ ರಾಜಣ್ಣ ದೂರು ದಾಖಲಿಸಿದರೆ ತನಿಖೆ: ಸತೀಶ್ ಜಾರಕಿಹೊಳಿ

40 ಅಲ್ಲ, 400 ಜನರಿಗೆ ಹನಿಟ್ರ್ಯಾಪ್

ಬೆಳಗಾವಿ: ಸಚಿವ ಕೆ.ಎನ್. ರಾಜಣ್ಣ ಅವರು ದೂರು ದಾಖಲಿಸಿದರೆ ತನಿಖೆ ನಡೆಯುತ್ತದೆ. ದೂರು ನೀಡಲು ಸಮಯ ಇದೆ. ಘರ್ಜಿಸುವ ಹುಲಿಗಳಿಗೆ ಹನಿಟ್ರ್ಯಾಪ್ ಮಾಡಲಾ ಗುತ್ತಿದೆ ಎಂದು ದೂರಿದರು. ಈ ಪ್ರಕರಣ ಸಿಬಿಐಗೆ ನೀಡುವ ಅಗತ್ಯವಿಲ್ಲ. ದೂರು ದಾಖಲಿಸಿದರೆ ಪೊಲೀಸರೇ ತನಿಖೆ ನಡೆಸುತ್ತಾರೆ. ಈ ಹಿಂದೆ ಯಾರು ಸೂತ್ರದಾರ ಇದ್ದಾರೆ ಎಂಬುವುದು ಹೊರಗೆ ಬರಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿ ಶಾಸಕ ಮುನಿರತ್ನ ಡಿ.ಕೆ ಶಿವಕುಮಾರ್ ವಿರುದ್ಧ ಆರೋಪ ಮಾಡಿರುವ ಕುರಿತು ಪ್ರತಿಕ್ರಿಯೆ ನೀಡಿ, ಮುನಿರತ್ನ ಅವರು ಆರೋಪ ಮಾಡಿದ್ದಾರೆ ಎಂದು ನಾವು ಆರೋಪ ಮಾಡಲು ಆಗಲ್ಲ. ಪೊಲೀಸ್ ತನಿಖೆ ಆಗಲಿ. 40 ಜನ ಇರಬಹುದು ಎಂದು ಅಷ್ಟೇ ರಾಜಣ್ಣ ಹೇಳಿದ್ದಾರೆ. ಅದರ ಸಂಖ್ಯೆ 400 ಕೂಡ ಇರಬಹುದು ಎಂದಿದ್ದಾರೆ.

ಹೈ ಅಂದರೆ ನೀವೇಕೆ ಹಲೋ ಅಂತೀರಾ..? ಎಂಬ ಡಿಕೆಶಿ ಹೇಳಿಕೆ ಪ್ರತಿಕ್ರಿಯೆ ನೀಡಿ, ವಿಲ್ ಪವರ್, ಅನುಭವ ಬದ್ಧತೆಯ ಮೇಲೆ ಇದು ನಿರ್ಧಾರ ಆಗುತ್ತದೆ. ಒಂದು ಸಲ ಹೈ ಅಂದರೆ ಅಟ್ರ್ಯಾಕ್ಟ್ ಆಗಿತ್ತು. ಎರಡನೇ ಸಲಕ್ಕೆ ಆಗುತ್ತಾ..? ಗಟ್ಟಿ ಇದ್ದರೆ ಆಗಲ್ಲ, ಸ್ವಲ್ಪ ವೀಕ್ನೆಸ್ ಇದ್ದರೆ ಒಂದೇ ಸಲಕ್ಕೆ ಮೊಬೈಲ್ ರಿಂಗ್ ಆಗೋಕೆ ಶುರು ಆಗುತ್ತೆ. ಮೊದಲೇ ಹೆದರಿಕೆ ಇದ್ದರೆ 10 ಬಾರಿ ಹೈ ಅಂದರೂ ಹಲೋ ಅನ್ನಲ್ಲ ಎಂದಿದ್ದಾರೆ.

ಶಾಸಕರು ಮರ್ಯಾದೆಯ ಎಲ್ಲೆ ಮೀರಬಾರದು: ಶರಣಪ್ರಕಾಶ್ ಪಾಟೀಲ್

ಸ್ಪೀಕರ್ ಮೇಲೆ ದಾಳಿ: ಸಚಿವರ ಕಿಡಿ

ಕಲಬುರಗಿ: ಸದನದಲ್ಲಿ ಸ್ಪೀಕರ್ ಮೇಲೆ ದಾಳಿ ಮಾಡಿದ ರೀತಿ ವಿಷಾದದ ಸಂಗತಿ. ಅವರ ಮೈಮೇಲೆ ಯಾರೂ ಸಹ ಹೋಗುವುದು ಸರಿಯಲ್ಲ. ಯಾವುದೇ ಪಕ್ಷದ ಶಾಸಕರಾಗಲಿ, ತಮ್ಮ ಸಭ್ಯತೆಯ ಎಲ್ಲೆಯನ್ನು ಎಂದಿಗೂ ಮರೆಯಬಾರದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ವಿರೋಧ ಪಕ್ಷದ ಸ್ಥಾನದಲ್ಲಿರುವವರು ಯಾವುದೇ ಸಮಸ್ಯೆ ಬಗ್ಗೆ ಹೇಳುವುದಾದರೆ ಅದಕ್ಕೆ ಸ್ಪಷ್ಟ ನಿಯಮಾವಳಿಯಿದೆ. ಹೇಳುವ ರೀತಿಯಲ್ಲಿ ಹೇಳಿದಾಗ, ಆಡಳಿತ ಪಕ್ಷ ಉತ್ತರ ನೀಡಲು ಸದಾ ಸಿದ್ಧ. ಆದರೆ, ಏಕಾಏಕಿ ಪ್ರತಿಭಟನೆ, ಸದನದ ಬಾವಿಗೆ ಹೋಗುವುದು. ಸ್ಪೀಕರ ಮೇಲೆ ದಾಳಿ ಮಾಡುವುದು ಅಂದರೆ ಏನು ಇದರ ಅರ್ಥ ಎಂದು ಖಾರವಾಗಿ ಪ್ರಶ್ನಿಸಿದರು.

ಸ್ಪೀಕರ್‌ಗೆ ಅಗೌರವ: ಅನುಚಿತ ವರ್ತನೆ: ಸ್ಪೀಕರ್ ಕುರ್ಚಿ ಬಳಿ ಹೋಗಲು ಯಾರಿಗೂ ಅನುಮತಿ ಇಲ್ಲ. ಈ ರೀತಿ ವರ್ತನೆ ಯಾವ ಪಕ್ಷದ ಶಾಸಕರು ಕೂಡ ಮಾಡಬಾರದು. ನಾವು ಸಹ 2004ರಲ್ಲಿ ಹಾಗೂ 2018ರಿಂದ 2013ರವರೆಗೆ ವಿರೋಧ ಪಕ್ಷದ ಸ್ಥಾನದಲ್ಲಿದ್ದು ಕೆಲಸ ಮಾಡಿದ್ದೇವೆ. ಯಾವತ್ತೂ ಸಹ ಈ ರೀತಿ ಮಾಡಿಲ್ಲ, ಪ್ರತಿಭಟನೆ ಮಾಡಿದ್ದೇವೆ. ಆದರೆ, ಸ್ಪೀಕರ್ ಮೇಲೆ ಪೇಪರ್ ಎಸೆದು ಸದನಕ್ಕೆ ಹಾಗೂ ಪೀಠಕ್ಕೆ ಅಗೌರವದಿಂದ ನಡೆದುಕೊಂಡ ಬಿಜೆಪಿಯವರಂತೆ ವರ್ತನೆ ಯಾವತ್ತೂ ಮಾಡಿಲ್ಲ ಎಂದು ಸಚಿವರು ಗುಡುಗಿದರು.

ಸದನದಲ್ಲಿ ಸ್ಪೀಕರ್ ಬಳಿ ಬಂದು ಏಕಾಏಕಿ ಪ್ರತಿಭಟನೆ ನಡೆಸುವುದು. ಅವರ ಮೇಲೆ ಪೇಪರ್ ಎಸೆಯುವುದು ಚುನಾಯಿತ ಶಾಸಕರಿಗೆ ಗೌರವ ತರುವುದಿಲ್ಲ. ವಿರೋಧ ಪಕ್ಷದಲ್ಲಿರುವ ಬಿಜೆಪಿ ಸದನದಲ್ಲಿ ಸರಕಾರ ಒಂದಾದರೂ ಸಲಹೆ ನೀಡುವ ಕೆಲಸ ಮಾಡಿದೆಯಾ.? ಬಜೆಟ್ ಬಗ್ಗೆ ಇಲ್ಲಸಲ್ಲದ ಮಾತು ಆಡುವುದು ಇವರ ಕೆಲಸವಾಗಿದೆ. ರಾಜ್ಯದ ಎಲ್ಲ ವರ್ಗಗಳಿಗೂ ಸಮಾನಾಂತರವಾಗಿ ಬಜೆಟ್ ಪ್ರಸ್ತುತಪಡಿಸಲಾಗಿದೆಯೇ ಹೊರತು,ಕೇವಲ ಒಂದು ಸಮುದಾಯಕ್ಕೆ ಅಲ್ಲ.

- ಡಾ.ಶರಣಪ್ರಕಾಶ್ ಪಾಟೀಲ್, ಸಚಿವ

ಬಿಜೆಪಿಗೆ ಜನರ ಹಿತ ಬೇಕಿಲ್ಲ

ವಿರೋಧ ಪಕ್ಷದ ಸ್ಥಾನದಲ್ಲಿರುವ ಬಿಜೆಪಿ ಪಕ್ಷದವರಿಗೆ ರಾಜ್ಯದ ಅಭಿವೃದ್ಧಿ ವಿಷಯವಾಗಲಿ ಅಥವಾ ಜನರ ಹಿತದ ವಿಚಾರವಾಗಲಿ ಮಾತನಾಡಲು ಅವರ ಬಳಿ ಆಸಕ್ತಿಯಿಲ್ಲ.ಬಿಜೆಪಿಯ ಬಹುತೇಕ ಶಾಸಕರಿಗೆ ಸದನದ ಬುಡ ಮೇಲು ಬಗ್ಗೆ ಅರಿವಿಲ್ಲ.ಇವರೆಲ್ಲರೂ ಬರೀ ಜಾತಿ ರಾಜಕಾರಣ, ಧರ್ಮದ ರಾಜಕಾರಣ ಮಾಡಿ ವಿಧಾನಸಭೆಗೆ ಬಂದಿದ್ದಾರೆ ಹೊರತು, ರಾಜ್ಯದ ಜನರ ಕಷ್ಟಗಳಿಗೆ ಪರಿಹಾರ ಕಂಡುಕೊಳ್ಳಲು ಬಂದಿಲ್ಲ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಹೇಳಿದರು.

ರಾಷ್ಟ್ರಮಟ್ಟದಲ್ಲೇ ಕಾಯಿದೆ ಜಾರಿಗೆ ಬರಲಿ: ಎಚ್.ಸಿ.ಮಹದೇವಪ್ಪ

ಹನಿಟ್ರ್ಯಾಪ್ ಮಾಡುವವರ ವಿರುದ್ಧ ಕಾನೂನು ಜಾರಿಯಾಗಲಿ

ಮೈಸೂರು: ಹನಿ ಟ್ರ್ಯಾಪ್ ಮಾಡುವವರಿಗೆ ಕಠಿಣ ಶಿಕ್ಷೆಯಾಗುವ ಕಾನೂನು ಜಾರಿಗೆ ಬರಬೇಕು ಎಂದು ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಷ್ಟ್ರ ಮಟ್ಟದಲ್ಲೇ ಈ ಕಾಯಿದೆ ಜಾರಿಗೆ ಬರಬೇಕು. ರಾಜಕೀಯವಾಗಿ ಮಾತ್ರವಲ್ಲ, ಎಲ್ಲಾ ಕ್ಷೇತ್ರದಲ್ಲೂ ಹನಿಟ್ರ್ಯಾಪ್ ಹೆಚ್ಚಾಗುತ್ತಿದೆ. ಖಾಸಗಿ ಕ್ಷಣಗಳನ್ನು ಬಹಿರಂಗ ಮಾಡಿ ವ್ಯಕ್ತಿತ್ವ ಹರಣ ಮಾಡುವ ಸಂಚು ಇದು. ಇದಕ್ಕೆ ತಕ್ಕ ಶಿಕ್ಷೆ ಆಗಬೇಕು. ಸದೃಢ ಕಾಯ್ದೆ ಜಾರಿಗೆ ನನ್ನ ಒತ್ತಾಯ ಇದೆ ಎಂದರು.

ಸಚಿವ ರಾಜಣ್ಣ ಹನಿ ಟ್ರ್ಯಾಪ್ ವಿಚಾರದ ಬಗ್ಗೆ ಉನ್ನತಮಟ್ಟದ ತನಿಖೆಯಾಗುತ್ತದೆ. ತನಿಖೆಯಲ್ಲಿ ಮಾತ್ರ ಯಾರು ಮಾಡಿದರು, ಏನು ಮಾಡಿದರು ಎಂಬುದು ಗೊತ್ತಾಗುತ್ತದೆ. ಸುಮ್ಮನೆ ಊಹಾಪೋಹದ ಮಾತು ಬೇಡ ಎಂದು ತಿಳಿಸಿದರು.

ಹಾಯ್ ಎಂದರೆ ಹಲೋ ಎನ್ನುತ್ತಾರೆ, ಅಲ್ಲಿಂದ ಹನಿ ಟ್ರ್ಯಾಪ್ ಶುರು ಎಂಬ ಡಿ.ಕೆ ಶಿವಕುಮಾರ್ ಹೇಳಿಕೆ ವಿಚಾರ ಕುರಿತು ಪ್ರತಿಕ್ರಿಯೆ ನೀಡಿದ ಅವರು, ಅದೆಲ್ಲಾ ನನಗೆ ಗೊತ್ತಾಗುವುದಿಲ್ಲ. ನಾನು ಎಲ್ಲರಿಗೂ ಹಲೋ ಎನ್ನುತ್ತೇನೆ. ಎಲ್ಲರೂ ನನಗೆ ಪ್ರತಿಕ್ರಿಯೆ ಕೊಡುತ್ತಾರೆ. ಅದರಿಂದಲೇ ಟ್ರ್ಯಾಪ್ ಅನ್ನೋದು ಹೇಗೆ. ನನಗೆ ಅಂತಹ ಯಾವ ವಿಚಾರಗಳು ಗೊತ್ತಾಗುವುದಿಲ್ಲ ಎಂದರು.



ನನ್ನನ್ನು ತುಳಿಯುವ ಪ್ರಯತ್ನ ಯಾರು ಮಾಡುತ್ತಾರೋ, ಮಾಡಿದಾರೋ ಅದು ನನಗೆ ಗೊತ್ತಿಲ್ಲ. ಆದರೆ, ನಾನಂತೂ ಸದೃಢವಾಗಿ ಕುಳಿತಿದ್ದೇನೆ ಎಂದ ಅವರು, ಹನಿ ಟ್ರ್ಯಾಪ್ ವಿಚಾರದಲ್ಲಿ ರಾಜಣ್ಣ ಜತೆ ಪ್ರತ್ಯೇಕ ಸಭೆ ನಡೆಸುವ ಅಗತ್ಯವೇನು ಇಲ್ಲ. ಏಕೆಂದರೆ ಈ ವಿಚಾರ ಈಗಾಗಲೇ ತೀರ್ಮಾನ ಆಗಿದೆ. ಉನ್ನತ ಮಟ್ಟದ ತನಿಖೆ ನಡೆಯಲಿ.

ಎಚ್.ಸಿ.ಮಹದೇವಪ್ಪ, ಸಚಿವ

ನಮ್ಮ ಬಗ್ಗೆ ಬಿಜೆಪಿಗೆ ಯಾಕೆ ಚಿಂತೆ?

ಸಿಎಂ ಸಿದ್ದರಾಮಯ್ಯನವರ ರಾಜಕೀಯ ಆರೋಗ್ಯ ಬಹಳ ಚೆನ್ನಾಗಿದೆ. ನಮ್ಮ ಸರಕಾರದ ಅವಧಿ ಇನ್ನೂ ಮೂರು ವರ್ಷ ಇದೆ. ಸಿದ್ದರಾಮಯ್ಯನವರೇ ಆರ್ಥಿಕ ಸಚಿವರಾಗಿರುವ ಕಾರಣ ಮುಂದಿನ ಮೂರು ಬಜೆಟ್ ಕೂಡ ಅವರೇ ಮಂಡಿಸುತ್ತಾರೆ. ಇದರಲ್ಲಿ ಯಾವ ಅನುಮಾನಗಳು, ಯಾರಿಗೂ ಬೇಡ. ಮತ್ತೆ ಇದು ಪ್ರಶ್ನೆ ಕೇಳುವ ವಿಚಾರವೂ ಅಲ್ಲ. ಅವರೇ ಆರ್ಥಿಕ ಸಚಿವರಾದ ಮೇಲೆ ಅವರೇ ಬಜೆಟ್ ಮಂಡಿಸಬೇಕು ತಾನೇ. ಬಿಜೆಪಿಯವರು ಸುಮ್ಮನೆ ಸಿಎಂ ಬದಲಾವಣೆ ಬಗ್ಗೆ ಮಾತನಾಡುತ್ತಾರೆ. ಅವರು ಮೊದಲು ಅವರ ಪಕ್ಷವನ್ನು ಶಿಸ್ತಾಗಿ ಇಟ್ಟುಕೊಳ್ಳಲಿ. ನಮ್ಮ ಬಗ್ಗೆ ಯಾಕೆ ಅವರಿಗೆ ಚಿಂತೆ ಎಂದು ಸಚಿವ ಎಚ್.ಸಿ.ಮಹದೇವಪ್ಪ ಸೂಚ್ಯವಾಗಿ ನುಡಿದರು.

ಇಕಿಗಾಯಿ ಅರಿಯದೇ ಜಪಾನ್ ಸರಿಯಾಗಿ ಅರ್ಥವಾಗುವುದುಂಟೇ?

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಜಪಾನ್ ಅನ್ನು ಚೆನ್ನಾಗಿ ಮತ್ತು ಸರಿಯಾಗಿ ಅರಿಯಲು ಇಕಿಗಾಯಿಯನ್ನು ಅರ್ಥ ಮಾಡಿಕೊಳ್ಳಬೇಕು ಅಂತಾರೆ. ಇಕಿಗಾಯಿ ಎಂಬುದು ಜಪಾನಿ ಸಂಸ್ಕೃತಿಯಿಂದ ಬಂದಿರುವ ಒಂದು ವಿಶಿಷ್ಟ ತತ್ವ. ಇದು ನಮ್ಮ ಜೀವನದಲ್ಲಿ ಅರ್ಥಪೂರ್ಣತೆ, ಸಂತೋಷ ಮತ್ತು ಉದ್ದೇಶವನ್ನು ಹುಡುಕಲು ಸಹಾಯ ಮಾಡುವ ಒಂದು ತತ್ವ. ಇಕಿಗಾಯಿ ಅಂದರೆ ಜಪಾನಿ ಭಾಷೆಯಲ್ಲಿ 'reason to live' ಎಂದರ್ಥ. ಜಪಾನಿನ ಒಕಿನಾವಾ ದ್ವೀಪದಲ್ಲಿ ಜನರು ದೀರ್ಘ ಆಯಸ್ಸು ಮತ್ತು ಸಂತೋಷದಿಂದ ಬದುಕುತ್ತಾರೆ ಎಂದು ಸಂಶೋಧಕರು ಕಂಡುಹಿಡಿದಿದ್ದಾರೆ. ಕಾರಣ ಇಕಿಗಾಯಿ ಹುಟ್ಟಿದ್ದು ಅಲ್ಲಿ ಮತ್ತು ಅದನ್ನು ಕಡ್ಡಾಯ ಎಂಬಂತೆ ಆಚರಿಸುವುದು ಅಲ್ಲಿಯೇ. ಅವರ ದೀರ್ಘ ಆಯುಷ್ಯದ ಪ್ರಮುಖ ಗುಟ್ಟು ಇಕಿಗಾಯಿ ಎಂಬ ಜೀವನತತ್ವ.

ಇಕಿಗಾಯಿ ಎಂಬುದು ಎರಡು (ಜಪಾನಿ) ಪದಗಳಿಂದ ಕೂಡಿದೆ. ಇಕಿ ಅಂದರೆ ಜೀವಿಸುವುದು ಅಥವಾ ಬದುಕುವುದು ಮತ್ತು ಗಾಯಿ ಅಂದರೆ ಅರ್ಥ, ಕಾರಣ ಅಥವಾ ಮೌಲ್ಯ ಎಂದರ್ಥ. ಅಂದರೆ, 'ಬದುಕಲು ಒಂದು ಕಾರಣ' ಅಥವಾ 'ಬದುಕಿಗೆ ಅರ್ಥ ನೀಡುವ ತತ್ವ' ಎಂಬ ಅರ್ಥವನ್ನು ಹೊಂದಿದೆ. ಇಕಿಗಾಯಿ ಎಂಬುದು 4 ಪ್ರಮುಖ ಅಂಶಗಳನ್ನು ಒಳಗೊಂಡಿದೆ- 1.ನೀನು ಯಾವುದನ್ನು ಪ್ರೀತಿಸುತ್ತೀಯ?, 2.ನೀನು ಯಾವುದರಲ್ಲಿ ನಿಪುಣ?, 3.ಜಗತ್ತಿಗೆ ಏನು ಬೇಕಾಗಿದೆ? ಮತ್ತು 4.ನೀನು ಯಾವ ಕಾರ್ಯಕ್ಕೆ ಹಣ ಗಳಿಸಬಹುದು? ಈ ನಾಲ್ಕು ಅಂಶಗಳು ಒಟ್ಟುಗೂಡಿದಾಗ, ಅದು ನಿಜವಾದ ಇಕಿಗಾಯಿ ಆಗುತ್ತದೆ.

ಇಕಿಗಾಯಿಯು 4 ಅಂಶಗಳ ತಳಹದಿಯಲ್ಲಿ ಕೆಲಸ ಮಾಡುತ್ತದೆ- 1.ಆಸಕ್ತಿ (Passion)- ನೀವು ಪ್ರೀತಿಸುವ ಮತ್ತು ನೀವು ಒಳ್ಳೆಯದಾಗಿರುವ ಕೆಲಸ, 2.ಉದ್ದೇಶ (Mission)- ನೀವು ಪ್ರೀತಿಸುವ ಮತ್ತು ಜಗತ್ತಿಗೆ ಅಗತ್ಯವಾದ ಕೆಲಸ, 3.ವೃತ್ತಿ (Vocation)- ಜಗತ್ತಿಗೆ ಅಗತ್ಯವಿರುವ ಮತ್ತು ನೀವು ಹಣ ಗಳಿಸಬಹುದಾದ ಕೆಲಸ ಮತ್ತು 4.ಉದ್ಯೋಗ (Profession)- ನೀವು ಒಳ್ಳೆಯದಾಗಿರುವ ಮತ್ತು ಹಣ ಗಳಿಸಬಹುದಾದ ವೃತ್ತಿ. ಈ ನಾಲ್ಕರ ಸಮತೋಲನದಿಂದ ಜೀವನದ ಅರ್ಥ ಹಾಗೂ ಸಂತೋಷವನ್ನು ಪಡೆಯಲು ಸಾಧ್ಯ.

ಹಾಗಾದರೆ ಇಕಿಗಾಯಿ ನಮ್ಮ ಜೀವನದಲ್ಲಿ ಹೇಗೆ ಉಪಯುಕ್ತ?

ಇಕಿಗಾಯಿ ನಮ್ಮ ಮಾನಸಿಕ ಆರೋಗ್ಯ, ದೀರ್ಘಾಯುಷ್ಯ ಮತ್ತು ಜೀವನದ ತೃಪ್ತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಇದು ಜಪಾನಿನ ಒಕಿನಾವಾ ಪ್ರದೇಶದ ಜನರ ಆಯುಷ್ಯವನ್ನು ಹೆಚ್ಚಿಸುವ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ. 1.ಮಾನಸಿಕ ತೃಪ್ತಿ (Mental Satisfaction)- ಜೀವನದಲ್ಲಿ ನಾವು ಏನನ್ನು ಮಾಡುತ್ತಿದ್ದರೂ ಅದರಲ್ಲಿ ತೃಪ್ತಿಯಾಗಬೇಕು. ನಮ್ಮ ಹೃದಯ ಮತ್ತು ಮನಸ್ಸು ಸಂಪೂರ್ಣ ತೃಪ್ತಿಯಿಂದ ಕೂಡಿರಬೇಕು. 2.ಆರೋಗ್ಯಕರ ಜೀವನ (Healthy Life)- ಒಕಿನಾವಾದ ಜನರು ಆರೋಗ್ಯಕರ ಜೀವನ ಶೈಲಿಯನ್ನು ಅನುಸರಿಸುತ್ತಾರೆ. ಸರಿಯಾದ ಆಹಾರ, ದಿನನಿತ್ಯದ ಚಟುವಟಿಕೆ ಮತ್ತು ಆನಂದದ ಜೀವನಶೈಲಿ ಇವರುಗಳನ್ನು ಆರೋಗ್ಯದಿಂದ ಇರಿಸುತ್ತಿದೆ. 3.ಉದ್ದೇಶಪೂರ್ಣ ಜೀವನ (Purposeful Living)- ಪ್ರತಿದಿನವೂ ಉತ್ಸಾಹದಿಂದ ಮತ್ತು ಉದ್ದೇಶಪೂರ್ಣ ಜೀವನವನ್ನು ನಡೆಸಲು ಇಕಿಗಾಯಿ ಸಹಾಯ ಮಾಡುತ್ತದೆ. ನಾವು ಜೀವನವನ್ನು ಹೇಗೆ ನಿರ್ವಹಿಸುತ್ತೇವೆ ಎಂಬುದರ ಮೇಲೆ ನಮ್ಮ ಸಂತೋಷ ಮತ್ತು ಯಶಸ್ಸು ಅವಲಂಬಿತವಾಗಿರುತ್ತವೆ.

ಇಕಿಗಾಯಿಯನ್ನು ಹೇಗೆ ಹುಡುಕಬೇಕು?

ನಾವು ನಮ್ಮ ಜೀವನದ ಇಕಿಗಾಯಿಯನ್ನು ಹುಡುಕಲು ಕೆಲವು ಪ್ರಮುಖ ಹಂತಗಳನ್ನು ಅನುಸರಿಸಬಹುದು. 1.ಸ್ವಯಂ ಪ್ರತಿಬಿಂಬ (Self-Reflection)- ನಾನು ಏನನ್ನು ಪ್ರೀತಿಸುತ್ತೇನೆ? ನಾನು ಯಾವ ಕಾರ್ಯದಲ್ಲಿ ಉತ್ತಮ? ನನ್ನ ಜೀವನದ ಗುರಿಯೇನು? ನನ್ನ ಪ್ರತಿದಿನದ ಚಟುವಟಿಕೆ ನನಗೆ ಸಂತೋಷ ತರಿಸುತ್ತಿದೆಯಾ? 2.ಹೊಸ ವಿಷಯಗಳನ್ನು ಅನುಭವಿಸುವುದು (Exploring New Things)- ಹೊಸ ಹವ್ಯಾಸಗಳನ್ನು ಕಲಿಯುವುದು, ಜೀವನದಲ್ಲಿ ಹೊಸ ಅವಕಾಶಗಳನ್ನು ಅನ್ವೇಷಿಸುವುದು, ನಮ್ಮಲ್ಲಿ ಅಡಗಿರುವ ಪ್ರತಿಭೆಯನ್ನು ಬೆಳೆಸುವುದು 3.ಸಂತೋಷದಿಂದ ಕೆಲಸ ಮಾಡುವುದು (Working with Joy)- ನಾವು ಪ್ರೀತಿಸುವ ಮತ್ತು ಆಸಕ್ತಿ ಹೊಂದಿರುವ ಕೆಲಸವನ್ನು ಮಾಡುವುದು, ಹಣಕ್ಕಾಗಿ ಮಾಡದೆ ಕೆಲಸದಲ್ಲಿ ಹೆಚ್ಚು ತೃಪ್ತಿ ಪಡೆಯುವುದು, 4.ಇಕಿಗಾಯಿ ಕಂಡುಹಿಡಿದು ಅದರ ಮೇಲೆ ಕೇಂದ್ರೀಕೃತಗೊಳ್ಳುವುದು, ನಮ್ಮ ಪ್ರೀತಿ, ಪ್ರತಿಭೆ, ಜಗತ್ತಿಗೆ ಬೇಕಾದುದು ಮತ್ತು ಹಣ ಗಳಿಸುವ ಅವಕಾಶ- ಈ ನಾಲ್ಕನ್ನು ಸಮತೋಲನದಲ್ಲಿಟ್ಟುಕೊಂಡು ಜೀವನ ನಡೆಸುವುದು.

ಇಕಿಗಾಯಿಯ ಪ್ರಯೋಜನಗಳೇನು?

1.ದೀರ್ಘ ಆಯುಷ್ಯ (Longevity)- ಒಕಿನಾವಾದ ಜನರು 100 ವರ್ಷಕ್ಕೂ ಹೆಚ್ಚು ಕಾಲ ಬದುಕುತ್ತಾರೆ. 2.ಆನಂದಮಯ ಜೀವನ (Happiness)- ಜೀವನದಲ್ಲಿ ಮನಸ್ಸಿಗೆ ಸಂತೋಷ ನೀಡುವ ಕೆಲಸವನ್ನು ಮಾಡುವುದರಿಂದ ಒತ್ತಡ ಕಡಿಮೆಯಾಗುತ್ತದೆ. 3. ಆರೋಗ್ಯ (Health Benefits)- ಒತ್ತಡ ಕಡಿಮೆಯಾದಾಗ ನಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯ ಉತ್ತಮವಾಗಿರುತ್ತದೆ. 4.ಸಂತೋಷ ಮತ್ತು ಸಮಾಧಾನ (Inner Peace & Fulfillment)- ಜೀವನದಲ್ಲಿ ಸದಾ ಹೋರಾಟದ ಬದಲು ಶಾಂತಿ ಮತ್ತು ಸಮಾಧಾನ ದೊರಕುತ್ತದೆ. 5.ಸೃಜನಶೀಲತೆ ಮತ್ತು ಉತ್ಸಾಹ (Creativity & Enthusiasm)- ನಿಮ್ಮ ಕೆಲಸ ಮತ್ತು ಜೀವನಕ್ಕೆ ಹೊಸ ಐಡಿಯಾಗಳನ್ನು ಅನ್ವೇಷಿಸಲು ಪ್ರೇರಣೆ ಸಿಗುತ್ತದೆ.

ಇಕಿಗಾಯಿ ಒಂದು ಸುಂದರವಾದ ಜೀವನ ತತ್ವ. ನಾವು ಏನನ್ನು ಪ್ರೀತಿಸುತ್ತೇವೆ, ಯಾವುದರಲ್ಲಿ ಉತ್ತಮ, ಸಮಾಜಕ್ಕೆ ಏನು ಬೇಕು ಮತ್ತು ಹಣ ಗಳಿಸಲು ಬಳಸುವ ಮಾರ್ಗ ಯಾವುದು ಎಂಬುದನ್ನು ಹುಡುಕಿ, ಇಕಿಗಾಯಿಯ ಮಾರ್ಗದಲ್ಲಿ ಸಾಗಿದರೆ, ನಮ್ಮ ಜೀವನ ಅರ್ಥಪೂರ್ಣವಾಗುತ್ತದೆ. ನಾವು ಪ್ರತಿದಿನವೂ ಸಂತೋಷದಿಂದ, ಉತ್ಸಾಹದಿಂದ ಮತ್ತು ಉದ್ದೇಶಪೂರ್ಣವಾಗಿ ಬದುಕಿದರೆ, ಅದು ನಿಜವಾದ ಇಕಿಗಾಯಿ!

ಗ್ರೇಟರ್ ಟೋಕಿಯೋ

ಅಚ್ಚರಿಯಾಗಬಹುದು, ಜಪಾನಿನ ಗ್ರೇಟರ್ ಟೋಕಿಯೋ ಜಗತ್ತಿನ ಅತಿ ದೊಡ್ಡ ಮಹಾನಗರ. ಜಪಾನಿನ ರಾಜಧಾನಿ ಟೋಕಿಯೋ ಮಾತ್ರವಲ್ಲ, ಅದನ್ನು ಒಳಗೊಂಡಿರುವ ದೊಡ್ಡ ಭೌಗೋಳಿಕ ಪ್ರದೇಶವಾದ ಗ್ರೇಟರ್ ಟೋಕಿಯೋ ಪ್ರಪಂಚದ ಅತಿದೊಡ್ಡ ನಗರ ಪ್ರದೇಶವಾಗಿದೆ. ಇದು ಸುಮಾರು 37 ದಶಲಕ್ಷ (3.7 ಕೋಟಿಗೂ ಹೆಚ್ಚು) ಜನರನ್ನು ಹೊಂದಿದ್ದು, ವಿಶ್ವದ ಅತಿ ಜನಸಾಂದ್ರತೆ (Population Density) ಹೊಂದಿರುವ ಪ್ರದೇಶಗಳಲ್ಲಿ ಒಂದಾಗಿದೆ.

ಗ್ರೇಟರ್ ಟೋಕಿಯೋ, ಟೋಕಿಯೋದ ಕೇಂದ್ರಭಾಗ ಮಾತ್ರವಲ್ಲ, ಅದನ್ನು ಸುತ್ತುವರಿದ ಕಾನಗಾವಾ, ಸೈತಾಮಾ, ಚಿಬಾ ಸೇರಿದಂತೆ ಹಲವು ಪ್ರದೇಶಗಳನ್ನು ಒಳಗೊಂಡಿದೆ. ಇದು ಜಪಾನಿನ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ತಂತ್ರಜ್ಞಾನ ಕೇಂದ್ರವಾಗಿದೆ. ಗ್ರೇಟರ್ ಟೋಕಿಯೋದ ಭೌಗೋಳಿಕ ಒಟ್ಟೂ ವಿಸ್ತೀರ್ಣ 13,500 ಚದರ ಕಿಮೀ. ಜನಸಾಂದ್ರತೆ ಪ್ರತಿ ಚದರ ಕಿಲೋಮೀಟರ್‌ಗೆ 5 ಸಾವಿರಕ್ಕೂ ಅಧಿಕ. ಟೋಕಿಯೋ (ಹಳೆಯ ಹೆಸರು ಎಡೋ- Edo) ಆರಂಭದಲ್ಲಿ ಮೀನುಗಾರರ ಹಳ್ಳಿಯಾಗಿತ್ತು. 1603ರಲ್ಲಿ, ಟೋಕುಗಾವಾ ಶೋಗುನೇಟ್ ರಾಜವಂಶವು ಟೋಕಿಯೋವನ್ನು (ಎಡೋ) ಜಪಾನಿನ ರಾಜಧಾನಿಯನ್ನಾಗಿ ಮಾಡಿತು. 1868ರಲ್ಲಿ, ಜಪಾನಿನ ರಾಜಧಾನಿ ಕ್ಯೋಟೋದಿಂದ ಟೋಕಿಯೋಕ್ಕೆ ವರ್ಗಾಯಿಸಲಾಯಿತು.

1930ರ ದಶಕದಲ್ಲಿ, ಟೋಕಿಯೋ ಮತ್ತು ಅದನ್ನು ಸುತ್ತುವರಿದ ನಗರಗಳು ಅಭಿವೃದ್ಧಿಯಾಗತೊಡಗಿದವು. 1950ರ ನಂತರ, ಜಪಾನ್‌ನ ಆರ್ಥಿಕ ಪುನಶ್ಚೇತನದ ಭಾಗವಾಗಿ ಗ್ರೇಟರ್ ಟೋಕಿಯೋ ಭಾರಿ ಪ್ರಮಾಣದಲ್ಲಿ ವಿಸ್ತಾರಗೊಂಡಿತು. 1990ರ ನಂತರ ತಂತ್ರಜ್ಞಾನ ಮತ್ತು ಆರ್ಥಿಕ ಅಭಿವೃದ್ಧಿಯಿಂದ, ಅತ್ಯಂತ ವೇಗವಾಗಿ ಮಹಾನಗರವಾಗಿ ರೂಪುಗೊಂಡಿತು. ಇಂದು, ಟೋಕಿಯೋ ಜಗತ್ತಿನ ಅತ್ಯಾಧುನಿಕ ನಗರ ಪ್ರದೇಶಗಳಲ್ಲಿ ಒಂದಾಗಿದೆ, ತಂತ್ರಜ್ಞಾನ, ಆರ್ಥಿಕತೆ, ಶಿಕ್ಷಣ ಮತ್ತು ಸಂಸ್ಕೃತಿಯ ಕೇಂದ್ರವಾಗಿದೆ.

ಗ್ರೇಟರ್ ಟೋಕಿಯೋ ಜಗತ್ತಿನ ಅತ್ಯಂತ ಶ್ರೀಮಂತ ನಗರ ಪ್ರದೇಶಗಳಲ್ಲಿ ಒಂದು. ಟೋಕಿಯೋದ ಒಟ್ಟು ಜಿಡಿಪಿ ಸುಮಾರು 2 ಟ್ರಿಲಿಯನ್ ಡಾಲರ್. ಇದು ಜರ್ಮನಿ ಅಥವಾ ಬ್ರಿಟನ್ ದೇಶಗಳ ಜಿಡಿಪಿಗೆ ಸಮವಾಗಿದೆ. ಸೋನಿ, ಪ್ಯಾನಸೋನಿಕ್, ಹಿಟಾಚಿ, ಟೊಯೋಟಾ ಮುಂತಾದ ಜಗತ್ತಿನ ತಂತ್ರಜ್ಞಾನ ಕಂಪನಿಗಳ ಕೇಂದ್ರವೂ ಹೌದು. ಟೋಕಿಯೋ ಸ್ಟಾಕ್ ಎಕ್ಸ್‌ಚೇಂಜ್ ಜಗತ್ತಿನ ಎರಡನೇ ಅತಿ ದೊಡ್ಡ ಷೇರು ಮಾರುಕಟ್ಟೆ. ಟೋಕಿಯೋ ವಿಮೆ, ವಿದೇಶಿ ವಹಿವಾಟು, ಆಮದು-ರಫ್ತು ಕೇಂದ್ರವಾಗಿದೆ. ಟೋಕಿಯೋ ಉದ್ದಿಮೆಗಳ ಕೇಂದ್ರವೂ ಹೌದು. ಜಪಾನಿನ ಮೊದಲ 500 ದೊಡ್ಡ ಕಂಪನಿಗಳ ಪೈಕಿ 300ಕ್ಕೂ ಹೆಚ್ಚು ಗ್ರೇಟರ್ ಟೋಕಿಯೋದಲ್ಲಿ ನೆಲೆಸಿವೆ.

ಗ್ರೇಟರ್ ಟೋಕಿಯೋ ಅತ್ಯಂತ ಆಧುನಿಕ ನಗರವಲ್ಲದೇ ಸಂಸ್ಕೃತಿಯ ಬೀಡು ಕೂಡಾ. ಟೋಕಿಯೋ ಮೆಟ್ರೋ ಜಗತ್ತಿನ ಅತ್ಯಂತ ತೊಡಕುರಹಿತ ಸಾರಿಗೆ ವ್ಯವಸ್ಥೆಯನ್ನು ಹೊಂದಿದೆ. ಜಪಾನಿನ ವೇಗದ ರೈಲುಗಳು (ಶಿಂಕನ್ಸೆನ್) ಮತ್ತು ಅತಿ ದೊಡ್ಡ ವಿಮಾನ ನಿಲ್ದಾಣಗಳು (ನರಿತಾ ಮತ್ತು ಹನೇಡಾ) ಸಹ ಟೋಕಿಯೋದಲ್ಲಿದೆ. ಗ್ರೇಟರ್ ಟೋಕಿಯೋ, ಜಪಾನ್‌ನ ಅತ್ಯಂತ ಜನಸಂಖ್ಯೆ ಹೊಂದಿರುವ, ಆರ್ಥಿಕವಾಗಿ ಅಗ್ರಗಣ್ಯ, ತಂತ್ರಜ್ಞಾನ ಮತ್ತು ಸಂಸ್ಕೃತಿಯ ಕೇಂದ್ರ. ಇದನ್ನು ಭವಿಷ್ಯದ ನಗರವೆಂದು ಪರಿಗಣಿಸಲಾಗುತ್ತಿದೆ ಮತ್ತು ಇದರ ನಿರ್ವಹಣೆ, ಪರಿಸರ ಸಂರಕ್ಷಣಾ ಯೋಜನೆಗಳು, ಆಧುನಿಕ ವ್ಯವಸ್ಥೆಗಳು ಜಗತ್ತಿಗೆ ಮಾದರಿಯಾಗಿವೆ. ಈ ನಗರ, ಜಪಾನಿನ ಪ್ರಗತಿಯನ್ನು ಪ್ರತಿಬಿಂಬಿಸುವ ಅತ್ಯಂತ ಪ್ರಮುಖ ಸ್ಥಳವಾಗಿದೆ ಮತ್ತು ಮುಂದಿನ ದಶಕಗಳಲ್ಲಿ ಇದು ಇನ್ನಷ್ಟು ವಿಸ್ತರಿಸಿ, ಭವಿಷ್ಯದ ನಗರವಾಗಲಿದೆ!

ಕೈತಟ್ಟಿ ದೇವರನ್ನು ಎಚ್ಚರಿಸುವ ಪರಿ

ಜಪಾನಿನ ದೇಗುಲಗಳಲ್ಲಿ (Shrine) ಪೂಜೆ ಸಲ್ಲಿಸುವಾಗ ಕೈ ತಟ್ಟಿ ಪ್ರಾರ್ಥಿಸುವ ಸಂಪ್ರದಾಯವು ವಿಶೇಷವಾದ ಆಚರಣೆಯಾಗಿದ್ದು, ಇದರ ಹಿಂದಿರುವ ಅರ್ಥ ಮತ್ತು ಪ್ರಕ್ರಿಯೆಯು ಆ ದೇಶದ ಸಂಸ್ಕೃತಿಗೆ ಆಳವಾಗಿ ಜೋಡಿಸಿಕೊಂಡಿದೆ. ಈ ಪದ್ಧತಿ ಶಿಂಟೋ ಧರ್ಮದ ಪ್ರಭಾವದಿಂದ ಪ್ರಚಲಿತವಾಗಿದೆ. ಅದು ಜಪಾನಿನ ಮೂಲ ಧರ್ಮಗಳಲ್ಲಿ ಒಂದು. ಈ ಸಂಪ್ರದಾಯದ ಮೂಲಕ ಭಕ್ತರು ದೇವತೆಗಳಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ ಮತ್ತು ತಮ್ಮ ಮನೋವ್ಯಾಕುಲತೆಗಳನ್ನು ಸಮರ್ಪಿಸುತ್ತಾರೆ.

ದೇಗುಲ ಪ್ರವೇಶಿಸುವ ಮುನ್ನ, ಭಕ್ತರು ತಮ್ಮನ್ನು ಸ್ವಚ್ಛಪಡಿಸಿಕೊಳ್ಳಲು ಶುದ್ಧೀಕರಣ ಪ್ರಕ್ರಿಯೆಯನ್ನು ಅನುಸರಿಸುತ್ತಾರೆ. ಅದಕ್ಕಾಗಿ ಶುದ್ಧೀಕರಣ ಸ್ಥಳದಲ್ಲಿ ತಮ್ಮ ಕೈ ಮತ್ತು ಬಾಯಿ ತೊಳೆಯುವ ಸಂಪ್ರದಾಯವಿದೆ. ದೇವರ ಕೃಪೆಯನ್ನು ಅರಸುವ ಭಕ್ತರು ಮೊದಲು ದೇಗುಲದ ಎದುರಿನ ದಾನಪೆಟ್ಟಿಗೆಯಲ್ಲಿ ನಾಣ್ಯ ಅರ್ಪಿಸುತ್ತಾರೆ. ಸಾಮಾನ್ಯವಾಗಿ ಐದು ಯೆನ್ ನಾಣ್ಯವನ್ನು ಹಾಕುವುದು ಶುಭಕರವಂತೆ. ಏಕೆಂದರೆ 'ಗೊ-ಎನ್' (5 yen) ಶಬ್ದವು 'ಸಯೋಗ' (ಸಹಕಾರ ಅಥವಾ ಉತ್ತಮ ಸಂಬಂಧ) ಎಂಬ ಶಬ್ದದಂತೆ ಕೇಳಿಸುತ್ತದೆ.

ಕೆಲವು ದೇಗುಲಗಳಲ್ಲಿ ಶ್ರದ್ಧಾಳುಗಳು ದೊಡ್ಡ ಗಂಟೆಯನ್ನು ಎಳೆದು ಶಬ್ದ ಮಾಡುತ್ತಾರೆ. ಈ ಶಬ್ದವು ದೇವತೆಗಳ ಗಮನವನ್ನು ಸೆಳೆಯಲು ಮತ್ತು ಅವರ ದಿವ್ಯ ಆಶೀರ್ವಾದವನ್ನು ಕೋರಲು ನೆರವಾಗುತ್ತದೆ. ಭಕ್ತರು ದೇವತೆಗಳ ಮುಂದೆ 2 ಬಾರಿ ನಮನ ಮಾಡುತ್ತಾರೆ. ಇದು ಶ್ರದ್ಧೆ ಮತ್ತು ಗೌರವವನ್ನು ಸೂಚಿಸುತ್ತದೆ. ಭಕ್ತರು ತಮ್ಮ ಕೈಗಳನ್ನು 2 ಬಾರಿ ತಟ್ಟಿ, ದೇವತೆಗಳ ಗಮನವನ್ನು ಸೆಳೆಯುತ್ತಾರೆ ಮತ್ತು ಪ್ರಾರ್ಥನೆಗಳನ್ನು ದೇವರ ಎದುರು ಸಮರ್ಪಿಸುತ್ತಾರೆ. ಕೈ ತಟ್ಟುವ ಶಬ್ದವು ದೇವತೆಗಳಿಗೆ ತಮ್ಮ ಹಾಜರಾತಿ ಮತ್ತು ಇಚ್ಛೆಗಳನ್ನು ಸಾರುವ ಸಂಕೇತವಾಗಿದೆ. ಅಂತಿಮವಾಗಿ, ಭಕ್ತರು ಇನ್ನೊಮ್ಮೆ ನಮಸ್ಕಾರ ಮಾಡುವ ಮೂಲಕ ಪ್ರಾರ್ಥನೆಯನ್ನು ಪೂರ್ಣಗೊಳಿಸುತ್ತಾರೆ.

ಕೈ ತಟ್ಟುವ ಪ್ರಕ್ರಿಯೆಯು ಹಲವು ಆಂತರಿಕ ಮತ್ತು ಆಧ್ಯಾತ್ಮಿಕ ಅರ್ಥಗಳನ್ನು ಹೊಂದಿದೆ. ದೇಗುಲಗಳ ಪ್ರದೇಶವು ಶಾಂತಿ ಮತ್ತು ಶುದ್ಧತೆಯಿಂದ ಕೂಡಿರುವುದರಿಂದ ಭಕ್ತರು ಕೈ ತಟ್ಟುವ ಮೂಲಕ, ತಮ್ಮ ಪ್ರಾರ್ಥನೆಗಳಿಗೆ ದೇವತೆಗಳ ಕೃಪೆ ಬೇಡುವ ಮೂಲಕ ಅವರ ಗಮನ ಸೆಳೆಯುತ್ತಾರೆ. ಕೈ ತಟ್ಟುವ ಶಬ್ದವು ಭಕ್ತರ ಆಂತರಿಕ ಶುದ್ಧೀಕರಣವನ್ನು ಪ್ರತಿನಿಧಿಸುತ್ತದೆ. ಅಷ್ಟೇ ಅಲ್ಲ, ಎರಡು ಕೈಗಳನ್ನು ಒಟ್ಟಿಗೆ ತಟ್ಟುವುದು ಜನರ ಹೃದಯ ಮತ್ತು ಮನಸ್ಸಿನ ಏಕತೆಯನ್ನು ತೋರಿಸುತ್ತದೆ. ಕೈ ತಟ್ಟುವ ಪದ್ಧತಿಯು ಶಿಂಟೋ ಧರ್ಮದ ಮೂಲತತ್ತ್ವಗಳನ್ನು ಪ್ರತಿಬಿಂಬಿಸುತ್ತದೆ. ಶಿಂಟೋ ಧರ್ಮವು ಪ್ರಕೃತಿಯೊಂದಿಗೆ ಒಗ್ಗಟ್ಟನ್ನು, ಶುದ್ಧಿಯನ್ನು ಮತ್ತು ಸಮರ್ಪಣಾ ಭಾವವನ್ನು ವ್ಯಕ್ತಪಡಿಸುತ್ತದೆ. ಇವನ್ನೆಲ್ಲ ಗಮನಿಸಿದಾಗ, ನಮ್ಮ ಸಂಪ್ರದಾಯ ಮತ್ತು ಆಚರಣೆಗೂ, ಅವರ ಆಚರಣೆಗೂ ಹೆಚ್ಚು ವ್ಯತ್ಯಾಸವಿಲ್ಲದಿರುವುದು ಅರಿವಾಗುತ್ತದೆ.

ಶಾಕಾಹಾರ ಸಂಸ್ಕೃತಿ

ಸೋಜಿಗವೆನಿಸಬಹುದು, 1400 ವರ್ಷಗಳ ಕಾಲ ಜಪಾನ್ ಶಾಕಾಹಾರವನ್ನು ಪಾಲಿಸಿತ್ತು. ಶಾಕಾಹಾರ ಪದ್ಧತಿಯು ಜಪಾನಿನ ಜನಜೀವನದಲ್ಲಿ ಶಾಂತಿ, ಸಾಮರಸ್ಯ, ಸಮೃದ್ಧಿಯನ್ನು ಬೆಳೆಸಿದ ಮುಖ್ಯ ಅಂಶವಾಗಿತ್ತು. ಜಪಾನ್ ತನ್ನ ಐತಿಹಾಸಿಕ ಪೌಷ್ಟಿಕ ಪದ್ಧತಿಯ ಮೂಲಕ ಅನೇಕ ಶತಮಾನಗಳ ಕಾಲ ಶಾಕಾಹಾರವನ್ನು ಅನುಸರಿಸುತ್ತಿತ್ತು. ಜಪಾನಿನಲ್ಲಿ ಶಾಕಾಹಾರ ಪದ್ಧತಿ ಹರಿದುಬಂದದ್ದಕ್ಕೆ ಪ್ರಮುಖ ಕಾರಣಗಳಿವೆ. ಅದಕ್ಕೆ ಬೌದ್ಧ ಧರ್ಮ ಮತ್ತು ಶಿಂಟೋ ಧರ್ಮದ ಪ್ರಭಾವ ಗಾಢವಾಗಿರುವುದು ಮುಖ್ಯ ಕಾರಣಗಳಲ್ಲೊಂದು. 6ನೇ ಶತಮಾನದ ವೇಳೆಗೆ ಬೌದ್ಧ ಧರ್ಮ ಜಪಾನ್ ದೇಶದಲ್ಲಿ ಪ್ರವೇಶಿಸಿ, ಆರ್ಥಿಕ ಮತ್ತು ಧಾರ್ಮಿಕ ವ್ಯವಸ್ಥೆಯನ್ನು ರೂಪಿಸುತ್ತಿದ್ದಾಗ, ಬೌದ್ಧ ಧರ್ಮವು ಶಾಕಾಹಾರ ಜೀವನಶೈಲಿಯನ್ನು ಉತ್ತೇಜಿಸಿತು. ಬೌದ್ಧ ಧರ್ಮದಲ್ಲಿ 'ಅಹಿಂಸಾ' ಎಂಬ ತತ್ವವು ಪ್ರಾಣಿ ಹತ್ಯೆಯನ್ನು ಕಠಿಣವಾಗಿ ವಿರೋಧಿಸುತ್ತಿತ್ತು.

ಶಿಂಟೋ ಧರ್ಮವು ಪ್ರಕೃತಿ ಮತ್ತು ಜೀವಿಗಳೊಂದಿಗೆ ಸಮತ್ವವನ್ನು ಪ್ರತಿಪಾದಿಸುವ ಧರ್ಮ. ಶಿಂಟೋ ಸಂಪ್ರದಾಯದಲ್ಲಿ ಪ್ರಾಣಿಗಳ ಹತ್ಯೆಯನ್ನು ಶುಚಿತ್ವದ ವಿರುದ್ಧವೆಂದು ಪರಿಗಣಿಸಲಾಗುತ್ತಿತ್ತು. ಇದರಿಂದ ಜನರು ಮಾಂಸಾಹಾರದಿಂದ ದೂರ ಉಳಿಯುವಂತಾದರು. 675ರಲ್ಲಿ ಚಕ್ರವರ್ತಿ ಟೆನ್ಮು ಮಾಂಸಾಹಾರದ ಮೇಲೆ ನಿರ್ಬಂಧ ವಿಧಿಸಿದ. ಈ ಆದೇಶದ ಪ್ರಕಾರ, ಗೋಮಾಂಸ, ಹಂದಿಮಾಂಸ, ಶ್ವಾನಮಾಂಸ, ಕೋಣ ಮತ್ತು ಮೊಲ ಮುಂತಾದ ಪ್ರಾಣಿಗಳ ಮಾಂಸ ಸೇವನೆ ನಿರ್ಬಂಧಿತವಾಗಿತ್ತು. ಈ ನಿಯಮ ಜಪಾನಿನ ಜನಸಾಮಾನ್ಯರು ಶಾಕಾಹಾರವನ್ನು ಅಳವಡಿಸಿಕೊಳ್ಳಲು ಕಾರಣವಾಯಿತು. ಶಾಕಾಹಾರ ಪದ್ಧತಿ ಕಡಿಮೆ ಕೊಬ್ಬಿನ ಆಹಾರವನ್ನು ಒದಗಿಸುತ್ತಿದ್ದರಿಂದ, ಜನರಲ್ಲಿ ಹೃದಯ ಸಂಬಂಧಿ ಕಾಯಿಲೆಗಳು ಕಡಿಮೆಯಾಗಿದ್ದವು. ಜಪಾನ್ ವಿಶ್ವದಲ್ಲೇ ಅತಿ ಹೆಚ್ಚು ಆಯುಷ್ಯ ಹೊಂದಿರುವ ದೇಶಗಳಲ್ಲಿ ಒಂದಾಗಿದ್ದು, ಇದಕ್ಕೆ ಶಾಕಾಹಾರ ಸಹ ಪ್ರಮುಖ ಕಾರಣವಾಗಿದೆ.

ಜಪಾನಿನ ಶಾಕಾಹಾರ ಸಂಸ್ಕೃತಿ 19ನೇ ಶತಮಾನದಲ್ಲಿ ಬದಲಾವಣೆಗೆ ಒಳಗಾದಾಗ, ಪಾಶ್ಚಾತ್ಯ ಪ್ರಭಾವವು ಜನರಲ್ಲಿ ಮಾಂಸಾಹಾರದ ಪ್ರವೃತ್ತಿಯನ್ನು ಉತ್ತೇಜಿಸಿತು. ಮೆಜಿ ಪುನಶ್ಚೇತನ (Meiji Restoration) ಕಾಲದಲ್ಲಿ ಚಕ್ರವರ್ತಿ ಮೆಜಿ ಜನರನ್ನು ಮಾಂಸಾಹಾರ ಸೇವನೆಗೆ ಪ್ರೋತ್ಸಾಹಿಸಿದ. ಇದರಿಂದ, ಪಾಶ್ಚಾತ್ಯ ಮಾಂಸಾಹಾರ ಪದ್ಧತಿ ಜಪಾನಿನ ಆಹಾರ ಸಂಸ್ಕೃತಿಯಲ್ಲಿ ಪ್ರವೇಶಿಸಿತು. ಆಧುನಿಕ ಜಪಾನಿನಲ್ಲಿ ಮಾಂಸಾಹಾರ ವ್ಯಾಪಕವಾಗಿರುವುದಾದರೂ, ಶಾಕಾಹಾರ ಪ್ರಿಯರು ಈಗಲೂ ಇದ್ದಾರೆ. ಅವರಿಂದಾಗಿ ಇನ್ನೂ ಶಾಕಾಹಾರ ಪದ್ಧತಿ ವ್ಯಾಪಕವಾಗಿದೆ. ವಿಶೇಷವಾಗಿ 'ಶೋಜಿನ್ ರಿಯೋರಿ' (Shojin Ryori) ಎಂಬ ಬೌದ್ಧ ಸನ್ಯಾಸಿಗಳ ಶಾಕಾಹಾರ ಪದ್ಧತಿಯನ್ನು ಇಂದಿಗೂ ಅವೆಷ್ಟೋ ಮಂದಿ ಅನುಸರಿಸುತ್ತಾರೆ.

ಬೆತ್ತಲೆ ಸ್ನಾನ

ಜಪಾನಿನಲ್ಲಿ ಜನ ಬೆತ್ತಲೆಯಾಗಿ ಸ್ನಾನ ಮಾಡುತ್ತಾರೆ ಅಂದ್ರೆ, ತಕ್ಷಣ ಯಾರೂ ನಂಬಲಿಕ್ಕಿಲ್ಲ. ಈ ಸಂಸ್ಕೃತಿಯು ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿರುವ ಖಾಸಗಿ ಸ್ನಾನದ ಪರಿಕಲ್ಪನೆಗಿಂತ ಬಹಳ ಭಿನ್ನವಾಗಿದೆ. ಇದರಲ್ಲಿ, ಜನರು ಒಟ್ಟಿಗೆ, ಬಟ್ಟೆಗಳಿಲ್ಲದೇ ಸ್ನಾನ ಮಾಡುತ್ತಾರೆ. ಇದನ್ನು 'ಸೆಂಟೋ' ಅಥವಾ 'ಒನ್ಸೆನ್' ಎಂದು ಕರೆಯಲಾಗುತ್ತದೆ. ಸೆಂಟೋ ಮತ್ತು ಒನ್ಸೆನ್‌ಗೆ ವ್ಯತ್ಯಾಸವಿದೆ. ಸೆಂಟೋ ಅಂದ್ರೆ ನಗರ ಪ್ರದೇಶಗಳಲ್ಲಿರುವ ಸಾರ್ವಜನಿಕ ಸ್ನಾನದ ಮನೆಗಳು. ಇವುಗಳಲ್ಲಿ ನೀರನ್ನು ಬಿಸಿ ಮಾಡಿ ಬಳಸಲಾಗುತ್ತದೆ. ಇವು ಸಾಮಾನ್ಯವಾಗಿ ಮನೆಗಳಲ್ಲಿ ಸ್ನಾನದ ವ್ಯವಸ್ಥೆ ಇಲ್ಲದವರಿಗೆ ಅಥವಾ ಸಾಮಾಜಿಕವಾಗಿ ಒಟ್ಟಿಗೆ ಸೇರಲು ಬಯಸುವವರಿಗೆ ಒಂದು ಸ್ಥಳವಾಗಿದೆ. ಒನ್ಸೆನ್ ಅಂದರೆ ನೈಸರ್ಗಿಕ ಬಿಸಿನೀರಿನ ಬುಗ್ಗೆಗಳು. ಇವು ಸಾಮಾನ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುತ್ತವೆ. ಒನ್ಸೆನ್‌ನಲ್ಲಿ ಸ್ನಾನ ಮಾಡುವುದು ಸ್ವಚ್ಛತೆಗಾಗಿ ಮಾತ್ರವಲ್ಲ, ಆರೋಗ್ಯಕ್ಕೂ ಒಳ್ಳೆಯದು.

ಇಲ್ಲಿ ಸ್ನಾನ ಮಾಡುವ ಮೊದಲು, ಎಲ್ಲರೂ ತಮ್ಮ ಬಟ್ಟೆಗಳನ್ನು ತೆಗೆದು, ಲಾಕರ್‌ಗಳಲ್ಲಿ ಇಡಬೇಕು. ಒಂದು ಸಣ್ಣ ಟವೆಲನ್ನು ಮಾತ್ರ ತೆಗೆದುಕೊಂಡು ಸ್ನಾನದ ಸ್ಥಳಕ್ಕೆ ಹೋಗಬೇಕು. ನಂತರ, ಒಂದು ಸಣ್ಣ ಸ್ಟೂಲ್ ಮೇಲೆ ಕುಳಿತು, ಸೋಪು ಮತ್ತು ಟವೆಲ್ ಬಳಸಿ ದೇಹವನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಿಕೊಳ್ಳಬೇಕು. ಇದು ಸ್ನಾನದ ನೀರಿನ ಶುಚಿತ್ವವನ್ನು ಕಾಪಾಡಲು ಬಹಳ ಮುಖ್ಯ. ದೇಹವನ್ನು ಸ್ವಚ್ಛಗೊಳಿಸಿದ ನಂತರ, ಬಿಸಿನೀರಿನ ತೊಟ್ಟಿಗೆ ಇಳಿಯಬಹುದು. ಒನ್ಸೆನ್‌ನಲ್ಲಿ ವಿವಿಧ ರೀತಿಯ ತೊಟ್ಟಿಗಳಿರುತ್ತವೆ, ಅವುಗಳಲ್ಲಿ ವಿವಿಧ ತಾಪಮಾನದ ನೀರು ಮತ್ತು ಖನಿಜಗಳು ಇರುತ್ತವೆ. ಸ್ನಾನದ ನಂತರ, ವಿಶ್ರಾಂತಿ ಕೋಣೆಯಲ್ಲಿ ಕುಳಿತು ಚಹಾ ಅಥವಾ ತಂಪು ಪಾನೀಯಗಳನ್ನು ಕುಡಿಯಬಹುದು.

ಜಪಾನಿನಲ್ಲಿ, ಸಾರ್ವಜನಿಕ ಸ್ನಾನವು ಕೇವಲ ಸ್ವಚ್ಛತೆಗಾಗಿ ಮಾತ್ರವಲ್ಲ, ಸಾಮಾಜಿಕ ಸಂವಹನಕ್ಕೂ ಸಹಕಾರಿ. ಜನರು ಇಲ್ಲಿ ಒಟ್ಟಿಗೆ ಸೇರಿ, ತಮ್ಮ ದಿನನಿತ್ಯದ ಜೀವನದ ಬಗ್ಗೆ ಮಾತನಾಡುತ್ತಾರೆ. ಇದು ಸಮುದಾಯದ ಭಾವನೆಯನ್ನು ಬೆಳೆಸುತ್ತದೆ. ಒನ್ಸೆನ್‌ನಲ್ಲಿ, ಪ್ರಕೃತಿಯ ನಡುವೆ ಸ್ನಾನ ಮಾಡುವುದರಿಂದ ಮನಸ್ಸಿಗೆ ಶಾಂತಿ ಮತ್ತು ನೆಮ್ಮದಿ ಸಿಗುತ್ತದೆ. ಜಪಾನಿನಲ್ಲಿ, ಶುಚಿತ್ವಕ್ಕೆ ಬಹಳ ಪ್ರಾಮುಖ್ಯ ನೀಡಲಾಗುತ್ತದೆ. ಸಾರ್ವಜನಿಕ ಸ್ನಾನವು ಈ ಸಂಸ್ಕೃತಿಯ ಒಂದು ಭಾಗವಾಗಿದೆ. ಶತಮಾನಗಳಿಂದಲೂ, ಜನರು ಒಟ್ಟಿಗೆ ಸ್ನಾನ ಮಾಡುತ್ತಾ ಬಂದಿದ್ದಾರೆ. ಇದು ಒಂದು ಸಂಪ್ರದಾಯವಾಗಿ ಉಳಿದುಕೊಂಡು ಬಂದಿದೆ. ಜಪಾನಿನ ಶಿಂಟೋ ಮತ್ತು ಬೌದ್ಧ ಧರ್ಮಗಳಲ್ಲಿ ಶುದ್ಧೀಕರಣಕ್ಕೆ ಹೆಚ್ಚಿನ ಮಹತ್ವವಿದೆ. ಈ ಧಾರ್ಮಿಕ ನಂಬಿಕೆಗಳು ಸಾರ್ವಜನಿಕ ಸ್ನಾನದ ಸಂಸ್ಕೃತಿಯನ್ನು ಪ್ರಭಾವಿಸಿವೆ.

ಮೊದಲ ಬಾರಿಗೆ ಸಾರ್ವಜನಿಕ ಸ್ನಾನಕ್ಕೆ ಹೋಗುವವರು, ಸ್ವಲ್ಪ ಮುಜುಗರ ಅನುಭವಿಸಬಹುದು. ಆದರೆ, ಇದು ಅಲ್ಲಿನ ಸಂಸ್ಕೃತಿಯ ಒಂದು ಭಾಗ ಎಂದು ತಿಳಿದುಕೊಳ್ಳುವುದು ಮುಖ್ಯ. ಸ್ನಾನದ ವಿಧಾನವನ್ನು ಸರಿಯಾಗಿ ಅನುಸರಿಸುವುದು ಬಹಳ ಮುಖ್ಯ. ಟ್ಯಾಟೂ ಇದ್ದರೆ ಕೆಲವು ಒನ್ಸೆನ್‌ಗಳು ಪ್ರವೇಶ ನಿರ್ಬಂಧಿಸಬಹುದು. ಆದ್ದರಿಂದ, ಮೊದಲೇ ವಿಚಾರಿಸುವುದು ಉತ್ತಮ. ಅಲ್ಲಿ ಶಾಂತವಾಗಿ ಮತ್ತು ಗೌರವದಿಂದ ವರ್ತಿಸುವುದು ಅಪೇಕ್ಷಣೀಯ.

ಜಪಾನಿನಲ್ಲಿ ಸಾರ್ವಜನಿಕ ಸ್ನಾನದ ಇತಿಹಾಸವು ಬಹಳ ಹಳೆಯದು. ಎಡೋ ಅವಧಿಯಲ್ಲಿ (1603-1868), ಸಾರ್ವಜನಿಕ ಸ್ನಾನದ ಮನೆಗಳು ಬಹಳ ಜನಪ್ರಿಯವಾಗಿದ್ದವು. ಇಂದು, ಆಧುನಿಕ ಮನೆಗಳಲ್ಲಿ ಸ್ನಾನದ ವ್ಯವಸ್ಥೆ ಇದ್ದರೂ, ಸಾರ್ವಜನಿಕ ಸ್ನಾನದ ಸಂಸ್ಕೃತಿ ಇನ್ನೂ ಜೀವಂತವಾಗಿದೆ. ಪ್ರವಾಸಿಗರು ಜಪಾನಿಗೆ ಭೇಟಿ ನೀಡಿದಾಗ, ಈ ವಿಶಿಷ್ಟ ಸಂಸ್ಕೃತಿಯನ್ನು ಅನುಭವಿಸುವುದು ಒಳ್ಳೆಯದು.

ಸೆಂಟೋ ಮತ್ತು ಒನ್ಸೆನ್‌ಗಳಲ್ಲಿ ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ ಸ್ನಾನದ ಸ್ಥಳಗಳು ಇರುತ್ತವೆ. ಗೌಪ್ಯತೆಗೆ ಹೆಚ್ಚಿನ ಪ್ರಾಮುಖ್ಯ ನೀಡಲಾಗುತ್ತದೆ. ಕೆಮರಾಗಳು ಮತ್ತು ಇತರ ರೆಕಾರ್ಡಿಂಗ್ ಸಾಧನಗಳನ್ನು ನಿಷೇಧಿಸಲಾಗಿದೆ.

ಚಿತ್ರಾನ್ನ ಅಂದರೆ ವರ್ಣರಂಜಿತ ಅನ್ನ; ಛತ್ರದ ಅನ್ನ ಅಂತಲ್ಲ!

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಅನ್ನವನ್ನು ನಾವು ಅನ್ನ ಎನ್ನುತ್ತೇವೇಕೆ? ಇದೊಳ್ಳೇ ಪ್ರಶ್ನೆ ಆಯ್ತಲ್ಲ, ಅನ್ನವನ್ನು ಅನ್ನವೆನ್ನದೆ ಚಪಾತಿ ಅಥವಾ ರಾಗಿಮುದ್ದೆ ಎಂದು ಹೇಳಬೇಕೇ ಅಂತ ಕೇಳಬೇಡಿ. ಅನ್ನ ಪದದ ವ್ಯುತ್ಪತ್ತಿಯ ಬಗ್ಗೆ ನಾನಿಲ್ಲಿ ಹೇಳುತ್ತಿರುವುದು. ''ಅನ್ನಾದ್ಭೂತಾನಿ ಜಾಯಂತೇ ಜಾತಾನ್ಯನ್ನೇನ ವರ್ಧಂತೇ। ಅದ್ಯತೇತ್ತಿ ಚ ಭೂತಾನಿ ತಸ್ಮಾದನ್ನಂ ತದುಚ್ಯತೇ॥'' ಎಂಬ ಶ್ಲೋಕ ವಿದೆ ತೈತ್ತಿರೀಯ ಉಪನಿಷತ್ತಿನಲ್ಲಿ. ಈ ಶ್ಲೋಕದ ಅರ್ಥವೇನೆಂದರೆ ''ಅನ್ನದಿಂದಾಗಿ ಪ್ರಾಣಿಗಳ ಉತ್ಪತ್ತಿಯಾಗುತ್ತದೆ. ಹೀಗೆ ಉತ್ಪನ್ನ ವಾದ ಪ್ರಾಣಿಗಳು ವರ್ಧಿಸುವುದು ಅನ್ನದಿಂದಲೇ. ಅದ್ಯತೇ = ಪ್ರಾಣಿಗಳಿಂದ ತಾನು ತಿನ್ನಲ್ಪಡುತ್ತದೆ; ಅತ್ತಿ ಚ = ಮತ್ತು ತಾನು ಪ್ರಾಣಿಗಳನ್ನು ತಿನ್ನುತ್ತದೆ. ಆದ್ದರಿಂದ ಇದಕ್ಕೆ ಅನ್ನ ಎಂಬ ಹೆಸರು. ಅದ್ಯತೇ ಇತಿ ಅನ್ನಂ. ಅತ್ತಿ ಇತಿ ಅನ್ನಂ. ಇದರಲ್ಲಿ, ಪ್ರಾಣಿಗಳಿಂದ ಅನ್ನವು ತಿನ್ನಲ್ಪಡುತ್ತದೆ ಎಂಬ ಭಾಗ ಸುಲಭವಾಗಿ ಅರ್ಥವಾಗುತ್ತದೆ. ಮನುಷ್ಯಪ್ರಾಣಿಗಳಾದ ನಾವೂ ಅನ್ನ ತಿಂದೇ ಬದುಕುವವರಲ್ಲವೇ! ಆದರೆ, ಅನ್ನವು ಪ್ರಾಣಿಗಳನ್ನು ತಿನ್ನುತ್ತದೆ ಎಂಬ ಭಾಗ ಸುಲಭವಾಗಿ ಅರ್ಥವಾಗುವುದಿಲ್ಲ. ಅದು ಅರ್ಥವಾಗಲಿಕ್ಕೆ ಸ್ವಲ್ಪ ಅಧ್ಯಾತ್ಮ ಬೇಕು, ಜೀವನಾದರ್ಶ ತಿಳಿದುಕೊಳ್ಳಬೇಕು. ಅದನ್ನು ತಿಳಿಸುವುದಕ್ಕೂ ಒಂದು ಶ್ಲೋಕವಿದೆ: ''ಆದ್ಯತೇ ವಿಧಿವದ್ಭುಕ್ತಮತ್ತಿ ಭೋಕ್ತಾರಮನ್ಯಥಾ। ಆಯುಷ್ಯ ಸ್ವಾಸ್ಥ್ಯದಂ ಪೂರ್ವಮನ್ಯಥೈವೇತರತ್ ಸ್ಮೃತಮ್॥ ಅಂದರೆ, ವಿಧಿಪೂರ್ವಕವಾಗಿ ಸ್ವೀಕರಿಸಲ್ಪಡುವುದು (ಆದ್ಯತೇ ಎಂಬ ವ್ಯುತ್ಪತ್ತಿಗನುಸಾರವಾಗಿ) 'ಅನ್ನ'ವೆನಿಸುತ್ತದೆ. ಹಾಗೆಯೇ ವಿರುದ್ಧ ರೀತಿಯಲ್ಲಿ, ಯಾವೊಂದು ಗೌರವಸಂಸ್ಕಾರಗಳಿಲ್ಲದೆ ಸೇವಿಸಲ್ಪಡುವುದು (ಅತ್ತಿ ಎಂಬ ವ್ಯುತ್ಪತ್ತಿಗೆ ಅನುಸಾರವಾಗಿ) ಕೂಡ 'ಅನ್ನ'ವೇ. ವ್ಯತ್ಯಾಸವೇನೆಂದರೆ ಮೊದಲನೆಯ ವಿಧವಾದ ಅನ್ನವು ಆಯುಷ್ಯ ಮತ್ತು ಆರೋಗ್ಯಪ್ರದವಾದರೆ ಎರಡನೆಯ ರೀತಿಯ ಅನ್ನವು ಅದಕ್ಕೆ ವಿರುದ್ಧವಾಗಿ ಆಯುಷ್ಯ-ಆರೋಗ್ಯಗಳ ನಾಶಕ.

ಅನ್ನದ ಮಹತ್ತ್ವವನ್ನು ಸಾರುವ ಇನ್ನಷ್ಟು ಘನತರ ಸೂಕ್ತಿಗಳು ತೈತ್ತಿರೀಯ ಉಪನಿಷತ್ತಿನಲ್ಲಿವೆ. ''ಅನ್ನಂ ಬ್ರಹ್ಮೇತಿ ವ್ಯಜಾನಾತ್'' (ಅನ್ನವನ್ನು ಬ್ರಹ್ಮವೆಂದು ತಿಳಿಯಬೇಕು); ''ಅನ್ನಂ ನ ನಿಂದ್ಯಾತ್, ತದ್‌ವ್ರತಂ'' (ಅನ್ನವನ್ನು ಯಾವತ್ತೂ ನಿಂದಿಸಬಾರದು, ಅದೊಂದು ವ್ರತವೇ ಆಗಿರಬೇಕು); ''ಅನ್ನಂ ನ ಪರಿಚಕ್ಷೀತ, ತದ್‌ವ್ರತಂ (ಅನ್ನವನ್ನು ತ್ಯಜಿಸಬಾರದು, ಅದೂ ಒಂದು ವ್ರತ); ''ಅನ್ನಂ ಬಹು ಕುರ್ವೀತ, ತದ್‌ವ್ರತಂ'' (ಅನ್ನವನ್ನು ವೃದ್ಧಿಪಡಿಸಿಕೊಳ್ಳಬೇಕು, ಅನ್ನವೆಂದರೇನೇ ಒಂದು ವ್ರತ). ಇಲ್ಲಿ ಅನ್ನ ಎಂದರೆ ಅಕ್ಕಿಯಿಂದ ಬೇಯಿಸಿ ಮಾಡಿದ ಅನ್ನ ಎಂಬ ಸೀಮಿತ ಅರ್ಥವಲ್ಲ, ಆಹಾರ ಎಂಬ ವಿಶಾಲ ಅರ್ಥ. ಭಗವದ್ಗೀತೆಯಲ್ಲಿ ಬರುವ ''ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನಸಂಭವಃ'' (ಅನ್ನದಿಂದಾಗಿ ಜೀವಿಗಳೆಲ್ಲ ಉತ್ಪತ್ತಿಯಾಗುತ್ತವೆ, ಅನ್ನದ ಉತ್ಪತ್ತಿಯು ಮಳೆಯಿಂದಾಗುತ್ತದೆ) ಮತ್ತು ''ಪಚಾಮ್ಯನ್ನಂ ಚತುರ್ವಿಧಮ್'' (ಎಲ್ಲ ಜೀವಿಗಳ ಶರೀರದೊಳಗೆ ಇದ್ದುಕೊಂಡು ಭಕ್ಷ್ಯ, ಭೋಜ್ಯ, ಲೇಹ್ಯ ಮತ್ತು ಚೋಷ್ಯ ಎಂಬ ನಾಲ್ಕು ವಿಧದ ಅನ್ನವನ್ನು ನಾನು ಜೀರ್ಣಿಸುತ್ತೇನೆ) ಶ್ಲೋಕಭಾಗಗಳಲ್ಲೂ ಅನ್ನವೆಂದರೆ ಆಹಾರ ಎಂಬ ವಿಶಾಲ ಅರ್ಥವನ್ನೇ ತೆಗೆದುಕೊಳ್ಳಬೇಕು. ಅನ್ನದಾತ, ಅನ್ನನಾಳ, ಅನ್ನಪ್ರಾಶನ ಮುಂತಾದ ಪದಗಳಲ್ಲೂ ಬಹುಮಟ್ಟಿಗೆ ಅನ್ನವೆಂದರೆ ಆಹಾರವೆಂಬ ಸ್ಥೂಲ ಅರ್ಥವೇ.

ಆದರೆ ಇನ್ನುಮುಂದೆ ಈ ಲೇಖನದಲ್ಲಿ ಅನ್ನ ಪದವನ್ನು ಅಕ್ಕಿ ಬೇಯಿಸಿ ತಯಾರಿಸಿದ ಅನ್ನ ಎಂಬ ಸೀಮಿತ ಅರ್ಥದಲ್ಲಷ್ಟೇ ನೋಡೋಣ. ಮುಖ್ಯವಾಗಿ ಕನ್ನಡಿಗರೆಲ್ಲರಿಗೂ ಚಿರಪರಿಚಿತರುವ, ಕನ್ನಡಿಗರೆಲ್ಲರ ಪ್ರೀತಿಪಾತ್ರವಾದ, ಕರ್ನಾಟಕಕ್ಕೆ ಜಿ.ಐ ಟ್ಯಾಗ್ ಸಹ ಸಿಗಬಹುದಾದ 'ಚಿತ್ರಾನ್ನ'ದ ಮೇಲೆ ಫೋಕಸ್ ಮಾಡೋಣ.

ಮೊನ್ನೆ ಫೇಸ್‌ಬುಕ್‌ನಲ್ಲೊಂದು ವಿಡಿಯೊ ನೋಡಿದೆ. 'ಮೈಸೂರಿನ ಕಥೆಗಳು' ಎಂಬ ಹೆಸರಿನ ಆಲ್ಬಮ್‌ನಡಿ ''ಚಿತ್ರಾನ್ನಕ್ಕೆ ಆ ಹೆಸರು ಹ್ಯಾಗೆ ಬಂತು...'' ಎಂದು ಅದರ ಟೈಟಲ್. ಪೋಸ್ಟ್ ಮಾಡಿರುವವರು ಧರ್ಮೇಂದ್ರ ಕುಮಾರ್. ಇವರು ಮೈಸೂರು, ಬೆಂಗಳೂರು ಅಥವಾ ಸಮಗ್ರ ಕರ್ನಾಟಕದ ಇತಿಹಾಸವನ್ನು ತಮ್ಮದೇ ಆದ ರೀತಿಯಲ್ಲಿ ಚಿಕ್ಕಚಿಕ್ಕ ವಿಡಿಯೊ(ರೀಲ್)ಗಳ ಮೂಲಕ ಹೇಳುತ್ತಾರೆ. ಈ ಹಿಂದೆಯೂ ನಾನು ಆಗೊಮ್ಮೆ ಈಗೊಮ್ಮೆ ನೋಡಿದ್ದೇನೆ. ಕೆಲವು ಸ್ವಾರಸ್ಯಕರ ವಿಷಯಗಳನ್ನು ತಿಳಿದುಕೊಂಡಿದ್ದೇನೆ ಕೂಡ. ಹಾಗೆ ಈ ವಿಡಿಯೊವನ್ನೂ ಆಸಕ್ತಿಯಿಂದಲೇ ಪ್ಲೇ ಮಾಡಿದೆ. ಎಡಗೈಯಲ್ಲಿ ಚಿತ್ರಾನ್ನದ ಪ್ಲೇಟ್ ಹಿಡಿದುಕೊಂಡೇ ಧರ್ಮೇಂದ್ರಕುಮಾರ್ ಮಾತನಾಡಿದ್ದಾರೆ. ಒಟ್ಟು 58 ಸೆಕೆಂಡ್ ಅವಧಿಯ ವಿಡಿಯೊದಲ್ಲಿ, ಒಂದಿಷ್ಟು ಅಭಿನಯವನ್ನೂ ಸೇರಿಸಿ ನುಡಿದ ಅವರ ಮಾತಿನ ಪಠ್ಯರೂಪ ಹೀಗಿದೆ: ''ಹಿಂದೆ ಛತ್ರಗಳು ಇದ್ದವು. ಒಂದೂರಿನಿಂದ ಇನ್ನೊಂದೂರಿಗೆ ಪ್ರಯಾಣ ಮಾಡಬೇಕಾದರೆ ರಾತ್ರಿ ಮಲಗಿಕೊಳ್ಳಲಿಕ್ಕೆ ಧರ್ಮಛತ್ರಗಳಿದ್ದವು. ಧರ್ಮಛತ್ರಗಳಲ್ಲಿ ಪ್ರಯಾಣಿಕರು ತಂಗಬಹುದಾಗಿತ್ತು. ಬೆಳಗ್ಗೆದ್ದು ಅರ್ಲಿ ಮಾರ್ನಿಂಗ್ ಬಿಡ್ಬೇಕಾದ್ರೆ, ಛತ್ರದ ಧರ್ಮದರ್ಶಿಗಳು ಹಿಂದಿನ ರಾತ್ರಿ ಉಳಿದಿದ್ದ ಅನ್ನವನ್ನು ಒಗ್ಗರಣೆ ಮಾಡಿ ಕಲಸಿ ಪ್ರಯಾಣಿಕರಿಗೆ ಮುಂದಿನ ದಾರಿಗೆ ಬುತ್ತಿಯಾಗಿ ಕೊಡುತ್ತಿದ್ದರು. ಅದನ್ನು 'ಛತ್ರದ ಅನ್ನ' ಅಂತ ಕರೆಯೋರು. ಮುಂದಿನದಾರಿಗೆ ತಗೊಂಡುಹೋಗಿ ಇನ್ನೊಂದು ಧರ್ಮಛತ್ರ, ಇನ್ನೊಂದ್ಸಾರಿ ಸಾಯಂಕಾಲಕ್ಕೆ ಎಲ್ಲಿ ಸೆಟ್ಲ್ ಆಗಬೇಕು ಅಷ್ಟರೊಳಗೆ ಮಧ್ಯದ ದಾರಿಗೆಂದು ಸಿಕ್ಕಂಥ ಬುತ್ತಿಯೇ 'ಛತ್ರದ ಅನ್ನ'. ಅದು ಛತ್ರದ ಅನ್ನ 'ಛತ್ರಾನ್ನ' ಹೋಗಿ ಇವತ್ತು 'ಚಿತ್ರಾನ್ನ' ಆಗಿದೇಏಏಏ! ಛತ್ರದ ಅನ್ನ ಛತ್ರಾನ್ನ ಹೋಗಿ ಇವತ್ತು ಚಿತ್ರಾನ್ನ ಆಗಿದೆ! ಇದು ಚಿತ್ರಾನ್ನ ಇದು ಛತ್ರದ ಅನ್ನ. ಒಗ್ಗರಣೆ ಕಲಸಿದ ಅನ್ನ. ಬಹಳ ಸಿಂಪಲ್ಲಾಗಿ ಮಾಡ್ಬಹುದು ಇದನ್ನು. ಅನ್ನಕ್ಕೊಂಚೂರ್ ಒಗ್ಗರಣೆ, ಒಂಚೂರ್ ಅರಿಶಿನ ಹಾಕ್ಕೊಟ್ರೆ ಅದು ಛತ್ರದ ಅನ್ನ ಆಯ್ತು. ಛತ್ರದ ಅನ್ನ ಹೋಗಿ ಚಿತ್ರಾನ್ನ ಆಗಿದೆ. ನೀವು ಚಿತ್ರಾನ್ನ ತಿನ್ಬೇಕಾದ್ರೆ ಹಿಂದಿನ್ ಕಾಲ್ದಲ್ಲಿ ನಮ್ಮ ಜನ ಹೆಂಗ್ಹೆಂಗೆಲ್ಲ ಕಷ್ಟಪಟ್ಟರು ಅಂತ ನೆನೆಸ್ಕೊಳ್ಳೋದನ್ನ ಮರೀಬೇಡಿ!''

ಎಲ್ಲ ಓಕೆ, ಆದರೆ ''ಚಿತ್ರಾನ್ನದ ಮೂಲ ಛತ್ರಾನ್ನ'' ಎಂಬ ಅಬದ್ಧ ಯಾಕೆ? ಎಷ್ಟೆಂದರೂ 'ರೀಲ್' ತಾನೆ? ಇಲ್ಲ, ಈ ವಿಡಿಯೊದಲ್ಲಿ ಧರ್ಮೇಂದ್ರ ಕುಮಾರರ ಮಿಕ್ಕೆಲ್ಲ ವಿವರಣೆ ಸಮಂಜಸವಾಗಿಯೇ ಇದೆ. ಹಿಂದಿನ ಕಾಲದಲ್ಲಿ ಜನರು ಕಾಲ್ನಡಿಗೆಯಲ್ಲಿ ಅಥವಾ ಹೆಚ್ಚೆಂದರೆ ಎತ್ತಿನಬಂಡಿಯಲ್ಲಿ ಪ್ರಯಾಣ ಮಾಡುವಾಗ ರಾತ್ರಿವೇಳೆ ಧರ್ಮಛತ್ರಗಳಲ್ಲಿ ತಂಗುತ್ತಿದ್ದದ್ದು, ಅಲ್ಲಿ ಊರ ದಾನಿಗಳು/ಧರ್ಮದರ್ಶಿಗಳು ಸರಳವಾದ ಊಟ-ವಸತಿ ಒದಗಿಸುತ್ತಿದ್ದದ್ದು, ಮಾರನೇದಿನಕ್ಕೆಂದು ಬುತ್ತಿ ಕಟ್ಟಿಕೊಡುತ್ತಿದ್ದದ್ದು, ಜನರು ಅದನ್ನು ಛತ್ರದ ಅನ್ನ ಎಂದು ಕೃತಜ್ಞತಾಪೂರ್ವಕ ಸ್ವೀಕರಿಸುತ್ತಿದ್ದದ್ದು... ಎಲ್ಲ ಒಪ್ಪಬಹುದಾದ ವಿಚಾರಗಳೇ. ಮಾತ್ರವಲ್ಲ ಪೂರ್ವಜರ ಬಗ್ಗೆ ಹೆಮ್ಮೆಪಡಬಹುದಾದಂಥವು ಕೂಡ. ಅದನ್ನು ಧರ್ಮೇಂದ್ರಕುಮಾರ್ ಸೋಷಿಯಲ್ ಮೀಡಿಯಾದಲ್ಲಿ ರೀಲ್ ಮೂಲಕ ಈಗಿನ ಜನರಿಗೆ ತಿಳಿಯಪಡಿಸಿರುವುದೂ ಮೆಚ್ಚತಕ್ಕ ಅಂಶವೇ. ಆದರೆ 'ಚಿತ್ರಾನ್ನ' ಎಂಬ ಪದ ಬಂದಿರುವುದು 'ಛತ್ರಾನ್ನ'ದಿಂದ ಎನ್ನುವುದು ಮಾತ್ರ ಶುದ್ಧ ಬಕ್ವಾಸ್, ಪಕ್ಕಾ ಬುರುಡೆ, ಹದಿನಾರಾಣೆ ಬೊಗಳೆ. ಪಾಪ, ಧರ್ಮೇಂದ್ರ ಕುಮಾರರ ರೀಲ್ ನೋಡಿದ ಬಹಳಷ್ಟು ಅಮಾಯಕರು 'ಓಹ್ ಹೌದಾ! ಗೊತ್ತೇ ಇರಲಿಲ್ಲ!' ಎಂದು ಕಣ್‌ಕಣ್‌ಬಿಟ್ಟು ಕಾಮೆಂಟ್ ಬರೆದಿದ್ದಾರೆ. ಆಫ್‌ಕೋರ್ಸ್, ಸೋಷಿಯಲ್ ಮೀಡಿಯಾದಲ್ಲಿ ಧರ್ಮೇಂದ್ರಕುಮಾರರನ್ನು ಇದಕ್ಕಾಗಿ ಟ್ರೋಲ್ ಮಾಡಿದವರೂ ಇದ್ದಾರೆ. ''ಛತ್ರ ಅನ್ನೋ ಪದ ಕಾಲದ ಹೊಡೆತದಲ್ಲಿ ಅಪಭ್ರಂಶವಾಗಿಲ್ಲ; ಅನ್ನ ಅನ್ನೋ ಪದ ಶತಮಾನಗಳಿಂದ ಅಪಭ್ರಂಶವಾಗಿಲ್ಲ; ಛತ್ರ+ಅನ್ನ=ಛತ್ರಾನ್ನ ಅಂತಿದ್ದದ್ದು ಚಿತ್ರಾನ್ನವಾಗಿ ಅಪಭ್ರಂಶವಾಯ್ತಂತೆ! ಎಲ್ಲಿಂದಾ ಬರ್ತಾವೋ ಶಿವನೇ... ಲೈಕ್‌ಒತ್ತಿ, ಕಮೆಂಟ್ ಮಾಡಿ, ಸಬ್‌ಸ್ಕ್ರೈಬ್ ಆಗಿ ಜನರೇಶನ್ನಿನ ಸಂಶೋಧನೆಗಳು ಹೀಗೇ ಇರ್ತಾವೆ!'' ಎಂದು ಜರಿದವರೂ ಇದ್ದಾರೆ.

ಹಾಗಾದರೆ 'ಚಿತ್ರಾನ್ನ'ದ ಅಸಲಿ ಚರಿತ್ರೆ ಏನು? ಆ ಪದದ ನಿಷ್ಪತ್ತಿ ಏನು?

ಕನ್ನಡ ಶಬ್ದಾರ್ಥ ವಿಚಾರಕ್ಕೆ ಬಂದಾಗ 'ಪವಿತ್ರ ಬೈಬಲ್' ಎಂದೇ ಪರಿಗಣಿತವಾಗುವ ಕಿಟ್ಟೆಲ್ ಕೋಶದಿಂದಲೇ ಆರಂಭಿಸೋಣ. ಕಿಟ್ಟೆಲ್ ಕೋಶದಲ್ಲಿ 'ಚಿತ್ರಾನ್ನ' ಪದಕ್ಕೆ ಕೊಟ್ಟಿರುವ ಅರ್ಥ Rice dressed with coloured, or various condiments; a hotchpotch of boiled grain ಎಂದು. ಶಬ್ದಗಳ ವ್ಯುತ್ಪತ್ತಿಯನ್ನು ಹೆಚ್ಚು ವ್ಯಾಖ್ಯಾನಿಸುವುದಿಲ್ಲವಾದರೂ ಕಿಟ್ಟೆಲ್ ಕೋಶ ಸಾಮಾನ್ಯವಾಗಿ ಯಾವುದೇ ಶಬ್ದದ ಬಳಕೆ ಹೇಗೆ, ಅದು ಯಾವ ಭಾಷೆಯಿಂದ ಬಂದಿದೆ ಇತ್ಯಾದಿಯನ್ನು ಸಂಕ್ಷಿಪ್ತವಾಗಿ ತಿಳಿಸುತ್ತದೆ. ಚಿತ್ರಾನ್ನಕ್ಕೆ ಸಂಬಂಧಿಸಿದಂತೆ ಛತ್ರದ ಸುಳಿವು ಏನೂ ಇಲ್ಲ. ಕನ್ನಡ ಸಾಹಿತ್ಯ ಪರಿಷತ್ತು ಪ್ರೊ.ಜಿ.ವೆಂಕಟಸುಬ್ಬಯ್ಯನವರ ಮುಂದಾಳತ್ವದಲ್ಲಿ ಹೊರತಂದ ಎಂಟು ಸಂಪುಟಗಳ ಕನ್ನಡ ನಿಘಂಟುವಿನ ಮೂರನೆಯ ಸಂಪುಟದಲ್ಲಿ, ಅಂದರೆ 2838ನೆಯ ಪುಟದಲ್ಲಿ 'ಚಿತ್ರಾನ್ನ' ಪದಕ್ಕೆ ಕೊಟ್ಟಿರುವ ಅರ್ಥವಿವರಣೆ ಹೀಗಿದೆ: ''ಚಿತ್ರಾನ್ನ(ನಾಮಪದ): ಉಪ್ಪು, ಕಾರ, ಹುಳಿ ಸೇರಿಸಿ ಒಗ್ಗರಣೆ ಹಾಕಿ ಕಲೆಸಿದ ಅನ್ನ; ಮಿರುಪ ಚಿತ್ರಾನ್ನ ನಾನಾಬಗೆ ಭಕ್ಷ್ಯಗಳ... ಸಿರಿಧರನಾರೋಗಿಸಿದನು (ಕಂಠೀರವ ನರಸರಾಜ ಜಯಂ- ಸುಮಾರು ಕ್ರಿ.ಶ 1648ರಲ್ಲಿ ಗೋವಿಂದವೈದ್ಯ ಕವಿಯ ರಚನೆ); ಪರಿಕಲಿತ ಚಿತ್ರಾನ್ನ ರಾಶಿಯ ಶೋಣಿತಾಜ್ಯಗಳ... ಭೋಜನಗೈದು (ಆನಂದ ರಾಮಾಯಣ- ಸುಮಾರು ಕ್ರಿ.ಶ 1750ರಲ್ಲಿ ತಿಮ್ಮಾಮಾತ್ಯ ಕವಿಯ ರಚನೆ); ಹುರುಳಿಕಾಯಿಯ ಪಲ್ಯ, ಚಿತ್ರಾನ್ನ, ಬೋಂಡ ಮತ್ತು ಪಾಯಸ- ಆ ದಿನದ ಅಡುಗೆ (ರಂಗಣ್ಣನ ಕನಸಿನ ದಿನಗಳು- 20ನೆಯ ಶತಮಾನದ ಎಂ.ಆರ್. ಶ್ರೀನಿವಾಸಮೂರ್ತಿಯವರ ರಚನೆ); ಉಪ್ಪೇರಿ, ವಾಂಗೀಭಾತು, ಚಿತ್ರಾನ್ನ... ಪಟ್ಟಿ ಉದ್ದಕ್ಕೂ ಸಾಗಿತು (ರೂಪರಾಶಿಗಳ ಸಂತೆ- 20ನೆಯ ಶತಮಾನದ ಎಂ.ಬಿ.ಮರಕಿಣಿಯವರ ರಚನೆ). (ಚಿತ್ರ + ಅನ್ನ)''.

ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟುವಿನಲ್ಲೂ ಛತ್ರದ ಸುಳಿವಿಲ್ಲ! ಆದರೆ ಬೇರೊಂದು ಮುಖ್ಯವಾದ ಮಾಹಿತಿ ಇದೆ. ಏನೆಂದರೆ 'ಚಿತ್ರಾನ್ನ' ಎಂಬುದು ಚಿತ್ರ + ಅನ್ನ ಎಂಬ ಸಂಸ್ಕೃತ ಪದಗಳು ಸವರ್ಣದೀರ್ಘ ಸಂಧಿಯಲ್ಲಿ ಸೇರಿ ಆಗಿರುವ ಪದ. ಹಾಗಿದ್ದರೆ 'ಚಿತ್ರ' ಪದದ ಬೆನ್ನಟ್ಟಿಹೋದರೆ ನಮಗೆ ಹೆಚ್ಚಿನ ಮಾಹಿತಿ ಸಿಗುತ್ತದೆ! ಚಿತ್ರ ಅಂದರೆ ಡ್ರಾಯಿಂಗ್, ಪಿಕ್ಚರ್, ಇಮೇಜ್ ಎಂಬ ಅರ್ಥಗಳಷ್ಟೇ ನಮಗೆ ಹೊಳೆಯುತ್ತವೆ. ಆದರೆ ಸಂಸ್ಕೃತದಲ್ಲಿ ಈ ಪದದ ಆಳ ವಿಸ್ತಾರಗಳು ಅಗಾಧವಾಗಿವೆ. ''ಚಿತ್ರಂ ರಂ ರಮ್ಯತೇ ತಂ ತ್ರಿಭುವನವಪುಶಂ ವಿಷ್ಣುಮೀಶಂ ನಮಾಮಿ'' ಎಂದು ವಿಷ್ಣುಸಹಸ್ರನಾಮದ ಧ್ಯಾನಶ್ಲೋಕದಲ್ಲಿ ವಿಷ್ಣುವನ್ನೇ 'ಚಿತ್ರ' ಎಂದು ಬಣ್ಣಿಸಲಾಗಿದೆ. ಅಂಥ 'ಚಿತ್ರ' ಪದದ ಅರ್ಥವಿಸ್ತಾರವನ್ನು ಅರಿಯಲು ನಾವು ಪ್ರೊ.ಜಿ.ಎನ್.ಚಕ್ರವರ್ತಿಯವರ ಸಂಸ್ಕೃತ-ಕನ್ನಡ ನಿಘಂಟುವನ್ನು ನೋಡೋಣ. ಮೊದಲನೆಯದಾಗಿ ಚಿತ್ರಾನ್ನ ಎಂಬ ಪದ ಇದೆಯೇ ಎಂದು ಹುಡುಕೋಣ. ಇದೆ! 290ನೆಯ ಪುಟದಲ್ಲಿ, ಹುಳಿ ರುಚಿಯಿರುವ, ಎಳ್ಳಿನ ಒಗ್ಗರಣೆ ಸೇರಿಸಿರುವ ಎಂಬರ್ಥದಲ್ಲಿ ಹುಳಿಯನ್ನ ಅಥವಾ ಎಳ್ಳಿನ ಅನ್ನ ಎಂದು ಕೊಟ್ಟಿದ್ದಾರೆ. ಅಂದಮೇಲೆ ಚಿತ್ರಾನ್ನ ಸಂಪೂರ್ಣವಾಗಿ ಸಂಸ್ಕೃತಪದ ಎಂದಾಯಿತು! ಈಗ ಅದೇ ನಿಘಂಟುವಿನಲ್ಲಿ ಚಿತ್ರಾನ್ನಕ್ಕಿಂತ ಮೊದಲು ಬರುವ ಚಿತ್ರ ಪದದ ಮೇಲೆ ಕಣ್ಣಾಡಿಸೋಣ. ಇದು ನಮ್ಮ ಸಂದೇಹ, ಊಹೆ, ಅಂದಾಜುಗಳೆಲ್ಲವನ್ನೂ ನೀಟಾಗಿ ಪರಿಹರಿಸುತ್ತದೆ. ಚಿತ್ರ ಎಂಬ ಪದ ಸಂಸ್ಕೃತದಲ್ಲಿ ನಪುಂಸಕಲಿಂಗ ನಾಮಪದವಾಗಿ ಬಳಕೆಯಾದರೆ ಆಲೇಖ್ಯ, ನಕ್ಷೆ, ಪಟ, ಆಶ್ಚರ್ಯ, ಅದ್ಭುತ, ವರ್ಣ, ತಿಲಕ, ಗಗನ ಎಂಬ ಅರ್ಥಗಳನ್ನು ಪಡೆಯುತ್ತದೆ. ಪುಲ್ಲಿಂಗ ರೂಪದಲ್ಲಿ ಬಳಕೆಯಾದರೆ ಹರಳುಗಿಡ, ಅಶೋಕವೃಕ್ಷ ಎಂಬ ಅರ್ಥಗಳು. ಸ್ತ್ರೀಲಿಂಗದಲ್ಲಿ ಚಿತ್ರಾ ಎಂದು ಬಳಕೆಯಾದರೆ ಇಲಿಯಾಲದ ಗಿಡ, ಬುಡುಮೆ ಗಿಡ, ದಂತೀವೃಕ್ಷ, ಸುಭದ್ರೆಯ ಇನ್ನೊಂದು ಹೆಸರು, 27 ನಕ್ಷತ್ರಗಳಲ್ಲಿ 14ನೆಯದು, ಒಬ್ಬ ಅಪ್ಸರೆ, ಒಂದು ಸರ್ಪ ಎಂಬ ಅರ್ಥಗಳು. ಇವ್ಯಾವುವೂ ಚಿತ್ರಾನ್ನಕ್ಕೆ ಒದಗಿಬರುವಂಥವಲ್ಲ. ಆದರೆ ಚಿತ್ರ ಎಂಬ ಪದ ಸಂಸ್ಕೃತದಲ್ಲಿ ವಿಶೇಷಣ ರೂಪದಲ್ಲೂ ಬಳಕೆಯಾಗುತ್ತದೆ. ಆಗ ಅರ್ಥಗಳು: ಆಶ್ಚರ್ಯಕರವಾದ ಅಥವಾ ನಾನಾ ವರ್ಣಗಳುಳ್ಳ ಎಂದು. ಯುರೇಕಾ! ನಾನಾ ವರ್ಣಗಳುಳ್ಳ ಎಂಬ ಈ ಕೊನೆಯ ಅರ್ಥವೇ ಅನ್ನವನ್ನು ಚಿತ್ರಾನ್ನವಾಗಿಸುವುದು.

ಈಗ ಇನ್ನೂ ಆಸಕ್ತಿಕರವಾದ ಒಂದು ವಿಚಾರ. ಏನೆಂದರೆ ಚಿತ್ರಾನ್ನ ಎಂಬ ಪದಬಳಕೆ, ಮಸಾಲೆಗಳನ್ನು ಸೇರಿಸಿದ ವರ್ಣರಂಜಿತ ಅನ್ನ ಎಂಬ ಅರ್ಥದಲ್ಲಿ ಸಂಸ್ಕೃತದಲ್ಲಿ ಪ್ರಾಚೀನ ಕಾಲದಿಂದಲೂ ಇದೆ. 12ನೆಯ ಶತಮಾನದ 'ಮಾನಸೋಲ್ಲಾಸ' ಪಾಕ ಪುಸ್ತಕದಲ್ಲಿ ಅದಕ್ಕೆ ಚಿತ್ರಪಾಕ ಎಂದು ಹೆಸರಿತ್ತಂತೆ. ಮತ್ತೂ ಹಿಂದೆ ಹೋದರೆ, ವೇದಕಾಲದಲ್ಲಿ ಚಿತ್ರಾನ್ನ ಎಂಬ ಹೆಸರಿಂದಲೇ ಅದು ಖ್ಯಾತವಾಗಿತ್ತೆಂದು ತಿಳಿಯುತ್ತದೆ. ಅಗ್ನಿಪುರಾಣ, ಗರುಡಪುರಾಣಗಳಲ್ಲಿ ಚಿತ್ರಾನ್ನದ ಉಲ್ಲೇಖವಿದೆ. ನಾರದಸಂಹಿತಾ ಎಂಬ ಜ್ಯೋತಿಷ್ಯಗ್ರಂಥದಲ್ಲಿ ಸಂಕ್ರಾಂತಿ ಆಚರಣೆ ಬಗೆಗಿನ ಒಂದು ಶ್ಲೋಕ ಹೀಗಿದೆ: ''ಅನ್ನಂ ಚ ಪಾಯಸಂ ಭೈಕ್ಷ್ಯಮಪೂಪಂ ಚ ಪಯೋ ದಧಿ। ಚಿತ್ರಾನ್ನಂ ಗುಡಮಧ್ವಾಜ್ಯಶರ್ಕರಾ ಬವತೋ ಹವಿಃ'' ಇದು ಸಂಕ್ರಾಂತಿಯಂದು ಸೇವಿಸಬೇಕಾದ ಭೋಜನದ ವಿವರ. ಬವ-ಬಾಲವ-ಕೌಲವ... ಮುಂತಾದ 11 ಕರಣಗಳಿಗೆ ಅನುಕ್ರಮವಾಗಿ ಅನ್ನ, ಪಾಯಸ, ಭಿಕ್ಷೆಯಿಂದ ಬಂದ ವಸ್ತು, ಕರಿದು ತಯಾರಿಸಿದ ವಡೆಯಂಥ ತಿನಿಸು, ಹಾಲು, ಮೊಸರು, ಚಿತ್ರಾನ್ನ, ಬೆಲ್ಲ, ಜೇನು, ತುಪ್ಪ, ಸಕ್ಕರೆ- ಈ 11 ಪದಾರ್ಥಗಳ ಸೇವನೆ. ಚಿತ್ರಾನ್ನದ ಕ್ರಮಸಂಖ್ಯೆ 7. ಅದು ಏಳನೆಯ ಕರಣ 'ಭದ್ರೆ'ಯ ಪ್ರೀತ್ಯರ್ಥ.

ಇಷ್ಟೇ ಸ್ವಾರಸ್ಯಕರವಾದ ಚಿತ್ರಾನ್ನ ಉಲ್ಲೇಖ ಯಾಜ್ಞವಲ್ಕ್ಯ ಸ್ಮೃತಿಯಲ್ಲಿಯೂ ಇದೆ. ಯಾಜ್ಞವಲ್ಕ್ಯ ಸ್ಮೃತಿಯ 'ಗ್ರಹಶಾಂತಿ' ಎಂಬ ಅಧ್ಯಾಯದಲ್ಲಿ ನವಗ್ರಹಗಳ ಆರಾಧನೆಯ ವಿವರಗಳು ಬರುತ್ತವೆ. ನವಗ್ರಹಗಳೆಂದರೆ ಸೂರ್ಯ, ಚಂದ್ರ, ಭೂಮಿ, ರಾಹು, ಮತ್ತು ಕೇತುಗಳನ್ನು ಸೇರಿಸಿ ಒಂಬತ್ತರ ಪಟ್ಟಿಯೇ ಹೊರತು ಈಗಿನ ವೈಜ್ಞಾನಿಕ ಯುಗದಲ್ಲಿ ಸೌರಮಂಡಲದಲ್ಲಿರುವ ಬುಧ, ಶುಕ್ರ, ಭೂಮಿ, ಮಂಗಳದಿಂದ ಹಿಡಿದು ಪ್ಲುಟೋವರೆಗಿನ ಒಂಬತ್ತು ಗ್ರಹಗಳಲ್ಲ(ಈಗ ಪ್ಲುಟೋ ಗ್ರಹವೇ ಅಲ್ಲವಂತೆ. ನೆಪ್ಚೂನ್‌ವರೆಗೆ ಎಂಟೇ ಗ್ರಹಗಳು). ನವಗ್ರಹಗಳಿಗೆ ಅನುಕ್ರಮವಾಗಿ ಯಾವ್ಯಾವ ಸುಧೆಗಳನ್ನು ಅರ್ಪಿಸಬೇಕು, ಯಾವ್ಯಾವ ಅಡುಗೆಗಳ ನೈವೇದ್ಯ ಮಾಡಬೇಕು, ಮತ್ತು ಗ್ರಹಯಜ್ಞಕ್ಕೆಂದು ಕರೆದ ವಿಪ್ರರಿಗೆ ಯಾವ್ಯಾವ ದಾನ-ದಕ್ಷಿಣೆಗಳನ್ನು ಕೊಡಬೇಕು ಎಂದು ಮೂರು ಶ್ಲೋಕಗಳು ತಿಳಿಸುತ್ತವೆ. ಅವುಗಳ ಪೈಕಿ ನೈವೇದ್ಯಭಕ್ಷ್ಯಗಳ ಶ್ಲೋಕ ಹೀಗಿದೆ: ''ಗುಡೌದನಂ ಪಾಯಸಂ ಚ ಹವಿಷ್ಯಂ ಕ್ಷೀರಷಾಷ್ಟಿಕಮ್। ದಧ್ಯೋದನಂ ಹವಿಶ್ಚೂರ್ಣಂ ಮಾಂಸಂ ಚಿತ್ರಾನ್ನಮೇವ ಚ॥'' ಇದು ಯಾಜ್ಞವಲ್ಕ್ಯ ಸ್ಮೃತಿಯ ಮೊದಲ ಭಾಗದಲ್ಲಿ ಬರುವ 304ನೆಯ ಶ್ಲೋಕ. ಇದರ ಪ್ರಕಾರ ಸೂರ್ಯನಿಗೆ ಗುಡೌದನ. ಗುಡ ಅಂದರೆ ಬೆಲ್ಲ, ಓದನ ಅಂದರೆ ಅನ್ನ. ಹಾಗಾಗಿ ಬೆಲ್ಲದ ಅನ್ನ. ಚಂದ್ರನಿಗೆ ಪಾಯಸ. ಮಂಗಳನಿಗೆ ಹವಿಷ್ಯಾನ್ನ ಅಂದರೆ ತುಪ್ಪ ಕಲೆಸಿದ ಅನ್ನ. ಬುಧನಿಗೆ ಕ್ಷೀರಷಾಷ್ಟಿಕ. ಕ್ಷೀರ ಅಂದರೆ ಹಾಲು, ಷಾಷ್ಟಿಕ ಅಂದರೆ ಅರವತ್ತು ದಿನಗಳಲ್ಲಿ ಬೆಳೆಬರುವ ಬತ್ತದಿಂದ ಮಾಡಿದ ಅಕ್ಕಿ. ಅಂಥ ಅಕ್ಕಿಯಿಂದ ತಯಾರಿಸಿದ ಅನ್ನವನ್ನು ಹಾಲಿನಲ್ಲಿ ಬೆರೆಸಿದ್ದು. ಗುರುವಿಗೆ ಮೊಸರನ್ನ. ಶುಕ್ರನಿಗೂ ತುಪ್ಪದ ಅನ್ನ. ಶನಿಗೆ ಎಳ್ಳು ಹುಡಿ ಮಾಡಿ ಕಲಸಿದ ಅನ್ನ. ರಾಹುವಿಗೆ ಮಾಂಸಕ್ಕೆ ಸಮಾನವಾದ ಉದ್ದಿನ ಅನ್ನ. ಕೇತುವಿಗೆ ಚಿತ್ರಾನ್ನ. ಈ ಶ್ಲೋಕದಲ್ಲಿ ಬರುವ 'ಮಾಂಸ' ಪದಕ್ಕೆ ಬೇರೆಬೇರೆ ವ್ಯಾಖ್ಯಾನಗಳಿವೆ. ಕೆಲವು ಪಾಠಾಂತರಗಳಲ್ಲಿ ಅದನ್ನು 'ಮಾಷ' ಎಂದು ಬರೆಯಲಾಗಿದೆ. ಮಾಷ ಅಂದರೆ ಉದ್ದು. ಉದ್ದು ತಾಮಸ ಆಹಾರ ಆದ್ದರಿಂದ ಮಾಂಸಕ್ಕೆ ಹೋಲಿಸುವುದಿದೆ. ಇನ್ನು ಕೆಲವೆಡೆ, ಅದು ನಿಜವಾಗಿಯೂ ಮಾಂಸವೇ. ಮಾತ್ರವಲ್ಲ ''ಅಜಾಕ್ಷೀರೇಣ ಸಂಸ್ವಿನ್ನಾ ಯವಾಶ್ಚ ತಿಲತಂಡುಲಾಃ। ಅಜಾಕರ್ಣಸ್ಯ ರಕ್ತೇನ ರಕ್ತಾಶ್ಚಿತ್ರಾನ್ನಸಂಜ್ಞಿತಾಃ'' ಎಂಬೊಂದು ಶ್ಲೋಕವನ್ನು ಉಲ್ಲೇಖಿಸಿ, ಆಡಿನ ಹಾಲಿನಿಂದ ತೊಳೆದ ಗೋಧಿ, ಎಳ್ಳು, ಅಕ್ಕಿಗಳನ್ನು ಬಳಸಿ ತಯಾರಿಸಿದ, ಆಡಿನ ಕಿವಿಯ ರಕ್ತದಿಂದ ಕೆಂಪು ಬಣ್ಣ ಬಂದಿರುವ ಅನ್ನವೇ ಚಿತ್ರಾನ್ನ ಎಂಬ ಭಯಂಕರ ವ್ಯಾಖ್ಯಾನಗಳೂ ಇವೆ!

ಒಟ್ಟಿನಲ್ಲಿ, ಚಿತ್ರಾನ್ನವೆಂದರೆ ಕಲರ್‌ಕಲರ್ ರೈಸ್ ಎನ್ನುವುದಂತೂ ಆಚಂದ್ರಾರ್ಕ ಬೆಳಗುವ ಸತ್ಯ. ಛತ್ರದಿಂದ ಬಂದದ್ದು ಎನ್ನುವುದೆಲ್ಲ ಕಾಗಕ್ಕ ಗುಬ್ಬಕ್ಕ ಕಥೆಗಳಿಗೆ ಆಗಬಹುದು ಅಷ್ಟೇ. ಅದಕ್ಕಿಂತ, ನನ್ನ ಸ್ನೇಹಿತ ರಾಘವೇಂದ್ರ ಸುಬ್ರಹ್ಮಣ್ಯ ಫೇಸ್‌ಬುಕ್‌ನಲ್ಲಿ ಬರೆದುಕೊಂಡ ತಮಾಷೆ ಚೆನ್ನಾಗಿದೆ. ಚಿತ್ರಾನ್ನ ಮಾಡುವಾಗ ಕೊನೆಯಲ್ಲಿ ನಿಂಬೆಹಣ್ಣು ಹಿಂಡುತ್ತೇವಲ್ಲ, ನಿಂಬೆರಸವೆಂದರೆ ಸಿಟ್ರಿಕ್ ಆಸಿಡ್. ನಿಂಬೆಯ ಬದಲಿಗೆ ಹೇರಳೆಕಾಯಿ ರಸ ಹಿಂಡಿದರೂ, ಅಥವಾ ಮುಂದಿನ ಭಾನುವಾರ ಯುಗಾದಿ ಹಬ್ಬದಂದು ಮಾವಿನಕಾಯಿ ಚಿತ್ರಾನ್ನ ಮಾಡಿದರೂ, ಹೇರಳೆಯಲ್ಲಿ ಮತ್ತು ಮಾವಿನಕಾಯಿಯಲ್ಲೂ ಇರುವುದು ಸಿಟ್ರಿಕ್ ಆಮ್ಲವೇ. ಆದ್ದರಿಂದ, ಮೂಲತಃ ಈ ಭಕ್ಷ್ಯದ ವೈಜ್ಞಾನಿಕ ಹೆಸರು ಸಿಟ್ರಸ್ ಅನ್ನ. ಅದೇ ಕ್ರಮೇಣ ಸಿಟ್ರಾನ್ನ ಆಗಿ ಚಿತ್ರಾನ್ನಕ್ಕೆ ಬಂದು ನಿಂತಿದೆ!

ಸುಭಾಷಿತ: ಮರೆಯಾಗುತ್ತಿರುವ ಸಾರಭೂತ ಸಾಹಿತ್ಯ



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಹಳ್ಳಿಯಲ್ಲಿ ನಾವೆಲ್ಲಾ ಪ್ರೌಢಶಾಲೆ ಮುಗಿಸುವಲ್ಲಿಯವರೆಗೆ ಮನೆಯಲ್ಲಿ ಬಾಯಿಪಾಠ ಹೇಳುವ ಪದ್ಧತಿಯಿತ್ತು. ಬಾಯಿಪಾಠ ಎಂದರೆ, ಸಣ್ಣ ಮಕ್ಕಳಿಂದ ಸರಿವಯಸ್ಸಿನ ವರೆಗಿನ ಮಕ್ಕಳು ಮುಸ್ಸಂಜೆಯ ವೇಳೆ ಕೈಕಾಲು ಮುಖ ತೊಳೆದುಕೊಂಡು, ದೇವರಿಗೆ ನಮಸ್ಕರಿಸಿ, ಮನೆಯ ಹಿರಿಯರ (ಬಹುತೇಕವಾಗಿ ಅಜ್ಜರ) ಮುಂದೆ ಕುಳಿತು ಪುನರ್‌ಮನನ ಮಾಡಿಕೊಳ್ಳುತ್ತಿದ್ದ ಮಾಹಿತಿಯ ಭಂಡಾರ! ಅಂದರೆ, ಅಲ್ಲಿ ಕಾಗುಣಿತ, ಮಗ್ಗಿಯನ್ನು ಮಾತ್ರವಲ್ಲದೆ, ಹಿಂದೂ ಮಾಸಗಳು, ಋತುಗಳು, ನಕ್ಷತ್ರಗಳು, 60 ಸಂವತ್ಸರಗಳನ್ನು ಹೇಳಬೇಕಾ ಗುತ್ತಿತ್ತು. ಕೆಲ ಬುದ್ಧಿವಂತ ಅಜ್ಜಂದಿರಂತೂ ಆ ವೇಳೆ ಮಗ್ಗಿಯನ್ನು ತಿರುವು-ಮುರುವಾಗಿಯೂ ಕಂಠಸ್ಥ ಮಾಡಿಸು ತ್ತಿದ್ದರು. ಜತೆಗೆ, ಕಾಲು-ಅರ್ಧ-ಮುಕ್ಕಾಲುಗಳ ಪಠಣವೂ ಆಗುತ್ತಿತ್ತು (ಒಂದ್ ಕಾಲ್ ಕಾಲು, ಎರಡ್ ಕಾಲ್ ಅರ್ಧ, ಮೂರ್ಕಾಲ್ ಮುಕ್ಕಾಲು, ನಾಲ್ಕ್ ಕಾಲ್ ಒಂದು). ನಂತರ, 'ಭಜಗೋವಿಂದಂ'ನಂಥ ಶ್ಲೋಕಗಳು, 'ವಿದ್ಯಾದದಾತಿ ವಿನಯಂ' ಮುಂತಾದ ಸುಭಾಷಿತಗಳು. ನಾವು ಹೇಳುತ್ತಿರುವುದು ಶ್ರೀ ಶಂಕರಾಚಾರ್ಯರ 'ಮೋಹಮುದ್ಗರ'ದ ಶ್ಲೋಕಗಳು ಅಥವಾ ಇದು ಸುಭಾಷಿತ ಪ್ರಕಾರದ ಶ್ಲೋಕ ಎಂಬ ತಿಳಿವಳಿಕೆ ಅಂದು ನಮಗೆ ಇರುತ್ತಿರಲಿಲ್ಲವಾದರೂ, ಒಂದಷ್ಟು ಸದ್ವಿಚಾರಗಳು ಅನಾಯಾಸವಾಗಿ ಕಂಠಪಾಠವಾಗಿ ಬಿಡುತ್ತಿದ್ದವು.

ಮರುದಿನ ಶಾಲೆಯಲ್ಲಿ ಬೆಳಗ್ಗೆ ಪ್ರಾರ್ಥನೆ ಮುಗಿಯುತ್ತಿದ್ದಂತೆ, ಅಂದಿನ ವಾರ್ತಾಪತ್ರಿಕೆಯ ಮುಖಪುಟದ ತಲೆಬರಹ ಗಳು ಮತ್ತು ಅಮರವಾಣಿಯನ್ನು (ಕನ್ನಡ ಅಥವಾ ಸಂಸ್ಕೃತದ ಒಂದು ಸೂಕ್ತಿ) ಓದಿಸಿ, ಅದರ ಸರಳ ಅರ್ಥವನ್ನು ಹೇಳಲಾಗುತ್ತಿತ್ತು. ತರಗತಿಯ ಬೋರ್ಡಿನ ಮೇಲೂ ಸುಭಾಷಿತದ ಶ್ಲೋಕವನ್ನು ಬರೆಯುವ ಪರಿಪಾಠವಿತ್ತು. 8ರಿಂದ 10ನೇ ತರಗತಿಯವರೆಗೆ ಸಂಸ್ಕೃತವನ್ನು ಪ್ರಥಮ ಅಥವಾ ತೃತೀಯ ಭಾಷೆಯಾಗಿ ಆಯ್ಕೆಮಾಡಿಕೊಂಡಿದ್ದರೆ, ಪರೀಕ್ಷೆಯ ದೆಸೆಯಿಂದಲಾದರೂ ಒಂದಷ್ಟು ಶ್ಲೋಕಗಳನ್ನು ಕಂಠಪಾಠ ಮಾಡುವ, ಅವುಗಳ ಅರ್ಥವನ್ನು ಗ್ರಹಿಸುವ ಅವಕಾಶವಿರುತ್ತಿತ್ತು. ಅಂತೂ ನಾವು ಬಾಲ್ಯದಿಂದಲೂ ನಮಗರಿವಿಲ್ಲದೆಯೇ ವಿವೇಕ ಚೂಡಾಮಣಿ, ಉಪದೇಶ ಸಾಹಸ್ರಿ, ಸೂಕ್ತಿಗಳು, ಅಮರವಾಣಿ, ಸುಭಾಷಿತಗಳ ಜತೆಗೇ ಬೆಳೆದುಬಂದಿದ್ದೇವೆ ಎನ್ನಬಹುದು.

ಅನುಭವದ ಆಧಾರದಲ್ಲಿ ಹೊಮ್ಮಿದ ಸರಳಭಾಷೆ ಮತ್ತು ದೇಶಕಾಲಾಬಾಧಿತ ಅರ್ಥಗಳನ್ನು ಹೊಂದಿರುವ ಪ್ರಾಚೀನ ಸಂಸ್ಕೃತ ಸುಭಾಷಿತಗಳು ನಿಜಕ್ಕೂ ಸೂಕ್ತಿರತ್ನಗಳು. 'ಇವು ಮಂತ್ರಗಳೇ?' ಅಂದರೆ ಮಂತ್ರಗಳಲ್ಲ, 'ಕಾವ್ಯವೇ?' ಅಂದರೆ ಪೂರ್ಣ ಒಪ್ಪಲೂ ಆಗದು. ಆದರೆ, ಅರ್ಥಾನುಸಂಧಾನದ ದೃಷ್ಟಿಯಿಂದ, ಸಾಮಾನ್ಯ ಜನಜೀವನಕ್ಕೆ ನಿರ್ದಿಷ್ಟವಾದ ಮತ್ತು 'ಇದಮಿತ್ಥಂ' ಎಂದು ದಿಗ್ದರ್ಶಿಸುವ ಸಾಮರ್ಥ್ಯವನ್ನು ಸುಭಾಷಿತ ಪ್ರಕಾರದ ಸಣ್ಣ ಶ್ಲೋಕಗಳು ಹೊಂದಿರುತ್ತವೆ. ಹೇಳಬೇಕಾದ ಸತ್ಯವನ್ನು ಪ್ರಿಯವಾಗಿಯೂ ಮಧುರವಾಗಿ ಯೂ ಅವು ಹೇಳಿಬಿಡುತ್ತವೆ. ಕೆಲ ಉದಾಹರಣೆಗಳು ಹೀಗಿವೆ:

- 'ದುರ್ಜನಂ ಪ್ರಥಮಂ ವಂದೇ ಸಜ್ಜನಂ ತದನಂತರಂ। ಮುಖಪ್ರಕ್ಷಾಲನಾತ್ ಪೂರ್ವಂ ಗುದಪ್ರಕ್ಷಾಲನಂ ಯಥಾ॥'- ಸಜ್ಜನರು ಸದಾತುಷ್ಟರು, ವಂದನೆಗೆ ಅರ್ಹರಾದರೂ ಅಪೇಕ್ಷಿಸುವವರಲ್ಲ. ಅವರಿಗೆ ಸ್ವಲ್ಪ ಹೆಚ್ಚು ಕಡಿಮೆ ಆದರೂ ನಡೆದೀತು. ಆದರೆ ದುರ್ಜನರು ಹಾಗಲ್ಲ, ಸ್ವಲ್ಪ ವ್ಯತ್ಯಾಸವಾದರೂ ಆಕಾಶ-ಪಾತಾಳ ಒಂದುಮಾಡಿಬಿಡುವವರು. ಹಾಗಾಗಿ ಅವರಿಗೇ ಮೊದಲು ನಮಸ್ಕರಿಸುವುದು ಒಳಿತು ಎಂದು ಹೇಳುವುದರ ಜತೆಗೆ, ಸುಭಾಷಿತಕಾರ ದುರ್ಜನರನ್ನು ಹೇಗೆ ಹೋಲಿಕೆ ಮಾಡುತ್ತಾನೆ ನೋಡಿ! ''ಮುಖ ತೊಳೆಯದಿದ್ದರೂ ಅಥವಾ ಆಮೇಲೆ ತೊಳೆದರೂ ನಡೆದೀತು, ಆದರೆ ಗುದಪ್ರಕ್ಷಾಲನವಾಗದಿದ್ದರೆ ನಡೆಯುವುದಿಲ್ಲ ಹೇಗೋ ಹಾಗೆ'' ಎನ್ನುತ್ತಾನೆ.
- 'ಅಶ್ವಂ ನೈವ ಗಜಂ ನೈವ ವ್ಯಾಘ್ರಂ ನೈವಚ ನೈವಚ, ಅಜಾಪುತ್ರಂ ಬಲಿಂದದ್ಯ ದೇವೋ ದುರ್ಬಲ ಘಾತುಕಃ'- ನಾವು ಸದಾ ಬಲಿಷ್ಠರಾಗಿರಬೇಕು, ದುರ್ಬಲರನ್ನು ದೇವರೂ ರಕ್ಷಿಸುವುದಿಲ್ಲ ಎನ್ನುವ ಕಟುಸಂದೇಶವನ್ನು ಈ ಸಾಲು ಸಾರುತ್ತವೆ.
- 'ದಾನಂ ಭೋಗೋ ನಾಶಸ್ತಿಸ್ರೋಗತಯೋ ಭವಂತಿ ವಿತ್ತಸ್ಯ। ಯೋ ನ ದದಾತಿ ನ ಭುಂಕ್ತೇ ತಸ್ಯತ್ರತಿಯಾ ಗತಿರ್ಭವತಿ'- ದಾನ, ಸ್ವತಃ ಭೋಗಿಸುವುದು ಮತ್ತು ನಾಶ ಈ ಮೂರು ಸಂಪತ್ತಿಗೆ ಇರುವ ಮೂರು ದಾರಿಗಳು. ತಾವೂ ಅನುಭವಿಸದಂಥ, ಬೇರೆಯವರಿಗೂ ದಾನ ಮಾಡದಂಥ ಸಂಪತ್ತು ಮೂರನೆಯ ಗತಿಯಾದ ನಾಶವನ್ನೇ ಹೊಂದುತ್ತದೆ.
- 'ಯೌವನಂ ಧನಸಂಪತ್ತಿಃ ಪ್ರಭುತ್ವಂ ಅವಿವೇಕತಾ ಏಕೈಕಮಪ್ಯನರ್ಥಾಯ ಚತುಷ್ಟಾಯ ವಿನಾಶಯೇತ್'- ಪ್ರಾಯ, ಶ್ರೀಮಂತಿಕೆ, ಅಧಿಕಾರ ಮತ್ತು ಅವಿವೇಕ ಎಂಬವು ಒಂದೊಂದೇ ಅನರ್ಥಕ್ಕೆ ಸಾಧನವಾಗಿರುವಂಥವು, ಇನ್ನು ಇವು ನಾಲ್ಕೂ ಒಬ್ಬನಲ್ಲಿ ಸೇರಿದರೆ ವಿನಾಶವಾದಂತೆಯೇ ಸರಿ.

ಮಾನವ ಜೀವನವು ಮಾತನ್ನು ಅವಲಂಬಿಸಿರುತ್ತದೆ; ಮಾತಿಲ್ಲದೆ ನಮ್ಮ ಜೀವನ ನಡೆಯದು. ನಮ್ಮ ಜೀವನದ ಸೊಗಸಿಗೂ, ಸುಖಕ್ಕೂ, ನೋವಿಗೂ ನಾವಾಡುವ ಮಾತೇ ಬಹುತೇಕ ಕಾರಣವಾಗಿರುತ್ತದೆ. ಹಾಗೆ ಚೆನ್ನಾಗಿ ಆಡಿದ ಮಾತಿಗೆ ಸಂಸ್ಕೃತದಲ್ಲಿ 'ಸುಭಾಷಿತ' (ಸು: ಚೆನ್ನಾಗಿ, ಭಾಷಿತ: ಹೇಳಿದ್ದು) ಎನ್ನುತ್ತಾರೆ. ಅಂದರೆ, ಕೇಳುವುದಕ್ಕೆ ಇಂಪಾಗಿಯೋ, ಸುಂದರ ಪದಗಳನ್ನು ಪೋಣಿಸಿಯೋ ಅಥವಾ ಆಕರ್ಷಕವಾಗಿಯೋ ಆಡಿದ್ದು ಮತ್ತು ಬದುಕಿನ ಸಾರವನ್ನು ಸುಂದರವಾಗಿ, ಅರ್ಥಪೂರ್ಣವಾಗಿ ನೋಡಿ ಹೇಳಿದ ವಿವೇಕದ ವಚನ. ಹೀಗಾಗಿ ಸಂಸ್ಕೃತದಲ್ಲಿ 'ಸುಭಾಷಿತ' ಎಂಬ ವಿಶಿಷ್ಟ ಸಾಹಿತ್ಯ ಪ್ರಕಾರವೇ ಅನಾದಿಯಿಂದ ಬೆಳೆದು ನಿಂತಿದೆ. ನಮ್ಮ ಮಾತು ಸತ್ಯವಾಗಿಯೂ, ಹಿತವಾಗಿಯೂ, ಬದುಕಿಗೆ ಪೂರಕವಾಗುವಂತೆಯೂ ಇರಬೇಕು. ಆ ಮಾತು ಮಧುರವಾಗಿದ್ದಾಗ ಮಾತ್ರವೇ ಅದರಲ್ಲಡಗಿರುವ ತತ್ವಗಳು ಎಲ್ಲ ವರ್ಗದವರಿಗೂ ಸ್ವೀಕಾರಾರ್ಹವಾಗುತ್ತದಲ್ಲವೇ? ಕಟುಮಾತಾಡಿದರೆ ಕೇಳುವವರಾರು? ಹೀಗೆ ಹೊರಗಿನಿಂದ ಮೃದು-ಮಧುರವಾಗಿದ್ದು, ಒಳಗೆ ಔಷಧೀಯ ಗುಣಗಳನ್ನು ಹೊಂದಿರುವಂಥ ಸುಭಾಷಿತಗಳ ಉದ್ದೇಶವೂ, ಸಂಸ್ಕಾರಪೂರ್ಣ ಮತ್ತು ಆರೋಗ್ಯವಂತ ಸಮಾಜದ ನಿರ್ಮಾಣವೇ ಆಗಿದೆ.

'ಭಾಷಾಸು ಮುಖ್ಯಾ ಮಧುರಾ ದಿವ್ಯಾ ಗೀರ್ವಾಣ ಭಾರತೀ। ತಸ್ಮಾದ್ಧಿ ಕಾವ್ಯಂ ಮಧುರಂ ತಸ್ಮಾದಪಿ ಸುಭಾಷಿತಮ್'- ಅಂದರೆ, ಭಾಷೆಗಳಲ್ಲಿ ಮುಖ್ಯವೂ ಮಧುರವೂ ದಿವ್ಯವೂ ಆದುದು ಸಂಸ್ಕೃತಭಾಷೆ; ಈ ಭಾಷೆಯಲ್ಲಿರುವ ಕಾವ್ಯವು ಮಧುರ, ಅದಕ್ಕಿಂತಲೂ ಸುಭಾಷಿತ ಇನ್ನೂ ಮಧುರ' ಎನ್ನುವುದು ಈ ಶ್ಲೋಕದ ಭಾವ. ಸುಭಾಷಿತವೊಂದು ತನ್ನ ಬಗ್ಗೆ ತಾನೇ ಹೇಳಿಕೊಂಡ ಮತ್ತೊಂದು ಪರಿಯಿದು: 'ದ್ರಾಕ್ಷಾ ಮ್ಲಾನಮುಖೀ ಜಾತಾ ಶರ್ಕರಾ ಚಾಶ್ಮತಾಂ ಗತಾ । ಸುಭಾಷಿತರಸಸ್ಯಾಗ್ರೇ ಸುಧಾ ಭೀತಾ ದಿವಂಗತಾ'- ಅಂದರೆ ಸುಭಾಷಿತ ರಸದ ಮುಂದೆ ದ್ರಾಕ್ಷಿಫಲವು ಖಿನ್ನವಾಗಿ ಮುಖಕೆಳಗೆ ಮಾಡಿತು, ಸಕ್ಕರೆ ಕಲ್ಲಾಗಿಹೋಯಿತು (ಕಲ್ಲುಸಕ್ಕರೆ); ಅಮೃತವು ಇಲ್ಲಿನ್ನು ತನ್ನನ್ನು ಕೇಳುವವರು ಯಾರೂ ಇರುವುದಿಲ್ಲವೆಂದು ಹೆದರಿ ಸ್ವರ್ಗಕ್ಕೆ ಓಡಿಹೋಯಿತು ಎಂದರ್ಥ. ದ್ರಾಕ್ಷಿಯ ಗೊಂಚಲು ಸ್ವಾಭಾವಿಕವಾಗಿ ಇರುವುದೇ ಕೆಳಮುಖವಾಗಿ. ಕಲ್ಲುಸಕ್ಕರೆಯಂತೂ ಪ್ರತ್ಯೇಕವಾಗಿ ಇದ್ದೇ ಇದೆ, ಸಕ್ಕರೆ ಕಲ್ಲಾದದ್ದಲ್ಲ. ಅಮೃತ ಇರುವುದೇ ಸ್ವರ್ಗದಲ್ಲಿ, ಹೆದರಿ ಇಲ್ಲಿಂದ ಓಡಿಹೋದದ್ದಲ್ಲ. ಆದರೆ ಸುಭಾಷಿತವು ಅದನ್ನು ಪ್ರಸ್ತುತಪಡಿಸುವ ರೀತಿ ಅದ್ಭುತ. ಅದನ್ನೇ ಇನ್ನೊಂದು ಸುಭಾಷಿತ ಹೀಗೆಂದಿದೆ: 'ಪೃಥಿವ್ಯಾಂ ತ್ರೀಣಿ ರತ್ನಾನಿ ಜಲಮನ್ನಂ ಸುಭಾಷಿತಂ । ಮೂಢೈಃ ಪಾಷಾಣಖಂಡೇಷು

ರತ್ನಸಂಜ್ಞಾ ವಿಧೀಯತೇ॥'- ಅಂದರೆ, ನೀರು, ಅನ್ನ ಮತ್ತು ಒಳ್ಳೆಯ ಮಾತುಗಳು ಮಾತ್ರ ಭೂಮಿಯಲ್ಲಿನ ಮೂರು ಶ್ರೇಷ್ಠ ರತ್ನಗಳು; ಆದರೆ ಮೂರ್ಖರು ಕಲ್ಲಿನ ಚೂರುಗಳನ್ನು ರತ್ನ ಎಂದು ಕರೆಯುತ್ತಿರುವುದು ವಿಷಾದಕರ ಎಂದರ್ಥ. ಬೆಳ್ಳಿ, ಬಂಗಾರ, ವಜ್ರ, ಹರಳು ಮುಂತಾದವನ್ನು ಇಲ್ಲಿ ಕಲ್ಲಿನ ಚೂರುಗಳು ಎಂದು ಜರಿದಂತಾಯಿತು.

ಲೋಕೋಕ್ತಿ ಅಥವಾ ನಾಣ್ನುಡಿ ಸೂಕ್ತಿಗಳು ಹಾಗೂ ಗಾದೆಗಳು ಬೇರೆ ಬೇರೆ, ಅವು ಸುಭಾಷಿತಗಳಲ್ಲ. ಸಂಸ್ಕೃತದ ವಿಶಿಷ್ಟ ಸಾಹಿತ್ಯ ಪ್ರಕಾರವಾದ ಸುಭಾಷಿತದ ಸಂದೇಶವು ಸಾಮಾನ್ಯವಾಗಿ ಉಪದೇಶ, ಸೂತ್ರ, ಸಲಹೆ, ಸತ್ಯ ಅಥವಾ ಒಗಟುಗಳಿಂದ ಕೂಡಿರುತ್ತದೆ. ಈ ಸುಭಾಷಿತಗಳು ಸಾಮಾನ್ಯವಾಗಿ ಸಣ್ಣ ಸ್ಮರಣೀಯ ಶ್ಲೋಕಗಳ ರೂಪದಲ್ಲಿದ್ದು, ಇವು 4 ಪಾದಗಳಲ್ಲಿ, ಕೆಲವೊಮ್ಮೆ 2 ಪಾದಗಳಲ್ಲಿಯೂ ಇರುತ್ತವೆ. ಸುಭಾಷಿತವು, ಭಾರತದ ಪ್ರಾಚೀನ ಮತ್ತು ಮಧ್ಯಕಾಲೀನ ಯುಗದಿಂದ ಉಳಿದುಕೊಂಡು ಬಂದಿರುವ ಅನೇಕ ಸೃಜನಶೀಲ ಕೃತಿಪ್ರಕಾರಗಳಲ್ಲಿ ಒಂದಾಗಿದೆ. ಕೆಲವು ಲೇಖಕರು ಸುಭಾಷಿತಗಳನ್ನು, ಸಕ್ಕರೆ ಲೇಪಿತ ಕಹಿಔಷಧಿಗಳೊಂದಿಗೆ ಅವುಗಳ ಯೋಗ್ಯತೆಯನ್ನು ಪರಿಗಣಿಸಿ ಹೋಲಿಸುತ್ತಾರೆ. ವಿವಿಧ ವಿಷಯಗಳೊಂದಿಗೆ ವ್ಯವಹರಿಸುವ ಸುಭಾಷಿತವು, ಪ್ರತಿಯೊಬ್ಬರಿಗೂ ಸಂಬಂಧಿಸಬಹುದಾದ ದೈನಂದಿನ ಅನುಭವಗಳ ವಿಷಯಗಳನ್ನು ಒಳಗೊಂಡಿರುತ್ತದೆ, ನಿರರ್ಗಳವಾಗಿಯೂ ಕಾವ್ಯಾತ್ಮಕವಾಗಿಯೂ, ಪರಿಪೂರ್ಣವಾಗಿಯೂ ಇರುತ್ತದೆ. ಅದರ ಭಾವನೆ, ಕಲ್ಪನೆ ಮತ್ತು ಸತ್ವಗಳನ್ನು ಸುಭಾಷಿತಕಾರರು ನಿಜಜೀವನದಿಂದಲೇ ಪಡೆದಿರುತ್ತಾರೆ ಮತ್ತು ಆ ತತ್ವಗಳ ಫಲವನ್ನು ಅನುಭವದ ಆಧಾರದಲ್ಲಿ ಇತರರಿಗೆ ನೀಡಲು ಯತ್ನಿಸಿದ್ದಾರೆ. ಸುಭಾಷಿತದ ಕಾವ್ಯಾತ್ಮಕ ನಿರೂಪಣಾ ಶೈಲಿಯನ್ನು 'ಮುಕ್ತಕ' ಎಂದೂ ಕರೆಯಲಾಗುತ್ತದೆ, ಏಕೆಂದರೆ ಅದರ ಅರ್ಥವು ಸ್ವತಃ ಸಿದ್ಧವಾದುದಾಗಿದೆ. ಈ ಕಾವ್ಯರೂಪವನ್ನು ಪರ್ಷಿಯನ್ ಭಾಷೆಯ ರುಬಾಯಿ ಅಥವಾ ಜಪಾನಿನ ಟಂಕಾಗೆ ಕೆಲವರು ಹೋಲಿಸಿದ್ದೂ ಇದೆ.

ಸಾಯಣನ 'ಸುಭಾಷಿತ ಸುಧಾನಿಧಿ' ಮತ್ತು 'ಸಮಯೋಚಿತ ಪದ್ಯಮಾಲಿಕಾ' ಮುಂತಾದ, ಸುಭಾಷಿತಗಳನ್ನೊಳಗೊಂಡ ಜ್ಞಾನಸಾಹಿತ್ಯದ ಕೃತಿಗಳನ್ನು ಹೊರತುಪಡಿಸಿ ಹೆಚ್ಚಿನ ಸುಭಾಷಿತಗಳ ಲೇಖಕರು ಯಾರೆಂದು ತಿಳಿದುಬರುವುದಿಲ್ಲ. 'ಸುಭಾಷಿತ ಮಂಜರಿ', 'ಸುಭಾಷಿತ ರತ್ನಭಾಂಡಾಗಾರ' ಮುಂತಾದ ಸಂಗ್ರಹ ಕೃತಿಗಳು ನಮಗಿಂದು ಲಭ್ಯವಿವೆ. ಭರ್ತೃಹರಿ, ಚಾಣಕ್ಯ, ಕಾಳಿದಾಸ, ಭವಭೂತಿ ಮುಂತಾದ ಪ್ರಾಚೀನ ವಿದ್ವಾಂಸರೂ ತಮ್ಮ ಕೃತಿಗಳ ನೈತಿಕ ಮೌಲ್ಯಗಳನ್ನು ಅಭಿವ್ಯಕ್ತಿಸಲು ಈ ಸುಭಾಷಿತಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ ಎನ್ನಲಾಗಿದೆ.

ಸೂಕ್ತಿ, ಸುಭಾಷಿತ, ಅಮರವಾಣಿಗಳ ಬಗ್ಗೆ ಈಗ ಹೇಳಿದ್ದೇಕೆಂದರೆ, ಇತ್ತೀಚೆಗೆ ನಾವು ಭಾಷಣ ಮಾಡುವಾಗ, ಲೇಖನ ಬರೆಯುವಾಗ ವಿದೇಶಿ ತತ್ತ್ವಜ್ಞಾನಿಗಳ/ಲೇಖಕರ ಇಂಗ್ಲಿಷ್ ಸೂಕ್ತಿಗಳನ್ನು ಹೆಚ್ಚಾಗಿ ಬಳಸುವ ಚಾಳಿಯನ್ನು ರೂಢಿಸಿಕೊಂಡುಬಿಟ್ಟಿದ್ದೇವೆ. ಹಾಗಂತ, ವಿದೇಶಿ ತತ್ವಗಳು ನಮಗೆ ಬೇಡ ಅಂತಲ್ಲ. 'ಆನೋ ಭದ್ರಾಃ ಕ್ರತವೋ ಯಂತು ವಿಶ್ವತಃ'- ಅಂದರೆ ಯಾವುದೇ ಮೂಲೆಯಿಂದ ಸರಿಯಾದ ಜ್ಞಾನ ಹರಿದುಬಂದರೆ ನಮಗದು ಸ್ವೀಕಾರಾರ್ಹ ಎನ್ನುವುದನ್ನು ಋಗ್ವೇದ ನಮಗೆ ಕಲಿಸಿದೆ. ಆದರೆ ನಮ್ಮಲ್ಲೇ ಬಂಗಾರವಿರುವಾಗ ಇತರ ನಿಮ್ನಲೋಹಗಳ ಆಭರಣಗಳನ್ನು ಧರಿಸಿ ಸಂಭ್ರಮಿಸುವುದರಲ್ಲಿ ಏನು ಹೆಚ್ಚುಗಾರಿಕೆಯಿದೆ?

'ಸುಲಿದ ಬಾಳೆಯ ಹಣ್ಣಿನಂದದಿ ಕಳೆದ ಸಿಗುರಿನ ಕಬ್ಬಿನಂದದಿ ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ ಲಲಿತವಹ ಕನ್ನಡದ ನುಡಿಯಲಿ ತಿಳಿದು ತನ್ನೊಳು ತನ್ನ ಮೋಕ್ಷವ ಗಳಿಸಿಕೊಂಡೊಡೆ ಸಾಲದೇ?' ಎಂದು ಮಹಲಿಂಗರಂಗ ಹೇಳಿರುವ ಹಾಗೆ, ನಮ್ಮಲ್ಲೇ ಬೇಕಾದಷ್ಟಿರುವಾಗ ಪರಕೀಯ ತತ್ವಗಳಿಂದಾಗುವುದೇನಿದೆ? ನಮ್ಮ ಭಾಷಿಕರಲ್ಲಿ ಉತ್ತಮವಾದ ಸೂಕ್ತಿಗಳು, ಹಿತವಚನಗಳು ಇಲ್ಲವೆಂದು ನಮ್ಮ ಕಲ್ಪನೆಯಿರಬಹುದು; ಆದರೆ ಕನ್ನಡದಂಥ ನಮ್ಮ ದೇಶಭಾಷೆಗಳಲ್ಲಿಯೂ ಜೀವನದಿಗ್ದರ್ಶಕ ಸುಭಾಷಿತಗಳಿಗೆ ಸಮನಾದ ಸೂಕ್ತಿಸಾಹಿತ್ಯಗಳಿವೆ. ಮಹಲಿಂಗರಂಗರ 'ಅನುಭವಾಮೃತ', ಸರ್ವಜ್ಞನ ವಚನಗಳು, ಶಿವಶರಣರ ವಚನಗಳು, ಮಂಕುತಿಮ್ಮನ ಕಗ್ಗ ಇತ್ಯಾದಿಗಳನ್ನು ಇಲ್ಲಿ ಉದಾಹರಿಸಬಹುದು. ಹೀಗೆ ಸಣ್ಣ ಸಣ್ಣ ನುಡಿಗಳಲ್ಲಿ ಮಹತ್ತರ ತತ್ವಗಳನ್ನು ಸರಳವಾಗಿ ಸಾರಿ, ಮಂದಾಧಿಕಾರಿಗಳಿಗೂ ಅದರ ಸತ್ವವು ತಲುಪುವಂತೆ ರಚಿಸಲ್ಪಟ್ಟಿರುವ ಸುಭಾಷಿತಗಳು ಮತ್ತು ಸೂಕ್ತಿಗಳ ಅಪಾರ ಸಂಗ್ರಹ ನಮ್ಮಲ್ಲಿವೆ. ಇಂಥ ಜ್ಞಾನಭಂಡಾರವನ್ನು ನಾವು ಅಭ್ಯಸಿಸುವ, ಬಳಸುವ, ಉಳಿಸುವ ಮನಸ್ಸು ಮಾಡಬೇಕು, ತನ್ಮೂಲಕ ಜೀವನದ ಉತ್ತಮಿಕೆಯನ್ನು ಕಾಣಬೇಕು ಎಂಬುದೇ ಈ ಲೇಖನದ ಆಶಯ.

ಹನಿ ಹನಿ ಫ್ರೇಮ್ ಕಹಾನಿ

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಸಾಮಾಜಿಕ ಜಾಲತಾಣಗಳಲ್ಲಿ ಸಮಾಜದ ಸ್ವಾಸ್ಥ್ಯ ಕೆಡಿಸಲೆಂದೇ ಕೆಲವರಿದ್ದಾರೆ. ಅಭಿಮಾನಿಗಳ ಹೆಸರಲ್ಲಿ ದುರಭಿಮಾನ ತೋರಿಸುವವರು ಇತ್ತೀಚೆಗೆ ಹೆಚ್ಚಾಗಿದ್ದಾರೆ. ಅದರಲ್ಲೂ ಕೆಲವರು ವಿಕೃತ ಅಭಿಮಾನಿಗಳು ಎನಿಸುತ್ತದೆ. ಡಾ.ರಾಜ್‌ಕುಮಾರ್ ಮತ್ತು ಅವರ ಕುಟುಂಬದ ಬಗ್ಗೆ ಸುಖಾಸುಮ್ಮನೆ ಅಸಭ್ಯ ಪೋಸ್ಟ್‌ಗಳನ್ನು ಹಾಕಿ ವಿಕೃತಿ ಮೆರೆಯುವುದು ಕೆಲವರ ಚಟ. ಇದು ಮೊನ್ನೆ 'ಅಪ್ಪು' ಚಿತ್ರದ ಮರುಬಿಡುಗಡೆಯ ಸಮಯದಲ್ಲೂ ಆಯ್ತು. ಇಂಥವರಿಗೆ ರಾಜ್‌ಕುಮಾರ್ ಅಭಿಮಾನಿಗಳು ತಕ್ಕ ಪಾಠ ಕಲಿಸಿ ಅವರಿಂದ ಕ್ಷಮೆ ಕೇಳಿಸಿರುವುದೂ ಆಗಿದೆ. ಇಂಥ ವಿಕೃತಿಗೆ ಕಾರಣ ಹುಡುಕಿದಾಗ ಇವು ನಿರುದ್ಯೋಗದ ಫಲ ಎನಿಸಿದರೆ ತಪ್ಪಿಲ್ಲ. ಇಂಥವರಿಗೆ ಓದು, ಕೆಲಸ ಯಾವುದರಲ್ಲೂ ಆಸಕ್ತಿ ಇರೋದಿಲ್ಲ. ಯಾವ ಟ್ಯಾಲೆಂಟೂ ಇರೋದಿಲ್ಲ, ಹಾಗಾಗಿ ಫೇಸ್‌ಬುಕ್ ನಲ್ಲಿ ಗಮನ ಸೆಳೆಯಲು ಇಂಥ ಕೆಲಸಗಳಿಗೆ ಕೈ ಹಾಕುತ್ತಾರೆ. ಬೇಸರದ ಸಂಗತಿ ಅಂದ್ರೆ ಇದಕ್ಕೆಲ್ಲಾ ಬಳಕೆ ಆಗ್ತಿರೋದು 'ದರ್ಶನ್ ಅಭಿಮಾನಿಗಳು' ಅನ್ನೋ 'ಟ್ಯಾಗ್'. ಇಂಥವರು ತಮ್ಮ ನಟನ ಮೇಲಿನ ಅಭಿಮಾನದ ಹೆಸರಲ್ಲಿ ರಾಜ್‌ಕುಮಾರ್ ಅಷ್ಟೇ ಅಲ್ಲ, ವಿಷ್ಣುವರ್ಧನ್ ಅವರನ್ನೂ ಬಿಡಲ್ಲ. ಇಂಥ ಕೆಲಸದಲ್ಲಿ ಅದೇನೋ ವಿಕೃತ ಆನಂದ ಇವರಿಗೆ. ಇಂಥವರ ಅಕೌಂಟ್‌ಗಳು ರಿಪೋರ್ಟ್ ಆಗಿ ಲಾಕ್ ಆದರೆ ಇನ್ನೊಂದು ಅಕೌಂಟ್ ಓಪನ್ ಮಾಡುತ್ತಾರೆ. ಫೇಸ್-ಟು-ಫೇಸ್ ಯಾರೂ ಸಿಗಲ್ಲ ಎಂಬ ನಂಬಿಕೆಯಲ್ಲಿ ಅಶ್ಲೀಲವಾಗಿ ಮಾತನಾಡುತ್ತಾರೆ. ಒಂದೊಮ್ಮೆ ಸಿಕ್ಕಿಬಿದ್ದು ಗೂಸಾ ತಿಂದರೆ ಕ್ಷಮೆ ಕೇಳಿ ಮತ್ತೆ ಇನ್ನೊಂದು ಹೆಸರಲ್ಲಿ ಅದೇ ಕೆಲಸಕ್ಕಿಳಿಯುತ್ತಾರೆ. ಒಟ್ಟಿನಲ್ಲಿ ಫೇಸ್‌ಬುಕ್‌ನಂಥ ಅಸುರಕ್ಷಿತ ಜಾಲತಾಣಗಳಲ್ಲಿ ಇಂಥ ಅನಿಷ್ಟಗಳಿಗೆ ಕೊನೆ ಇರೋದಿಲ್ಲ. ಇಂಥವರ ಬಗ್ಗೆ ಅದೆಷ್ಟು ತಲೆಕೆಡಿಸಿಕೊಳ್ಳೋಕಾಗುತ್ತೆ? ಒಂದೆರಡು ಸಲ ಬುದ್ಧಿ ಕಲಿಸುವ ಕೆಲಸ ಮಾಡಬಹುದೇ ಹೊರತು, ಇವರಂತೆ ಮಾಡೋ ಕೆಲಸ ಬಿಟ್ಟು ಅದೇ ಕೆಲಸ ಮಾಡೋಕಾಗಲ್ಲ ಅನ್ನೋದೇ ಇಂಥವರ ಭಂಡಧೈರ್ಯ.

ಲೂಸ್ ಟಾಕ್ ▸▸ ಹನಿ ಟ್ರ್ಯಾಪ್ಡ್ ರಾಜಕಾರಣಿ

- **ಏನ್ ಸರ್, ಹನಿ ಟ್ರ್ಯಾಪ್ ವಿಷ್ಯ ಜೋರಾಗಿ ಕೇಳಿಸ್ತಾ ಇದೆ ಅಲ್ವಾ?**
- ಏನ್ ಮಾಡೋದು. ಈ ಪರಿಸ್ಥಿತಿಯಲ್ಲಿ ರಾಜಣ್ಣ ಅವರ 'ಜೇನಿನ ಹೊಳೆಯೋ' ಹಾಡು ಹಾಡೋಕೂ ಭಯ ಆಗುತ್ತೆ. ಅಂದಹಾಗೆ ನಾನ್ ಹೇಳಿದ್ದು ಅಣ್ಣಾವ್ರ ಬಗ್ಗೆ ಕಣ್ರೀ, ನಮ್ ಸಚಿವ ರಾಜಣ್ಣ ಅವ್ರ ಬಗ್ಗೆ ಅಲ್ಲ.
- **ಓಹೋ, ಸರಿ, ನೀವ್ಯಾಕೆ ಇಷ್ಟ್ ಬೇಸರ ಮಾಡ್ಕೊಂಡಿದ್ದೀರಿ. ಮಾಡಿದೋರು ಅನುಭವಿಸ್ತಾರೆ. ಹನಿಟ್ರ್ಯಾಪ್ ಅಂದ್ರೆ ನೀವು ತುಟಿ ಮುಟ್ಟಿ ನೋಡಿಕೊಳ್ಳೋದು ಯಾಕೆ?**
- ಅಯ್ಯೋ, ಈಗ ಜನರ ಕಣ್ಣಿಗೆ ಎಲ್ಲರೂ ಹಂಗೇ ಕಾಣಿಸ್ತಾರೆ. ಮಾಡಿದ್ರೂ, ಮಾಡದಿದ್ರೂ, ಬೆಲೆ ತೆರಲೇಬೇಕು, ಇದೊಂಥರಾ ತುಟಿ ಭತ್ಯೆ.
- **ಇದರಲ್ಲಿ ಎಲ್ಲರನ್ನೂ ಸಿಕ್ಕಾಕಿಸ್ತಾರೆ ಅಂತೀರಾ?**
- ಹೌದು ಮತ್ತೆ. ಇದು ತಮಗೆ ಆಗದವರನ್ನು 'ಫ್ರೇಮ್' ಮಾಡೋಕೆ ಮಾಡಿರೋ ಪ್ಲ್ಯಾನ್. ಹನಿ ಹನಿ 'ಫ್ರೇಮ್' ಕಹಾನಿ
- **ಮುಂದೆ ಏನಾಗಬಹುದು ನಿಮ್ಮ ಪ್ರಕಾರ?**
- ಏನಾಗುತ್ತೆ. ಸುದೀಪ್ ಅವರಂಥವರು, 'ಮಕ್ಕೀ' ಆಯ್ತು ಈಗ 'ಮಧುಮಕ್ಕೀ' ಅಂತ ಹನಿಟ್ರ್ಯಾಪ್ ಬಗ್ಗೆ ಸಿನಿಮಾ ಮಾಡ್ತಾರೆ ಅಷ್ಟೇ.
- **ಹೋಗ್ಲಿ ಬಿಡಿ, ಇನ್ಮುಂದೆ ಆದ್ರೂ ಹುಷಾರಾಗಿರಿ**
- ಖಂಡಿತಾ ಇರ್ಲೇಬೇಕು. ಇನ್ಮೇಲೆ ರೋಡಲ್ಲಿ ಯಾರಾದ್ರೂ ಡ್ರಾಪ್ ಕೇಳಿದ್ರೂ ಹುಷಾರಾಗಿರ್ಬೇಕು. ಯಾರಿಗೆ ಗೊತ್ತು ಅದು ಹನಿ 'ಡ್ರಾಪ್' ಇರಬಹುದು ಅಂತ.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಒಂದ್ಸಲ ಕೆಲಸದ ನಿಮಿತ್ತ ಸ್ಪೇನ್‌ಗೆ ಹೋಗಿದ್ದ ಖೇಮು ಅಲ್ಲಿ ತಿಂಗಳುಗಟ್ಟಲೇ ಇರಬೇಕಿತ್ತು. ಆದರೆ, ಇಂಡಿಯಾದ ಊಟಕ್ಕೆ ಅಡಿಕ್ಟ್ ಆಗಿದ್ದ ಖೇಮುಗೆ ಅಲ್ಲಿನ ಊಟ ರುಚಿಸಿರಲಿಲ್ಲ. ಹಂಗಾಗಿ ವೀಕೆಂಡ್‌ಗಳಲ್ಲಿ ಅಲ್ಲಿರೋ ಎಲ್ಲಾ ರೆಸ್ಟೋರೆಂಟ್‌ಗಳನ್ನೂ ಹುಡುಕಿಕೊಂಡು ಹೋಗಿ ಟೇಸ್ಟ್ ಹೇಗಿದೆ ಅಂತ ನೋಡ್ತಿದ್ದ. ಹಿಂಗೇ ಒಮ್ಮೆ ಅಲ್ಲಿ 'ಫೈಟಿಂಗ್ ಬುಲ್' ಅನ್ನೋ ರೆಸ್ಟೋರೆಂಟ್ ಕಾಣಿಸಿತು. ಇವತ್ತು ಇಲ್ಲಿನ ಟೇಸ್ಟ್ ಟೆಸ್ಟ್ ಮಾಡೋಣ ಅಂದುಕೊಂಡು ಒಳಗೆ ಹೋದ. ವೇಟರ್ ಬಂದು ''ಏನು ಕೊಡ್ಲಿ?'' ಅಂದ. ಅದಕ್ಕೆ ಖೇಮು, ''ಇವತ್ತಿನ ಸ್ಪೆಷಲ್ ಏನಿದೆ ತಗೊಂಡ್ ಬಾ'' ಅಂದ. ವೇಟರ್, ಒಂದು ಪ್ಲೇಟ್‌ನಲ್ಲಿ ಮೀಟ್ ತಂದಿಟ್ಟ. ಖೇಮು ಅದನ್ನು ತಿನ್ನತೊಡಗಿದ. ಮೊದಲ ಬಾರಿಗೆ ಖೇಮುಗೆ ಸ್ಪೇನ್ ಹೋಟೆಲ್‌ನ ಒಂದು ಡಿಷ್ ತುಂಬಾ ಇಷ್ಟ ಆಗಿಬಿಡ್ತು. ವೇಟರ್‌ನ ಕರೆದು ''ಇದು ಯಾವ ಡಿಷ್?'' ಅಂತ ಕೇಳಿದ. ಅದಕ್ಕೆ ವೇಟರ್, ''ಸರ್ ನಿಮಗೆ ಗೊತ್ತು, ಸ್ಪೇನ್‌ನಲ್ಲಿ ಬುಲ್ ಫೈಟಿಂಗ್ ಫೇಮಸ್. ಇಲ್ಲಿ ಪ್ರತಿದಿನ ನಡೆಯುತ್ತೆ. ಇವತ್ತಿನ ಫೈಟರ್ ಸೋಲಿಸಿದ ಬುಲ್‌ನ ಟೆಸ್ಟಿಕಲ್ಸ್ ಇದು. ಟೆಸ್ಟಿಕಲ್ಸ್ ಫ್ರೈ'' ಅಂದ. ಅದಕ್ಕೆ ಖೇಮು, ''ಟೇಸ್ಟ್ ತುಂಬಾ ಚೆನ್ನಾಗಿದೆ. ಇನ್ನೊಂದು ಪ್ಲೇಟ್ ಕೊಡು'' ಅಂದ. ಅದಕ್ಕೆ ವೇಟರ್, ''ಇಲ್ಲ ಸರ್, ಪ್ರತಿದಿನ ಒಂದ್ ಫೈಟ್ ನಡೆಯೋದು, ಒಂದೇ ಬುಲ್ ಸಿಗೋದು, ಮತ್ತೆ ನಾಳೆನೇ ಈ ಡಿಷ್ ಸಿಗೋದು, ಇದೇ ಟೈಮಿಗೆ ಬಂದು ವೆಯ್ಟ್ ಮಾಡಿದ್ರೆ ಸಿಗುತ್ತೆ'' ಅಂದ. ಸರಿ, ಖೇಮು ಮರುದಿನ ಅದೇ ಸಮಯಕ್ಕೆ ಹೋಗಿ ಅದನ್ನೇ ಆರ್ಡರ್ ಮಾಡಿದ. ವೇಟರ್ ಪ್ಲೇಟ್ ತಂದಿಟ್ಟ. ಎಲ್ಲಾ ತಿಂದ ಮೇಲೆ ವೇಟರ್‌ನ ಕರೆದು, ''ಟೇಸ್ಟೇನೋ ಚೆನ್ನಾಗಿತ್ತು. ಆದರೆ ನಿನ್ನೆ ನೀನು ಕೊಟ್ಟ ಪೀಸ್‌ಗಳ ಸೈಜ್ ದೊಡ್ಡದಿತ್ತು. ಇವತ್ತು ತುಂಬಾ ಸಣ್ಣವಿದ್ದವು, ಯಾಕೆ?'' ಅಂತ ಕೇಳಿದ. ಅದಕ್ಕೆ ವೇಟರ್ ಹೇಳಿದ-''ಏನ್ ಮಾಡೋದು ಸರ್, ಒಂದೊಂದ್ ಸಲ ಫೈಟ್‌ನಲ್ಲಿ ಬುಲ್ ಕೂಡಾ ಗೆಲ್ಲುತ್ತೆ''

ಲೈನ್ ಮ್ಯಾನ್

- **ಕ್ರಿಯೇಟಿವ್ ಸತ್ಯ**
- ಹೊಟ್ಟೆ ಖಾಲಿ ಇದ್ರೆ ತಲೆ ಮೆಸೇಜ್ ಕಳಿಸುತ್ತೆ ಹಸಿವಾಗಿದೆ ಅಂತ. ತಲೆ ಖಾಲಿ ಇದೆ, ಏನೂ ಮಾಡೋಕಾಗಲ್ಲ ಅಂತ ಅನ್ನಿಸಿದಾಗ ಹೊಟ್ಟೆ ಮೆಸೇಜ್ ಕಳಿಸುತ್ತೆ, ಹೊಟ್ಟೆ ಪಾಡಿಗೆ ಏನಾದ್ರೂ ಕೆಲಸ ಮಾಡ್ಲೇಬೇಕು, ಮುಚ್ಕೊಂಡ್ ಮಾಡು ಅಂತ.
- **ಕಾನ್ಫಿಡೆನ್ಸ್ ಮ್ಯಾಟರ್**
- ಲೈಫಲ್ಲಿ ಆತ್ಮವಿಶ್ವಾಸ ಮುಖ್ಯ. Zomatoದವರನ್ನ ನೋಡಿ ಕಲೀಬೇಕು. ಹಬ್ಬದ ದಿನಾನೂ, 'ಊಟ ಆರ್ಡರ್ ಮಾಡಲ್ವಾ?' ಅಂತ ಮೆಸೇಜ್ ಮಾಡ್ತಾರೆ..
- **ಫೆಸ್ಟಿವಲ್ ಟೈಮ್**
- ಹಬ್ಬಗಳ ದಿನ ಹುಷಾರಾಗಿರಿ. ರಿಸ್ಕ್ ತಗೋಳ್ಳೋಕೆ ಹೋಗ್ಬಾರದು.. ಯಾಕಂದ್ರೆ, ಹಬ್ಬಗಳ ಹಿಂದೆ ಮುಂದೆ ಏನೇ ಸಡನ್ ಆಗಿ ಕಷ್ಟ ಬಂದ್ರೂ, ಪ್ರಾಣ ಹೋಗುತ್ತೆ ಅಂದ್ರೂ, ಸಹಾಯಕ್ಕೆ ಯಾವ ಸ್ನೇಹಿತರೂ ಬರಲ್ಲ. ನೀವು need help urgent ಅಂತ ಎಷ್ಟ್ ಮೆಸೇಜ್ ಹಾಕಿದ್ರೂ ರಿಪ್ಲೈ ಮಾಡಲ್ಲ, ಒಂದ್ ವೇಳೆ ಮಾಡಿದ್ರೂ, ಮ್ಯಾಕ್ಸಿಮಮ್ ಅಂದ್ರೆ .. Thank u, same to u ಅಂತ ರಿಪ್ಲೈ ಮಾಡ್ತಾರೆ ಅಷ್ಟೇ.
- **ಗುಂಪು ಗಲಭೆಯಲ್ಲಿ ಸತ್ತವರು**
- ಗುಂಪಲ್ಲಿ 'ಗೋವಿಂದ'
- **ಗಂಡ ಹೆಂಡ್ತಿ ಮ್ಯಾಟ್ರು**
- ಅಲ್ಲ ಕಣೇ, ಊಟಕ್ಕೆ ಉಪ್ಪಿನಕಾಯಿನೇ ಹಾಕಲ್ವಲ್ಲ ನೀನು, ಅದನ್ನ ಹಂಗೇ ಇಟ್ಕೊಂಡು ಏನ್ ಮಾಡ್ತಿಯಾ.. ಏನ್ ಉಪ್ಪಿನಕಾಯಿ ಹಾಕ್ಕೊಂಡ್ ನೆಕ್ತೀಯಾ
- **ಕಿಸ್ಸಿಂಗ್ ಸೀನ್ ಜಾಸ್ತಿ ಇರೋ ಯುವ ಪ್ರೇಮಕಥೆ ಇರೋ ಸಿನಿಮಾ ಟೈಟಲ್**
- ಜೈ 'ಜವಾನ್', ಜೈ ಕಿಸ್-ಆನ್
- **ಒಂದೇ ಹಕ್ಕಿ ಮೇಲೆ ಕಣ್ಣಾಕಿರೋ ಇಬ್ಬರು ಹುಡುಗರು**
- ಸಮಾನ ಲುಕ್ಕಿಗಳು
- **ಯಾರಿಗೂ ಗೊತ್ತಿಲ್ಲದ ವಿಷಯಗಳ ಮೇಲೆ 'ಬೆಳಕು' ಚೆಲ್ಲುವವರು**
- 'ಲೈಟ್' ಮೈಂಡೆಡ್ ಪೀಪಲ್

ಛಾಯಾಗ್ರಾಹಕರಿಗೆ ಅರಿವಾಯ್ತು ಛಾಯೆಯ ಮಹತ್ವ!

ರಸದೌತಣ
ಯಗಟಿ ರಘು ನಾಡಿಗ್
naadigru@gmail.com

ಧೀರೇಂದ್ರ ಗೋಪಾಲರು 'ನಾಗರಹಾವು' ಚಿತ್ರದ ತುಕಾರಾಮನ ಪಾತ್ರಕ್ಕೆ ಆಯ್ಕೆಯಾದ ಪರಿ ಮತ್ತು ತಾಂತ್ರಿಕ ಯಡವಟ್ಟಿನಿಂದಾಗಿ ಕುಸಿದುಹೋಗಿದ್ದ ಪುಟ್ಟಣ್ಣರನ್ನು ಮಾಸ್ಟರ್ ಹಿರಣ್ಣಯ್ಯನವರು ಉತ್ತೇಜಿಸಿ ಮತ್ತೊಮ್ಮೆ ಚಿತ್ರೀಕರಣಕ್ಕೆ ಸಜ್ಜುಗೊಳಿಸಿದ ಪ್ರಸಂಗವನ್ನು ಕಳೆದ ಸಂಚಿಕೆಯಲ್ಲಿ ಓದಿದಿರಿ. ಈಗ ಮತ್ತಷ್ಟು ಬಿಡಿ ಪ್ರಸಂಗಗಳು..

• • •

ಯಾವುದೇ ಚಿತ್ರದ ಪ್ರಾರಂಭಕ್ಕೂ ಮುನ್ನ, ಸಂಭಾಷಣೆ/ಹಾಡಿನ ಭಾಗಗಳಿಗೆ ಹೊರಾಂಗಣದ ಹಿನ್ನೆಲೆ ಅಗತ್ಯವಿದ್ದರೆ ಅಂಥ ಸೂಕ್ತ ತಾಣಗಳನ್ನು ಹೆಕ್ಕಲೆಂದು ನಿರ್ಮಾಪಕರು/ನಿರ್ದೇಶಕರು ಊರೂರು ಸುತ್ತುವುದುಂಟು. ಪುಟ್ಟಣ್ಣ ಕಣಗಾಲರೂ ಇದಕ್ಕೆ ಹೊರತಾಗಿರಲಿಲ್ಲ. ಅದರಲ್ಲೂ, 'ನಾಗರಹಾವು' ಚಿತ್ರದ ನಿರ್ವಹಣೆಯನ್ನು ಸ್ವತಃ ಹೆಗಲ ಮೇಲೆ ಹೊತ್ತಿದ್ದರಿಂದಾಗಿ ಹೊರಾಂಗಣದ ಆಯ್ಕೆಗೆ ಒಂದು ಗುಕ್ಕು ಹೆಚ್ಚೇ ಆಸ್ಥೆ ವಹಿಸಿದ್ದರು. 'ನಾಗರಹಾವು' ಕಥೆ ನಡೆಯುವುದು ಚಿತ್ರದುರ್ಗದ ಹಿನ್ನೆಲೆಯಲ್ಲೇ ಆದರೂ, ಇದಕ್ಕೆ ಆಧಾರವಾಗಿದ್ದ ತರಾಸು ಅವರ ಕಾದಂಬರಿಗಳಲ್ಲಿ ಅಲ್ಲಿನ ಕೋಟೆ-ಕೊತ್ತಲಗಳ ಬಗ್ಗೆ ವಿವರಣೆಯಿರಲಿಲ್ಲ. ಹೀಗಾಗಿ, ಚಿತ್ರದುರ್ಗದ ಕೋಟೆಯ ವೈಶಿಷ್ಟ್ಯ ಮತ್ತು ಚಾರಿತ್ರಿಕ ಹಿನ್ನೆಲೆಯೇನು, ಅದರ ಹಿಂದೆ ಯಾವೆಲ್ಲಾ ರಾಜರ ವೀರತ್ವ-ವೈಭವವಿತ್ತು, ಅದಕ್ಕೆ ಲಗ್ಗೆಹಾಕಲು ಹೈದರಾಲಿ ಹೂಡಿದ ಸಂಚನ್ನು ವೀರವನಿತೆ ಓಬವ್ವ ಹೇಗೆ ವಿಫಲಗೊಳಿಸಿದಳು ಎಂಬುದನ್ನು ಕನ್ನಡ ಚಿತ್ರರಸಿಕರಿಗೆ ಕಟ್ಟಿಕೊಡಬೇಕು ಎಂದು ಸಂಕಲ್ಪಿಸಿದ್ದ ಪುಟ್ಟಣ್ಣ, ಇದಕ್ಕಾಗಿ ಕೋಟೆಯನ್ನು ಸಾಕಷ್ಟು ಸಲ ಹತ್ತಿಳಿದರು, ಮೂಲೆಗಳನ್ನೆಲ್ಲಾ ತಡಕಿದರು. ಏಕನಾಥೇಶ್ವರಿ ದೇಗುಲದ ಮುಂದೆ ನಿಂತು ಎರಡೂ ಕೈಗಳ ಹೆಬ್ಬೆರಳು ತೋರುಬೆರಳುಗಳನ್ನೊಮ್ಮೆ ಅಗಲಿಸಿ, ಕ್ಯಾಮೆರಾ ಕಣ್ಣಿನಂತೆ ಮಾಡಿಕೊಂಡು, ರಾಮಾಚಾರಿಗೆ ಚಾಮಯ್ಯ ಮೇಷ್ಟ್ರು ಬೆತ್ತದಿಂದ ಬಾರಿಸುವ, ಅದಕ್ಕೆ ರಾಮಾಚಾರಿ ಕ್ರೋಧಗೊಂಡು ಅವರ ಮೇಲೆ ಅಪ್ಪಳಿಸಲು ಪೇಡುಗಲ್ಲನ್ನು ಎತ್ತಿಹಿಡಿಯುವ ದೃಶ್ಯಗಳನ್ನೆಲ್ಲಾ ಕಲ್ಪಿಸಿಕೊಂಡರು. ಚಾಮಯ್ಯ ಮೇಷ್ಟ್ರು ತಮ್ಮ ಪಟ್ಟಶಿಷ್ಯನನ್ನು ಒಲಿಸಿಕೊಳ್ಳಲು ಕಡಿದಾದ ಬಂಡೆಯೇರಿ ತಲುಪಬೇಕಾಗಿ ಬರುವ ತುಪ್ಪದ ಕೊಳ, ರಾಮಾಚಾರಿ-ಜಲೀಲನ ಫೈಟಿಂಗ್ ನಡೆಯುವ ರಂಗಯ್ಯನ ಬಾಗಿಲು ತಾಣ, ಊರಿನ ಗರಡಿಮನೆ, ಸುಲ್ತಾನ್ ಬತೇರಿ ಇವೆಲ್ಲವನ್ನೂ ಗುರುತು ಹಾಕಿಕೊಂಡರು. ಅಷ್ಟಕ್ಕೂ, ಚಿತ್ರಕಥೆ ಬರೆಯುವ ಹಂತದಲ್ಲೇ 'ನಾಗರಹಾವು' ಅವರ ಮಿದುಳಿನಲ್ಲಿ ಸಾಕಷ್ಟು ಸಲ ಸುಳಿದಾಡಿ ಹೆಡೆಬಿಚ್ಚಿ ಆಗಿತ್ತಲ್ಲಾ?!

ಯಾವುದೇ ಚಲನಚಿತ್ರದಲ್ಲಿ ಜನಜಂಗುಳಿ/ಸಮೂಹ ನೃತ್ಯದ ದೃಶ್ಯವನ್ನು ಚಿತ್ರೀಕರಿಸುವಾಗ, ಪ್ರಮುಖ ತಾರಾಗಣದಲ್ಲಿಲ್ಲದ 'ಜೂನಿಯರ್ ಕಲಾವಿದರನ್ನು' ಬಳಸಿಕೊಳ್ಳುವುದುಂಟು. 'ನಾಗರಹಾವು' ಚಿತ್ರದ 'ಕನ್ನಡನಾಡಿನ ವೀರರಮಣಿಯ, ಗಂಡುಭೂಮಿಯ ವೀರನಾರಿಯ' ಹಾಡಿನಲ್ಲಿ ಬರುವ ಮದಕರಿ ನಾಯಕ ಹಾಗೂ ಹೈದರಾಲಿಯ ಸೈನ್ಯದ ಸೆಣಸಾಟವನ್ನು ಬಿಂಬಿಸುವಾಗ ಇಂಥದೇ ಅನಿವಾರ್ಯತೆ ಎದುರಾಗಿತ್ತು. ಆದರೆ ಪುಟ್ಟಣ್ಣ ಈ ವಿಷಯದಲ್ಲೂ ಹೊರಳುದಾರಿ ತುಳಿದರು. ಎರಡೂ ಬಣಗಳ ಸೈನಿಕರ ಪಾತ್ರಗಳಿಗೆ ಅವರು ಬಳಸಿದ್ದು ಜೂನಿಯರ್ ಕಲಾವಿದರನ್ನಲ್ಲ, ಬದಲಿಗೆ ಕರ್ನಾಟಕ ರಾಜ್ಯದ 'ಗೃಹರಕ್ಷಕ ದಳ'ದಲ್ಲಿ ಸೇವೆ ಸಲ್ಲಿಸುತ್ತಿದ್ದ 'ಹೋಮ್ ಗಾರ್ಡ್'ಗಳನ್ನು. ಹೌದು, ಈ ಹಾಡಿನ ದೃಶ್ಯದಲ್ಲಿ ಮದಕರಿ ನಾಯಕ ಮತ್ತು ಹೈದರಾಲಿ ಬಣದ ಸೈನಿಕರಾಗಿ, ಎರಡು ಬಗೆಯ ಸೇನಾ-ಸಮವಸ್ತ್ರ ತೊಟ್ಟು ಅಭಿನಯಿಸಿದವರು ಬರೋಬ್ಬರಿ 220 ಮಂದಿ ಹೋಮ್‌ಗಾರ್ಡ್‌ಗಳು!

ಇವರೆಲ್ಲಾ ಇದೇ ಮೊದಲ ಬಾರಿಗೆ ಸಿನಿಮಾ ಕ್ಯಾಮೆರಾವನ್ನು ಎದುರಿಸಿರುವವರು, ಕಲಾವಿದ ವೃತ್ತಿಗೆ ಹೊರತಾದವರು ಎಂಬುದು ಪ್ರೇಕ್ಷಕರಿಗೆ ಅರಿವಾಗದಷ್ಟರ ಮಟ್ಟಿಗೆ ಅವರನ್ನು ಬಿಂಬಿಸಿದ ಹೆಗ್ಗಳಿಕೆ ಪುಟ್ಟಣ್ಣನವರದ್ದು. ರಾಜ ಮನೆತನಗಳಲ್ಲಿ ಹಾಸುಹೊಕ್ಕಾಗಿದ್ದ ವೈಭವ, ಸಂಚುಗಾರಿಕೆ, ಗೂಢಚರ್ಯೆ, ಆಕ್ರಮಣಕಾರಿ ವರ್ತನೆ, ಯುದ್ಧದ ಹಪಾಹಪಿಗಳನ್ನು ಮಾತ್ರವಲ್ಲದೆ, ಮೂಲೆಯಲ್ಲೆಲ್ಲೋ ಇದ್ದು ತಮ್ಮ ಕರ್ತವ್ಯ ನಿರ್ವಹಿಸುತ್ತಾ ಯಾರಿಗೂ ಗೊತ್ತಾಗದ ಎಲೆಮರೆಯ ಕಾಯಿಗಳಾಗೇ ಉಳಿದುಬಿಡುವ 'ಒನಕೆ ಓಬವ್ವ'ರಂಥವರನ್ನು ಇದೊಂದೇ ಹಾಡಿನಲ್ಲಿ ಸಮರ್ಥವಾಗಿ ಬಿಂಬಿಸಿದ ಪುಟ್ಟಣ್ಣರ ಪ್ರತಿಭೆಗೆ ಸಾಟಿಯುಂಟೇ!

• • •

ತನ್ನ ಅನುರಾಗಕ್ಕೆ 'ಎಳ್ಳು-ನೀರು' ಬಿಟ್ಟು, ಅಣ್ಣನಾಗಿ ಅಲಮೇಲುವಿನ ಮದುವೆ ನಡೆಸಿಕೊಡಬೇಕಾದ 'ಪರಿಸ್ಥಿತಿಯ ಶಿಶು'ವಾಗುವ ರಾಮಾಚಾರಿ, ತರುವಾಯದ ಅನಿರೀಕ್ಷಿತ ಬೆಳವಣಿಗೆಯಲ್ಲಿ ಮಾರ್ಗರೇಟಳ ಮೋಹಪಾಶಕ್ಕೆ ಸಿಲುಕುವಂತಾಗುತ್ತದೆ. 'ನಾವಿಬ್ಬರೂ ಹಾವು-ಮುಂಗುಸಿ ಇದ್ದಂತೆ, ಈ ಸಂಬಂಧ ಸಲ್ಲ' ಎಂದು ಮಾರ್ಗರೇಟಳಿಗೆ ರಾಮಾಚಾರಿ ಎಷ್ಟೇ ಮನವರಿಕೆ ಮಾಡಿಕೊಟ್ಟರೂ ಅವಳ ಆಗ್ರಹಕ್ಕೆ ಮನಸೋತು 'ಮನದನ್ನ' ಆಗಬೇಕಾಗುತ್ತದೆ. ನಿಮಗೆ ನೆನಪಿರಲಿ, ಧರ್ಮ-ಧರ್ಮಗಳ ನಡುವೆ ಈಗ ಕಾಣುತ್ತಿರುವ ಅಸಮಾಧಾನ-ಅಸಹಿಷ್ಣುತೆಗಳು 'ನಾಗರಹಾವು' ಕಥೆಯ ಕಾಲಘಟ್ಟದಲ್ಲೂ ಇದ್ದವು, ಸಾಕಷ್ಟು ತೀವ್ರವಾಗಿದ್ದವು. ಇಂಥ ವಿಷಪರ್ವದಲ್ಲಿ, ಸಂಪ್ರದಾಯಸ್ಥ ಮಾಧ್ವ ಬ್ರಾಹ್ಮಣ ಕುಟುಂಬಕ್ಕೆ ಸೇರಿದ ರಾಮಾಚಾರಿ ಹಾಗೂ ಕ್ರೈಸ್ತಧರ್ಮಕ್ಕೆ ಸೇರಿದ 'ಅಲ್ಟ್ರಾ-ಮಾಡ್ರನ್' ಶೈಲಿಯ ಮಾರ್ಗರೇಟಳ ನಡುವಿನ 'ಹೃದಯ-ಮಿಲನ'ವನ್ನು ಮಾತ್ರವಲ್ಲದೆ, ಎರಡು ವಿಭಿನ್ನ ಧರ್ಮಗಳ 'ಧರ್ಮ-ಸಂಕರ'ದ ಅಗತ್ಯವನ್ನೂ ತೆರೆಯ ಮೇಲೆ ಮನಮುಟ್ಟುವಂತೆ ಬಿಂಬಿಸುವುದು ಪುಟ್ಟಣ್ಣರ ಆಶಯವಾಗಿತ್ತು. ಅದನ್ನು 'ವಾಚ್ಯ'ವಾಗಿ ಹೇಳುವುದಕ್ಕಿಂತ 'ಸೂಚ್ಯ'ವಾಗಿ ಸಂಕೇತಿಸಿದರೆ ಹೇಗೆ? ಎಂಬ ಸುಳಿಮಿಂಚು ಅವರ ಮನದಲ್ಲಿ ಸುಳಿದಾಡಿತು. ಹೀಗಾಗಿ ಛಾಯಾಗ್ರಾಹಕ ಚಿಟ್ಟಿಬಾಬುರನ್ನು ಸನಿಹಕ್ಕೆ ಕರೆದು ಕೈ-ಬಾಯಿ ಆಡಿಸಿಕೊಂಡು ಅದೇನೋ ವಿವರಿಸಿದರು. ಆಗ ಚಿಟ್ಟಿಬಾಬು, 'ಸರ್, ನಿಮ್ಮ ಕಲ್ಪನೆಯೇನೋ ಚೆನ್ನಾಗಿದೆ, ಆದರೆ ಅದು ಅಂದುಕೊಂಡಂತೆಯೇ ತೆರೆಯ ಮೇಲೆ ಬರುತ್ತಾ?' ಎಂದು ಸಂದೇಹಿಸಿದರು. ಆಗ ಪುಟ್ಟಣ್ಣ 'ಈಗ ನಾನು ಹೇಳಿದಂತೆ ನೀವು ಮಾಡಿ ರಾಜಾ.... ಒಂದೊಮ್ಮೆ ಅದು ಸರಿಯಾಗಿ ಬರದಿದ್ರೆ ನೀವು ಹೇಳಿದಂತೆ ನಾನು ಕೇಳ್ತೀನಿ...' ಎಂದು ತೊಡೆತಟ್ಟಿದರು. ಹುರುಪುಗೊಂಡ ಚಿಟ್ಟಿಬಾಬು ಡಬಲ್ ಉತ್ಸಾಹದಲ್ಲಿ ಆ ದೃಶ್ಯವನ್ನು ಚಿತ್ರೀಕರಿಸಿಕೊಟ್ಟರು,

ಈಗೆಲ್ಲ ಚಿತ್ರೀಕರಣದ ವಿಷಯದಲ್ಲಿ ಸಾಕಷ್ಟು ತಾಂತ್ರಿಕ ಪ್ರಗತಿಗಳಾಗಿವೆ, ಚಿತ್ರೀಕೃತ ದೃಶ್ಯವನ್ನು ಮರುಕ್ಷಣವೇ ತಾಂತ್ರಿಕ ಪರಿಕರದಲ್ಲಿ ವೀಕ್ಷಿಸಿ, ಅದು ಸರಿಯಾಗಿ ಬಂದಿದೆಯೇ ಇಲ್ಲವೇ? ಮರುಚಿತ್ರೀಕರಿಸಬೇಕೇ? ಎಂಬುದನ್ನೆಲ್ಲಾ ನೋಡಿಕೊಂಡು ದೃಶ್ಯಪ್ರಸ್ತುತಿಯನ್ನು ಮತ್ತಷ್ಟು 'ಪಕ್ಕಾ' ಮಾಡಿಕೊಳ್ಳಲು ಸಾಧ್ಯವಿದೆ. ಆದರೆ ನೆನಪಿಡಿ, ನಾಗರಹಾವು ಚಿತ್ರೀಕರಣಗೊಂಡಿದ್ದು 1971-72ರ ಕಾಲಘಟ್ಟದಲ್ಲಿ, ಆಗ ಇಷ್ಟೊಂದು ತಾಂತ್ರಿಕ ಪರಿಕರಗಳು ಲಭ್ಯವಿರಲಿಲ್ಲ. ಚಿತ್ರೀಕರಿಸಿದ ದೃಶ್ಯ ಹೇಗೆ ಬಂದಿದೆ ಎಂಬುದು ಛಾಯಾಗ್ರಾಹಕರಿಗೆ ಕೆಲವೊಮ್ಮೆ ಗೊತ್ತಾಗುತ್ತಿದ್ದುದು ಚಿತ್ರ ಬಿಡುಗಡೆಯಾದ ಮೇಲೆಯೇ ಅಥವಾ ಅವಕಾಶ ಸಿಕ್ಕಲ್ಲಿ ಸಂಕಲನದ ಕೊಠಡಿಯಲ್ಲಿ! ಹೀಗಾಗಿ ಛಾಯಾಗ್ರಾಹಕ ಚಿಟ್ಟಿಬಾಬು ಮನದ ಮೂಲೆಯಲ್ಲಿ 'ಎಚ್ಚರಿಕೆಯ ಗಂಟೆ' ಹೊಡೆದುಕೊಳ್ಳುತ್ತಲೇ ಇತ್ತು. ಅದು ತನ್ನ ಸದ್ದನ್ನು ನಿಲ್ಲಿಸಿದ್ದು, ಪುಟ್ಟಣ್ಣರು ಚಿತ್ರದ ಸಂಕಲನ ಕಾರ್ಯದ ವೇಳೆ ಚಿಟ್ಟಿಬಾಬುರನ್ನು ಕರೆಸಿಕೊಂಡು ಆ ದೃಶ್ಯವನ್ನು 'ಮೂವಿಯಾಲಾ'ದಲ್ಲಿ ತೋರಿಸಿದ ಮೇಲೆಯೇ! (ಸಂಕಲನಕಾರರು ತಮ್ಮ ಕಾರ್ಯ ಹೇಗೆ ಬಿಂಬಿತವಾಗಿದೆ ಎಂಬುದನ್ನು ತಾಳೆನೋಡಲು ಬಳಸುವ ಒಂದು ಪುಟ್ಟ ವೀಕ್ಷಣಾ ಸಾಧನವೇ ಮೂವಿಯಾಲಾ). ಆ ದೃಶ್ಯ ಯಾವುದು ಗೊತ್ತೇ? ತಮ್ಮ ನಡುವಿನ ಪ್ರೀತಿಯು ಮಾಗಿ ಪರಾಕಾಷ್ಠೆಗೆ ಮುಟ್ಟಿದೆ ಹಾಗೂ ಅದು ಜಾತಿ-ಧರ್ಮಗಳ ಗೋಡೆಯನ್ನೂ ಸೀಳಿಕೊಂಡು ಸಾಗುವ ಪ್ರೇಮವಾಹಿನಿಯಾಗಿದೆ ಎಂಬುದನ್ನು ತೋರಿಸಲು ರಾಮಾಚಾರಿ ಮತ್ತು ಮಾರ್ಗರೇಟ್ ಕ್ರಮವಾಗಿ ತಮ್ಮ ಕೊರಳಲ್ಲಿನ ಹನುಮಂತನ ತಾಯಿತ ಹಾಗೂ ಕ್ರಿಸ್ತನ ಶಿಲುಬೆಯ ಲಾಕೆಟ್ ಎರಡನ್ನೂ ಜೋಡಿಸಿ ಬೆಸೆದು ಪರಸ್ಪರರ ಕಂಗಳನ್ನೇ ದೃಷ್ಟಿಸತೊಡಗುತ್ತಾರೆ. ಶುರುವಿನಲ್ಲಿ ಬೆಳ್ಳಿತೆರೆಯ ತುಂಬಾ ಎದುರು-ಬದುರು ಈ ಇಬ್ಬರ ಮುಖ, ನಡುವೆ ಪರಸ್ಪರ ಬಂಧಿಸಲ್ಪಟ್ಟ ತಾಯಿತ-ಶಿಲುಬೆಗಳು ಕಾಣುತ್ತವೆ. ಕ್ರಮೇಣ ಕ್ಯಾಮೆರಾ 'ಝೂಮ್-ಇನ್' ಆಗಿ, ಇಬ್ಬರ ಮುಖಗಳೂ ಪಕ್ಕಕ್ಕೆ ಸರಿದು, ಸೂರ್ಯನ ಬೆಳಕಿನ ಹಿನ್ನೆಲೆಯಲ್ಲಿ ತಾಯಿತ-ಶಿಲುಬೆ ಸಂಪೂರ್ಣ ಬೆಳ್ಳಿತೆರೆಯನ್ನು ಆವರಿಸುತ್ತವೆ. 'ಸಂಗಮ ಸಂಗಮ, ಅನುರಾಗ ಸಂಗ ಸಂಗಮ' ಹಾಡು ಮೂಡಿಬರುತ್ತದೆ. ಈ ದೃಶ್ಯ ಪರಿಣಾಮಕಾರಿಯಾಗಿ ಮೂಡಿಬರುವುದರ ಬಗ್ಗೆ ಛಾಯಾಗ್ರಾಹಕ ಚಿಟ್ಟಿಬಾಬು ಅವರಿಗೇ ಸಂದೇಹವಿತ್ತು, ಆದರೆ ಕಿಲಾಡಿ ಪುಟ್ಟಣ್ಣ, ಹಿನ್ನೆಲೆಯಲ್ಲಿರುವ ಸೂರ್ಯನ ರಂಗಿಗೆ ಪ್ರತಿಯಾಗಿ ತಾಯಿತ-ಶಿಲುಬೆಗಳು ಛಾಯಾರೂಪದಲ್ಲಿ ಒಡ್ಡಿಕೊಂಡಿರುವಂತೆ ದೃಶ್ಯವನ್ನು ಸೆರೆಹಿಡಿದಿದ್ದರು. ಚಿತ್ರಮಂದಿರದಲ್ಲಿ ಈ ರಮ್ಯ ಮತ್ತು ಸಾಂಕೇತಿಕ ಪ್ರಸ್ತುತಿಯನ್ನು ಕಂಡವರು ನಿರಂತರ ಶಿಳ್ಳೆ ಹೊಡೆದಿದ್ದುಂಟು..!

• • •

ತಮ್ಮ ಚಿತ್ರದಲ್ಲಿ ಸುಮಧುರ ಸಂಗೀತ ಮತ್ತು ಅರ್ಥಪೂರ್ಣ ಹಾಡುಗಳಿಗೆ ಇನ್ನಿಲ್ಲದ ಒತ್ತು ನೀಡುತ್ತಿದ್ದುದು ಪುಟ್ಟಣ್ಣರ ಹೆಚ್ಚುಗಾರಿಕೆಯಾಗಿತ್ತು. ಅದರಲ್ಲೂ 'ನಾಗರಹಾವು' ಚಿತ್ರವು ತಮ್ಮ ಹಿಂದಿನ 'ಶರಪಂಜರ'ವನ್ನು ಮೀರಿಸುವಷ್ಟರ ಮಟ್ಟಿಗಿನ 'ಮಾಸ್ಟರ್ ಪೀಸ್' ಆಗಿ ಹೊಮ್ಮಬೇಕು ಎಂಬ ಬಯಕೆ ಅವರಲ್ಲಿ ಮನೆಮಾಡಿತ್ತು. ಜತೆಗೆ, ಅದುವರೆಗಿನ ತಮ್ಮ ಬಹುಪಾಲು ಚಿತ್ರಗಳ ನಾಯಕಿಯಾಗಿದ್ದ ಕಲ್ಪನಾರಿಗೆ, 'ನೀವಿಲ್ಲದೆಯೂ ನಾನು ಚಿತ್ರವನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡಬಲ್ಲೆ' ಎಂಬ ಪರೋಕ್ಷ ಸಂದೇಶ ರವಾನಿಸುವ ಅಗತ್ಯವೂ ಪುಟ್ಟಣ್ಣರಿಗೆ ಇತ್ತು. ಈಗಾಗಲೇ ಉಲ್ಲೇಖಿಸಿರುವಂತೆ, 'ಗೆಜ್ಜೆಪೂಜೆ' ಚಿತ್ರದಲ್ಲಿ ತಂಗಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ಆರತಿಯವರು 'ನಾಗರಹಾವು' ನಾಯಕಿಯರ ಪೈಕಿ ಒಬ್ಬರಾಗಿ ಆಯ್ಕೆಯಾಗಿದ್ದರ ಜತೆಗೆ, ಪುಟ್ಟಣ್ಣರ ಅಂತರಂಗಕ್ಕೂ ಹತ್ತಿರವಾಗಿದ್ದರು. ಅದು ವೃತ್ತಿಸಂಬಂಧವನ್ನೂ ಮೀರಿದ ಬಾಂಧವ್ಯವಾಗಿದ್ದರಿಂದ, ಅವರನ್ನು ಬೆಳ್ಳಿತೆರೆಯಲ್ಲಿ ಹಿಂದೆ ಯಾರೂ ಬಿಂಬಿಸದ ರೀತಿಯಲ್ಲಿ ಅತಿವಿಶಿಷ್ಟವಾಗಿ ಚೆಂದಗಾಣಿಸಬೇಕು ಎಂಬ ಹಂಬಲ ಪುಟ್ಟಣ್ಣರಲ್ಲಿ ಮೊಳೆಯಿತು. ಸಾಮಾನ್ಯವಾಗಿ, ಚಿತ್ರದ ಗೀತೆಗಳ ಧ್ವನಿಮುದ್ರಣವು ಸ್ಟುಡಿಯೋ ದಲ್ಲಿ ನಡೆಯುವುದಕ್ಕೂ ಮುನ್ನ, ಗೀತರಚನೆ ಮತ್ತು ರಾಗಸಂಯೋ ಜನೆಯ ಬಾಬತ್ತುಗಳಿಗಾಗಿ ಚಿತ್ರ ನಿರ್ಮಾತೃಗಳು ಯಾವುದಾದರೂ ಹೋಟೆಲ್‌ನಲ್ಲಿ ರೂಮ್ ವ್ಯವಸ್ಥೆ ಮಾಡಿ, ಅಲ್ಲಿ ಪರಸ್ಪರ ಚರ್ಚಿಸುವುದುಂಟು. ಆದರೆ, ನಾಗರಹಾವು ಚಿತ್ರೀಕರಣದ ವೇಳೆ ಚಿಗುರೊಡೆದ ಈ ಅನುರಾಗ ದಿಂದಾಗಿ ಪುಟ್ಟಣ್ಣ ಕೊಂಚ 'ರೊಮ್ಯಾಂಟಿಕ್' ಆಗಿಬಿಟ್ಟಿದ್ದರು. ಹೀಗಾಗಿ ಗೀತರಚನೆ, ರಾಗಸಂಯೋಜನೆಗೆಂದು ಜನದಟ್ಟಣೆ-ಜಂಜಾಟವಿರುವ ನಗರದ ಹೋಟೆಲ್‌ನಲ್ಲಿ ರೂಮ್ ಹಾಕಿಸುವ ಬದಲಿಗೆ, ಶಿವನಸಮುದ್ರದ ಬಳಿಯ ಸುಂದರ-ಪ್ರಶಾಂತ ಸ್ಥಳವಾದ ಶಿಂಷಾದಲ್ಲಿನ ಪ್ರವಾಸಿ ಬಂಗಲೆಗೆ ಸಂಗೀತ ನಿರ್ದೇಶಕ ವಿಜಯಭಾಸ್ಕರ್ ಮತ್ತು ಗೀತರಚನೆಕಾರರನ್ನು ಕರೆದುಕೊಂಡು ಹೋದರು. ಅಲ್ಲಿ ಮೊದಲಿಗೆ ಸಂಯೋಜನೆಗೊಂಡಿದ್ದು 'ಬಾರೆ ಬಾರೆ, ಚೆಂದದ ಚೆಲುವಿನ ತಾರೆ' ಹಾಡು. ವಿಶೇಷವೆಂದರೆ, ಈ ಹಾಡಿನ ಪಲ್ಲವಿಯನ್ನು ನೀಡಿದ್ದು ರಸಿಕ ಪುಟ್ಟಣ್ಣನವರೇ... ಅದಕ್ಕೆ ಕಾರಣವೇನು? ಆ ಸಾಲುಗಳು ಯಾರನ್ನು ಕುರಿತದ್ದು? ಎಂಬುದನ್ನೆಲ್ಲಾ ಮತ್ತೊಮ್ಮೆ ವಿವರಿಸಬೇಕಿಲ್ಲ. ಹಾಡಿನ ರಾಗಸಂಯೋಜನೆಗೆಂದು ಕೂತಿದ್ದವರೆಲ್ಲಾ, ''ಓಹೋಹೋ... ಏನಿವತ್ತು ನಮ್ ಡೈರೆಕ್ಟ್ರು ಸಾಹೇಬ್ರು ತುಂಬಾನೇ ರೊಮ್ಯಾಂಟಿಕ್ ಆಗಿಬಿಟ್ಟಿದ್ದಾರಲ್ಲಾ...?!'' ಎಂದು ರೇಗಿಸಿದರು.

ಪುಟ್ಟಣ್ಣ ಆ ಕಾಮೆಂಟಿಗೆ ಬೇಸರಿಸಿಕೊಳ್ಳಲೂ ಇಲ್ಲ, ಅದನ್ನು ನಿರಾಕರಿಸಲೂ ಇಲ್ಲ..!

(ಮುಂದುವರಿಯುವುದು)ಡ

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 318

ಸಮಾಚಾರ ಸಣ್ಣದಲ್ಲ

ಪ್ರಾದೇಶಿಕ ಅಸಮತೋಲನ ಹೆಚ್ಚುತ್ತದೆ: ಕೆಟಿಆರ್

ಹೈದರಾಬಾದ್: ಕ್ಷೇತ್ರ ಮರು ವಿಂಗಡಣೆಯಿಂದ ದಕ್ಷಿಣದ ರಾಜ್ಯಗಳ ರಾಜಕೀಯ ಪ್ರಾತಿನಿಧ್ಯ ಗಮನಾರ್ಹವಾಗಿ ಕಡಿಮೆಯಾಗಲಿದೆ. ಕ್ಷೇತ್ರ ಮರು ವಿಂಗಡಣೆಯಲ್ಲಾಗುವ ತಾರತಮ್ಯವನ್ನು ಈಗಲೇ ಪರಿಹರಿಸದಿದ್ದರೆ ದೀರ್ಘಾವಧಿಯಲ್ಲಿ ನಕಾರಾತ್ಮಕ ಪರಿಣಾಮ ಉಂಟಾಗಲಿದೆ. ಆಗ ಮುಂದಿನ ಪೀಳಿಗೆ ಈಗಿನ ನಾಯಕರ ಮೌನವನ್ನು ಕ್ಷಮಿಸುವುದಿಲ್ಲ ಎಂದು ಭಾರತ್ ರಾಷ್ಟ್ರ ಸಮಿತಿ (ಬಿಆರ್‌ಎಸ್) ಕಾರ್ಯಾಧ್ಯಕ್ಷ ಕೆ.ಟಿ.ರಾಮರಾವ್ ಆತಂಕ ವ್ಯಕ್ತಪಡಿಸಿದ್ದಾರೆ. ತೆಲಂಗಾಣ, ತಮಿಳುನಾಡು, ಕರ್ನಾಟಕ, ಕೇರಳ ಮತ್ತು ಆಂಧ್ರಪ್ರದೇಶ ಆರ್ಥಿಕ ಪ್ರಗತಿ, ಕೈಗಾರಿಕೀಕರಣ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿವೆ. ಆದರೆ, ಕ್ಷೇತ್ರ ಮರು ವಿಂಗಡಣೆಯಿಂದ ದಕ್ಷಿಣ ಭಾರತದ ರಾಜಕೀಯ ಪ್ರಾತಿನಿಧ್ಯ ಕಡಿಮೆಯಾಗುತ್ತದೆ. ಪ್ರಾದೇಶಿಕ ಅಸಮತೋಲನ ಹೆಚ್ಚುತ್ತದೆ. ರಾಷ್ಟ್ರ ಮಟ್ಟದಲ್ಲಿ ದಕ್ಷಿಣ ರಾಜ್ಯಗಳನ್ನು ಮತ್ತಷ್ಟು ದೂರ ತಳ್ಳುತ್ತದೆ ಎಂದು ಸಾಧ್ಯತೆಗಳನ್ನು ವಿವರಿಸಿದ್ದಾರೆ.

ಒಡಿಶಾದಲ್ಲಿ ನಿತ್ಯ 3 ಬಾಲ್ಯ ವಿವಾಹ

ಭುವನೇಶ್ವರ: ಒಡಿಶಾ ಸರಕಾರದ ಅಂಕಿ-ಅಂಶ ಪ್ರಕಾರ, ಕಳೆದ ಆರು ವರ್ಷಗಳಲ್ಲಿ ಒಡಿಶಾದಲ್ಲಿ ಪ್ರತಿದಿನವೂ ಕನಿಷ್ಠ ಮೂರು ಬಾಲ್ಯ ವಿವಾಹ ಪ್ರಕರಣಗಳು ವರದಿಯಾಗಿವೆ. ಬಾಲ್ಯ ವಿವಾಹ ತಡೆಗೆ ರಾಜ್ಯ ಸರಕಾರ ಹಲವಾರು ಉಪಕ್ರಮಗಳನ್ನು ತೆಗೆದುಕೊಂಡಿದ್ದರೂ ಜನರ ಮೇಲೆ ಪರಿಣಾಮವಾಗಿಲ್ಲ ಎಂಬುದು ಇದರಿಂದಲೇ ದೃಢಪಟ್ಟಿದೆ. ಹೆಣ್ಣುಮಕ್ಕಳು ಓಡಿಹೋಗಬಹುದು ಎಂಬ ಪೋಷಕರ ಭಯ, ಬುಡಕಟ್ಟು ಪದ್ಧತಿ, ವರದಕ್ಷಿಣೆ, ಕಾರ್ಮಿಕ ಕುಟುಂಬಗಳ ವಲಸೆ ಮೊದಲಾದ ಅಂಶಗಳೇ ಬಾಲ್ಯ ವಿವಾಹ ಹೆಚ್ಚಳಕ್ಕೆ ಕಾರಣ ಎಂದು ರಾಜ್ಯದ ಸಾಮಾಜಿಕ ಹೋರಾಟಗಾರರು ಹೇಳಿದ್ದಾರೆ. 2019ರ ಜನವರಿಯಿಂದ 2025ರ ಫೆಬ್ರವರಿವರೆಗೆ ಒಡಿಶಾದಲ್ಲಿ ಒಟ್ಟು 8,159 ಬಾಲ್ಯ ವಿವಾಹಗಳು ನಡೆದಿವೆ. ಅದರಲ್ಲಿ 1,347 ಪ್ರಕರಣಗಳು ನವರಂಗ್‌ಪುರದಿಂದಲೇ ವರದಿಯಾಗಿವೆ. ನವರಂಗಪುರ ಇಡೀ ರಾಜ್ಯದಲ್ಲೇ ಅತಿಹೆಚ್ಚು ಬಾಲ್ಯ ವಿವಾಹಗಳು ನಡೆದ ಜಿಲ್ಲೆಯಾಗಿದೆ. ಗಂಜಾಂ ಜಿಲ್ಲೆ 966 ಬಾಲ್ಯ ವಿವಾಹಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. ಕೊರಾಪುಟ್ 636 ಪ್ರಕರಣ, ಮಯೂರ್‌ಭಂಜ್ 594, ರಾಯಗಡ 408, ಬಾಲಸೋರ್ 361, ಕಿಯೋಂಜ್ಹರ್ 328, ಕಂಧಮಲ್ 308 ಮತ್ತು ನಯಾಗರ್ 308 ಬಾಲ್ಯವಿವಾಹಗಳಿಗೆ ಅವಕಾಶ ಮಾಡಿಕೊಟ್ಟಿವೆ ಎಂದು ಅಂಕಿ ಅಂಶ ತಿಳಿಸುತ್ತವೆ.

ನ್ಯಾ.ವರ್ಮಾ: 2018ರಲ್ಲಿ ಸಿಬಿಐನಿಂದ ಎಫ್‌ಐಆರ್

ದೆಹಲಿ: ಅಧಿಕೃತ ನಿವಾಸದಲ್ಲಿ 15 ಕೋಟಿ ರು. ನೋಟು ಪತ್ತೆಯಾದ ದೆಹಲಿ ಹೈಕೋರ್ಟ್ ನ್ಯಾ. ಯಶವಂತ ವರ್ಮಾ ಅವರ ಹೆಸರು 2018ರಲ್ಲಿ ಪ್ರಕರಣವೊಂದರಲ್ಲಿ ಸಿಬಿಐ ಆರೋಪ ಪಟ್ಟಿಯಲ್ಲಿತ್ತು. ಸಿಬಿಐ ನ್ಯಾ.ಯಶವಂತ್ ವರ್ಮಾ ಅವರ ವಿರುದ್ಧವೇ ಎಫ್‌ಐಆರ್ ದಾಖಲು ಮಾಡಿತ್ತು ಎಂಬ ವಿಚಾರ ಈಗ ಮತ್ತೆ ಪ್ರಸ್ತಾಪವಾಗಿದೆ. ಬ್ಯಾಂಕ್‌ನಿಂದ ಪಡೆದ ಸಾಲವನ್ನು ದುರುಪಯೋಗ ಮಾಡಿದ ಆರೋಪದಡಿ ಸಿಂಭಾವೋಲಿ ಶುಗರ್ಸ್ ಕಂಪನಿ ವಿರುದ್ಧ 2018ರಲ್ಲಿ ಅಲಹಾಬಾದ್ ಹೈಕೋರ್ಟ್ ಆದೇಶದ ಮೇರೆಗೆ ಸಿಬಿಐ ಮತ್ತು ಜಾರಿ ನಿರ್ದೇಶನಾಲಯ(ಇ.ಡಿ) ಎಫ್‌ಐಆರ್ ದಾಖಲಿಸಿದ್ದವು. ಆ ಕಂಪನಿಯಲ್ಲಿ ಯಶವಂತ ವರ್ಮಾ ಕಾರ್ಯನಿರ್ವಾಹಕೇತರ ನಿರ್ದೇಶಕರಾಗಿದ್ದರು. ವರ್ಮಾ ಅವರನ್ನು 10ನೇ ಆರೋಪಿಯನ್ನಾಗಿ ಸಿಬಿಐ ಉಲ್ಲೇಖಿಸಿತ್ತು. ಕ್ರಿಮಿನಲ್ ದುರ್ನಡತೆ, ವಂಚನೆ ಮತ್ತು ಕ್ರಿಮಿನಲ್ ಪಿತೂರಿ ಅಡಿ ಎಫ್‌ಐಆರ್ ದಾಖಲಾಗಿತ್ತು. ಆ ಬಳಿಕ ಕೆಲ ಸಮಯದ ನಂತರ ವರ್ಮಾ ಹೆಸರನ್ನು ಎಫ್‌ಐಆರ್‌ನಿಂದ ಸಿಬಿಐ ತೆಗೆದುಹಾಕಿತ್ತು. ಈ ವಿಚಾರವನ್ನು ಕೋರ್ಟ್ ಗಮನಕ್ಕೂ ತಂದಿತ್ತು ಎಂಬುದು ಈಗ ಮರಳಿ ಮುನ್ನಲೆಗೆ ಬಂದಿದೆ. ಯಾವುದೇ ತನಿಖೆ ಅಗತ್ಯವಿಲ್ಲದ ಕಾರಣ ಈ ವಿಷಯದಲ್ಲಿ ಸಿಬಿಐ ತನಿಖೆಗೆ ಆದೇಶಿಸುವಲ್ಲಿ ಹೈಕೋರ್ಟ್ ತಪ್ಪು ಮಾಡಿದೆ ಎಂದು ಸುಪ್ರೀಂ ಕೋರ್ಟ್ 2024ರಲ್ಲಿ ಹೇಳಿತ್ತು.

ಗಾಂಧೀಜಿ ಅವಹೇಳನ: ಯತಿ ವಿರುದ್ಧ ಪ್ರಕರಣ

ಗಾಜಿಯಾಬಾದ್: ಮೋಹನದಾಸ್ ಕರಮಚಂದ್ ಗಾಂಧಿ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ ದಾಸ್ನಾ ದೇವಿ ದೇವಾಲಯದ ವಿವಾದಿತ ಅರ್ಚಕ ಯತಿ ನರಸಿಂಹಾನಂದ ಗಿರಿ ವಿರುದ್ಧ ಗಾಜಿಯಾಬಾದ್ ಪೊಲೀಸ್ ಠಾಣೆಯಲ್ಲಿ ಶನಿವಾರ ಎಫ್‌ಐಆರ್ ದಾಖಲಾಗಿದೆ. ವೀಡಿಯೋದಲ್ಲಿ ದ್ವೇಷ ಹರಡುವ ಮತ್ತು ಜಿಲ್ಲೆಯ ಉನ್ನತ ಪೊಲೀಸ್ ಅಧಿಕಾರಿಗಳನ್ನು ನಿಂದಿಸಿದ ಆರೋಪದ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ನರಸಿಂಹಾನಂದ್ ಮಾನಹಾನಿಯಾಗುವ, ಧಾರ್ಮಿಕ ಭಾವನೆ ಕೆರಳಿಸುವ, ಕ್ರಿಮಿನಲ್ ಬೆದರಿಕೆ ಒಡ್ಡುವ, ಸಾರ್ವಜನಿಕ ಶಾಂತಿ ಕದಡುವವಂತಹ ಪದಗಳನ್ನು ಬಳಸಿದ್ದಾರೆ ಎಂದು ದೂರುದಾರರು ಉಲ್ಲೇಖಿಸಿದ್ದಾರೆ.

ಭಾರತದ ಭಾಷೆಗಳಿಗೆ ಪ್ರತ್ಯೇಕ ಇಲಾಖೆ | ಭಾಷಾಂತರಕ್ಕೆ ಶೀಘ್ರ ಮೊಬೈಲ್ ಆ್ಯಪ್

ಕರ್ನಾಟಕ ಜತೆ ಕನ್ನಡದಲ್ಲೇ ಪತ್ರ ವ್ಯವಹಾರ: ಅಮಿತ್ ಶಾ

ದೆಹಲಿ: ಹಿಂದಿ ಭಾಷೆ ಹೇರಿಕೆ ಮಾಡುವುದಿಲ್ಲ. ಕರ್ನಾಟಕ ಸೇರಿದಂತೆ ಇತರೆ ರಾಜ್ಯಗಳ ಜತೆ ಆ ನೆಲದ ಅಥವಾ ಅಧಿಕೃತ ಭಾಷೆಯಲ್ಲಿಯೇ ಮುಂಬರುವ ಡಿಸೆಂಬರ್ ತಿಂಗಳಿಂದ ಪತ್ರ ವ್ಯವಹಾರವನ್ನು ಕೇಂದ್ರದ ಗೃಹ ಸಚಿವಾಲಯ ನಡೆಸುತ್ತದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಘೋಷಿಸಿದ್ದಾರೆ.

ಕರ್ನಾಟಕ ಸರಕಾರಕ್ಕೆ ಕನ್ನಡದಲ್ಲಿ, ತಮಿಳುನಾಡು ಸರಕಾರಕ್ಕೆ ತಮಿಳಿನಲ್ಲಿ, ಕೇರಳ ಸರಕಾರಕ್ಕೆ ಮಲಯಾಳಂ, ಆಂಧ್ರ-ತೆಲಂಗಾಣ ರಾಜ್ಯಗಳ ಸರಕಾರಗಳಿಗೆ ತೆಲುಗಿನಲ್ಲಿಯೇ ಪತ್ರ ಬರೆದು ಸಂವಹನ ನಡೆಸುವುದಾಗಿ ರಾಜ್ಯಸಭೆಯಲ್ಲಿ ಸಚಿವ ಅಮಿತ್ ಶಾ ಹೇಳಿದ್ದಾರೆ. ಆ ಮೂಲಕ ಸ್ಥಳೀಯ ಭಾಷೆಗಳ ಬಳಕೆ ವಿಚಾರದಲ್ಲಿ ಕೇಂದ್ರ ಸರಕಾರದ ಬದ್ಧತೆಯನ್ನು ಪ್ರದರ್ಶಿಸಿದ್ದಾರೆ.

ಡಿಸೆಂಬರ್ ಬಳಿಕ ರಾಜ್ಯಗಳ ಮುಖ್ಯಮಂತ್ರಿಗಳು, ಸಚಿವರು ಮತ್ತು ಸಂಸದರೊಂದಿಗೆ ಅವರದೇ ರಾಜ್ಯದ ಭಾಷೆಯಲ್ಲಿಯೇ ಕೇಂದ್ರ ಗೃಹ ಸಚಿವಾಲಯ ಪತ್ರ ವ್ಯವಹಾರ ನಡೆಸಲಿದೆ ಎಂದಿದ್ದಾರೆ. ತಮ್ಮ ಭ್ರಷ್ಟಾಚಾರ ಮರೆಮಾಚಲು ಭಾಷೆ ಹೆಸರಲ್ಲಿ ರಾಜಕೀಯ ಮಾಡುವವರಿಗೆ ನಮ್ಮ ಈ ಪ್ರಯತ್ನ ತಕ್ಕ ಪ್ರತ್ಯುತ್ತರವಾಗಲಿದೆ ಎಂದು ಅಮಿತ್ ಶಾ ಹೇಳಿದ್ದಾರೆ. ಅಧಿಕೃತ ಭಾಷಾ ಇಲಾಖೆಯ ಅಡಿಯಲ್ಲಿ, ನರೇಂದ್ರ ಮೋದಿ ಸರ್ಕಾರವು ಎಲ್ಲಾ ಭಾರತೀಯ ಭಾಷೆಗಳ ಬಳಕೆ ಯನ್ನು ಹೆಚ್ಚಿಸುವ ಕೆಲಸ ಮಾಡುತ್ತಿದೆ. ಅದಕ್ಕಾಗಿ ತಮಿಳು, ತೆಲುಗು, ಮರಾಠಿ, ಗುಜರಾತಿ, ಪಂಜಾಬಿ, ಅಸ್ಸಾಮಿ, ಬಂಗಾಳಿ ಸೇರಿದಂತೆ ಎಲ್ಲಾ ಭಾಷೆಗಳಿಗಾಗಿ ಭಾರತೀಯ ಅಧಿಕೃತ ಭಾಷಾ ಇಲಾಖೆ'ಯನ್ನು ಸ್ಥಾಪಿಸಿದೆ. ಭಾರತೀಯ ಭಾಷೆಗಳ ನಡುವೆ ಭಾಷಾಂತರಕ್ಕೆ ಮೊಬೈಲ್ ಆ್ಯಪ್ ಹೊರತರಲಾಗುವುದು ಎಂದು ಸಚಿವ ಶಾ ಪ್ರಕಟಿಸಿದ್ದಾರೆ.

ಸ್ಥಳೀಯ ಭಾಷೆಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ರಾಜಭಾಷಾ ವಿಭಾಗದಲ್ಲಿ ಹೊಸ ಇಲಾಖೆಯನ್ನು ತೆರೆಯಲಾಗಿದೆ. ಅದರ ಅಡಿಯಲ್ಲಿ ಅನುವಾದಕ್ಕೆ ಅನುಕೂಲವಾಗಲು ಆ್ಯಪ್‌ಗಳನ್ನು ಬಿಡುಗಡೆ ಮಾಡಲಾಗುವುದು ಎಂದು ಅಮಿತ್ ಶಾ ಹೇಳಿದ್ರು.

ಭಾರತೀಯ ಅಧಿಕೃತ ಭಾಷಾ ಇಲಾಖೆ

ಪ್ರಧಾನಿ ನರೇಂದ್ರ ಮೋದಿ ಅವರ ಸರಕಾರ ಅಧಿಕೃತ ಭಾಷಾ ಇಲಾಖೆಯಡಿ ಎಲ್ಲಾ ಭಾರತೀಯ ಭಾಷೆಗಳ ಬಳಕೆಯನ್ನು ಹೆಚ್ಚಿಸುವ ಕೆಲಸವನ್ನೇ ಮಾಡುತ್ತಿದೆ. ಅದಕ್ಕಾಗಿ ತಮಿಳು, ತೆಲುಗು, ಮರಾಠಿ, ಗುಜರಾತಿ, ಪಂಜಾಬಿ, ಅಸ್ಸಾಮಿ, ಬಂಗಾಳಿ ಸೇರಿದಂತೆ ಎಲ್ಲಾ ಭಾಷೆಗಳಿಗಾಗಿ ಭಾರತೀಯ ಅಧಿಕೃತ ಭಾಷಾ ಇಲಾಖೆಯನ್ನು ರಚಿಸಿದೆ ಎಂದು ಸಚಿವ ಅಮಿತ್ ಶಾ ಹೇಳಿದ್ದಾರೆ. ಹಿಂದಿ ಯಾವುದೇ ಪ್ರಾದೇಶಿಕ ಭಾಷೆಗಳ ಜತೆಗೆ ಸ್ಪರ್ಧೆ ಮಾಡುವುದಿಲ್ಲ. ಬದಲಾಗಿ ಹಿಂದಿಯು ಭಾಷಾ ಸಾಮರಸ್ಯವನ್ನು ಬೆಳೆಸುತ್ತದೆ. ಹಿಂದಿ ಎಲ್ಲಾ ಭಾರತೀಯ ಭಾಷೆಗಳಿಗೆ ಒಡನಾಡಿಯಾಗಿದೆ. ಹಿಂದಿ ಎಲ್ಲಾ ಭಾರತೀಯ ಭಾಷೆಗಳನ್ನು ಬಲಪಡಿಸುತ್ತದೆ ಮತ್ತು ಎಲ್ಲಾ ಭಾರತೀಯ ಭಾಷೆಗಳು ಹಿಂದಿಯನ್ನು ಬಲಪಡಿಸುತ್ತವೆ. ಇಲ್ಲಿ ಭಾಷೆಗಳ ನಡುವೆ ಕೊಡು-ಕೊಳ್ಳುವಿಕೆ ಇದೆ ಎಂದಿದ್ದಾರೆ.

ಹಿಂದಿ ಕಂಡರೆ ದ್ವೇಷವೇಕೆ?

ಬಿಜೆಪಿ ದಕ್ಷಿಣ ಭಾರತದ ಭಾಷೆಗಳನ್ನು ವಿರೋಧಿಸುತ್ತದೆ ಎಂಬುದು ಸರಿಯಲ್ಲ. ನಾವು ದಕ್ಷಿಣದ ಭಾಷೆಗಳನ್ನು ವಿರೋಧಿಸುತ್ತಿದ್ದೇವೆ ಎನ್ನುತ್ತಾರೆ. ಈ ಮಾತನ್ನು ಅದು ಹೇಗೆ ಹೇಳುತ್ತಾರೆ? ನಾನು ಗುಜರಾತ್ ರಾಜ್ಯದಿಂದ ಬಂದವನು. ನಿರ್ಮಲಾ ಸೀತಾರಾಮನ್ ತಮಿಳುನಾಡಿನವರು. ಹೀಗಿದ್ದಾಗ ನಾವು ಪ್ರಾದೇಶಿಕ ಭಾಷೆಗಳನ್ನು ಹೇಗೆ ವಿರೋಧಿಸಲು ಸಾಧ್ಯ. ಭಾಷೆಯ ಹೆಸರಿನಲ್ಲಿ ದೇಶವನ್ನು ವಿಭಜಿಸುವ ಕೆಲಸ ಮಾಡಬಾರದು. ಭಾಷೆಯ ಹೆಸರಿನಲ್ಲಿ ವಿಷ ಹರಡುವವರಿಗೆ ನಾನು ಒಂದು ಮಾತು ಹೇಳಲು ಬಯಸುತ್ತೇನೆ. ನೀವು ಸಾವಿರಾರು ಕಿಮೀ ದೂರದ(ಆಂಗ್ಲ) ಭಾಷೆಗಳನ್ನು ಇಷ್ಟಪಡುತ್ತೀರಿ, ಆದರೆ ನಿಮಗೆ ಭಾರತದ ಭಾಷೆ ಹಿಂದೆ ಕಂಡರೆ ದ್ವೇಷ ಏಕೆ? ಎಂದು ಸಚಿವ ಅಮಿತ್ ಶಾ ತಮಿಳುನಾಡ ಸಿಎಂ ಎಂ.ಕೆ.ಸ್ಟಾಲಿನ್ ಅವರಿಗೆ ಮಾತಿನಲ್ಲೇ ಕುಟುಕಿದರು.

ಪತಿಯ ನಾಲಿಗೆ ಕಚ್ಚಿ ತುಂಡರಿಸಿದ ಪತ್ನಿ ಸೆರೆ

ಕೋಟಾ: ರಾಜಸ್ಥಾನದ ಝುಲಾವರ್ ಜಿಲ್ಲೆಯ ಬಕಾನಿ ಪಟ್ಟಣದಲ್ಲಿನ ಕುಟುಂಬವೊಂದರಲ್ಲಿ ಜಗಳ ಉಂಟಾಗಿದ್ದು, ಸಿಟ್ಟಿಗೆದ್ದ ಪತಿ, ಪತಿಯ ನಾಲಿಗೆಯನ್ನೇ ಕಚ್ಚಿ ತುಂಡು ಮಾಡಿದ್ದಾಳೆ. ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್) ಸೆಕ್ಷನ್ 115(2) ಮತ್ತು 118(2) ರಡಿ ರವಿನಾ ಸೈನ್ (23) ಎಂಬವರ ವಿರುದ್ಧ ಅಪರಾಧ ಪ್ರಕರಣ ದಾಖಲಿಸಲಾಗಿದೆ. ಪತ್ನಿಯನ್ನು ಶನಿವಾರ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಕಾನಿ ಪಟ್ಟಣದ ಕನ್ಹಯಾಲಾಲ್ ಸೈನ್ (25) ಮತ್ತು ಪಕ್ಕದ ಸುನೆಲ್ ಗ್ರಾಮದ ರವಿನಾ ಸೈನ್ ಒಂದೂವರೆ ವರ್ಷ ಹಿಂದೆ ವಿವಾಹವಾಗಿದ್ದು, ದಂಪತಿ ಆಗಾಗ್ಗೆ ಜಗಳವಾಡುತ್ತಿದ್ದರು. ಗುರುವಾರ ರಾತ್ರಿಯೂ ಜಗಳ ಆರಂಭವಾಗಿದ್ದು, ವಿಪರೀತ ಸಿಟ್ಟಿಗೆದ್ದಿದ್ದ ರವಿನಾ, ಕನ್ಹಯಾಲಾಲ್ ನಾಲಿಗೆಯನ್ನು ಹೊರಗೆಳೆದು ಅರ್ಧಭಾಗವನ್ನು ಕಚ್ಚಿ ತುಂಡರಿಸಿದ್ದಾಳೆ. ಕುಟುಂಬದ ಇತರೆ ಸದಸ್ಯರು ಕನ್ಹಯಾಲಾಲ್‌ನನ್ನು ಸ್ಥಳೀಯ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿ ಬಳಿಕ ಝಾಲಾವರ್ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಕರೆದೊಯ್ದಿದ್ದಾರೆ ಎಂದು ಪೊಲೀಸ್ ಸಹಾಯಕ ಸಬ್ ಇನ್‌ಸ್ಪೆಕ್ಟರ್ ಹೇಳಿದ್ದಾರೆ.

ತಮಿಳು ನಾಡಲ್ಲಿ ಭಾರಿ ಮಳೆ

ಚೆನ್ನೈ: ಬಂಗಾಳಕೊಲ್ಲಿಯ ನೈಋತ್ಯ ಭಾಗ, ತಮಿಳುನಾಡು ಕರಾವಳಿ ಬಳಿ ಸಮುದ್ರ ಮಟ್ಟದಿಂದ 1.5 ಕಿ.ಮೀ ಎತ್ತರದಲ್ಲಿ ವಾಯುಭಾರ ಕುಸಿತವಾಗಿದ್ದು, ಕಡಿಮೆ ಒತ್ತಡದಿಂದಾಗಿತ ತಮಿಳುನಾಡಿನ ಹಲವೆಡೆ ಮಳೆಯಾಗುತ್ತಿದೆ. ತೂತುಕುಡಿ ಜಿಲ್ಲೆಯಲ್ಲಿ ಭಾರೀ ಮಳೆಯಾಗಿದ್ದು, ಹಲವು ಪ್ರದೇಶ ಜಲಾವೃತವಾಗಿವೆ. ಕನ್ಯಾಕುಮಾರಿ, ತಿರುನಲ್ವೇಲಿ ಜಿಲ್ಲೆಗಳಲ್ಲಿಯೂ ಭಾರೀ ಮಳೆಯಾಗುವ ನಿರೀಕ್ಷೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ತೂತುಕುಡಿಯಲ್ಲಿ ಶನಿವಾರ ಮುಂಜಾನೆ ಮಳೆ ಆರಂಭವಾಗಿದ್ದು, ಕೆಲವೇ ನಿಮಿಷಗಳಲ್ಲಿ ಪ್ರಮುಖ ರಸ್ತೆಗಳು ನದಿಯಂತಾದವು.

ಮಾ.24ರವರೆಗೂ ತಮಿಳುನಾಡು ಪುದುಚೇರಿ ಮತ್ತು ಕಾರೈಕಲ್, ಕರಾವಳಿ ಕರ್ನಾಟಕ, ಉತ್ತರ ಒಳನಾಡು ಕರ್ನಾಟಕ, ಕರಾವಳಿ ಆಂಧ್ರಪ್ರದೇಶ, ರಾಯಲಸೀಮಾ ಭಾಗದಲ್ಲಿ ಗುಡುಗು, ಮಿಂಚು-ಬಿರುಗಾಳಿ ಸಹಿತ ಮಳೆಯಾಗಲಿದೆ. ಗಂಟೆಗೆ 30-50 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದೆ. ಮಾ.24ರ ಬೆಳಗ್ಗೆ 8.30ರವರೆಗೆ ತೆಲಂಗಾಣ ರಾಜ್ಯಾದ ಕೆಲವೆಡೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮೇಯರ್ ಎಕ್ರಮ್ ಬಂಧನ ಖಂಡಿಸಿ ಜನ ಪ್ರತಿಭಟನೆ

ದೇಶ ತೊರೆದ ಟರ್ಕಿ ಅಧ್ಯಕ್ಷ ಎರ್ಡೋಗನ್?

ಇಸ್ತಾನ್‌ಬುಲ್: ಟರ್ಕಿಯ ಜನರು 3ನೇ ದಿನವಾದ ಶನಿವಾರವೂ ಲಕ್ಷಾಂತರ ಸಂಖ್ಯೆಯಲ್ಲಿ ಬೀದಿಗಿಳಿದು ತೀವ್ರ ಪ್ರತಿಭಟನೆ ನಡೆಸಿದ್ದು, ಜನರ ಆಕ್ರೋಶ ತಣಿಸಲಾಗದೇ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೋಗನ್ ಸರಕಾರ ಕಷ್ಟಪಡುತ್ತಿದೆ.

ರಿಪಬ್ಲಿಕನ್ ಪೀಪಲ್ಸ್ ಪಾರ್ಟಿ ನಾಯಕ, ಟರ್ಕಿಶ್ ನಗರ ಇಸ್ತಾನ್‌ಬುಲ್‌ನ ಮೇಯರ್ ಎಕ್ರಮ್ ಇಮಾಮೊಗ್ಲು ಅವರನ್ನು ಸರಕಾರ ಬಂಧಿಸಿರುವುದನ್ನು ಖಂಡಿಸಿ ಜನರು ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ. ಪ್ರತಿಭಟನೆಯ ತೀವ್ರತೆಗಂಜಿ ಅಧ್ಯಕ್ಷ ಎರ್ಡೋಗನ್ ದೇಶ ತೊರೆದಿದ್ದಾರೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಟರ್ಕಿ ಅಧ್ಯಕ್ಷ ಸ್ಥಾನಕ್ಕೆ ಸದ್ಯದಲ್ಲೇ ಚುನಾವಣೆ ನಡೆಯಲಿದ್ದು, ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೋಗನ್ ಅವರಿಗೆ ಮೆಯರ್ ಎಕ್ರಮ್ ಇಮಾಮೊಗ್ಲು ಪ್ರಮುಖ ಪ್ರತಿಸ್ಪರ್ಧಿಯಾಗಿದ್ದಾರೆ. ಅದರಿಂದಲೇ ಇಮಾಮೊಗ್ಲು ವಿರುದ್ಧ ಹಲವು ಆರೋಪ ಹೊರಿಸಿ ಎರ್ಡೋಗನ್ ಸರಕಾರ ಬಂಧಿಸಿದೆ ಎಂದು ಜನರು ಆಕ್ರೋಶ ಹೊರಹಾಕಿದ್ದಾರೆ.

ಇಸ್ತಾನ್‌ಬುಲ್ ನಗರದಲ್ಲಿ 4 ದಿನಗಳವರೆಗೆ ಮತ ಪ್ರದರ್ಶನ, ಪ್ರತಿಭಟನೆಗಳ ಮೇಲೆ ನಿಷೇಧ ಹೇರಲಾಗಿದ್ದರೂ ನಗರದಲ್ಲಿನ ಪೊಲೀಸ್ ಪ್ರಧಾನ ಕಚೇರಿ, ನಗರ ಸಭಾಂಗಣ ಮತ್ತು ಇಮಾಮೊಗ್ಲು ಅವರ ರಿಪಬ್ಲಿಕನ್ ಪೀಪಲ್ಸ್ ಪಾರ್ಟಿ ಪ್ರಧಾನ ಕಚೇರಿ ಹೊರಗೆ ಲಕ್ಷಾಂತರ ಜನರು ಜಮಾಯಿಸಿದ್ದಾರೆ. ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವುದನ್ನು ತಡೆಯಲು ಮೆಟ್ರೊ ನಿಲ್ದಾಣಗಳನ್ನು ಸಹ ಮುಚ್ಚಲಾಗಿದೆ.

ಛತ್ತೀಸ್‌ಗಢ: 50 ವರ್ಷಗಳಿಂದ ಹಿಂದಿ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ

ವಿನೋದ್ ಕುಮಾರ್ ಶುಕ್ಲಾಗೆ 59ನೇ ಜ್ಞಾನಪೀಠ



ದೆಹಲಿ: ದೇಶದ ಸಾಹಿತ್ಯ ಕ್ಷೇತ್ರದ ಅತ್ಯುನ್ನತ ಜ್ಞಾನಪೀಠ ಪ್ರಶಸ್ತಿ ಈ ಬಾರಿ ಪ್ರಸಿದ್ಧ ಹಿಂದಿ ಕವಿ, ಬರಹಗಾರ ವಿನೋದ್ ಕುಮಾರ್ ಶುಕ್ಲಾ ಅವರಿಗೆ ಸಂದಿದೆ. ದೆಹಲಿಯಲ್ಲಿ 59ನೇ ಜ್ಞಾನಪೀಠ ಪ್ರಶಸ್ತಿ ವಿಚಾರ ಶನಿವಾರ ಘೋಷಣೆ ಮಾಡಲಾಗಿದೆ.

1937ರ ಜ.1ರಂದು ರಾಜನಂದಗಾಂವ್‌ನಲ್ಲಿ ಜನಿಸಿದ ವಿನೋದ್ ಕುಮಾರ್ ಶುಕ್ಲಾ ಸದ್ಯ ಛತ್ತೀಸ್‌ಗಢ ರಾಜ್ಯದ ರಾಯಪುರದಲ್ಲಿ ನೆಲೆಸಿದ್ದಾರೆ. ಶುಕ್ಲಾ, ಕಳೆದ 50 ವರ್ಷಗಳಿಂದ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದು, ಹಿಂದಿ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.

ಅವರ ಮೊದಲ ಕವನ ಸಂಕಲನ 'ಅಭಿಕ್ಷ ಜೈ ಹಿಂದ್' 1971ರಲ್ಲಿ ಪ್ರಕಟವಾಯಿತು. ನೌಕರ್ ಕಿ ಕಮೀಜ್, ಖಿಲೇಗಾ ತೋ ದೇಖೆಂಗೆ ಮತ್ತು ದೇರ್ ವಾಸ್ ಎ ವಿಂಡೋ ಇನ್ ದಿ ವಾಲ್ ಮೊದಲಾದವು ಶುಕ್ಲಾ ಅವರ ಅತ್ಯುತ್ತಮ ಹಿಂದಿ ಕಾದಂಬರಿಗಳು ಎಂದು ಪರಿಗಣಿತವಾಗಿವೆ. ಅಲ್ಲದೇ 'ರೂಮ್ ಆನ್ ಎ ಟ್ರೀ' ಮತ್ತು 'ಕಾಲೇಜ್' ಕಥಾ ಸಂಕಲನಗಳೂ ಹೆಚ್ಚು ಚರ್ಚಿಸಲ್ಪಟ್ಟಿವೆ. ವಿನೋದ್ ಕುಮಾರ್ ಶುಕ್ಲಾ ಅವರು ಮಕ್ಕಳ ಪುಸ್ತಕಗಳನ್ನು ಸಹ ಬರೆದಿದ್ದಾರೆ. ಅವುಗಳಲ್ಲಿ 'ಗ್ರೀನ್ ಲೀಫ್ ಕಲರ್ಡ್ ಪತ್ರಂಗಿ' ಮತ್ತು 'ಎ ಬಾಯ್ ನೇಮ್ಡ್ ಕಹಿನ್ ಖೋ ಗಯಾ' ಮುಂತಾದ ಪುಸ್ತಕಗಳು ಸೇರಿವೆ. ಇವು ಮಕ್ಕಳಿಗೆ ತುಂಬಾ ಇಷ್ಟವಾಗಿವೆ.

ಕನ್ನಡಕ್ಕೆ: ಕನ್ನಡ ಭಾಷೆಗೆ 8 ಜ್ಞಾನಪೀಠ ಪ್ರಶಸ್ತಿಗಳು ಈವರೆಗೆ ಲಭಿಸಿವೆ. 2011ರಲ್ಲಿ 8ನೇ ಬಾರಿ ಜ್ಞಾನಪೀಠ ಪ್ರಶಸ್ತಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಲಭಿಸಿತ್ತು. ಡಾ. ಚಂದ್ರಶೇಖರ ಕಂಬಾರ ಅವರ ಸಮಗ್ರ ಕೃತಿಗೆ 2011ನೇ ಸಾಲಿನ ಜ್ಞಾನ ಪೀಠ ಪ್ರಶಸ್ತಿ ದೊರಕಿತ್ತು. ಅದಕ್ಕೂ ಮುನ್ನ ಕುವೆಂಪು, ಶಿವರಾಮ ಕಾರಂತ, ದ.ರಾ.ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿ.ಕೃ.ಗೋಕಾಕ, ಗಿರೀಶ್ ಕಾರ್ನಾಡ್ ಮತ್ತು ಯು.ಆರ್. ಅನಂತಮೂರ್ತಿ ಈ ಪ್ರಶಸ್ತಿ ಪಡೆದಿದ್ದರು.

ರಾಜಕೀಯವಾಗಿ ರಾಜ್ಯಗಳನ್ನು ದುರ್ಬಲಗೊಳಿಸುವ ಪ್ರಕ್ರಿಯೆ: ಡಿಎಂಕೆ ವಾದ | ಯಾವುದೇ ಕಾರಣಕ್ಕೂ ಕ್ಷೇತ್ರ ಕಡಿಮೆ ಆಗಲು ಬಿಡುವುದಿಲ್ಲ: ಡಿಕೆಶಿ

ಕ್ಷೇತ್ರ ಮರು ವಿಂಗಡಣೆ ತಾರತಮ್ಯ: ಸ್ಟಾಲಿನ್ ಕಿಡಿ

ಚೆನ್ನೈ: ರಾಷ್ಟ್ರದ ಗಮನ ಸೆಳೆಯುವಷ್ಟು ರಾಜಕೀಯ ಬಲ ಇಲ್ಲದ ಕಾರಣ ನ್ಯಾಯಕ್ಕಾಗಿ ಹೋರಾಡುವ ರಾಜ್ಯಗಳ ಧ್ವನಿಯನು ಅಡಗಿಸುವ ಯತ್ನ ನಡೆಸಲಾಗುತ್ತಿದೆ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಕಿಡಿಕಾರಿದ್ದಾರೆ.

ಕೇಂದ್ರ ಸರಕಾರ ಸದ್ಯದಲ್ಲೇ ಕೈಗೊಳ್ಳಲಿರುವ ಕ್ಷೇತ್ರ ಮರು ವಿಂಗಡಣೆ ಪ್ರಕ್ರಿಯೆ ಕುರಿತು ಚರ್ಚಿಸಲು 'ನ್ಯಾಯೋಚಿತ ಕ್ಷೇತ್ರ ಪುನರ್ ವಿಂಗಡಣೆಗಾಗಿ ಜಂಟಿ ಕ್ರಿಯಾ ಸಮಿತಿ' ಚೆನ್ನೈನಲ್ಲಿ ಶನಿವಾರ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಸ್ಟಾಲಿನ್, ಸಂಸತ್ತಿನಲ್ಲಿ ದಕ್ಷಿಣದ ರಾಜ್ಯಗಳ ಪ್ರಾತಿನಿಧ್ಯ ಕಡಿಮೆ ಮಾಡುವ ಹುನ್ನಾರವಿದೆ. ಅದು ಕೈಗೂಡಿದಲ್ಲಿ ನಮ್ಮ ರಾಜ್ಯಗಳ ರಾಜಕೀಯ ಬಲ ಕಡಿಮೆಯಾಗುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು.

ಮಣಿಪುರ ರಾಜಕೀಯ ಬಲವಿಲ್ಲದ ರಾಜ್ಯ. ಹಾಗಾಗಿಯೇ ಅಲ್ಲಿ 2 ವರ್ಷದಿಂದ ಹಿಂಸಾಚಾರ ನಡೆಯುತ್ತಿದ್ದರೂ ಆ ಬಗ್ಗೆ ಕೇಂದ್ರ ಸರಕಾರ ಮೌನವಾಗಿದೆ. ಬಲಹೀನ ರಾಜ್ಯಗಳ ಬಗ್ಗೆ ಕೇಂದ್ರ ಸರಕಾರ ನಿಷ್ಕ್ರಿಯತೆ ಹೇಗಿರುತ್ತದೆ ಎಂಬುದಕ್ಕೆ ಇದು ಉದಾಹರಣೆಯಾಗಿದೆ ಎಂದು ಸ್ಟಾಲಿನ್ ಸಭೆಯ ಗಮನ ಸೆಳೆದರು.

ನಮ್ಮ ಈ ಹೋರಾಟ ಕ್ಷೇತ್ರ ಮರು ವಿಂಗಡಣೆ ವಿರುದ್ಧವಲ್ಲ. ಆ ಪ್ರಕ್ರಿಯೆ ನ್ಯಾಯಯುತವಾಗಿ ನಡಯಬೇಕು ಎಂಬುದೇ ನಮ್ಮ ಆಗ್ರಹ. ರಾಜ್ಯಗಳಲ್ಲಿನ ಲೋಕಸಭೆ-ವಿಧಾನಸಭೆ ಕ್ಷೇತ್ರಗಳನ್ನು ಕಡಿಮೆ ಮಾಡುವಂತಿಲ್ಲ. ಇದು ನಮ್ಮ ಹಕ್ಕು, ಭವಿಷ್ಯದ ಪ್ರಶ್ನೆಯಾಗಿದೆ. ರಾಜ್ಯಗಳ ಸ್ವಾಯತ್ತತೆ ಖಾತ್ರಿಪಡಿಸಿದರೆ ಮಾತ್ರವೇ ಭಾರತದಲ್ಲಿ ಒಕ್ಕೂಟ ವ್ಯವಸ್ಥೆ ಉಳಿಯುತ್ತದೆ ಎಂದರು.

ದುಷ್ಪರಿಣಾಮಗಳ ಸರಮಾಲೆ: ಸ್ಟಾಲಿನ್

ಜನಸಂಖ್ಯೆ ಆಧರಿಸಿ ಕ್ಷೇತ್ರ ಮರು ವಿಂಗಡಣೆ ಪ್ರಕ್ರಿಯೆ ನಡೆದರೆ ಎದುರಾಗುವ ದುಷ್ಪರಿಣಾಮಗಳನ್ನು ಸಭೆಗೆ ವಿವರಿಸಿದ ಸಿಎಂ ಎಂ.ಕೆ. ಸ್ಟಾಲಿನ್, ಒಂದೊಮ್ಮೆ ಕ್ಷೇತ್ರಗಳ ಸಂಖ್ಯೆ ಕಡಿಮೆ ಆದರೆ, ಅದರಿಂದ ಕೇಂದ್ರದಿಂದ ಬರಬೇಕಾದ ಹಣ ಪಡೆಯಲು ರಾಜ್ಯಗಳು ಹರಸಾಹಸ ಪಡಬೇಕಾಗುತ್ತದೆ. ಅನಗತ್ಯವಾದ ಕಾನೂನುಗಳು ಕೇಂದ್ರದಿಂದ ಜಾರಿಗೊಳ್ಳುತ್ತವೆ, ರಾಜ್ಯದ ಜನರ ಮೇಲೆ ಪರಿಣಾಮ ಬೀರುವ ನಿರ್ಧಾರಗಳನ್ನು ಕೇಂದ್ರ ತೆಗೆದುಕೊಳ್ಳಲು ಅವಕಾಶವಾಗುತ್ತದೆ. ಮಹಿಳಾ ಸಬಲೀಕರಣಕ್ಕೆ ಹಿನ್ನಡೆಯಾಗುತ್ತದೆ. ವಿದ್ಯಾರ್ಥಿಗಳು ಉನ್ನತ ಶಿಕ್ಷಣದಲ್ಲಿನ ಅವಕಾಶಗಳ ಪಾಲು ಕಳೆದುಕೊಳ್ಳಬೇಕಾಗುತ್ತದೆ, ರೈತರಿಗೆ ಬೆಂಬಲ ಸಿಗುವುದಿಲ್ಲ. ನಮ್ಮ ಸಂಸ್ಕೃತಿ, ಅಸ್ಮಿತೆ, ಪ್ರಗತಿಯ ಮೇಲೆ ಪೆಟ್ಟು ಬೀಳಲಿದೆ. ಸಾಮಾಜಿಕ ನ್ಯಾಯ ಇಲ್ಲವಾಗಲಿದೆ. ಎಸ್‌ಸಿ/ಎಸ್‌ಟಿ ಸಮುದಾಯಗಳ ಮೇಲೆಯೂ ದುಷ್ಪರಿಣಾಮವಾಗುತ್ತದೆ ಎಂದು ಎಚ್ಚರಿಸಿದರು.

'ನ್ಯಾಯೋಚಿತ ಕ್ಷೇತ್ರ ಮರು ವಿಂಗಡಣೆ ಜಂಟಿ ಕ್ರಿಯಾ ಸಮಿತಿ' ಮೊದಲ ಸಭೆಯನ್ನು ತಮಿಳುನಾಡು ಸಿಎಂ ಎಂ.ಕೆ.ಸ್ಟಾಲಿನ್ ಚೆನ್ನೈನಲ್ಲಿ ಶನಿವಾರ ಮುನ್ನಡೆಸಿದರೆ, ಕೇರಳ ಸಿಎಂ ಪಿಣರಾಯಿ ವಿಜಯನ್, ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಉಪಸ್ಥಿತರಿದ್ದರು.

ಭಾಗಿಯಾದ ಪ್ರಮುಖರು

ಕ್ಷೇತ್ರ ಮರು ವಿಂಗಡಣೆಯ ಪರಿಣಾಮ ಎದುರಿಸಲಿರುವ ದಕ್ಷಿಣ ಭಾರತದ 4 ರಾಜ್ಯಗಳು ಮತ್ತು ಪಂಜಾಬ್ ರಾಜಕೀಯ ನಾಯಕರು ಜಂಟಿ ಕ್ರಿಯಾ ಸಮಿತಿಯ ಮೊದಲ ಸಭೆಯಲ್ಲಿ ಶನಿವಾರ ಭಾಗವಹಿಸಿದ್ದರು. ಕೇರಳ ಸಿಎಂ ಪಿಣರಾಯಿ ವಿಜಯನ್, ತೆಲಂಗಾಣ ಸಿಎಂ ರೇವಂತ್ ರೆಡ್ಡಿ, ಪಂಜಾಬ್ ಸಿಎಂ ಭಗವಂತ್ ಮಾನ್, ಕರ್ನಾಟಕ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ತೆಲಂಗಾಣ ಬಿಆರ್‌ಎಸ್ ಪಕ್ಷದ ಮುಖಂಡ ಕೆ.ಟಿ.ರಾಮರಾವ್ ಮತ್ತಿತರರು ಉಪಸ್ಥಿತರಿದ್ದರು.

ನಮ್ಮ ಕ್ಷೇತ್ರಗಳ ಸಂಖ್ಯೆ ತಗ್ಗಲು ಬಿಡುವುದಿಲ್ಲ: ಡಿಕೆಶಿ

ಚೆನ್ನೈ: ಯಾವುದೇ ಕಾರಣಕ್ಕೂ ನಾವು ನಮ್ಮ ದೇಶವನ್ನು ನಿರಾಸೆಗೊಳಿಸುವುದಿಲ್ಲ ಮತ್ತು ನಮ್ಮ ರಾಜ್ಯಗಳಲ್ಲಿನ ಲೋಕಸಭೆ-ವಿಧಾನಸಭೆ ಕ್ಷೇತ್ರಗಳ ಸಂಖ್ಯೆ ಕಡಿಮೆ ಮಾಡಲು ಬಿಡುವುದಿಲ್ಲ. ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ. ಬಿಜೆಪಿಗೆ ಕಪ್ಪು ಬಾವುಟ ತೋರುತ್ತೇವೆ. ಕೇಂದ್ರದ ಬಿಜೆಪಿ ಸರಕಾರ ನನ್ನನ್ನು ಮತ್ತೆ ತಿಹಾರ್ ಜೈಲಿಗೆ ಕಳುಹಿಸಿದರೂ ಹೆದರುವುದಿಲ್ಲ ಎಂದು ಕರ್ನಾಟಕ ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ನಮ್ಮದು ಬಹಳ ಪ್ರಗತಿಪರ ರಾಜ್ಯವಾಗಿದೆ. ಆರ್ಥಿಕವಾಗಿ ಮತ್ತು ಸಾಕ್ಷರತೆಯಲ್ಲಿ ಮುಂಚೂಣಿಯಲ್ಲಿದ್ದೇವೆ. ಕ್ಷೇತ್ರ ಮರು ವಿಂಗಡಣೆಯ ಪರಿಣಾಮಗಳ ಕುರಿತು ದಕ್ಷಿಣದ ರಾಜ್ಯಗಳನ್ನು ಎಚ್ಚರಿಸುವಲ್ಲಿ, ಒಗ್ಗೂಡಿಸುವಲ್ಲಿ ತಮಿಳುನಾಡು ಸಿಎಂ ಎಂ.ಕೆ.ಸ್ಟಾಲಿನ್ ಮೊದಲ ಹೆಜ್ಜೆ ಇಟ್ಟಿದ್ದಾರೆ. ಅವರು ದೇಶದ ಒಕ್ಕೂಟ ವ್ಯವಸ್ಥೆ ಮತ್ತು ಸಂವಿಧಾನ ರಕ್ಷಿಸಲು ಶ್ರಮಿಸುತ್ತಿದ್ದಾರೆ. ಈ ಬಗ್ಗೆ ನಮಗೆ ಹೆಮ್ಮೆ ಇದೆ. ಮುಂದೆ ಯಾವ ಕ್ರಮ ಕೈಗೊಳ್ಳಬೇಕು, ಒಗ್ಗೂಡಿ ಹೇಗೆ ಕೆಲಸ ಮಾಡಬೇಕು ಎಂಬ ಕುರಿತು ಎಲ್ಲರೂ ಚರ್ಚಿಸಿದ್ದೇವೆ ಎಂದು ಸಭೆ ಬಳಿಕ ಸುದ್ದಿಗಾರರಿಗೆ ಹೇಳಿದರು.

ದೇಶದಲ್ಲಿ ರಾಜಕೀಯವಾಗಿ ನಾವು ದುರ್ಬಲರಾಗುತ್ತೇವೆ. ಭಾರತದ ಒಕ್ಕೂಟ ವ್ಯವಸ್ಥೆಯನ್ನು ರಕ್ಷಿಸಬೇಕಾದ ದಿನವಾಗಿದೆ. ಈ ದಿನ ಇತಿಹಾಸದ ಪುಟ ಸೇರಲಿದೆ ಎಂದ ಸ್ಟಾಲಿನ್, ಬಿಜೆಪಿ ಸದಾ ರಾಜ್ಯಗಳ ಹಕ್ಕು ಕಸಿದುಕೊಳ್ಳುವುದನ್ನೇ ಬಯಸುತ್ತದೆ. ಈ ಬೆದರಿಕೆ ಅರ್ಥ ಮಾಡಿಕೊಂಡಿ ರುವ ತಮಿಳುನಾಡು, ದಕ್ಷಿಣದ ರಾಜ್ಯಗಳನ್ನು ಎಚ್ಚರಿಸಿ ಒಗ್ಗೂಡಿಸುವ ಕೆಲಸ ಮಾಡಿದೆ. ದೇಶದ ಪ್ರಜಾಪ್ರಭುತ್ವ ಮತ್ತು ಒಕ್ಕೂಟ ವ್ಯವಸ್ಥೆ ರಕ್ಷಿಸಲು ಇದೇ ರೀತಿಯಲ್ಲಿ ಒಗ್ಗೂಡಬೇಕಾಗಿದೆ ಎಂದು ಸ್ಟಾಲಿನ್ ಸಭೆಗೆ ಮನವಿ ಮಾಡಿ ದರು. ಉತ್ತರ ಭಾರತದ ರಾಜ್ಯಗಳು ದಕ್ಷಿಣ ಭಾರತದ ವರನ್ನು ಎರಡನೇ ದರ್ಜೆ ನಾಗರಿಕರಂತೆ ನೋಡುತ್ತಿವೆ ಎಂದು ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕೇಂದ್ರ ಸರಕಾರ ಪ್ರಣೀತ ಕ್ಷೇತ್ರ ಮರು ವಿಂಗಡಣೆ ಎಂಬುದು ವಿನಾಶಕಾರಿ ಖಡ್ಗದಂತಿದೆ. ಅದು ದೀರ್ಘಕಾಲದ ವಿನಾಶಕ್ಕೆ ಬಳಸುವಂತೆ ಕಾಣುತ್ತಿದೆ ಎಂದು ಕೇರಳ ಸಿಎಂ ಪಿಣರಾಯಿ ವಿಜಯನ್ ಮಾತಿನಲ್ಲೇ ಕುಟುಕಿದ್ದಾರೆ.

ಮಲೇಷ್ಯಾ: ಮಸೀದಿಗಾಗಿ ಪುರಾತನ ಮಂದಿರ ನೆಲಸಮ

ಕೌಲಾಲಂಪುರ: ಮಸೀದಿ ನಿರ್ಮಿಸುವುದಕ್ಕಾಗಿ ಮಲೇಷ್ಯಾದಲ್ಲಿ 130 ವರ್ಷಗಳಷ್ಟು ಹಳೆಯ ದೇವಾಲಯವನ್ನು ನೆಲಸಮ ಮಾಡಲಾಗುತ್ತಿದೆ ಎಂದು ವರದಿಯಾಗಿದೆ.



ಕೌಲಾಲಂಪುರದ ಜಲನ್ ಇಂಡಿಯ ರಸ್ತೆಯಲ್ಲಿ ಜಕೇಲ್ ಮಾಲ್ ಎದುರಿಗಿರುವ 'ಶ್ರೀ ಭದ್ರಕಾಳಿ ಅಮ್ಮ ದೇವಸ್ಥಾನ' ಕೆಡವಿ ಅದೇ ಜಾಗದಲ್ಲಿ ಮಸೀದಿ ನಿರ್ಮಾಣ ಮಾಡಲು ಆದೇಶಿಸಲಾಗಿದೆ. ಈಗಾಗಲೇ ಮಸೀದಿಯ ಶಿಲಾನ್ಯಾಸ ಸಮಾರಂಭವನ್ನು ನಡೆಸಿದೆ. ಮಸೀದಿಯನ್ನು ಮಸೀದ್ ಮದನಿ ಎಂದು ಹೆಸರಿಸಲಾಗಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಮಲೇಷ್ಯಾ ಸ್ವಾತಂತ್ರ್ಯಕ್ಕೂ ಮುನ್ನ ದೇವಾಲಯ ನಿರ್ಮಾಣವಾಗಿದೆ. ಅಂತಹ ಪುರಾತನ ದೇವಾಲಯ ನೆಲಸಮ ಆದೇಶ ಸರಿಯಲ್ಲ ಎಂದು ಹಿಂದೂ ಸಮುದಾಯ ಆಕ್ಷೇಪ ವ್ಯಕ್ತಪಡಿಸಿದೆ. ಹಿಂದೂಗಳು ಪ್ರತಿಭಟನೆಯನ್ನೂ ನಡೆಸಿದ್ದಾರೆ. ಮಸೀದಿ ನಿರ್ಮಾಣಕ್ಕಾಗಿ ದೇವಾಲಯದ ಜಾಗವನ್ನೇ ಏಕೆ ಆಯ್ಕೆ ಮಾಡಲಾಯಿತು? ಎಂದು ಜನರು ಪ್ರಶ್ನಿಸಿದ್ದಾರೆ.

ಆ ಬಳಿಕ ದೇವಾಲಯವನ್ನು ಬೇರೆಡೆ ನಿರ್ಮಿಸಲು ಸ್ಥಳ ಗುರುತಿಸಲಾಗಿದೆ ಎಂಬ ಸಮಜಾಯಿಷಿ ಕೇಳಿಬಂದಿವೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಸೋಮ-ಮಂಗಳವಾರ ಬ್ಯಾಂಕ್ ಮುಷ್ಕರ ಇಲ್ಲ

ಮುಂಬೈ: ವಾರದಲ್ಲಿ 5 ದಿನ ಕೆಲಸ, ಎಲ್ಲಾ ಶ್ರೇಣಿಗಳಿಗೂ ಹೊಸ ನೇಮಕ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬ್ಯಾಂಕ್ ನೌಕರರ ಸಂಘಟನೆಗಳ ಒಕ್ಕೂಟ ಕರೆ ನೀಡಿದ್ದ ಸೋಮವಾರ-ಮಂಗಳವಾರದ ಮುಷ್ಕರ ಮುಂದೆ ಹೋಗಿದೆ. ಕೇಂದ್ರ ವಿತ್ತ ಸಚಿವಾಲಯ ಮತ್ತು ಭಾರತೀಯ ಬ್ಯಾಂಕುಗಳ ಸಂಘ ಸಕಾರಾತ್ಮಕವಾಗಿ ಸ್ಪಂದಿಸಿದ್ದರಿಂದ ಮುಷ್ಕರ ಮುಂದೂಡಾಲಾಗಿದೆ ಎಂದು ಒಕ್ಕೂಟದ ಪದಾಧಿಕಾರಿಗಳು ಶನಿವಾರ ಹೇಳಿದ್ದಾರೆ.

9 ಬ್ಯಾಂಕ್ ನೌಕರರ ಸಂಘಗಳ ಒಕ್ಕೂಟವಾದ 'ಬ್ಯಾಂಕ್ ನೌಕರರ ಒಕ್ಕೂಟಗಳ ಸಂಯುಕ್ತ ವೇದಿಕೆ'(ಯುಎಫ್‌ಪಿಯು) 2 ದಿನಗಳ ಮುಷ್ಕರಕ್ಕೆ ಕರೆ ನೀಡಿತ್ತು. 'ಯುಎಫ್‌ಪಿಯು'ನಲ್ಲಿ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ, ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟ, ರಾಷ್ಟ್ರೀಯ ಬ್ಯಾಂಕ್ ನೌಕರರ ಒಕ್ಕೂಟ, ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಸಂಘ ಮತ್ತು ಭಾರತೀಯ ಬ್ಯಾಂಕ್ ನೌಕರರ ಒಕ್ಕೂಟ ಸದಸ್ಯರಾಗಿವೆ.

ಒಕ್ಕೂಟದ ಪದಾಧಿಕಾರಿಗಳು, ಹಣಕಾಸು ಇಲಾಖೆ, ಬ್ಯಾಂಕ್‌ಗಳ ಆಡಳಿತ ಮಂಡಳಿ ಸಮಾಲೋಚನಾ ಸಭೆ ನಡೆಸಿದ ಮುಖ್ಯ ಕಾರ್ಮಿಕ ಆಯುಕ್ತರು, ಮುಷ್ಕರ ಮುಂದೂಡಲು ಸಲಹೆ ನೀಡಿದರು ಎಂದು. ಮುಖ್ಯ ಕಾರ್ಮಿಕ ಆಯುಕ್ತರ ಸೂಚನೆಯಂತೆ ಮುಂದಿನ ಸಭೆ ಏ.22ಕ್ಕೆ ನಿಗದಿಪಡಿಸಲಾಗಿದೆ ಮತ್ತು ಒಕ್ಕೂಟದ ಬೇಡಿಕೆಗಳ ಕುರಿತು ಪ್ರಗತಿ ವರದಿ ಸಲ್ಲಿಸಲು ಸೂಚನೆ ನೀಡಲಾಗಿದೆ ಎಂದು ಸುದ್ದಿ ಸಂಸ್ಥೆ ವರದಿ ಮಾಡಿದೆ.

ದೇವರು ಎಲ್ಲರಿಗೂ 24 ಗಂಟೆ ಕೊಟ್ಟಿದ್ದಾನೆ: ಸುಧಾ ಮೂರ್ತಿ

ದೆಹಲಿ: ಭಾರತೀಯ ಯುವಜನರು ವಾರಕ್ಕೆ 70 ಗಂಟೆ ಕೆಲಸ ಮಾಡಬೇಕೆಂದು ಇನ್ಫೋಸಿಸ್ ಸಹ ಸಂಸ್ಥಾಪಕ ನಾರಾಯಣ ಮೂರ್ತಿ ಅವರು 2024ರಲ್ಲಿ ನೀಡಿದ್ದ ಹೇಳಿಕೆ ತೀವ್ರ ಚರ್ಚೆಗೆ ಗ್ರಾಸವಾಗಿತ್ತು. ಪತಿ ನಾರಾಯಣ ಮೂರ್ತಿ ಅವರ ಹೇಳಿಕೆಗೆ

ಪ್ರತಿಕ್ರಿಯಿಸಿರುವ ರಾಜ್ಯಸಭಾ ಸದಸ್ಯೆ ಸುಧಾ ಮೂರ್ತಿ, 'ದೇವರು ಎಲ್ಲರಿಗೂ 24 ಗಂಟೆ ಕೊಟ್ಟಿದ್ದಾನೆ. ಜನರು ಉತ್ಸಾಹದಿಂದ ಏನನ್ನಾದರೂ ಮಾಡಲು ಮುಂದಾದಾಗ ಸಮಯ ಎಂಬುದು ಎಂದಿಗೂ ಮಿತಿಯಾಗುವುದಿಲ್ಲ' ಎಂದು ಹೇಳಿದ್ದಾರೆ.

'ಇಂಡಿಯ ಥ್ರೂ ದಿ ಐಸ್ ಆಫ್ ಇಟ್ಸ್ ಐಕಾನ್ಸ್' ಎನ್‌ಡಿಟಿವಿ ಕಾರ್ಯಕ್ರಮದಲ್ಲಿ ಮಾತನಾಡಿದ ಸುಧಾಮೂರ್ತಿ, ಪತಿ ನಾರಾಯಣಮೂರ್ತಿ ದೊಡ್ಡ ಮೊತ್ತವಿಲ್ಲದೇ, ಸಮರ್ಪಣ ಮನೋಭಾವದ ಮಿತ್ರರೊಂದಿಗೆ ಇನ್ಫೋಸಿಸ್ ಕಟ್ಟಲು ನಿರ್ಧರಿಸಿ ವಾರಕ್ಕೆ 70 ಗಂಟೆ, ಕೆಲವೊಮ್ಮೆ ಇನ್ನೂ ಹೆಚ್ಚು ಸಮಯ ಕೆಲಸ ಮಾಡಿದರು. ಹಾಗಾಗಿ ದೊಡ್ಡ ಸಂಸ್ಥೆಯನ್ನು ಕಟ್ಟಲು ಅವರಿಗೆ ಸಾಧ್ಯವಾಯಿತು. ಇನ್ಫೋಸಿಸ್ ಯಶಸ್ಸು ಯಾವುದೇ ಶಾರ್ಟ್‌ಕಟ್ (ಒಳದಾರಿ) ಅಥವಾ ಮಂತ್ರದಂಡದಿಂದ ಸಾಧ್ಯವಾಗಿದ್ದಲ್ಲ. ಬದಲಾಗಿ, ಕಠಿಣ ಪರಿಶ್ರಮ, ಸ್ವಲ್ಪ ಅದೃಷ್ಟ, ಸರಿಯಾದ ಸಮಯದಲ್ಲಿ ಸರಿಯಾದ ಸ್ಥಳದಲ್ಲಿ ಎಲ್ಲವೂ ಸರಿಯಾಗಿ ನಡೆದಿದ್ದರ ಪರಿಣಾಮದಿಂದ ಕೈಗೂಡಿದ್ದಾಗಿದೆ ಎಂದರು.

ಚೀನಾ ಅತಿಕ್ರಮ ಭಾರತ ಎಂದೂ ಒಪ್ಪಿಲ್ಲ: ಕೇಂದ್ರ

ದೆಹಲಿ: ಲಡಾಖ್ ಬಳಿಯ ಅಕ್ಸಯ್ ಚಿನ್ ಪ್ರದೇಶದಲ್ಲಿ ಚೀನಾ ಎರಡು ಹೊಸ ಹಳ್ಳಿಗಳನ್ನು ಸ್ಥಾಪಿಸಿರುವ ಬಗ್ಗೆ ಭಾರತ ಸರಕಾರ ಆಕ್ಷೇಪ ವ್ಯಕ್ತಪಡಿಸಿದೆ. ಈ ಹಳ್ಳಿಗಳ ಭಾಗಶಃ ಪ್ರದೇಶಗಳು ಭಾರತದ ಭೂಭಾಗದಲ್ಲಿಯೇ ಬರುತ್ತವೆ ಎಂದು ಪ್ರತಿಪಾದಿಸಿದೆ.

ಚೀನಾದ ಈ ನಡೆಯು ಅಕ್ರಮವಾಗಿದೆ ಎಂದಿರುವ ಭಾರತ ಸರಕಾರ, ರಾಜತಾಂತ್ರಿಕ ಮಾರ್ಗಗಳ ಮೂಲಕ ತನ್ನ ಪ್ರತಿಭಟನೆಯನ್ನು ಚೀನಾಕ್ಕೆ ಶನಿವಾರ ವ್ಯಕ್ತಪಡಿಸಿದೆ. ಲೋಕಸಭೆಯಲ್ಲಿ ನಡೆದ ಪ್ರಶ್ನೋತ್ತರ ವೇಳೆಯಲ್ಲಿ, ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಕೀರ್ತಿ ವರ್ಧನ್ ಸಿಂಗ್ ಈ ವಿಷಯವನ್ನು ಉಲ್ಲೇಖಿಸಿದರು. ಚೀನಾದ ಹೊಟಾನ್ ಪ್ರಿಫೆಕ್ಚರ್‌ನಲ್ಲಿ ಎರಡು ಹೊಸ ಹಳ್ಳಿಗಳನ್ನು ಸ್ಥಾಪಿಸಲಾಗಿದೆ ಎಂದು ಚೀನಾ ಘೋಷಿಸಿದೆ. ಆದರೆ, ಈ ಕೌಂಟಿಗಳ ಭಾಗಗಳು ಭಾರತದ ಲಡಾಖ್ ಒಕ್ಕೂಟ ಪ್ರದೇಶದಲ್ಲಿ ಬರುತ್ತವೆ. ಚೀನಾದ ಅಕ್ರಮವನ್ನು ಎಂದೂ ಭಾರತ ಒಪ್ಪುವುದಿಲ್ಲ ಎಂದು ಸಿಂಗ್ ತಿಳಿಸಿದರು. ಈ ಹೊಸ ಹಳ್ಳಿಗಳ ಸೃಷ್ಟಿಯು ಭಾರತದ ಸಾರ್ವಭೌಮತೆ ಮೇಲೇನೂ ಪರಿಣಾಮ ಬೀರುವುದಿಲ್ಲ ಮತ್ತು ಚೀನಾದ ಆಕ್ರಮಣಕ್ಕೆ ಕಾನೂನು ಮಾನ್ಯತೆ ಒದಗಿಸುವುದಿಲ್ಲ, ಚೀನಾದ ಈ ಘೋಷಣೆ ಬಗ್ಗೆ ಭಾರತ ಸರಕಾರಕ್ಕೆ ಮಾಹಿತಿ ಇದೆ. ಈ ಹಳ್ಳಿಗಳನ್ನು ಭಾಗಶಃ ಪ್ರದೇಶಗಳು ಲಡಾಖ್‌ನಲ್ಲಿ ಬರುತ್ತವೆ ಎಂದು ಸಚಿವರು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

{ಅಣ್ಣಾಮಲೈ} ತ.ನಾ. ಬಿಜೆಪಿ ಅಧ್ಯಕ್ಷ

ಪೊಲೀಸ್ ಅಧಿಕಾರಿಯಾಗಿ ಕರ್ನಾಟಕದ ಜನರಿಗೆ ನಾನು ಶ್ರದ್ಧೆಯಿಂದ ಸೇವೆ ಸಲ್ಲಿಸಿದ್ದೇನೆ. ಅದನ್ನು ಈಗ ನೆನಪು ಮಾಡಿಕೊಂಡಿದ್ದಕ್ಕೆ ಮತ್ತು ಈ 'ಬಡವನಿಗೆ' ಶುಭ ಹಾರೈಸಿದ್ದಕ್ಕೆ ಡಿ.ಕೆ.ಶಿವಕುಮಾರ್ ಅವರಿಗೆ ಧನ್ಯವಾದ. ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಇಳಿಸಿ ಸಿಎಂ ಕುರ್ಚಿಯಲ್ಲಿ ಕೂರಬೇಕೆಂಬ ಡಿಕೆಶಿ ಅವರ ನಿರಂತರ ಯತ್ನಗಳಿಗೂ ನನ್ನ ಶುಭ ಹಾರೈಕೆ.

ಸಮಾಚಾರ ಸಣ್ಣದಲ್ಲ

ಯೋಗ ಪ್ರಶಸ್ತಿಗಾಗಿ ಅರ್ಜಿಗಳ ಆಹ್ವಾನ

ವಿಜಯಪುರ: ಯೋಗಾ ಕ್ರೀಡೆಗೆ ಅತ್ಯುನ್ನತವಾದ ಕೊಡುಗೆಯನ್ನು ನೀಡಿರುವಂತಹ ಕ್ರೀಡಾಪಟು ಗಳಿಗೆ ಅಥವಾ ಯೋಗ ಸಂಸ್ಥೆಗಳಿಗೆ ಪ್ರಧಾನಮಂತ್ರಿಗಳು ರಾಷ್ಟ್ರೀಯ ಮಟ್ಟ ಅಥವಾ ಅಂತಾರಾಷ್ಟ್ರೀಯ ಮಟ್ಟದ ಅತ್ಯುನ್ನತ ಯೋಗ ಪ್ರಶಸ್ತಿಯನ್ನು ಘೋಷಿಸಿರುತ್ತಾರೆ. ಕಡಿಟಜ ಒಟಿಣಜಡಿ ಒತಿಚಿಡಿಜ ಜಿಂಡಿ ಥಿಂಂಚಿ ಜಿಂಡಿ 2025 ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅರ್ಜಿಯನ್ನು ೀಣಣಠಿ://ಟಿಟಿಠಿತಚಿಣಜಟಜಚಿ. ಟಥಿರಿಠಿತ.ಟಿ/ಠಿಟ-ಥಿಠಂಚಿ-ಚಿತಿಚಿಡಿಜ-2025 ವೆಬ್‌ಸೈಟ್‌ನಲ್ಲಿ ಇದೇ 31ರೊಳಗೆ ಅರ್ಜಿ ಸಲ್ಲಿಸಲು ಕೊನೆಯ ದಿನ.

ಹುದ್ದೆಗಳ ಭರ್ತಿಗೆ ನೇರ ಸಂದರ್ಶನ

ವಿಜಯಪುರ: ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ವತಿಯಿಂದ ಬೋಧಕ-ಬೋಧಕೇತರ ಹುದ್ದೆಗಳ ನೇಮಕಾತಿಗಾಗಿ ನಗರದ ಬಸವನ ಬಾಗೇವಾಡಿ ರಸ್ತೆಯಲ್ಲಿರುವ ಶಾಂತಿನಗರದ ಶ್ರೀ ರಾಮಕೃಷ್ಣ ವಿದ್ಯಾ ಸ್ಕೂಲ್‌ನಲ್ಲಿ ಇದೇ 26 ರಂದು ಬೆಳಗ್ಗೆ 10 ರಿಂದ 4 ಗಂಟೆಯವರೆಗೆ ನೇರ ಸಂದರ್ಶನ ಏರ್ಪಡಿಸಲಾಗಿದೆ. ಬೋಧಕ ಹುದ್ದೆಗಳಿಗಾಗಿ ಬಿಎ, ಎಂಎ ಬಿಇಡಿ, ಬಿಎಸ್ಸಿ, ಎಂಎಸ್ಸಿ ಬಿಇಡಿ, ಎಂಪಿಇಡಿ ಹಾಗೂ ಯಾವುದೇ ಪದವಿ ವಿದ್ಯಾರ್ಹತೆಯುಳ್ಳ ಹಾಗೂ ಬೋಧಕೇತರ ಹುದ್ದೆಗಳಾದ ವಾರ್ಡನ್, ಸೂಪರ್‌ವೈಸರ್ ಪದವಿ ವಿದ್ಯಾರ್ಹತೆಯುಳ್ಳ ಆಸಕ್ತ ಹಾಗೂ ಅರ್ಹ ಅಭ್ಯರ್ಥಿಗಳು ಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ. ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಮೊ: 9448114385, 9945000793 ಸಂಖ್ಯೆಗೆ ಸಂಪರ್ಕಿಸುವಂತೆ ಜಿಲ್ಲಾ ಉದ್ಯೋಗಾಧಿಕಾರಿಗಳು ತಿಳಿಸಿದರು.

ಅಗ್ನಿಪಥ ಯೋಜನೆ ನೇಮಕಾತಿ ನಾಳೆಯಿಂದ

ವಿಜಯಪುರ: ಅಗ್ನಿಪಥ ಯೋಜನೆಯಡಿ 2025-26ನೇ ಸಾಲಿನ ಅಗ್ನಿವೀರ ನೇಮಕಾತಿ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಆಸಕ್ತ ಯುವಕರ ಸಹಾಯಕ್ಕಾಗಿ ಇದೇ 24,25 ರಂದು ಇಬ್ಬರು ಸೇನಾ ಸಿಬ್ಬಂದಿಗಳು ವಿಜಯಪುರ ಜಿಲ್ಲೆಯ ಸೈನಿಕ ಕಲ್ಯಾಣ ಮತ್ತು ಪುನರವಸತಿ ಇಲಾಖೆಗೆ ಭೇಟಿ ನೀಡಲಿದ್ದಾರೆ. ಆಸಕ್ತರು ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ವಿಜಯಪುರ ದೂ: 08352-250913 ಸಂಖ್ಯೆಗೆ ಸಂಪರ್ಕಿಸುವಂತೆ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪನಿರ್ದೇಶಕರು ತಿಳಿಸಿದರು.

ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ

ವಿಜಯಪುರ: ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಖಾತೆ, ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ.ಪಾಟೀಲ ಅವರು ಇಂದು, ನಾಳೆ ವಿಜಯಪುರ ಜಿಲ್ಲಾ ಪ್ರವಾಸ ಕೈಗೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಇಂದು ಬೆಳಗ್ಗೆ 11 ಗಂಟೆಗೆ ತಿಕೋಟಾ ವಾಡೆ ಆವರಣದಲ್ಲಿ ಹಮ್ಮಿಕೊಂಡ ತಿಕೋಟಾ ತಾಲೂಕಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಸಂಜೆ 6-20ಕ್ಕೆ ನಗರದ ಕಿತ್ತೂರ ರಾಣಿ ಚೆನ್ನಮ್ಮ ಮಾರು ಕಟ್ಟೆಯಲ್ಲಿ ಏರ್ಪಡಿಸಿರುವ ಇಫ್ತಿಹಾರ ಕೂಟದಲ್ಲಿ ಭಾಗವಹಿಸಲಿದ್ದಾರೆ. ರಾತ್ರಿ 7.15ಕ್ಕೆ ಕಣಮುಚನಾಳದಲ್ಲಿ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ ವಿಜಯಪುರದಲ್ಲಿ ವಾಸ್ತವ್ಯ ಮಾಡಲಿದ್ದಾರೆ. ಮಾ.24ರಂದು ಬೆಳಗ್ಗೆ 10 ಗಂಟೆಗೆ ಮದಗುಣಕಿ ಗ್ರಾಮದಲ್ಲಿ 4 ಕೋಟಿ ರೂ. ಅನುದಾನದಲ್ಲಿ ಶೇಗುಣಸಿ-ಮದಗುಣಕಿ ರಸ್ತೆ ಕಾಮಗಾರಿ ಗೆ ಭೂಮಿ ಪೂಜೆ ಹಾಗೂ ಸಿ.ಎಸ್.ಆರ್. 60 ಲಕ್ಷ ರೂ. ಅನುದಾನದಕಲ್ಲಿ ಶಾಲಾ ಕಟ್ಟಡದ 5 ಕೊಠಡಿಗಳ ನವೀಕರಣಕ್ಕೆ ಮದಗುಣಕಿ ಸರಕಾರಿ ಪ್ರಾಥಮಿಕ ಶಾಲೆ ಆವರಣದಲ್ಲಿ ಭೂಮಿ ಪೂಜೆ ನೆರವೇರಿ ಸಲಿದ್ದಾರೆ. ಬೆಳಗ್ಗೆ 11 ಗಂಟೆಗೆ ಬೆಳ್ಳುಬ್ಬಿಯಲ್ಲಿ ಡಾ.ಬಿ. ಆರ್.ಅಂಬೇಡ್ಕರ್ ಪ್ರತಿಮೆ ಅನಾವರಣಗೊಳಿಸಲಿದ್ದಾರೆ.

ಅಗಲಿದ ಜೀವ

ತಾರಾಬಾಯಿ

ಇಂಡಿ ತಾಲೂಕಿನ ಸಾಲೋಟಗಿ ಗ್ರಾಮದ ಮಾಜಿ ಎ.ಪಿ.ಎಂ.ಸಿ ಅಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡ ಶಿವಯೋಗಪ್ಪ ಚನಗೊಂಡ ಇವರ ತಾಯಿಯವರಾದ ತಾರಾಬಾಯಿ ಸಿದ್ದರಾಮ ಚನಗೊಂಡ ಶನಿವಾರ ದೈವಾಧೀನ ರಾಗಿದ್ದು ಭಗವಂತ ಅವರ ಕುಟುಂಬಕ್ಕೆ ದುಖ ಭರಿಸುವ ಶಕ್ತಿ ನೀಡಲಿ ಎಂದು ಗಣ್ಯರು ಹಾಗೂ ರಾಜಕೀಯ ಮುಖಂಡರು ಸಂತಾಪ ಸೂಚಿಸಿದ್ದಾರೆ.

{ಯದುವೀರ್ ಒಡೆಯರು} ಸಂಸದ

ಸ್ವಚ್ಛತೆಯಲ್ಲಿ ಕೆಳಗೆ ಇಳಿದಿರುವ ಮೈಸೂರನ್ನು ಮತ್ತೆ ಪ್ರಥಮ ಸ್ಥಾನ ಪಡೆಯುವಂತೆ ಮಾಡಲು ಎಲ್ಲರೂ ಕೈ ಜೋಡಿಸಬೇಕಿದೆ. 2015 ಮತ್ತು 2016 ರಲ್ಲಿ ದೇಶದಲ್ಲಿಯೇ ಸ್ವಚ್ಛತೆಯಲ್ಲಿ ಮೈಸೂರು ಪ್ರಥಮ ಸ್ಥಾನ ಪಡೆದಿತ್ತು. ಆದರೆ, ಈಗ 25, 26ನೇ ಸ್ಥಾನಕ್ಕೆ ಇಳಿದಿದೆ.

ಜಿಲ್ಲಾ 12ನೇ ಕನ್ನಡ ಸಾಹಿತ್ಯ ಸಮ್ಮೇಳನ ಶಾಸಕ ಜೆ.ಟಿ.ಪಾಟೀಲ ಅಭಿಮತ

ಸಾಹಿತ್ಯಕ್ಕೆ ಸಮಾಜ ತಿದ್ದುವ ಶಕ್ತಿ ಇದೆ

ಬಾಗಲಕೋಟೆ: ನಮ್ಮ ಸಾಹಿತ್ಯ ಅತ್ಯಂತ ಶ್ರೀಮಂತವಾಗಿದೆ. ಒಂದು ಹನಿ ಮಸಿಗೆ 100 ಕೋಟಿ ಜನರಿಗೆ ಬಿಸಿಮುಟ್ಟಿಸುವ ಹಾಗೂ ಸಮಾಜ ತಿದ್ದುವ ಶಕ್ತಿಯಿದೆ ಎಂದು ಬೀಳಗಿ ಶಾಸಕ ಜೆ.ಟಿ.ಪಾಟೀಲ್ ಹೇಳಿದರು.

ಬಾದಾಮಿ ತಾಲೂಕಿನ ನೀರಬೂದಿಹಾಳದಲ್ಲಿ ಎರಡು ದಿನ ಹಮ್ಮಿಕೊಂಡಿರುವ ಬಾಗಲಕೋಟೆ ಜಿಲ್ಲಾ 12ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹಳಗನ್ನಡದಿಂದ ಇಂದಿನವರೆಗೂ ಕನ್ನಡ ಸಾಹಿತ್ಯಕ್ಕೆ ನಾಡಿನ ದಿಗ್ಗಜರ ಕೊಡುಗೆ ಅಪಾರವಾಗಿದೆ ಎಂದರು. ಸಾಹಿತಿಗಳಾದ ಕಂದಗಲ್ ಹನಮಂತಯ್ಯ, ಕೆರೂರು ವಾಸುದೇವಚಾರ್ಯ, ಪಿ.ಬಿ.ಧುತ್ತರಗಿ, ಎಚ್.ಆರ್. ಭಸ್ಮೆ ಅವರು ಜಿಲ್ಲೆಯ ಸಾಹಿತ್ಯ, ರಂಗಭೂಮಿ ಕ್ಷೇತ್ರಕ್ಕೆ ಅಪಾರವಾದ ಕೊಡುಗೆ ನೀಡಿದ್ದಾರೆ. ಅಕ್ಷರ ಕಲಿಯದಿದ್ದರು ಬೀಳಗಿ ಕವಿ ಸಿದ್ದಪ್ಪ ಬಿದರಿ ಅವರು ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುವ ಸಾಹಿತ್ಯ ರಚಿಸಿ ಸ್ವತಃ ತಾವೇ ಹಾಡಿ ಜನರನ್ನು ಜಾಗೃತಿಗೊಳಿಸುವ ಕಾರ್ಯ ಮಾಡುತ್ತಿದ್ದಾರೆ ಎಂದರು.

ನನ್ನಲ್ಲಿ ಪುಸ್ತಕ ಓದುವ ಹವ್ಯಾಸ ಇದೆ. ಆದರೆ, ನನಗೆ ಸಾಹಿತ್ಯದ ಗಂಧ ಗೊತ್ತಿಲ್ಲ, ನನ್ನ ರಾಜಕೀಯ ಜೀವನಕ್ಕೆ ನೀರಬೂದಿಹಾಳದ ಆರ್.ಟಿ.ದೇಸಾಯಿ ಅವರೇ ಪ್ರಮುಖ ಕಾರಣ. ಅವರಿಂದಲೇ ನಾನು ಇಂದು ಶಾಸಕನಾಗಿದ್ದೇನೆ ಎಂದರು. ರಾಜಕಾರಣಿಗಳಿಂತ ಹೆಚ್ಚಿನ ಪೈಪೋಟಿ, ತಿರಸ್ಕಾರ ಹಾಗೂ ವೈರತ್ವ ದೃಷ್ಟಿಯಲ್ಲಿ ನೋಡುವುದನ್ನು ಕಲಿತವರಲ್ಲಿ ಹೆಚ್ಚಾಗಿದೆ. ಹಿಂದು-ಮುಸ್ಲಿಮರು ಸೇರಿ ಹಬ್ಬಗಳನ್ನು ಮಾಡುತ್ತಿದ್ದೆವು. ಆದರೆ, ಅದರಲ್ಲೂ ರಾಜಕೀಯ ಸೇರಿರುವುದರಿಂದ ಕಾಲ ಬದಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದ ಅವರು, ಸಿಎಂ ಸಿದ್ದರಾಮಯ್ಯ ಮಂಡಿಸಿರುವ ಬಜೆಟ್‌ಗೆ ಕೆಲವೊಬ್ಬರು ಅಲ್ಪಸಂಖ್ಯಾತರ, ಪಾಕಿಸ್ತಾನ ಪರವಾದ ಬಜೆಟ್ ಎಂದು ಟೀಕಿಸಿದರು. ಯಾರು ಆ ಧರ್ಮದಲ್ಲಿ ಹುಟ್ಟಬೇಕು, ಈ ಧರ್ಮದಲ್ಲಿ ಹುಟ್ಟಬೇಕು ಎಂದು ಅರ್ಜಿ ಹಾಕಿರಲ್ಲ, ಎಲ್ಲರ ಮೈಯಲ್ಲಿ ಹರಿಯುತ್ತಿರುವುದು ಕೆಂಪು ರಕ್ತವೇ. ಎಲ್ಲರೂ ಸೇರಿ ಒಂದಾಗಿ ಬಾಳಬೇಕಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ಎಚ್.ಎಸ್. ಸತ್ಯನಾರಾಯಣ ಮಾತನಾಡಿ, ಕನ್ನಡ ಭಾಷೆ, ನಾಡು, ನುಡಿಗೆ ಕುಂದು ಬಂದಾಗ ನಾವೆಲ್ಲ ಒಂದಾಗ ಬೇಕಾಗಿದೆ. ಒಗ್ಗಟ್ಟಿನಿಂದ ಹೋರಾಟ ಮಾಡುವ ಮನೋಧೈರ್ಯವನ್ನು ಬೆಳೆಸಿಕೊಳ್ಳ ಬೇಕಾಗಿದೆ ಎಂದರು.

ಕನ್ನಡ ಸಾಹಿತ್ಯಕ್ಕೆ ಭವ್ಯವಾದ ಇತಿಹಾಸ ಪರಂಪರೆ ಇದೆ. ರನ್ನ, ಪಂಪ, ಬಸವಣ್ಣ, ಅಕ್ಕಮಹಾದೇವಿ ಹೀಗೆ ಅನೇಕರು ಬಳಸಿದ ಕನ್ನಡ ನಾಡು-ನುಡಿಗೆ, ನೆಲ-ಜಲಕ್ಕೆ ಅನೇಕ ರೀತಿಯಲ್ಲಿ ತೊಂದರೆಗಳು ಎದುರುಗೊಳ್ಳುತ್ತವೆ ಹಾಗಾಗಿ ಇಂತಹ ಸಂದರ್ಭದಲ್ಲಿ ಕೇವಲ ಸರಕಾರವೇ ಮಾಡಬೇಕು ಎನ್ನುವ ತಾತ್ಸಾರ ಮನೋಭಾವನೆ ವ್ಯಕ್ತಪಡಿಸದೇ ಕನ್ನಡಿಗರಾದ ನಾವೆಲ್ಲ ಹೋರಾಟ ಮಾಡಬೇಕಿದೆ. ಕವಿಗಳು ಯಾರ ಹಂಗಿನಲ್ಲಿ ಇರುವುದಿಲ್ಲ. ಹಿಂದಿನ ಪರಂಪರೆಯನ್ನು ಗಮನಿಸಿದಾಗ ಬಹುತೇಕ ಸಾಹಿತಿಗಳು, ಕವಿಗಳು ಪ್ರಭುತ್ವವನ್ನು ವಿರೋಧಿಸುತ್ತಲೇ ಬಂದಿದ್ದಾರೆ ಎಂದು ಹೇಳಿದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ. ನಂಜಯ್ಯನಮಠ ಮಾತನಾಡಿ, ಕನ್ನಡ ಸಾಹಿತ್ಯಕ್ಕೆ ಹಿರಿಮೆ-ಗರಿಮೆ ಇದೆ. ಹಳೆಗನ್ನಡ ಸಾಹಿತ್ಯಕ್ಕೆ ಅನೇಕ ಸಾಹಿತಿಗಳ ಕೊಡುಗೆ ಅಪಾರವಾಗಿದೆ. ಕನ್ನಡ ಸಾಹಿತ್ಯ ಓದುವುದರಿಂದ, ಕೇಳುವುದರಿಂದ ಮನಸ್ಸು ಮಧುರ ಗೊಳ್ಳುತ್ತದೆ ಎಂದರು.

ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ ಮಾತನಾಡಿ, ಕನ್ನಡ ಭಾಷೆಯನ್ನು ವಿನಾಕಾರಣ ವಿರೋಧಿಸುವ ವಿರೋಧಿಗಳಿಗೆ ತಕ್ಕಪಾಠ ಕಲಿಸುವಂತಹ ಗಟ್ಟಿತನವನ್ನು ಕನ್ನಡಿಗರು ತೋರಬೇಕು. ಅಂದಾಗ ಮಾತ್ರ ಭವಿಷ್ಯದಲ್ಲಿ ಕನ್ನಡಕ್ಕೆ ಉಳಿಗಾಲವಿದೆ ಎಂದರು. ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಡಾ.ತಾತಾಸಾಹೇಬ ಬಾಂಗಿ, ಸಮ್ಮೇಳನಾಧ್ಯಕ್ಷ ಡಾ. ವೈ.ಎಂ.ಯಾಕೊಳ್ಳಿ ಜಿಲ್ಲಾಧಿಕಾರಿ ಜಾನಕಿ ಕೆ.ಎಂ. ಮಾತನಾಡಿದರು. ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ, ಕಸದಸ್ಯ ಮಹಾದೇವ ಬಸರಕೋಡ, ಪ್ರೇಮಾ ಯಾಕೊಳ್ಳಿ, ಸೇರಿದಂತೆ ಅನೇಕರು ಇದ್ದರು.

ಬಾದಾಮಿ ತಾಲೂಕಿನ ನೀರಬೂದಿಹಾಳದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಗಣ್ಯರು ಉದ್ಘಾಟಿಸಿದರು.

> ನೀರಬೂದಿಹಾಳ ಎಂಬ ಗ್ರಾಮದಲ್ಲಿ ಜಿಲ್ಲಾ ಮಟ್ಟದ ಸಮ್ಮೇಳನ ಆಯೋಜಿಸಿರುವುದು ಶ್ಲಾಘನೀಯವಾದದ್ದು. ಎರಡು ದಿನ ಹಮ್ಮಿಕೊಂಡಿರುವ ಕಾರ್ಯಕ್ರಮದ ಸಮಾರೋಪದ ಬಳಿಕ ಕಾರ್ಯಕ್ರಮಕ್ಕಾಗಿ ಎಷ್ಟು ಹಣ ಕೊಡಿತ್ತು. ಯಾವುದಕ್ಕೆ ಎಷ್ಟು ಖರ್ಚು ಮಾಡಲಾಗಿದೆ. ಹಾಗೂ ಕೊನೆಗೆ ಎಷ್ಟು ಉಳಿದಿದೆ ಎಂಬ ಲೆಕ್ಕವನ್ನು ಕಸಾಪ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಅವರು ನೀಡಬೇಕು.
> - ಜೆ.ಟಿ.ಪಾಟೀಲ, ಬೀಳಗಿ ಶಾಸಕ

ಬಿಕೋ ಎನ್ನುತ್ತಿದ್ದ ಮಳಿಗೆಗಳು

ಬಾದಾಮಿ ತಾಲೂಕಿನ ನೀರಬೂದಿಹಾಳದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿದ್ದ ಮಳಿಗೆಗಳು ಬಿಕೋ ಎನ್ನುತ್ತಿದ್ದವು. ಸಮ್ಮೇಳನದ ಹಿನ್ನೆಲೆಯಲ್ಲಿ ಹತ್ತಕ್ಕಿಂತ ಹೆಚ್ಚು ಮಳಿಗೆಗಳಿಗೆ ವ್ಯವಸ್ಥೆ ಮಾಡಲಾಗಿತ್ತು. ಆದರೆ, ಪ್ರಚಾರದ ಕೊರತೆಯಿಂದ ಹೆಚ್ಚಿನ ಮಾಲೀಕರು ಬಂದು ಅಂಗಡಿ ಹಾಕಿರಲಿಲ್ಲ. ಇದರಿಂದ ಮೂರ್‍ನಾಲ್ಕು ಮಳಿಗೆ ಹೊರತು ಪಡಿಸಿ ಎಲ್ಲ ಮಳಿಗೆಗಳು ಖಾಲಿ ಇದ್ದವು. ಜತೆಗೆ ನೀರಬೂದಿಹಾಳಕ್ಕೆ ಸರಿಯಾದ ಬಸ್ ವ್ಯವಸ್ಥೆ ಇಲ್ಲದೇ ಸಾಹಿತ್ಯಾಸಕ್ತರು ಇಲ್ಲಿ ಬರಲು ಪರದಾಡಿದರು. ಪುನಃ ಅಲ್ಲಿಂದ ಬರಲು ಅದೇ ಮಾರ್ಗದಲ್ಲಿ ಬರುತ್ತಿದ್ದ ದ್ವಿಚಕ್ರ ವಾಹನ ಹಾಗೂ ಕಾರ್‌ಗಳಿಗೆ ಕೈ ಮಾಡಿ ಬರುವಂತಾಯಿತು.

ಸರಕಾರಿ ಜಮೀನು ವಶ

ವಿಜಯಪುರ: ಜಿಲ್ಲೆಯ ತಿಕೋಟಾ ತಾಲೂಕಿನ ಇಟ್ಟಂಗಿಹಾಳ ಗ್ರಾಮದ ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವ ಅಂದಾಜು 20 ಕೋಟಿ ರು. ಮೌಲ್ಯದ ಸರಕಾರಿ ಜಮೀನನ್ನು ಒತ್ತುವರಿ ತೆರವುಗೊಳಿಸಿ ವಶಕ್ಕೆ ಪಡೆಯಲಾಗಿದೆ ಎಂದು ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ತಿಳಿಸಿದರು.

ಇಟ್ಟಂಗಿಹಾಳ ಗ್ರಾಮದ ವ್ಯಾಪ್ತಿಯ ಅಂದಾಜು 20 ಕೋಟಿ ರೂ. ಮೌಲ್ಯದ ಸರಕಾರಿ ಜಮೀನನ್ನು ಕೆಲವರು ಅತಿಕ್ರಮಣ ಮಾಡಿಕೊಂಡು ಸದರಿ ಸರಕಾರಿ ಜಮೀನನ್ನು ಮೋಸ ಮಾಡಿ ಮಾರಾಟ ಮಾಡುತ್ತಿರುವ ಬಗ್ಗೆ ತಿಳಿದು ಬಂದ ಹಿನ್ನಲೆಯಲ್ಲಿ ಮಾ. 22ರಂದು ವಿಜಯಪುರ ಉಪವಿಭಾಗಾಧಿಕಾರಿಗಳು, ತಿಕೋಟಾ ತಹಸೀಲ್ದಾರರನ್ನೊಳಗೊಂಡು ಕಂದಾಯ ಇಲಾಖೆ, ಪೊಲೀಸ್ ಇಲಾಖೆಯೊಂದಿಗೆ ಅತಿಕ್ರಮಣ ಕಾರ್ಯಾಚರಣೆ ಕೈಗೊಂ ಡು ಒತ್ತುವರಿಯಾದ ಜಾಗವನ್ನು ತೆರವುಗೊಳಿಸಿ ಸರಕಾರಿ ಜಾಗವನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ.

ಸರಕಾರಿ ಜಮೀನು ಒತ್ತುವರಿ ಮಾಡಿಕೊಂಡಿರುವವರ ಮೇಲೆ ಕಾನೂನು ರಿತ್ಯ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು. ಸರಕಾರಿ ಭೂಮಿಯನ್ನು ಯಾರೂ ಅತಿಕ್ರಮಣ ಮಾಡಬಾರದು. ಸಾರ್ವಜನಿಕರು ಆಸ್ತಿ ಖರೀದಿಸುವಾಗ ಜಾಗ್ರತೆ ವಹಿಸುವಂತೆ ತಿಳಿಸಿದರು.

ಸುನೀಲಗೌಡರಿಂದ ದ್ವಿಚಕ್ರ ವಾಹನ ವಿತರಣೆ

ವಿಜಯಪುರ : ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದಿಂದ 2022-23ನೇ ವರ್ಷದ ಉದ್ಯಮಶೀಲತೆ ಅಭಿವೃದ್ಧಿ ಯೋಜನೆ-3(ದ್ವಿಚಕ್ರ ವಾಹನ) ಸರಕಾರಿ ಸಾಂಸ್ಥಿಕ ಕೋಟಾದಡಿ ಆಯ್ಕೆಯಾದ ಫಲಾಪೇಕ್ಷಿಗಳಿಗೆ ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ ಅವರು ದ್ವಿಚಕ್ರ ವಾಹನ ವಿತರಿಸಿದರು.

ನಗರದಲ್ಲಿ ಶುಕ್ರವಾರ ಮುಸ್ಸಂಜೆ ನಡೆದ ಕಾರ್ಯಕ್ರಮದಲ್ಲಿ ಬಬಲೇಶ್ವರದ ಆರು ಜನರಿಗೆ ಶಾಸಕರು ದ್ವಿಚಕ್ರ ವಾಹನ ವಿತರಿಸಿ ಶುಭ ಕೋರಿದರು.

ಈ ಸಂದರ್ಭದಲ್ಲಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಬಿ. ಜೆ. ಇಂಡಿ, ತಾಲೂಕು ಅಭಿವೃದ್ಧಿ ಅಧಿಕಾರಿ ಪದ್ಮಜಾ ಪಾಟೀಲ, ಸಚಿವ ಎಂ. ಬಿ. ಪಾಟೀಲ ಅವರ ಆಪ್ತ ಸಹಾಯಕ ಡಿ. ಎಸ್. ಭೋಸಲೆ, ತಿಕೋಟಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿದ್ದು ಗೌಡನವರ, ಮುಖಂಡ ಪರಸು ಪಡಗಾರ, ವಿಶ್ವಾಸ ಕಾಂಬಳೆ, ಸಿದಗೊಂಡ ರುದ್ರಗೌಡರ, ಸಿದ್ದು ಮಾದರ, ದಾನಪ್ಪ ಹೊಸಮನಿ, ಜಕ್ಕಪ್ಪ ಹಲಗಿ, ಯಲ್ಲಪ್ಪ ದೊಡಮನಿ, ಶಾಂತಪ್ಪ ಹಲಗಿ ಮುಂತಾದವರು ಉಪಸ್ಥಿತರಿದ್ದರು.

ಸರಕಾರಿ ಸಾಂಸ್ಥಿಕ ಕೋಟಾದಡಿ ಆಯ್ಕೆಯಾದ ಫಲಾಪೇಕ್ಷಿಗಳಿಗೆ ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ ಅವರು ದ್ವಿಚಕ್ರ ವಾಹನ ವಿತರಿಸಿದರು.

ಹೊಸ ಮನವಿ, ಬೇಡಿಕೆಗಳಿಗೆ ಅರ್ಥವಿಲ್ಲ

ಬಾಗಲಕೋಟೆ: ರಾಜ್ಯ, ಜಿಲ್ಲೆ ಹಾಗೂ ತಾಲೂಕು ಮಟ್ಟದ ಸಮ್ಮೇಳನಗಳಲ್ಲಿ ಪ್ರಸ್ತಾಪಿಸಲಾದ ಮನವಿಗಳು, ಮಂಡನೆಯಾದ ಬೇಡಿಕೆಗಳು ಈಡೇರಿಸದ ಹೊರತು ಹೊಸ ಬೇಡಿಕೆಗಳಿಗೆ ಅರ್ಥವೇ ಇಲ್ಲ. ಚರ್ಚೆಯಾದರೂ ಆಗುತ್ತದಲ್ಲ ಎಂಬ ಸಕಾರಾತ್ಮಕ ಭಾವದೊಂದಿಗೆ ನಾವು ಮುನ್ನಡಿಯಿಡಬೇಕಾಗುತ್ತದೆ ಎಂದು ಸಾಹಿತಿ ಡಾ. ವೈ.ಎಂ.ಯಾಕೊಳ್ಳಿ ಅಭಿಪ್ರಾಯ ಪಟ್ಟರು.

ಬಾದಾಮಿ ತಾಲೂಕಿನ ನೀರಬೂದಿಹಾಳದಲ್ಲಿ ಹಮ್ಮಿಕೊಂಡಿರುವ ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತವಹಿಸಿ ಮಾತನಾಡಿದ ಅವರು, ಎಲ್ಲ ಸರಕಾರಿ ಶಾಲೆಗಳಲ್ಲಿ ಶಿಕ್ಷಕರು ನಿವೃತ್ತಿ ಹೊಂದಿಯೋ ವರ್ಗಾವಣೆ ಹೊಂದಿಯೋ ಖಾಲಿಯಾಗುತ್ತಿರುತ್ತಾರೆ. ಅವುಗಳಲ್ಲಿ ಖಾಯಂ ನೇಮಕಾತಿ ಎಂಬುದೇ ಇಲ್ಲ. ಹತ್ತಾರು ವರ್ಷಕ್ಕೊಮ್ಮೆ ನಡೆಯುವ ನೇಮಕಾತಿಗಳು ಕೊಡುವ ಐದಾರು ನೂರು ಸಿಬ್ಬಂದಿಗಳು ರಾಕ್ಷಸನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎನ್ನುವಂತಾಗಿದೆ ಎಂದು ಬೇಸರ ವ್ಯಕ್ತ ಪಡಿಸಿದರು.

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತರೂ ಪರಿಣಾಮಕಾರಿಯಾಗಿ ಚಟುವಟಿಕೆಗಳು ನಡೆಯುತ್ತಿಲ್ಲ. ಗಡಿ ಹಂಚಿಕೆ, ನೀರಿನ ಹಂಚಿಕೆ ತಕರಾರರುಗಳು ಇನ್ನೂ ಬಗೆಹರಿದಿಲ್ಲ ಎಂದು ಕಳವಳ ವ್ಯಕ್ತ ಪಡಿಸಿದರು.

ಗ್ರಾಮೀಣ ಪ್ರದೇಶದಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಕನ್ನಡ ಮಾಧ್ಯಮಕ್ಕೆ ಮಕ್ಕಳು ಪ್ರವೇಶ ಪಡೆಯದೇ ಆಂಗ್ಲಮಾಧ್ಯಮದ ಎದುರು ಗುಂಪಾಗಿ ನಿಂತಿರುತ್ತಾರೆ. ನಿತ್ಯ ಸರಕಾರ ಕೆಪಿಎಸ್ ಶಾಲೆಗಳನ್ನು, ಆಂಗ್ಲ ಮಾಧ್ಯಮ ಪೂರ್ವ ಪ್ರಾಥಮಿಕ ತರಗತಿಗಳನ್ನು ತೆರೆಯುವ ಮಾತು ನಿತ್ಯವೂ ಪೇಪರಿನಲ್ಲಿ ಬರುತ್ತಲೇ ಇದೆ. ಹಾಗಾದರೆ ಪಟ್ಟಣದಲ್ಲಿ ನಿಮ್ಮ ಮಕ್ಕಳು ಮಾತ್ರ ಆಂಗ್ಲ ಮಾಧ್ಯಮ ಶಾಲೆಗಳಿಗೆ ಹೋಗಬೇಕು ನಮ್ಮ ಮಕ್ಕಳೂ ಆಂಗ್ಲ ಮಾಧ್ಯಮ ಕಲಿಯುವುದು ಬೇಡವೇ? ಎಂಬ ಪ್ರಶ್ನೆಯಲ್ಲೂ ಸತ್ಯವಿದೆ. ಹಾಗಾದರೆ ಪರಿಹಾರ ಏನು ಎಂದು ಪ್ರಶ್ನಿಸಿದರು.

ತೀರಾ ಇಂಗ್ಲಿಷ್ ಬೇಡವೇ ಬೇಡ ಎಂದು ವಾದ ಮಾಡಿ, ಅದನ್ನು ಬಿಟ್ಟು ಬದುಕುವುದು ಸಾಧ್ಯವಿಲ್ಲ. ಆದರೆ, ಅದಕ್ಕೆ ಆಗ್ರ ಪೂಜೆ ಕೊಟ್ಟು ನಮ್ಮ ಭಾಷೆ ಸಂಸ್ಕೃತಿಗಳನ್ನು ಕಡೆಗಣಿಸುವುದರಿಂದ ನಾವು ತಬ್ಬಲಿಗಳಾಗುತ್ತೇವೆ. ಶಿಕ್ಷಣ ತಜ್ಞರು, ಆಳುವವರೂ ಕೂಡಿ ಚರ್ಚಿಸಿ, ಕನ್ನಡಕ್ಕೆ ಧಕ್ಕೆ ಬರದಂತೆ ನೋಡಿಕೊಳ್ಳಬೇಕಾಗಿದೆ. ಉಳಿದೆಲ್ಲ ಸಮಸ್ಯೆಗಳಿಗಿಂದ ಇದು ಅತ್ಯಂತ ತುರ್ತಾದ ಸಮಸ್ಯೆಯಾಗಿದೆ ಎಂದರು.

> ಎಲ್ಲ ಕಡೆ ಅರೆಕಾಲಿಕ, ಗೌರವ ಶಿಕ್ಷಕರು ತುಂಬಿರುವುದರಿಂದ ಅವರಿಗೂ ಖಾಯಂ ನೇಮಕಾತಿಗಳೇ ಇಲ್ಲವಾಗಿವೆ. ಕನ್ನಡ ಜನರ ಬದುಕು ಹಸನಾಗಲಿ, ಭಾಷೆ ಸಮೃದ್ಧವಾಗಲಿ ಎಂದು ಇಲ್ಲಿ ರಚಿಸಲ್ಪಟ್ಟ, ಮಹಾಜನ ವರದಿ, ಸರೋಜಿನಿ ಮಹಿಷಿ ವರದಿ, ಡಿ.ಎಂ.ನಂಜುಂಡಪ್ಪ ವರದಿ ಇವಾವವೂ ಸಂಪೂರ್ಣವಾಗಿ ಜಾರಿಯಾಗಲಿಲ್ಲ.
> - ಡಾ. ವೈ.ಎಂ.ಯಾಕೊಳ್ಳಿ , ಸಾಹಿತಿ

ಅನಧಿಕೃತ ಕ್ಲಿನಿಕ್‌ಗಳ ಮೇಲೆ ದಾಳಿ

ಕೊಲ್ಹಾರ: ಬಸವನಬಾಗೇವಾಡಿ ತಾಲೂಕಾ ಆರೋಗ್ಯಾಧಿಕಾರಿ ಡಾ.ಕವಿತಾ ದೊಡಮನಿ ನೇತೃತ್ವದಲ್ಲಿ ಶುಕ್ರವಾರ ಬಸವನಬಾಗೇವಾಡಿ ಹಾಗೂ ಕೊಲ್ಹಾರ ತಾಲೂಕ ವ್ಯಾಪ್ತಿಯ ವಿವಿಧ ಗ್ರಾಮಗಳ ಖಾಸಗಿ ಆಸ್ಪತ್ರೆ ಹಾಗೂ ಕ್ಲಿನಿಕ್ ಗಳ ಮೇಲೆ ದಾಳಿ ನಡೆಸುವ ಮೂಲಕ ಪರಿಶೀಲನೆ ನಡೆಸಿದರು.

ಬ. ಬಾಗೇವಾಡಿ ತಾಲೂಕು ವ್ಯಾಪ್ತಿಯ ಮುತ್ತಗಿ ಗ್ರಾಮದಲ್ಲಿ ಒಂದು, ಕೊಲ್ಹಾರ ತಾಲೂಕ ವ್ಯಾಪ್ತಿಯ ಕೂಡಗಿ ಗ್ರಾಮದ ಎರಡು ಹಾಗೂ ಕೊಲ್ಹಾರದ ಪಟ್ಟಣದ ಮೂರು ಖಾಸಗಿ ಆಸ್ಪತ್ರೆ ಹಾಗು ಕ್ಲಿನಿಕ್‌ಗಳ ಮೇಲೆ ದಾಳಿ ಮಾಡಿ ಕೆ.ಪಿ.ಎಂ.ಇ ನೊಂದಣಿ ಮಾಡಿಸಿಕೊಳ್ಳುವ ಕುರಿತು ಸೈನ್ ಬೋರ್ಡ್, ಕಲರ್ ಕೋಡ್, ಬಿ.ಎ.ಎಂ.ಎಸ್ ವೈದ್ಯರು ಹಸಿರು ಬಣ್ಣದ, ಎಂ.ಬಿ.ಬಿ.ಎಸ್ ವೈದ್ಯರು ನೀಲಿ ಬಣ್ಣದ ಬೋರ್ಡ್ ಅಳವಡಿಸುವ ಕುರಿತು ಎಚ್ಚರಿಕೆ ನೀಡಿದರು. ಅಲ್ಲದೆ ನೊಂದಣಿಯಾಗದೇ ಇರುವ ಆಸ್ಪತ್ರೆಗಳು ಹಾಗೂ ಕ್ಲಿನಿಕ್‌ಗಳನ್ನು ಮುಚ್ಚಿಸಲಾಯಿತು.

ಈ ಸಂದರ್ಭದಲ್ಲಿ ತಾಲೂಕ ಆರೋಗ್ಯಾಧಿಕಾರಿ ಡಾ.ಕವಿತಾ ದೊಡಮನಿ ಮಾಧ್ಯಮದವರೊಂದಿಗೆ ಮಾತನಾಡಿ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ದಾಖಲೆಗಳನ್ನು ಪರಿಶೀಲನೆ ನಡೆಸಲಾಗುತ್ತಿದೆ. ವೈದ್ಯಕೀಯ ನಿಯಮಗಳನ್ನು ಉಲ್ಲಂಘಿಸಿ ನಡೆಸುವ ಖಾಸಗಿ ಆಸ್ಪತ್ರೆ ಹಾಗೂ ಕ್ಲಿನಿಕ್ ಗಳ ಮೇಲೆ ದಾಳಿ ನಡೆಸಿ ದಾಖಲೆ ಪರಿಶೀಲನೆ ನಡೆಸಲಾಗುತ್ತಿದೆ. ಪರಿಶೀಲನೆಯ ಸಂದರ್ಭದಲ್ಲಿ ದೋಷ ಕಂಡುಬಂ ದಲ್ಲಿ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಮಾಲಾ ತಾಂಡೂರ ಅವರಿಗೆ ಶರಣಬಸವ ರಾಜ್ಯ ಪುರಸ್ಕಾರ

ಗುಳೇದಗುಡ್ಡ: ಪಟ್ಟಣದ ಸಂಸ್ಕೃತ ಭಾಷಾ ಪ್ರಚಾರಕರು ಹಾಗೂ ಕೋಟೆಕಲ್ ಶ್ರೀ ಶಾರದಾ ಸಂಸ್ಕೃತ ಪಾಠಶಾಲೆ ಶಿಕ್ಷಕಿ ಮಾಲಾ ಶರಣಬಸಪ್ಪ ತಾಂಡೂರ ಅವರಿಗೆ ರಾಜ್ಯ ಮಟ್ಟದ ಶರಣಬಸವಶ್ರೀ ಪುರಸ್ಕಾರ ಲಭಿಸಿದೆ. ರಬಕವಿ ಬನಹಟ್ಟಿ ತಾಲೂಕಿನ ಸುಕ್ಷೇತ್ರ ಹಳಿಂಗಳಿ ಶ್ರೀ ಸದ್ಗುರು ಸಿದ್ದಲಿಂಗೇಶ್ವರ ಕಮರಿಮಠ ಅವರು ಪ್ರತಿ ವರ್ಷ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಮಹನೀಯರಿಗೆ ಶರಣಬಸವಶ್ರೀ ಪ್ರಶಸ್ತಿ ನೀಡಿ ಸನ್ಮಾನಿಸುತಿದ್ದು, 2025 ಈ ರಾಜ್ಯ ಪುರಸ್ಕಾರವನ್ನು ಮಾಲಾ ತಾಂಡೂರ ಅವರಿಗೆ ನೀಡಿ ಗೌರವಿಸಿದರು. ಶ್ರೀ ಸಿದ್ದಲಿಂಗೇಶ್ವರ ಕಮರಿಮಠದ ಪೀಠಾಧ್ಯಕ್ಷರಾದ ಪರಮಪೂಜ್ಯ ಶ್ರೀ ಸದ್ಗುರು ಶಿವಾನಂದ ಮಹಾಸ್ವಾಮಿಗಳ ಸದೀಚ್ಚೆಯಂತೆ ಆರಾಧ್ಯ ಗುರುಗಳಾದ ಲಿಂಗೈಕ್ಯ ಪರಮಪೂಜ್ಯ ಶ್ರೀ ಸದ್ಗುರು ಶರಣಬಸವೇಶ್ವರ ಮಹಾರಾಜರ 42ನೇ ಪುಣ್ಯಾರಾಧನೆ ಮಹೋತ್ಸವದಲ್ಲಿ ಹುಬ್ಬಳ್ಳಿ ಮೂರು ಸಾವಿರ ಮಠದ ಜಗದ್ಗುರು ಶ್ರೀ ರಾಜಯೋಗೇಂದ್ರ ಮಹಾಸ್ವಾಮಿಗಳು 'ಶರಣಬಸವಶ್ರೀ' ರಾಜ್ಯ ಪುರಸ್ಕಾರವನ್ನು ವಿತರಿಸಿ ಗೌರವಿಸಿದರು. ನಮ್ಮ ಸನಾತನ ಸಂಸ್ಕೃತಿಯ ರಕ್ಷಣೆಯಲ್ಲಿ ತೊಡಗಿರುವುದು ಮತ್ತು ಅಪೂರ್ವವಾದ ಪ್ರತಿಭೆ, ಅಸ್ಖಲಿತ ವಾಕ್ಚಾತುರ್ಯ, ಭಾಷಾ ಪ್ರೌಢಿಮೆಯಿಂದ ಭಾರತದ ಯುವ ಜನತೆಯಲ್ಲಿ ಸಂಸ್ಕೃತ ಭಾಷಾ ಪ್ರೇಮವನ್ನು ಇಮ್ಮಡಿಗೊಳಿಸುವ ಕಾರ್ಯ ಅವರ್ಣನೀಯವಾಗಿದೆ. ಸಂಭಾಷಣ ಶಿಬಿರಗಳನ್ನು ನಡೆಸಿದ ಅನುಭವ ಇವರಿಗಿದೆ ಸಂಸ್ಕೃತ ಭಾರತಿ ಬೆಂಗಳೂರು ಇಲ್ಲಿ ಮೂರು ವರ್ಷಗಳ ಕಾಲ ಪೂರ್ಣಾವಧಿ ಹಾಗೂ ದೆಹಲಿಯಲ್ಲಿ ಆರು ತಿಂಗಳ ಕಾಲ ಸೇವಾ ವೃತ್ತಿಯಾಗಿ ಸೇವೆ ಸಲ್ಲಿಸಿದ್ದಾರೆ.

ವಿದ್ಯೆಯ ಜತೆಗೆ ಸಂಸ್ಕಾರ ನೀಡಿ

ಬೀಳಗಿ: ಮಕ್ಕಳಿಗೆ ವಿದ್ಯೆಯ ಜತೆಗೆ ಸಂಸ್ಕಾರ ನೀಡಬೇಕು. ಸಂಪ್ರದಾಯ, ಆಚಾರ ವಿಚಾರ ತಿಳಿಸಿ ಕೊಡಬೇಕು. ಒಳ್ಳೆಯದು ಮತ್ತು ಕೆಟ್ಟದ್ದರ ಕುರಿತು ಸಣ್ಣ ವಯಸ್ಸಿನಲ್ಲಿಯೇ ಮಕ್ಕಳಿಗೆ ತಾಯಂದಿರು ತಿಳಿಸಿಕೊಟ್ಟರೆ ಆ ಮಗು ಸುಸಂಸ್ಕೃತ ದೇಶದ ಸತ್ಪ್ರಜೆ ಯಾಗಿ ಹೊರಹೊಮ್ಮಲು ಸಾಧ್ಯವಾಗು ತ್ತದೆ ಎಂದು ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ಹೇಳಿದರು.

ತಾಪಂ, ಗ್ರಾಪಂ ಸಹಯೋಗದಲ್ಲಿ ನರ್ಮದಾ ಸಂಜೀವಿನಿ ಮಹಿಳಾ ಒಕ್ಕೂಟದಿಂದ ಹಮ್ಮಿಕೊಂಡಿದ್ದ ವಿಶ್ವಮಹಿಳಾ ದಿನಾಚರಣೆ ಹಾಗೂ ಮಹಿಳಾ ಗ್ರಾಮಸಭೆಯನ್ನು ಉದ್ಘಾಟಿಸಿ ಮಾತನಾಡಿ, ಇಂದು ಮಹಿಳೆಯರ ಸಾಧನೆ ಎಲ್ಲಾ ಕ್ಷೇತ್ರಗಳಲ್ಲಿಯೂ ಇದೆ. ಪ್ರಮುಖವಾಗಿ ತಾಂತ್ರಿಕ, ಸಂಶೋಧನಾ ಹಾಗೂ ಉತ್ಪಾದನಾ ಕ್ಷೇತ್ರಗಳಲ್ಲಿ ಮಹಿಳೆಯರು ದೇಶಕ್ಕೆ ತಮ್ಮದೇಯಾದ ಕೊಡುಗೆಗಳನ್ನು ನೀಡಿದ್ದಾರೆಂದು ಹೇಳಿದರು.

ಒಬ್ಬ ವ್ಯಕ್ತಿಯ ಬದುಕಿನಲ್ಲಿ ಮಹಿಳೆಯ ಪಾತ್ರ ಬಹು ದೊಡ್ಡದಿರುತ್ತದೆ. ಮನೆಯ ಜವಾಬ್ದಾರಿಯ ನೊಗ ಹೊತ್ತು ಸಮರ್ಥವಾಗಿ ನಿಭಾಯಿಸುವ ಮೂಲಕ ಮನೆಗೆ ಬೆಳಕು ಬೀರುವವರು ಮಹಿಳೆ ಯರು. ಈಗಿನ ಆಧುನಿಕ ದಿನಗಳಲ್ಲಿ ಶಿಕ್ಷಕಿ, ಎಂಜನೀಯರ್, ವಿಜ್ಞಾನಿ, ಪೈಲಟ್, ಚಾಲಕಿ, ಯೋಧೆ, ಕ್ರೀಡೆ, ಗಗನಯಾತ್ರೆ ಸೇರಿದಂತೆ ಎಲ್ಲ ರಂಗಗಳಲ್ಲಿಯೂ ಮಹಿಳೆಯರು ಸಾಧನೆಯ ಶಿಖರವನ್ನು ಮುಟ್ಟುತ್ತಿದ್ದಾರೆ. ಚಿತ್ರನಟಿಯರಿಗಿಂತ ವಿವಿಧ ಕ್ಷೇತ್ರದ ಸಾಧಕರು ಮಾದರಿಯಾಗಲಿ ಎಂದು ಹೇಳಿದರು.

ಬಿವಿವಿ ಸಂಘದ ಕಾಲೇಜುಗಳಿಗೆ ರ್‍ಯಾಂಕ್

ಬಾಗಲಕೋಟೆ: ಬೆಳಗಾವಿಯ ರಾಣಿಚನ್ನಮ್ಮ ವಿಶ್ವವಿದ್ಯಾಲಯ ಹಾಗೂ ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲ ಯದ 2023-24ನೇ ಸಾಲಿನ ಅಂತಿಮ ವರ್ಷದ ವಿದ್ಯಾರ್ಥಿ ಗಳಿಗಾಗಿ ನಡೆಸಿದ ಪರೀಕ್ಷೆಯಲ್ಲಿ ಬಿವಿವಿ ಸಂಘದ ವಿವಿಧ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು 13 ರ್‍ಯಾಂಕ್ ಪಡೆದು ಉತ್ತಮ ಸಾಧನೆ ಮಾಡಿದ್ದಾರೆ. ಬಸವೇಶ್ವರ ದೈಹಿಕ ಶಿಕ್ಷಣ ಮಹಾವಿದ್ಯಾಲಯದ ಸಂಗೀತಾ ಗೌಡರ ಬಿಪಿಎಡ್ ಪರೀಕ್ಷೆಯಲ್ಲಿ (ಪ್ರಥಮ), ಭುವನೇಶ್ವರಿ ತೇಲಿ (ತೃತೀಯ), ಎಂಪಿಎಡ್ ವಿಭಾಗದಲ್ಲಿ ಮೀನಾಕ್ಷಿ.ಆರ್ (ಪ್ರಥಮ), ಪ್ರಿಯಾ (ದ್ವಿತೀಯ), ಲಾವಣ್ಯ.ವಿ (ತೃತೀಯ) ಸ್ಥಾನ ಪಡೆದಿದ್ದಾರೆ. ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದ ಸ್ನಾತಕೋತ್ತರ ವಿಭಾಗದ ರಸಾಯನಶಾಸ್ತ್ರ ವಿಷಯದಲ್ಲಿ ನಿಷತ್ ಬೀಳಗಿ (ದ್ವಿತೀಯ), ಬಿಎಸ್ಸಿ ವಿಭಾಗದಲ್ಲಿ ಪ್ರಜ್ಞಾ ಹಿರೇಮಠ (9ನೇ ಸ್ಥಾನ), ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದ ಬಿ.ಬಿ.ಎ ವಿಭಾಗದಲ್ಲಿ ಪರೇಶ್ ಗುಂಡೇಚಾ (ದ್ವಿತೀಯ), ಕಾವ್ಯಾ ಇಲ್ಲೂರ (5ನೇ ಸ್ಥಾನ) ಪಡೆದಿದ್ದಾರೆ. ಅಕ್ಕಮಹಾದೇವಿ ಮಹಿಳಾ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಬಿ.ಕಾಂ ಪದವಿ ವಿಭಾಗದಲ್ಲಿ ಪ್ರೇಮಾ ಹುನಗುಂದ (4ನೇ ಸ್ಥಾನ), ಎಂಎಸ್ಸಿ ಪ್ರಾಣಿಶಾಸ್ತ್ರ ವಿಭಾಗದಲ್ಲಿ ಮಹಿಮಾ ರಾಜಪುರೋಹಿತ (ತೃತೀಯ), ಹೀನಾ ಕಮತರ (4ನೇ ಸ್ಥಾನ), ವಿದ್ಯಾಗಿರಿಯಲ್ಲಿರುವ ಬಸವೇಶ್ವರ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಬಿಎಸ್ಸಿ ವಿಭಾಗದಲ್ಲಿ ಮಲ್ಲಮ್ಮ ಗಾಜಿ (6ನೇ ಸ್ಥಾನ) ಪಡೆದಿದ್ದಾರೆ.

ಮಧ್ಯಸ್ಥಿಕೆದಾರರಿಗೆ ಪುನಶ್ಚೇತನ ತರಬೇತಿ

ಬಾಗಲಕೋಟೆ: ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಮಧ್ಯಸ್ಥಿಕೆ ಕೇಂದ್ರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ವಕೀಲರ ಸಂಘದ ಸಹಯೋಗದಲ್ಲಿ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಯ ಮಧ್ಯಸ್ಥಿಕೆದಾರರಿಗೆ ಇಲ್ಲಿನ ಜಿಪಂ ಸಭಾಭವನದಲ್ಲಿ ತರಬೇತಿ ಜರುಗಿತು.

ಎರಡು ದಿನಗಳ ಕಾಲ ಹಮ್ಮಿಕೊಂಡಿದ್ದ ಪುನಶ್ಚೇತನ ತರಬೇತಿಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎನ್ .ವಿ.ವಿಜಯ್ ಚಾಲನೆ ನೀಡಿ ಮಾತನಾಡಿದ ಅವರು, ನ್ಯಾಯಾಲಯದಲ್ಲಿರುವ ವ್ಯಾಜ್ಯ ಪ್ರಕರಣಗಳನ್ನು ಬೇಗನೆ ಇತ್ಯರ್ಥ ಪಡಿಸುವ ನಿಟ್ಟಿನಲ್ಲಿ ಮಧ್ಯಸ್ಥಿಕೆದಾರರಿಗೆ ಪುನಶ್ಚೇತನ ತರಬೇತಿ ಹಮ್ಮಿಕೊಳ್ಳಲಾಗಿದೆ. ಈ ತರಬೇತಿಯ ಸದುಪಯೋಗವನ್ನು ಮಧ್ಯಸ್ಥಿಕೆದಾರರು ಹಾಗೂ ವಕೀಲರು ಪಡೆದುಕೊಂಡು ಜನರಿಗೆ ನ್ಯಾಯ ಒದಗಿಸುವ ಕೆಲಸ ಮಾಡಬೇಕೆಂದರು.

ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಗಳ ಮಧ್ಯಸ್ಥಿಕೆದಾರರು ಸೇರಿದಂತೆ ಅನೇಕರಿದ್ದರು.

ಬಾಗಲಕೋಟೆಯ ಜಿಪಂನಲ್ಲಿ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಯ ಮಧ್ಯಸ್ಥಿಕೆದಾರರಿಗೆ ತರಬೇತಿ ಜರುಗಿತು.

> ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ಬೇಗ ಇತ್ಯರ್ಥಪಡಿಸಲು ಮಧ್ಯಸ್ಥಿಕೆದಾರರ ಪಾತ್ರ ಮುಖ್ಯವಾಗಿದ್ದು, ಈ ಮಧ್ಯಸ್ಥಿಕೆದಾರರಿಗೆ ತರಬೇತಿ ನೀಡುತ್ತಿರುವುದು ಉತ್ತಮ ಕಾರ್ಯವಾಗಿದೆ. ಇದರ ಸದುಪಯೋಗವನ್ನು ಮಧ್ಯಸ್ಥಿಕೆದಾರ ವಕೀಲರು ಪಡೆದುಕೊಳ್ಳಬೇಕು. ವಾಜ್ಯಗಳನ್ನು ಇತ್ಯರ್ಥಪಡಿಸಿಕೊಳ್ಳುವುದಕ್ಕೆ ಮಧ್ಯಸ್ಥಿಕೆಯು ಕಡಿಮೆ ವೆಚ್ಚದ ಹಾಗೂ ಪರಿಣಾಮಕಾರಿಯಾದ ವ್ಯವಸ್ಥೆಯಾಗಿದೆ .
> -ರಮೇಶ್ ಬದ್ನೂರ , ವಕೀಲರ ಸಂಘದ ಅಧ್ಯಕ್ಷ

ರೈತರಿಗೆ ಕುಡಿಯುವ ನೀರಿಗಾಗಿ ತೊಂದರೆ

ಇಂಡಿ: ಇಂಡಿ-ಗುತ್ತಿ ಬಸವಣ್ಣ ಏತನೀರಾವರಿ 97.00 ರಿಂದ 203.00 ವರೆಗೆ ಕಾಲುವೆ ಕಾಮಗಾರಿ ಸಂಪೂರ್ಣಗೊಂಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಕಾಲುವೆ ಕಿ.ಮೀ 97.00 ವರೆಗೆ ಮಾತ್ರ ನೀರು ಹರಿಯುತ್ತಿದ್ದು ನಾಲೆಯ ಮುಂದಿನ ಭಾಗದವರೆಗೆ ನೀರು ಹರಿಯದೇ ಇರುವದರಿಂದ ಜನ ಜಾನುವಾರಗಳು ಹಾಗೂ ರೈತರು ಕುಡಿಯುವ ನೀರಿಗಾಗಿ ತೀವ್ರತೊಂದರೆ ಏದುರಿಸುತ್ತಿದ್ದು ಸರಕಾರದ ಗಮನಿಸಿದೆಯೇ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಸದನದಲ್ಲಿ ಮುಖ್ಯ ಮಂತ್ರಿಗಳಿಗೆ ಪ್ರಶ್ನಿಸಿದರು. ಮತ್ತೆ ಪ್ರತಿಧ್ವನಿಸಿದ ಅವರು ಈ ಕಾಲುವೆ ಕಿ.ಮೀ 97.00 ರಿಂದ 203.00 ರವರೆಗೆ ಕಾಲುವೆಯಲ್ಲಿ ನೀರು ಹರಿಸದಿರಲು ಕಾರಣಗಳೇನು ಇಂಡಿ ಶಾಖಾ ಕಾಲುವೆ ಸ್ಕಾಟಾಗೇಟ್ ಅಳವಡಿಸಿರುವ ಮಾದರಿಯಲ್ಲಿ ಗುತ್ತಿಬಸವಣ್ಣ ಏತನೀರಾವರಿ ಕಾಲುವೆಗೆ ಸ್ಕಾಟಾ ಗೇಟ್ ಅಳವಡಿಸಿ ನೀರು ಪೋಲಾಗದೆ ನಾಲೆಯ ಕೊನೆಯ ಭಾಗದವರೆಗೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಸಲು ಸಾಧ್ಯವಾಗುವುದೆ ಸರಕಾರದ ಗಮನಕ್ಕೆ ಬಂದಿದೆಯೇ? ಬಂದಿದಲ್ಲಿ ಸ್ಕಾಟಾಗೇಟ್ ಅಳವಡಿಸುವ ಬಗ್ಗೆ ಸರಕಾರದ ಸ್ಪಷ್ಟ ನಿಲುವೇನು ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಸದನನಲ್ಲಿ ಪ್ರಶ್ನಿಸಿದರು.

ಕ್ಲೀನ್ ಬೌಲ್ಡ್

ಇರ್ಫಾನ್ ಪಠಾಣ್



ಇರ್ಫಾನ್ ಪಠಾಣ್ ಕೆಲವು ಭಾರತೀಯ ಆಟಗಾರರ ವಿರುದ್ಧ ಮಾತನಾಡಿದ್ದರಿಂದ ಅವರನ್ನು ಕಾಮೆಂಟರಿ ಪ್ಯಾನೆಲ್‌ನಿಂದ ಹೊರಗಿಡಲಾಗಿದೆ. ಪಠಾಣ್ ಅವರ ವ್ಯಾಖ್ಯಾನದ ಬಗ್ಗೆ ಕೆಲವು ಆಟಗಾರರು ದೂರು ನೀಡಿದ್ದರು. ಇರ್ಫಾನ್ ತಮ್ಮ ಬಗ್ಗೆ ವೈಯಕ್ತಿಕ ಕಾಮೆಂಟ್‌ಗಳನ್ನು ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದರು. ಬಾರ್ಡರ್-ಗವಾಸ್ಕರ್ ಟ್ರೋಫಿಯ ಸಂದರ್ಭದಲ್ಲಿ ಇರ್ಫಾನ್ ಪಠಾಣ್ ಕೆಲವು ಆಟಗಾರರ ಬಗ್ಗೆ ಹೇಳಿದ್ದ ಮಾತುಗಳಿಂದ ಇದು ಸಂಭವಿಸಿದೆ ಎಂದು ಹೇಳಲಾಗುತ್ತಿದೆ.

ಸ್ಕೋರ್ ಬೋರ್ಡ್

174/8 (20 ಓವರ್)

ಕೋಲ್ಕತ್ತ ನೈಟ್ ರೈಡರ್ಸ್		ರನ್	ಎಸೆತ
ಕ್ವಿಂಟನ್ ಡಿ ಕಾಕ್	ಹ್ಯಾಸಲ್‌ವುಡ್ ಬೌಲಿಂಗ್, ಜಿತೇಶ್ ಕ್ಯಾಚ್	04	05
ಸುನಿಲ್ ನರೇನ್	ರಾಶಿಕ್‌ದಾರ್ ಬೌಲಿಂಗ್, ಜಿತೇಶ್ ಕ್ಯಾಚ್	44	26
ಅಜಿಂಕ್ಯರೆಹಾನೆ	ಕ್ರುನಾಲ್ ಬೌಲಿಂಗ್, ರಾಶಿಕ್‌ದಾರ್ ಕ್ಯಾಚ್	56	31
ವೆಂಕಟೇಶ್ ಅಯ್ಯರ್	ಕ್ರುನಾಲ್ ಬೌಲಿಂಗ್	06	07
ಆಂಗ್ಕ್ರಿಶ್	ದಯಾಳ್ ಬೌಲಿಂಗ್, ಜಿತೇಶ್ ಕ್ಯಾಚ್	30	22
ರಿಂಕು ಸಿಂಗ್	ಕ್ರುನಾಲ್ ಬೌಲಿಂಗ್	12	10
ಆಂಡ್ರೆ ರೆಸೆಲ್	ಸುಯಶ್ ಶರ್ಮಾ ಬೌಲಿಂಗ್	04	03
ರಮಣ್‌ದೀಪ್‌ಸಿಂಗ್	ನಾಟೌಟ್	06	09
ಹರ್ಷಿತ್ ರಾಣಾ	ಹ್ಯಾಸಲ್‌ವುಡ್ ಬೌಲಿಂಗ್, ಜಿತೇಶ್ ಕ್ಯಾಚ್	05	06
ಸ್ಪೆನ್ಸರ್ ಜಾನ್ಸನ್	ನಾಟೌಟ್	01	01

ರಾಯಲ್ ಚಾಲೆಂಜರ್ಸ್ ಬೆಂಗಳೂರು – ಬೌಲಿಂಗ್

	ಓವರ್	ರನ್	ವಿಕೆಟ್
ಹ್ಯಾಸಲ್‌ವುಡ್	04	22	2
ದಯಾಳ್	03	25	1
ರಾಶಿಕ್‌ದಾರ್	03	35	1
ಕ್ರುನಾಲ್	04	29	3
ಸುಯಶ್	04	47	1
ಲಿವಿಂಗ್‌ಸ್ಟನ್	02	14	0

177/3 (20.5 ಓವರ್)

ರಾಯಲ್ ಚಾಲೆಂಜರ್ಸ್ ಬೆಂಗಳೂರು		ರನ್	ಎಸೆತ
ಪಿಲಿಪ್ ಸ್ಸಾಲ್ಟ್	ವರುಣ್ ಬಾಲ್, ಜಾನ್ಸನ್ ಕ್ಯಾಚ್	56	31
ವಿರಾಟ್ ಕೊಹ್ಲಿ	ನಾಟೌಟ್	59	36
ಪಡಿಕಲ್	ನರೇನ್ ಬಾಲ್, ರಣದೀಪ್ ಕ್ಯಾಚ್	10	10
ರಜತ್ ಪಾಟೀದಾರ್	ವೈಭವ್ ಬಾಲ್, ರಿಕ್ಕುಸಿಂಗ್ ಕ್ಯಾಚ್	34	16
ಲಿವಿಂಗ್‌ಸ್ಟನ್	ನಾಟೌಟ್	15	05

ಕೋಲ್ಕತ್ತ ನೈಟ್ ರೈಡರ್ಸ್ – ಬೌಲಿಂಗ್

	ಓವರ್	ರನ್	ವಿಕೆಟ್
ವೈಭವ್	03	42	1
ಜಾನ್ಸನ್	02.2	31	0
ವರುಣ್	04	43	1
ಹರ್ಷಿತ್	03	32	0
ನರೇನ್	04	27	1

ದೆಹಲಿಗೆ ಡಬಲ್ ಶಾಕ್

ದೆಹಲಿ: ಮೊದಲ ಮಗುವಿನ ನಿರೀಕ್ಷೆಯಲ್ಲಿರುವ ಡೆಲ್ಲಿ ಕ್ಯಾಪಿಟಲ್ಸ್‌ನ ತಾರಾ ಆಟಗಾರ ಕೆ.ಎಲ್.ರಾಹುಲ್ ಐಪಿಎಲ್‌ನ ಆರಂಭಿಕ ಕೆಲ ಪಂದ್ಯಗಳಿಗೆ ಗೈರಾಗುವ ಸಾಧ್ಯತೆಯಿದೆ. ಈ ಮೂಲಕ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಡಬಲ್ ಶಾಕ್ ಎದುರಾಗಿದೆ. ಈಗಾಗಲೇ ಡೆಲ್ಲಿ ಸ್ಟಾರ್ ಬ್ಯಾಟರ್ ಹ್ಯಾರಿ ಬ್ರೂಕ್ ಐಪಿಎಲ್‌ನಿಂದ ದಿಢೀರ್ ಹಿಂದೆ ಸರಿದಿದ್ದರು. ಇದೀಗ ಆರಂಭಿಕ ಪಂದ್ಯಗಳಲ್ಲಿ ರಾಹುಲ್ ಕೂಡಾ ಅಲಭ್ಯರಾದರೇ ಡೆಲ್ಲಿ ತಂಡದ ಪಾಲಿಗೆ ಗಾಯದ ಮೇಲೆ ಬರೆ ಎಳೆದಂತಾಗುತ್ತದೆ. ಡೆಲ್ಲಿ ತಂಡದ ಆಟಗಾರ ಮಿಚೆಲ್ ಸ್ಟಾರ್ಕ್ ಅವರ ಪತ್ನಿ ಅಲೀಸಾ ಹೀಲಿ ಯೂಟ್ಯೂಬ್ ಸಂದರ್ಶನವೊಂದರಲ್ಲಿ ರಾಹುಲ್ ಗೈರಿನ ಬಗ್ಗೆ ಮಾತನಾಡಿದ್ದಾರೆ. 'ಹ್ಯಾರಿ ಬ್ರೂಕ್ ತಂಡದಲ್ಲಿಲ್ಲ. ಹೀಗಾಗಿ ತಂಡ ಯಾರನ್ನು ಬದಲಿ ಆಟಗಾರನಾಗಿ ಸೇರಿಸಲಿದೆ ಎಂಬ ಕುತೂಹಲವಿದೆ. ಮೊದಲ ಮಗುವಿನ ನಿರೀಕ್ಷೆಯಲ್ಲಿರುವ ರಾಹುಲ್ ಕೂಡಾ ಕೆಲ ಪಂದ್ಯಗಳಲ್ಲಿ ಆಡುವ ಸಾಧ್ಯತೆಯಿಲ್ಲ' ಎಂದು ಹೀಲಿ ಹೇಳಿದ್ದಾರೆ. ಸೋಮವಾರ ಡೆಲ್ಲಿ ತಂಡ ತನ್ನ ಆರಂಭಿಕ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಆಡುವ ಮೂಲಕ ಟೂರ್ನಿಗೆ ಕಾಲಿಡಲಿದೆ. ಡೆಲ್ಲಿ ತಂಡವನ್ನು ಈ ಬಾರಿ ಅಕ್ಷರ್ ಪಟೇಲ್ ಮುನ್ನಡೆಸಲಿದ್ದಾರೆ.

ವೆಸ್ಟ್ ಇಂಡೀಸ್ ಜತೆ ಟೆಸ್ಟ್ ಸರಣಿ

ಮುಂಬೈ: ಹಲವು ವರ್ಷಗಳ ಬಳಿಕ ವೆಸ್ಟ್ ಇಂಡೀಸ್ ತಂಡ ಭಾರತಕ್ಕೆ ಟೆಸ್ಟ್ ಆಡಲು ಆಗಮಿಸುತ್ತಿದೆ. ವೆಸ್ಟ್ ಇಂಡೀಸ್ ಭಾರತ ಪ್ರವಾಸದ ವೇಳಾಪಟ್ಟಿಯನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ವೇಳಾಪಟ್ಟಿ ಬಿಡುಗಡೆ ಮಾಡಿದೆ. ಅಕ್ಟೋಬರ್ 2ರಿಂದ 6ರವರೆಗೆ ಮೊಹಾಲಿಯಲ್ಲಿ ಮೊದಲ ಟೆಸ್ಟ್ ಮತ್ತು ಅ. 10ರಿಂದ 14ರವರೆಗೆ ಕೋಲ್ಕತ್ತದಲ್ಲಿ ದ್ವಿತೀಯ ಟೆಸ್ಟ್ ನಡೆಯಲಿದೆ. ಐಪಿಎಲ್ 2025ರ ಬಳಿಕ ಜೂನ್‌ನಲ್ಲಿ ಇಂಗ್ಲೆಂಡ್ ವಿರುದ್ಧದ ಸರಣಿಗಾಗಿ ಭಾರತ ಪ್ರಯಾಣ ಬೆಳೆಸಲಿದೆ. ಅದಾದ ಬಳಿಕ ವರ್ಷಾಂತ್ಯದ ವೇಳೆಗೆ ವಿಂಡೀಸ್ ಸರಣಿ ಆಯೋಜನೆಯಾಗಲಿದೆ. 2025-27ನೇ ಆವೃತ್ತಿಯ ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ (ಡಬ್ಲ್ಯುಟಿಸಿ) ಭಾರತಕ್ಕೆ ಪ್ರತಿ ಪಂದ್ಯವೂ ಅತ್ಯಂತ ಮಹತ್ವದೆನಿಸಿಕೊಂಡಿದೆ. ಕಳೆದೆರಡು ಸಾಲಿನಲ್ಲಿ ಭಾರತ ಫೈನಲ್‌ಗೆ ತಲುಪಿದ್ದರೂ ಈ ಬಾರಿ ಪ್ರಶಸ್ತಿ ಸುತ್ತು ಪ್ರವೇಶಿಸುವಲ್ಲಿ ವಿಫಲವಾಗಿತ್ತು. ನ್ಯೂಜಿಲೆಂಡ್ ವಿರುದ್ಧ ತವರಿನಲ್ಲಿ ಹಾಗೂ ಆಸ್ಟ್ರೇಲಿಯಾದಲ್ಲಿ ನಡೆದ ಬಾರ್ಡರ್-ಗವಾಸ್ಕರ್ ಸರಣಿಯಲ್ಲಾದ ಸೋಲು ಹಿನ್ನಡೆಯಾಗಿ ಪರಿಣಮಿಸಿತು.

ಇಂದಿನ ಪಂದ್ಯ

ಸನ್‌ರೈಸರ್ಸ್ VS ರಾಜಸ್ಥಾನ ರಾಯಲ್ಸ್
ರಾಜೀವ್ ಗಾಂಧಿ ಮೈದಾನ್, ಹೈದರಾಬಾದ್ – 3.30 PM

ಮುಂಬೈ VS ಚೆನ್ನೈ ಸೂಪರ್ ಕಿಂಗ್ಸ್
ಚಿದಂಬರಂ ಮೈದಾನ ಚೆನ್ನೈ – 7.30 PM

ಭರ್ಜರಿ ಗೆಲುವಿನೊಂದಿಗೆ ಆರ್‌ಸಿಬಿ ಶುಭಾರಂಭ

ಮೊದಲ ಪಂದ್ಯ ನಮ್ದೇ ಆಟ

ಕೋಲ್ಕತಾ: ಇಲ್ಲಿನ ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ 18ನೇ ಆವೃತ್ತಿಯ ಐಪಿಎಲ್ ಕ್ರಿಕೆಟ್ ಸಮರಕ್ಕೆ ಶನಿವಾರ ಅದ್ದೂರಿಯ ಚಾಲನೆ ದೊರೆತಿದ್ದು, ಉದ್ಘಾಟನಾ ಪಂದ್ಯದಲ್ಲಿ ಕೊಲ್ಕತ್ತಾ ನೈಟ್ ರೈಡರ್ಸ್ ತಂಡವನ್ನು ಏಳು ವಿಕೆಟ್‌ಗಳಿಂದ ಬಗ್ಗು ಬಡಿದು ರಾಯಲ್ ಚಾಲೆಂಜರ್ಸ್ ಬೆಂಗಳೂರು ಶುಭಾರಂಭ ಮಾಡಿದೆ.

ಕೆಕೆಆರ್ ನೀಡಿದ 175 ರನ್ ಗುರಿ ಬೆನ್ನಟ್ಟಿದ ಆರ್‌ಸಿಬಿ ಕೇವಲ ಮೂರು ವಿಕೆಟ್ ಕಳೆದುಕೊಂಡು ಜಯ ದಾಖಲಿಸಿತು. ಇದರೊಂದಿಗೆ ಐಪಿಎಲ್ 2025 ಅಂಕಪಟ್ಟಿಯಲ್ಲಿ ಆರ್‌ಸಿಬಿ ಮೊದಲ ಗೆಲುವಿನ ಅಂಕ ಪಡೆದುಕೊಂಡಿದೆ. ಬೌಲಿಂಗ್‌ನಲ್ಲೂ ಆರ್‌ಸಿಬಿ ಉತ್ತಮ ದಾಳಿ ಸಂಘಟಿಸಿ ನಿಯಂತ್ರಿಸಿದರೆ ಬ್ಯಾಟಿಂಗ್‌ನಲ್ಲೂ ಅಭಿಮಾನಿಗಳ ಮೆಚ್ಚುಗೆಗೆ ಪಾತ್ರವಾಗಿದೆ. ಮೊದಲ ಪಂದ್ಯದಲ್ಲಿ ಆರ್‌ಸಿಬಿ ನೀಡಿದ ಪ್ರದರ್ಶನ ಅಭಿಮಾನಿಗಳ ಮೆಚ್ಚುಗೆಗೆ ಪಾತ್ರವಾಗಿದ್ದು, 'ಈ ಸಲ ಕಪ್ ನಮ್ದೇ' ಎಂಬ ಘೋಷಣೆ ಮುಗಿಲು ಮುಟ್ಟಿದೆ.

ಆರ್‌ಸಿಬಿಗೆ 175 ರನ್ ಟಾರ್ಗೆಟ್: ಕೆಕೆಆರ್ ನೀಡಿದ 175 ರನ್‌ಗಳ ಗುರಿ ಬೆನ್ನಟ್ಟಿದ ಆರ್‌ಸಿಬಿ ಆರಂಭದಲ್ಲೇ ಅಬ್ಬರಿಸಿತು. ಫಿಲಿಪ್ ಸಾಲ್ಟ್ ಹಾಗೂ ವಿರಾಟ್ ಕೊಹ್ಲಿ ತಂಡಕ್ಕೆ ಭರ್ಜರಿ ಆರಂಭ ಒದಗಿಸಿದರು. ಇಬ್ಬರೂ ಸತತ ಬೌಂಡರಿ ಹಾಗೂ ಸಿಕ್ಸರ್‌ಗಳ ಮೂಲಕ ತಂಡಕ್ಕೆ ಭದ್ರ ಬುನಾದಿ ಹಾಕಿದರು. ಫಿಲಿಪ್ ಸಾಲ್ಟ್ ಕೇವಲ 31 ಬಾಲ್‌ಗಳಲ್ಲಿ 56 ರನ್ ಸಿಡಿಸಿ ನಿರ್ಗಮಿಸಿದರು. ಮೊದಲ ವಿಕೆಟ್‌ಗೆ ಕೊಹ್ಲಿ ಹಾಗೂ ಸಾಲ್ಟ್ 95 ರನ್ ಜೊತೆಯಾಟ ನೀಡಿದರು.

ಆದರೆ ಸಾಲ್ಟ್ ಬಳಿಕ ಬಂದ ದೇವದತ್ ಪಡಿಕ್ಕಲ್ ಕೇವಲ 10 ರನ್ ಸಿಡಿಸಿ ನಿರ್ಗಮಿಸಿದರು. ಆದರೆ ವಿರಾಟ್ ಕೊಹ್ಲಿ ಅಬ್ಬರಿಸುತ್ತಲೇ ಅರ್ಧ ಶತಕ ಪೂರೈಸಿದರು. ಕೊಹ್ಲಿ 36 ಬಾಲ್‌ಗಳಿಗೆ 59 ರನ್ ಸಿಡಿಸಿ ಮತ್ತೊಮ್ಮೆ ಸಾಮರ್ಥ್ಯ ಪ್ರದರ್ಶಿಸಿದರು. ನಾಯಕ ರಜತ್ ಪಾಟಿದಾರ್ ಕೇವಲ 16 ಎಸೆತದಲ್ಲಿ 34 ರನ್ ಸಿಡಿಸಿ ಉತ್ತಮ ಹೋರಾಟ ನೀಡಿದರು. ಕೊನೆಯಲ್ಲಿ ಲಿಯಾಮ್ ಲಿವಿಂಗ್‌ಸ್ಟೋನ್ ಜೊತೆ ಸೇರಿದ ವಿರಾಟ್ ಕೊಹ್ಲಿ ಗೆಲುವನ್ನು ಖಾತರಿಪಡಿಸಿದರು. ಲಿವಿಂಗ್‌ಸ್ಟೋನ್ ಅಜೇಯ 15 ರನ್ ಸಿಡಿಸಿದರು. 16.2 ಓವರ್‌ಗಳಲ್ಲಿ ಗುರಿ ತಲುಪಿದ ಆರ್‌ಸಿಬಿ ತನ್ನ ಗೆಲುವಿನ ಅಭಿಯಾನ ಆರಂಭಿಸಿತು.

ಆರ್‌ಸಿಬಿ ಬೌಲರ್ಸ್ ಬೆವರಿಳಿಸಿದ ರಹಾನೆ: ಮೊದಲ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ನಡೆಸಿದ ಕೊಲ್ಕತ್ತಾ ನೈಟ್ ರೈಡರ್ಸ್ ತಂಡ ಅಜಿಂಕ್ಯಾ ರಹಾನೆ ಹಾಗೂ ಆರಂಭಿಕ ಬ್ಯಾಟರ್ ಸುನಿಲ್ ನರೇನ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 174 ದಾಖಲಿಸಿತು. ಇಬ್ಬರು ಹಳೆಯ ಆಟಗಾರರು ತಮ್ಮಲ್ಲಿ ಇನ್ನೂ ಕ್ರಿಕೆಟ್ ಕಸುವು ಉಳಿದಿರುವುದನ್ನು ಮತ್ತೊಮ್ಮೆ ತೋರಿಸಿ ಕೊಟ್ಟರು. ಕೋಲ್ಕತಾ ನೈಟ್ ರೈಡರ್ಸ್ ತಂಡದ ನಾಯಕ ಅಜಿಂಕ್ಯ ರಹಾನೆ ತಮ್ಮ ಸ್ಫೋಟಕ ಬ್ಯಾಟಿಂಗ್ ಮೂಲಕ ಆರ್‌ಸಿಬಿ ಬೌಲರ್‌ಗಳಿಗೆ ಬೆವರಿಳಿಸಿದರು. ರಹಾನೆ ಕೇವಲ 25 ಎಸೆತಗಳಲ್ಲಿ ಅರ್ಧಶತಕವನ್ನು ಪೂರ್ಣಗೊಳಿಸಿದರು. ಕೆಕೆಆರ್ ಪರ ಇನಿಂಗ್ಸ್ ಆರಂಭಿಸಿದ್ದ ಕ್ವಿಂಟನ್ ಡಿ ಕಾಕ್ ಮೊದಲನೇ ಓವರ್‌ನಲ್ಲಿ ಜಾಶ್ ಹೇಝಲ್‌ವುಡ್ ಎಸೆತದಲ್ಲಿ ಕ್ಯಾಚ್ ನೀಡಿ

ನಿರ್ಗಮಿಸಿದರು. ಅವರು ಕೇವಲ 4 ರನ್ ಬಾರಿಸಿದರು.

ಅರ್ಧಶತಕ ಸಿಡಿಸಿದ ರಹಾನೆ: ಈ ವೇಳೆ ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ನಾಯಕ ಅಜಿಂಕ್ಯ ರಹಾನೆ ಆರಂಭದಿಂದಲೇ ಆಕ್ರಮಣಕಾರಿ ಬ್ಯಾಟಿಂಗ್ ಪ್ರದರ್ಶಿಸಿದರು. ಮತ್ತೊಂದು ತುದಿಯಲ್ಲಿ ಸುನೀಲ್ ನರೇನ್ ಆರ್‌ಸಿಬಿ ಬೌಲರ್‌ಗಳ ಮೇಲೆ ದಾಳಿ ನಡೆಸಿದರು. ಅಜಿಂಕ್ಯ ರಹಾನೆ ಹಾಗೂ ಸುನೀಲ್ ನರೇನ್ ಅವರ ಸ್ಫೋಟಕ ಬ್ಯಾಟಿಂಗ್ ಬಲದಿಂದ ಕೆಕೆಆರ್ ಪವರ್‌ಪ್ಲೇನಲ್ಲಿ 60 ರನ್‌ಗಳನ್ನು ಕಲೆ ಹಾಕಿತು. ರಹಾನೆ 31 ಎಸೆತಗಳಲ್ಲಿ 6 ಬೌಂಡರಿ ಹಾಗೂ 4 ಸಿಕ್ಸರ್‌ಗಳೊಂದಿಗೆ 56 ರನ್‌ಗಳನ್ನು ಚಚ್ಚಿದರು. ಈ ಮೂಲಕ ಕೆಕೆಆರ್ ತಂಡದ ಮೊತ್ತವನ್ನು 100ರ ಗಡಿ ದಾಟಿಸಿ ವಿಕೆಟ್ ಒಪ್ಪಿಸಿದರು. ಅಜಿಂಕ್ಯ ರಹಾನೆ ಮುರಿಯದ ಎರಡನೇ ವಿಕೆಟ್‌ಗೆ ಸುನೀಲ್ ನರೇನ್ ಜೊತೆ 103 ರನ್‌ಗಳನ್ನು ಸೇರಿಸಿದರು. ಭರ್ಜರಿಯಾಗಿ ಬ್ಯಾಟ್ ಬೀಸಿದ ಸುನೀಲ್ ನರೇನ್, 26 ಎಸೆತಗಳಲ್ಲಿ 3 ಸಿಕ್ಸರ್ ಹಾಗೂ 5 ಬೌಂಡರಿಗಳೊಂದಿಗೆ 44 ರನ್ ಗಳಿಸಿದರು. ಆದರೆ, ರಸಿಖ್ ದಾರ್ ಸಲಾಮ್ ಎಸೆತದಲ್ಲಿ ವಿಕೆಟ್ ಕೀಪರ್ ಜಿತೇಶ್ ಶರ್ಮಾಗೆ ವಿಕೆಟ್ ಒಪ್ಪಿಸಿದರು.

ಟೀಕೆಗಳಿಗೆ ಉತ್ತರ ನೀಡಿದ ರಹಾನೆ: ಚೆನ್ನೈ ಸೂಪರ್ ಕಿಂಗ್ಸ್ ಪರ ಕಳೆದ ಆವೃತ್ತಿಯಲ್ಲಿ ಉತ್ತಮ ಪ್ರದರ್ಶನವನ್ನು ತೋರುವಲ್ಲಿ ಅಜಿಂಕ್ಯ ರಹಾನೆ ವಿಫಲರಾಗಿದ್ದರು. ಈ ಹಿನ್ನೆಲೆಯಲ್ಲಿ ಅವರನ್ನು ಮೆಗಾ ಹರಾಜಿಗೆ ಚೆನ್ನೈ ಫ್ರಾಂಚೈಸಿ ಬಿಡುಗಡೆ ಮಾಡಿತ್ತು. ಮೆಗಾ ಹರಾಜಿನ ಮೊದಲನೇ ದಿನ ಅನ್‌ಸೋಲ್ಡ್ ಆಗಿದ್ದ ರಹಾನೆ ಅವರನ್ನು, ಎರಡನೇ ದಿನ ಕೋಲ್ಕತಾ ಫ್ರಾಂಚೈಸಿ ಖರೀದಿಸಿತ್ತು. ಆದರೆ, ಇತ್ತೀಚೆಗೆ ಅವರಿಗೆ ಕೆಕೆಆರ್ ನಾಯಕತ್ವವನ್ನು ನೀಡಲಾಗಿತ್ತು. ಈ ವೇಳೆ ಹಲವು ಮಾಜಿ ಕ್ರಿಕೆಟಿಗರು ರಹಾನೆಗೆ ನಾಯಕತ್ವ ನೀಡಿದ್ದ ಕೋಲ್ಕತಾ ಫ್ರಾಂಚೈಸಿ ನಿರ್ಧಾರವನ್ನು ಟೀಕಿಸಿದ್ದರು. ಆದರೆ, ಆರ್‌ಸಿಬಿ ವಿರುದ್ಧ ತಮ್ಮ ಮೊದಲನೇ ಪಂದ್ಯದಲ್ಲಿ ಸ್ಫೋಟಕ ಅರ್ಧ ಶತಕ ಸಿಡಿಸುವ ಮೂಲಕ ಟೀಕಾಕಾರರ ಬಾಯಿಯನ್ನು ಮುಚ್ಚಿಸಿದರು.



ಶಾರುಖ್ ನಿರೂಪಣೆ, ವಿರಾಟ್ ಮೋಡಿ, ಶ್ರೇಯಾ ಹಾಡಿಗೆ ತಲೆದೂಗಿದ ಈಡನ್ ಗಾರ್ಡನ್ಸ್

ಐಪಿಎಲ್ ಉದ್ಘಾಟನೆಗೆ ತಾರೆಯರ ಮೆರುಗು

ಕೋಲ್ಕತ್ತಾ: ಬಾಲಿವುಡ್ ಬಾದ್‌ಶಾ ಶಾರೂಖ್ ಖಾನ್ ಅವರ ನಿರೂಪಣೆ, ಶ್ರೇಯಾ ಘೋಷಾಲ್ ಅವರ ಹಾಡು, ಕರಣ್ ಔಜ್ಲಾ ಅವರ ಪಂಜಾಬಿ ಪಾಪ್, ದಿಶಾ ಪಟಾನಿ ಅವರ ಆಕರ್ಷಕ ನೃತ್ಯ ಪ್ರದರ್ಶನಗಳ ಮೂಲಕ ಇಲ್ಲಿನ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ನಡೆದ 18ನೇ ಆವೃತ್ತಿಯ ಐಪಿಎಲ್ ಕ್ರಿಕೆಟ್ ಟೂರ್ನಿ ಅದ್ದೂರಿ ಆರಂಭ ಪಡೆಯಿತು. ಉದ್ಘಾಟನೆಗೂ ಮುನ್ನ ಕ್ರಿಕೆಟ್ ದಿಗ್ಗಜ ವಿರಾಟ್ ಕೊಹ್ಲಿ ಅವರನ್ನು ಶಾರುಖ್ ಖಾನ್ ವೇದಿಕೆಗೆ ಕರೆ ತಂದಾಗ ಕ್ರೀಡಾಭಿಮಾನಿಗಳು ಹುಚ್ಚೆದ್ದು ಕುಣಿದರು. ಶಾರುಖ್ ಅವರೊಂದಿಗೆ ಹಾಡಿಗೆ ಹೆಜ್ಜೆ ಹಾಕಿದ ವಿರಾಟ್ ತಮ್ಮ ಅಭಿಮಾನಿಗಳನ್ನು ರಂಜಿಸಿದರು. ಎಂದಿನಂತೆ ಶ್ರೇಯಾ ಘೋಷಾಲ್ ತಮ್ಮ ಮಾಧುರ್ಯದ ಹಾಡುಗಳಿಂದ ಕೋಲ್ಕತ್ತಾದ ಕ್ರಿಕೆಟ್ ಅಭಿಮಾನಿಗಳನ್ನು ರಂಜಿಸಿದರು. ದಿಶಾ ಪಟಾನಿ ಅವರ ನೃತ್ಯ ಪ್ರೇಕ್ಷಕರ ಮನಸೂರೆಗೊಂಡಿತು.

ಭಾಘೀ3 ಜನಪ್ರಿಯ ಗೀತೆಗೆ ಪಟಾನಿ ಹೆಜ್ಜೆ ಹಾಕಿದರು. ಪಂಜಾಬಿ ಪಾಪ್ ತಾರೆ ಕರಣ್ ಔಜ್ಲಾ ಅವರ ತೌಬಾ ತೌಬಾ ಹಾಡಿಗೆ ಇಡೀ ಕ್ರೀಡಾಂಗಣವೇ ಸ್ಪಂದಿಸಿತು. ಇದಕ್ಕೂ ಮುನ್ನ ಲೀಗ್‌ನ 18ನೇ ಆವೃತ್ತಿಯ ಉದ್ಘಾಟನೆಯ ಸಂಕೇತವಾಗಿ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಕೇಕ್ ಕತ್ತರಿಸಿದರು.

ಆರ್‌ಆರ್‌ಗೆ ದ್ರಾವಿಡ್ ಮಾರ್ಗದರ್ಶನ | ಹೈದರಾಬಾದ್‌ಗೆ ದೈತ್ಯರ ಬೆಂಗಾವಲು

ಸನ್‌ರೈಸರ್ಸ್‌ಗೆ ಇಂದು ರಾಜಸ್ಥಾನ ಸವಾಲು



ಹೈದರಾಬಾದ್: 18ನೇ ಆವೃತ್ತಿಯ ಐಪಿಎಲ್ ಕ್ರಿಕೆಟ್ ಟೂರ್ನಿಯ ಮೊದಲ ಡಬಲ್ ಹೆಡರ್ ಪಂದ್ಯ ಭಾನುವಾರ ಹೈದರಬಾದ್‌ನಲ್ಲಿ ನಡೆಯಲಿದೆ. ದಿನದ ಮೊದಲ ಪಂದ್ಯದಲ್ಲಿ ಹಾಲಿ ರನ್ನರ್ ಅಪ್, ಬಲಿಷ್ಠ ಸನ್‌ರೈಸರ್ಸ್ ಹೈದರಾಬಾದ್ ತಂಡ ರಾಜಸ್ಥಾನ್ ರಾಯಲ್ ಸವಾಲು ಎದುರಿಸಲಿದೆ. ರಾತ್ರಿಯ ಹೈವೋಲ್ಟೇಜ್ ಪಂದ್ಯದಲ್ಲಿ 5 ಬಾರಿಯ ಚಾಂಪಿಯನ್‌ಗಳಾದ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಮುಂಬೈ ಇಂಡಿಯನ್ಸ್ ಮುಖಾಮುಖಿಯಾಗಲಿವೆ.

ಹೈದರಾಬಾದ್ ಬಲಿಷ್ಠ

ಕಳೆದ ಬಾರಿ ಐಪಿಎಲ್‌ನಲ್ಲಿ ತನ್ನ ಆಕ್ರಮಣಕಾರಿ ಆಟದ ಮೂಲಕ ರನ್ ಮಳೆಯನ್ನೇ ಹರಿಸಿದ್ದ ಹೈದರಾಬಾದ್ ತಂಡ ಈ ಬಾರಿ ಇನ್ನಷ್ಟು ಬಲಿಷ್ಠವಾಗಿದೆ. ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡೂ ವಿಭಾಗದಲ್ಲಿಯೂ ಅನುಭವಿ ಆಟಗಾರರನ್ನು ಒಳಗೊಂಡಿದೆ. ಕಳೆದ ಬಾರಿ 3 ಬಾರಿ 250ಕ್ಕಿಂತ ಹೆಚ್ಚು ರನ್ ಕಲೆಹಾಕಿದ್ದ ತಂಡ, ಆರ್‌ಸಿಬಿ ವಿರುದ್ಧ ಪಂದ್ಯದಲ್ಲಿ 287 ರನ್ ಗಳಿಸಿ ಐಪಿಎಲ್ ಇತಿಹಾಸದಲ್ಲೇ ಗರಿಷ್ಠ ರನ್ ದಾಖಲೆ ಬರೆದಿತ್ತು. ಹೀಗಾಗಿ ಈ ಬಾರಿಯೂ ತಂಡ ಸ್ಫೋಟಕ ಆಡಿ, 300 ರನ್ ಗಡಿ ದಾಟಿದರೂ ಅಚ್ಚರಿಯಿಲ್ಲ. ಯಾವುದೇ ಬೌಲಿಂಗ್ ಪಡೆಯನ್ನು ಚೆಂಡಾಡಬಲ್ಲ, ಬೌಲರ್‌ಗಳ ಎದೆಯಲ್ಲಿ ನಡುಕ ಹುಟ್ಟಿಸುವ ಟ್ರಾವಿಸ್ ಹೆಡ್, ಅಭಿಷೇಕ್ ಶರ್ಮಾ, ಹೆನ್ರಿಚ್ ಕ್ಲಾಸೆನ್, ಇಶಾನ್ ಕಿಶನ್, ನಿತೀಶ್ ಕುಮಾರ್ ರೆಡ್ಡಿ, ಕರ್ನಾಟಕದ ಅಭಿನವ್ ಮನೋಹರ್, ತಂಡದೊಳಗಿನ ಅಭ್ಯಾಸ ಪಂದ್ಯದಲ್ಲಿ 16 ಎಸೆತಗಳಲ್ಲಿ 46 ರನ್ ಸಿಡಿಸಿದ್ದ ಅನಿಕೇತ್ ವರ್ಮಾ ಮೇಲೆ ಭಾರೀ ನಿರೀಕ್ಷೆ ಇಡಲಾಗಿದೆ. ಬೌಲಿಂಗ್ ವಿಭಾಗ ಕೂಡಾ ಕಳೆದ ಬಾರಿಗಿಂತಲೂ ಬಲಿಷ್ಠವಾದಂತಿದೆ. ಮೊಹಮ್ಮದ್ ಶಮಿ ಬೌಲಿಂಗ್ ವಿಭಾಗವನ್ನು ಮುನ್ನಡೆಸಲಿದ್ದಾರೆ. ಪ್ಯಾಟ್ ಕಮಿನ್ಸ್, ಹರ್ಷಲ್ ಪಟೇಲ್ ಹಾಗೂ ರಾಹುಲ್ ಚಹರ್ ಜೊತೆ ಆಸ್ಟ್ರೇಲಿಯಾ ಸ್ಪಿನ್ನರ್ ಆ್ಯಡಂ ಝುಂಪಾ ತಂಡದಲ್ಲಿದ್ದಾರೆ.

ಪರಾಗ್‌ಗೆ ನಾಯಕತ್ವ

ಸಂಪೂರ್ಣ ಫಿಟ್‌ನೆಸ್ ಹೊಂದರ ಕಾರಣ ಮೊದಲ ಮೂರು ಪಂದ್ಯಗಳಲ್ಲಿ ರಿಯಾನ್ ಪರಾಗ್ ಅವರು ರಾಜಸ್ಥಾನ್ ರಾಯಲ್ಸ್ ತಂಡವನ್ನು ಮುನ್ನಡೆಸಲಿದ್ದಾರೆ. ಕಾಯಂ ನಾಯಕ ಸಂಜು ಸ್ಯಾಮ್ಸನ್ ಕೇವಲ ಇಂಪ್ಯಾಕ್ಟ್ ಆಟಗಾರನಾಗಿ ಬ್ಯಾಟ್ ಬೀಸಲಿದ್ದಾರೆ.

ದ್ರಾವಿಡ್ ಮಾರ್ಗದರ್ಶನ

ದಿಗ್ಗಜ ರಾಹುಲ್ ದ್ರಾವಿಡ್ ಮಾರ್ಗದರ್ಶನ ರಾಜಸ್ಥಾನ ತಂಡಕ್ಕೆ ಬಲ ತುಂಬಲಿದೆ. ಬ್ಯಾಟಿಂಗ್ ಆಧಾರ ಎನಿಸಿದ್ದ ಜೋಸ್ ಬಟ್ಲರ್‌ರನ್ನು ತಂಡ ಉಳಿಸಿಕೊಳ್ಳಲಿಲ್ಲ. ಟ್ರೆಂಟ್ ಬೌಲ್ಟ್, ಯಜುವೇಂದ್ರ ಚಹಲ್, ಆರ್.ಅಶ್ವಿನ್ ಹೀಗೆ ಅನೇಕ ಅನುಭವಿಗಳನ್ನು ಕೈಬಿಟ್ಟು ಬಹುತೇಕ ಯುವ ಆಟಗಾರರೊಂದಿಗೆ ಆಡಲು ನಿರ್ಧರಿಸಿದೆ. ವಿಂಡೀಸ್‌ನ ಶಿಮ್ರಾನ್ ಹೆಟ್ಮೆಯರ್ ತಂಡದಲ್ಲಿರುವ ಏಕೈಕ ವಿದೇಶಿ ಬ್ಯಾಟರ್. ಹೀಗಾಗಿ ನಾಯಕ ಸಂಜು ಸ್ಯಾಮ್ಸನ್, ಯಶಸ್ವಿ ಜೈಸ್ವಾಲ್, ರಿಯಾನ್ ಪರಾಗ್, ಧ್ರುವ್ ಜುರೆಲ್ ಮೇಲೆ ಹೆಚ್ಚು ನಿರೀಕ್ಷೆ ಇರಲಿದೆ. 13ರ ವೈಭವ್ ಸೂರ್ಯವಂಶಿ ಮೇಲೆ ಎಲ್ಲರೂ ಕಣ್ಣಿಡಲಿದ್ದಾರೆ. ಜೋಫ್ರಾ ಆರ್ಚರ್ ತಂಡದ ಬೌಲಿಂಗ್ ಪಡೆಯನ್ನು ಮುನ್ನಡೆಸಲಿದ್ದಾರೆ.

ಮಾಜಿ ಚಾಂಪಿಯನ್‌ಗಳ ಕಾದಾಟ, ಮುಂಬೈಗೆ ಪುಟಿದೇಳುವ ತವಕ

ಮುಂಬೈಗೆ ಸೂಪರ್ ಸವಾಲು

ಚೆನ್ನೈ: ಐಪಿಎಲ್ ಕ್ರೀಡಾಕೂಟದಲ್ಲಿ ಐದು ಚಾಂಪಿಯನ್‌ಶಿಪ್ ಗೆದ್ದು ಅತ್ಯಂತ ಯಶಸ್ವಿ ತಂಡಗಳೆನಿಸಿರುವ ಮುಂಬೈ ಇಂಡಿಯನ್ಸ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ಭಾನುವಾರ ಚೆನ್ನೈನ ಎಂ.ಎ.ಚಿದಂಬರಂ ಸ್ಟೇಡಿಯಂನಲ್ಲಿ ನಡೆಯಲಿರುವ ಎರಡನೇ ಪಂದ್ಯದಲ್ಲಿ ಸೆಣಸಲಿವೆ. ಬದ್ಧವೈರಿಗಳ ನಡುವಿನ ಈ ಕಾದಾಟ ಅಭಿಮಾನಿಗಳಲ್ಲಿ ಬಾರೀ ಕುತೂಹಲ ಕೆರಳಿಸಿದ್ದು, ಉಭಯ ತಂಡಗಳು ಭರ್ಜರಿ ಗೆಲುವಿನೊಂದಿಗೆ ಶುಭಾರಂಭ ಕಾಣಲು ಎದುರು ನೋಡುತ್ತಿವೆ. ಅನುಭವಿ ಹಾರ್ದಿಕ್ ಪಾಂಡ್ಯ ಮತ್ತು ಜಸ್‌ಪ್ರೀತ್ ಬುಮ್ರಾ ಅಲಭ್ಯರಾಗಿರುವುದು ಮುಂಬೈಗೆ ಹಿನ್ನಡೆಯಾಗಿದೆ. 43 ವರ್ಷದ ಮಹೇಂದ್ರ ಸಿಂಗ್ ಧೋನಿಗೆ ಇದು ಕೊನೆಯ ಐಪಿಎಲ್ ಆಗುವುದು ಬಹುತೇಕ ಖಚಿತ. ಹೀಗಾಗಿ ಅಭಿಮಾನಿಗಳ ಕಣ್ಣು ಧೋನಿ ಅವರ ಮೇಲಿದೆ.

2024ರ ಆವೃತ್ತಿಯಲ್ಲಿ ಮೂರು ಬಾರಿ ನಿಧಾನಗತಿ ಓವರ್ ಬೌಲಿಂಗ್ ಮಾಡಿದ್ದ ಕಾರಣ, ಹಾರ್ದಿಕ್ ಪಾಂಡ್ಯ 2025ರ ಆವೃತ್ತಿಯಲ್ಲಿ ಮುಂಬೈ ಆಡಲಿರುವ ಮೊದಲ ಪಂದ್ಯಕ್ಕೆ ಅಲಭ್ಯರಾಗಲಿದ್ದಾರೆ. ಹೀಗಾಗಿ ಅವರ ಬದಲು ಸೂರ್ಯಕುಮಾರ್ ಯಾದವ್ ತಂಡವನ್ನು ಮುನ್ನಡೆಸಲಿದ್ದಾರೆ. ದೇಸಿ ಯುವ ಪ್ರತಿಭೆಗಳನ್ನು ಇಟ್ಟುಕೊಂಡು ಐಪಿಎಲ್‌ನ ಅತ್ಯಂತ ಯಶಸ್ವಿ ತಂಡ ಎನಿಸಿಕೊಂಡಿರುವ ಮುಂಬೈ ಇಂಡಿಯನ್ಸ್ ಈ ಬಾರಿಯೂ ಭಾರತೀಯರ ಮೇಲೆ ಹೆಚ್ಚಿನ ವಿಶ್ವಾಸ ಇರಿಸಿ ಟೂರ್ನಿಗೆ ಕಾಲಿಡಲಿದೆ. ಕಳೆದ ಬಾರಿ ತಂಡದ ಪ್ರದರ್ಶನ ತೀರಾ ಕಳಪೆಯಾಗಿತ್ತು. ಅಂಕಪಟ್ಟಿಯಲ್ಲಿ ಕೊನೆ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತ್ತು. ಈ ಬಾರಿ ತಂಡ ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದೆ. ಬುಮ್ರಾ ಅನುಪಸ್ಥಿತಿಯಲ್ಲಿ ಟ್ರೆಂಟ್ ಬೌಲ್ಟ್, ದೀಪಕ್ ಚಹರ್ ಮತ್ತು ಮಿಚೆಲ್ ಸ್ಯಾಂಟ್ನರ್ ಬೌಲಿಂಗ್ ವಿಭಾಗವನ್ನು ಮುನ್ನಡೆಸಲಿದ್ದಾರೆ.

ಮುಂಬೈ ಸೂರ್ಯ ಸಾರಥಿ

ಚೆನ್ನೈ ಎಂದಿನಂತೆ ಈ ಬಾರಿಯೂ ಅನುಭವಿಗಳ ತಂಡವಾಗಿಯೇ ಗೋಚರಿಸಿದೆ. ಕಳೆದ ಮೆಗಾ ಹರಾಜಿನಲ್ಲಿ ಅತ್ಯಂತ ಜಾಣತನದ ಮೂಲಕ ಅನುಭವಿ ಆಟಗಾರರನ್ನು ತನ್ನ ಬುಟ್ಟಿಗೆ ಹಾಕಿಕೊಂಡಿತ್ತು. 10 ವರ್ಷ ಬಳಿಕ ಆರ್.ಅಶ್ವಿನ್, ಸಿಎಸ್‌ಕೆಗೆ ಮರಳಿದ್ದು, ಜಡೇಜಾ ಜತೆ ಜಾದೂ ನಡೆಸಲು ಹಾತೊರೆಯುತ್ತಿದ್ದಾರೆ. ಅಫ್ಘಾನಿಸ್ತಾನದ ನೂರ್ ಅಹ್ಮದ್ ಕೂಡ ತಂಡದಲ್ಲಿರುವ ಕಾರಣ ತಂಡದ ಸ್ಪಿನ್ ವಿಭಾಗ ಬಲಿಷ್ಠವಾಗಿದೆ. ನಾಯಕ ಗಾಯಕ್ವಾಡ್ ಮತ್ತು ಡೆವೊನ್ ಕಾನ್ವೆ 2023ರ ಆವೃತ್ತಿಯ ಅತ್ಯಂತ ಯಶಸ್ವಿ ಆರಂಭಿಕ ಜೋಡಿಯಾಗಿತ್ತು. ಈ ಬಾರಿಯೂ ಈ ಜೋಡಿ ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದೆ. ಆಲ್‌ರೌಂಡರ್ ರಚಿನ್ ರವೀಂದ್ರ, ಶಿವಂ ದುಬೆ ಹೀಗೆ ತಂಡದ ಬ್ಯಾಟಿಂಗ್ ಬಲಿಷ್ಠವಾಗಿದೆ.

ಚೆನ್ನೈ ಅನುಭವಿಗಳ ದಂಡು

10 ಸೆಕೆಂಡ್ ಟಿವಿ ಜಾಹೀರಾತಿಗೆ 8.5 ಲಕ್ಷ ರು. ದರ ನಿಗದಿ, 10 ಕೋಟಿ ಮೊಬೈಲ್ ಚಂದಾದಾರರ ಮೇಲೆ ಕಣ್ಣು

ಜಿಯೋಗೆ ಜಾಹೀರಾತಿನಿಂದಲೇ ₹ 4500 ಕೋಟಿ ಆದಾಯ

ಮುಂಬೈ: ಡಿಸ್ನಿ ಹಾಟ್‌ಸ್ಟಾರ್ ಖರೀದಿ ಮೂಲಕ ತನ್ನ ವ್ಯಾಪ್ತಿಯನ್ನು ವಿಶ್ವಮಟ್ಟಕ್ಕೆ ವಿಸ್ತರಿಸಿಕೊಂಡಿರುವ ಅಂಬಾನಿ ಬಳಗದ ಜಿಯೋಸ್ಟಾರ್ ಈ ಬಾರಿ 2025ರ ಸಾಲಿನ ಐಪಿಎಲ್ ಟೂರ್ನಿಯೊಂದರಲ್ಲೇ 4500 ಕೋಟಿ ರೂ. ಆದಾಯ ಸಂಗ್ರಹಿಸಲಿದೆ. ಈಗಾಗಲೇ ಜಿಯೋಸ್ಟಾರ್ 32 ಪ್ರಾಯೋಜಕರನ್ನು ಪಡೆದುಕೊಂಡಿದೆ.

ಐಪಿಎಲ್ ಟೂರ್ನಿಯ ಪ್ರಸಾರ ಹಕ್ಕುಗಳನ್ನು ಪಡೆದಿರುವ ಜಿಯೋ ಮತ್ತು ಸ್ಟಾರ್, ಟಿವಿ ಮತ್ತು ಡಿಜಿಟಲ್‌ನಿಂದ 100 ಕೋಟಿ ವೀಕ್ಷಣೆಯ ಗುರಿ ಹೊಂದಿದ್ದು 10 ಸೆಕೆಂಡ್ ಟಿವಿ ಜಾಹೀರಾತಿಗೆ 8.5 ಲಕ್ಷ ರೂ. ದರವನ್ನು ನಿಗದಿಪಡಿಸಲಾಗಿದೆ. ಇದೀಗ ಹೊಸ ಜಾಹೀರಾತು ಆದಾಯ ಪಡೆಯಲು ಜಿಯೋ ಸಜ್ಜಾಗಿದೆ.

ಸಾಧಾರಣವಾಗಿ ಐಪಿಎಲ್‌ನಲ್ಲಿ ದೊಡ್ಡ ಕಂಪನಿಗಳು ಜಾಹೀರಾತು ನೀಡುತ್ತಿದ್ದವು. ಆದರೆ ಈ ಬಾರಿ ಯೂಟ್ಯೂಬ್ ಮತ್ತು ಫೇಸ್‌ಬುಕ್‌ನಲ್ಲಿ ವಿಡಿಯೋದಲ್ಲಿ ಜಾಹೀರಾತು ನೀಡುತ್ತಿರುವ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳನ್ನು ಜಿಯೋಹಾಟ್‌ಸ್ಟಾರ್ ಸಂಪರ್ಕಿಸಿವೆ. ಐಪಿಎಲ್ ಅವಧಿಯಲ್ಲಿ ಒಟ್ಟು 10 ಕೋಟಿ ಸಬ್‌ಸ್ಕ್ರೈಬರ್ ಅದರಲ್ಲೂ 4 ಕೋಟಿ ಹೊಸ ಗ್ರಾಹಕರ ಮೇಲೆ ಜಿಯೋ ಕಣ್ಣಿಟ್ಟಿದೆ.

ಮಾಧ್ಯಮ ಹಕ್ಕು ಎಷ್ಟು?

ಕಳೆದ 18 ವರ್ಷಗಳಲ್ಲಿ ಐಪಿಎಲ್ ಮಾಧ್ಯಮ ಪ್ರಸಾರದ ಹಕ್ಕು ಮಾರಾಟದ ಮೊತ್ತ ಹೆಚ್ಚುತ್ತಲೇ ಸಾಗಿದೆ. 2008ರಲ್ಲಿ ಸೋನಿ ನೆಟ್‌ವರ್ಕ್ 10 ವರ್ಷಗಳ ಅವಧಿಗೆ ಒಟ್ಟು 8,200 ಕೋಟಿ ರೂ.ಗೆ ಪ್ರಸಾರದ ಹಕ್ಕು ಪಡೆದಿತ್ತು. 2017-22ರ ಅವಧಿಯಲ್ಲಿ ಟಿವಿ ಮತ್ತು ಡಿಜಿಟಲ್ ರೈಟ್ಸ್ ಅನ್ನು ಡಿಸ್ನಿ ಹಾಟ್‌ಸ್ಟಾರ್ ಒಟ್ಟು 16,347 ಕೋಟಿ ರೂ. ನೀಡಿ ಪಡೆದುಕೊಂಡಿತ್ತು. ಆದರೆ 2023-27ರ ಅವಧಿಯ 410 ಪಂದ್ಯಗಳಿಗೆ ಡಿಜಿಟಲ್ ಮತ್ತು ಟಿವಿ ರೈಟ್ಸ್ ಪ್ರತ್ಯೇಕವಾಗಿ ವಿಂಗಡನೆ ಮಾಡಲಾಗಿತ್ತು. ಡಿಜಿಟಲ್ ಪ್ರಸಾರ ಹಕ್ಕನ್ನು ವಯಾಕಾಮ್ 23,758 ಕೋಟಿ ರೂ. ನೀಡಿ ಖರೀದಿಸಿದರೆ ಟಿವಿ ಹಕ್ಕುಗಳನ್ನು 23,575 ಕೋಟಿ ರೂ.ಗೆ ವಾಲ್ಟ್ ಡಿಸ್ನಿ ಕಂಪನಿ ನೀಡಿ ಪಡೆದುಕೊಂಡಿತ್ತು.

ಕಳೆದ ವರ್ಷ ಟಿವಿ ಮತ್ತು ಡಿಜಿಟಲ್‌ನಿಂದ ಒಟ್ಟು 4,000 ಕೋಟಿ ರೂ. ಆದಾಯ ಬಂದಿತ್ತು. ಕಳೆದ ಬಾರಿಗಿಂತ ಬಾರಿ 500 ಕೋಟಿ ರೂ. ಹೆಚ್ಚು ಆದಾಯ ಸಂಗ್ರಹಿಸುವ ಗುರಿಯನ್ನು ಜಿಯೋ ಸ್ಟಾರ್ ಹಾಕಿಕೊಂಡಿದೆ. ಐಪಿಎಲ್ ಡಿಜಿಟಲ್ ರೈಟ್ಸ್ ಅನ್ನು ವಯಾಕಾಮ್ ಪಡೆದ ನಂತರ ಕ್ರಿಕೆಟ್ ಪ್ರೇಮಿಗಳು ಜಿಯೋಸಿನಿಮಾದಲ್ಲಿ ಉಚಿತವಾಗಿ ಪಂದ್ಯವನ್ನು ವೀಕ್ಷಿಸಬಹುದಾಗಿತ್ತು. ಆದರೆ ಈಗ ಜಿಯೋ ಮತ್ತು ಹಾಟ್‌ಸ್ಟಾರ್ ವಿಲೀನಗೊಂಡಿದೆ. ಜಿಯೋ ಸಿನಿಮಾ ಮತ್ತು ಡಿಸ್ನಿ+ ಹಾಟ್‌ಸ್ಟಾರ್ ವಿಲೀನಗೊಂಡು ಜಿಯೋಸ್ಟಾರ್ ಆಗಿ ಬದಲಾಗಿದ್ದು ಈ ವರ್ಷದಿಂದ ಐಪಿಎಲ್ ಅಭಿಮಾನಿಗಳು ಹಣವನ್ನು ಪಾವತಿಸಿ ಕ್ರಿಕೆಟ್ ವೀಕ್ಷಣೆ ಮಾಡಬೇಕಾಗಿದೆ.

ವಿರಾಮ

ಹಾಲು ಉತ್ಪಾದಿಸುವ ಹಕ್ಕಿಗಳು!

» ಡಾ. ಎಸ್. ಶಿಶುಪಾಲ

ವಿಶ್ವ ಜೀವರಾಶಿಗಳ ವರ್ಣ ವೈವಿಧ್ಯದಲ್ಲಿ ಪಕ್ಷಿಗಳು ಮತ್ತು ಚಿಟ್ಟೆಗಳು ಬಹು ಮುಖ್ಯ ಸ್ಥಾನ ಪಡೆದಿವೆ. ಪಕ್ಷಿಗಳ ವರ್ಣಸಂಯೋಜನೆ ಯಂತೂ ನಿಸರ್ಗದ ಮೂಸೆಯಲ್ಲಿ ಮೂಡಿ ಬಂದ ಸೋಜಿಗ. ಹಲವಾರು ವರ್ಣರಂಜಿತ ಪಕ್ಷಿ ಪ್ರಭೇದಗಳು ವಿವಿಧ ಬಣ್ಣದ ಕೊಕ್ಕು, ರೆಕ್ಕೆ ಮತ್ತು ಪುಕ್ಕಗಳನ್ನು ಹೊಂದಿವೆ. ಹೆಚ್ಚಿನ ಹಕ್ಕಿಗಳಲ್ಲಿ ಗಂಡು ವೈವಿಧ್ಯಮಯ ವರ್ಣಗಳಿಂದ ಕೂಡಿದ್ದು ವಿಶೇಷವಾಗಿ ತನ್ನ ಸಂಗಾತಿಯನ್ನು ಆಕರ್ಷಿಸಲು ಸಹಕಾರಿಯಾಗಿವೆ. ಕೆಲವು ಪಕ್ಷಿ ಪ್ರಭೇದಗಳಲ್ಲಿ ಗಂಡು-ಹೆಣ್ಣುಗಳ ವರ್ಣಸಂಯೋಜನೆಯಲ್ಲಿ ವ್ಯತ್ಯಾಸ ಕಾಣಿಸದು. ಬಿಳಿ, ಕಪ್ಪು, ಕೆಂಪು, ಹಳದಿ, ನೀಲಿ, ಹಸಿರು ಮುಂತಾದ ಬಣ್ಣಗಳ ವಿಶಿಷ್ಟ ಮಿಶ್ರಣ ಹಕ್ಕಿಗಳಲ್ಲಿ ಕಾಣಬಹುದು. ಸಾಮಾನ್ಯವಾಗಿ ಹಕ್ಕಿಗಳ ವರ್ಣ ವಿಶೇಷವನ್ನು ಅವುಗಳ ದೇಹದಲ್ಲಿ ತಯಾರಾಗುವ ರಾಸಾಯನಿಕ ವಸ್ತುಗಳ ಮೇಲೆ ಅವಲಂಬಿತ ವಾಗಿರುತ್ತದೆ. ಆ ರೀತಿ ವರ್ಣದ್ರವ್ಯಗಳನ್ನು ಉತ್ಪಾದಿಸಲು ಅಗತ್ಯ ಗುಣಾಣುಗಳು ಮತ್ತು ಚಯಾಪಚಯ ಕ್ರಿಯೆಗಳು ಹಕ್ಕಿಗಳಲ್ಲಿರುತ್ತವೆ. ಇದು ಅವುಗಳಿಗೆ ವಂಶಪಾರ್ಯಪರ್ಯವಾಗಿ ಬರುವ ಗುಣ.

ವರ್ಣಸಂಯೋಜನೆಯಲ್ಲಿ ವಿಶಿಷ್ಟ ಸ್ಥಾನ ಪಡೆದ ರಾಜಹಂಸ ಗಳು ಪಕ್ಷಿಲೋಕದ ಅದ್ಭುತಗಳು. ವೈಜ್ಞಾನಿಕ ಸಂಶೋಧನೆ ಪ್ರಕಾರ ಇವುಗಳಲ್ಲಿ ವಿಶೇಷ ಜೀರ್ಣಾಂಗ ವ್ಯವಸ್ಥೆ ಇದ್ದು ತಮ್ಮ ದೇಹದ ಬಣ್ಣವನ್ನು ತಾವು ತಿನ್ನುವ ಆಹಾರದಿಂದ ಪಡೆಯುತ್ತವೆ! ಹಾಗೆಯೇ ಕೆಂಪು ಹಾಲನ್ನು ಉತ್ಪಾದನೆ ಮಾಡಿ ಮರಿಗಳಿಗೆ ಕುಡಿಸುತ್ತವೆ. ಈ ಹಕ್ಕಿಗಳನ್ನು ಆಂಗ್ಲ ಭಾಷೆಯಲ್ಲಿ ಗ್ರೇಟರ್ ಫ್ಲೆಮಿಂಗೊ ಎನ್ನುವರು.

ನಸುಗೆಂಪು ಬಣ್ಣದ ಉದ್ದಕಾಲುಗಳಿಂದಾಗಿ ಸುಮಾರು ನಾಲ್ಕು ಅಡಿಗಳಷ್ಟೆತ್ತರದ ನಿಲುವು (90ರಿಂದ 150 ಸೆಂ.ಮೀ). ಬಾಗುವ ನೀಳ ಕತ್ತಿನ ನಸುಗೆಂಪು-ಬಿಳಿಯ ಬಣ್ಣದ ಹಕ್ಕಿಗಳು. ನಸು ಗುಲಾಬಿ ಬಣ್ಣದ ದೊಡ್ಡ ಕೊಕ್ಕು ಸ್ವಲ್ಪ ಬಾಗಿ ದಂತಿದ್ದು ತುದಿ ಕಪ್ಪಾಗಿರುತ್ತದೆ. ನೋಡುವಾಗ ಬಾಹ್ಯ ರಚನೆಯಲ್ಲಿ ಗಂಡು ಹೆಣ್ಣುಗಳಲ್ಲಿ ವ್ಯತ್ಯಾಸ ಕಾಣದು. ಮಿಶ್ರಾಹಾರಿ ಯಾಗಿದ್ದು ಮಣ್ಣಿನಲ್ಲಿರುವ ಹುಳುಗಳು, ಏಡಿ, ಸೀಗಡಿ, ಮೃದ್ವಂಗಿಗಳು, ಸಂಧಿಪದಿಗಳು, ಜಲಕೀಟಗಳು, ಮತ್ತು ಕೆಲವೊಮ್ಮೆ ಸಣ್ಣ ಮೀನುಗಳನ್ನು ತಿನ್ನುತ್ತವೆ. ನೀರಿನ ಸಸ್ಯಗಳ ಬೀಜಗಳು, ಚಿಗುರು ಗಳು ಮತ್ತು ಪಾಚಿಗಳನ್ನು ಸಹಾ ತಿನ್ನುತ್ತವೆ. ನೀರನ್ನು ಸೋಸಿ ಆಹಾರವನ್ನು ತೆಗೆದುಕೊಳ್ಳಲು ಅನುಕೂಲವಾಗುವಂತಹ ಕೊಕ್ಕನ್ನು ಹೊಂದಿವೆ. ಸಮುದ್ರ ತಟ, ನದಿ ಹಿನ್ನೀರು, ಅಳಿವೆಗಳ ಅಂಚು ಮುಂತಾದ ಕಡೆ ನೆಲೆ ನಿಲ್ಲುತ್ತವೆ. ಕರ್ನಾಟಕದ ರಾಯಚೂರು, ಬಾಗಲಕೋಟೆ, ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಚಳಿಗಾಲದಲ್ಲಿ ಕಾಣಸಿಗುತ್ತವೆ.

ಸಂತಾನೋತ್ಪತ್ತಿ: ಒಂದು ಸಂತಾನಾಭಿವೃದ್ಧಿ ಅವಧಿಗೆ ಸೂಕ್ತ ಜೊತೆಗಾರ/ತಿಯನ್ನು ಆಯ್ಕೆ ಮಾಡಿಕೊಳ್ಳುತ್ತವೆ. ಅದ್ಭುತವಾದ ಪ್ರಣಯದಾಟದಲ್ಲಿ ಗರಿಗಳನ್ನು ಒಪ್ಪ ಮಾಡಿಕೊಳ್ಳುವುದು, ಜೊತೆ-ಜೊತೆಯಾಗಿ ರೆಕ್ಕೆ ಎತ್ತರಿಸುವುದು, ತಲೆ-ತಲೆ ತಾಗಿಸುವುದು ಮತ್ತು ಬದಿಯಿಂದ ಕುತ್ತಿಗೆ ಮತ್ತು ಕೊಕ್ಕನ್ನು ತಾಗಿಸುತ್ತಾ ಮುತ್ತಿಟ್ಟಂತೆ ಭಾಸವಾಗುವುದು ಪ್ರಮುಖವಾದ ಲೈಂಗಿಕ ನಡವಳಿಕೆಗಳು. ನೆಲದಿಂದ ಸ್ವಲ್ಪ ಎತ್ತರಕ್ಕೆ ಹಸಿ ಮಣ್ಣನ್ನು ಕಾಲು ಮತ್ತು ಕೊಕ್ಕಿನಿಂದ ಒತ್ತಿ-ಮೆತ್ತಿ ಬಾಣಲೆ ಆಕಾರದ ಮಾಡಿರುವ ಗೂಡಿನ ಮಧ್ಯದ ಕುಣಿಯಲ್ಲಿ ಮೊಟ್ಟೆಯನ್ನಿಡುತ್ತದೆ. ಗಂಡು ಹೆಣ್ಣು ಎರಡೂ ಸರದಿಯಲ್ಲಿ ಮೊಟ್ಟೆಗಳಿಗೆ 27 ರಿಂದ 31 ದಿನಗಳವರೆಗೆ ಕಾವು ಕೊಡುತ್ತವೆ. ಮರಿಗಳಿಗೆ 65 ರಿಂದ 90 ದಿನಗಳವರೆಗೆ ತಂದೆ-ತಾಯಿ ಇಬ್ಬರೂ ಆಹಾರ ನೀಡುತ್ತವೆ.

ವಿಶೇಷತೆ: ಮರಿಗಳು ಬಿಳಿ ಬಣ್ಣವಿದ್ದು ಅಲ್ಲಲ್ಲಿ ಕಪ್ಪು ಮಸಿ ಹಚ್ಚಿದ ಹಾಗೇ ಇರುತ್ತವೆ. ಮೂರು ವರ್ಷಗಳವರೆಗೆ ಅವುಗಳಿಗೆ ಬಣ್ಣ ಬರುವುದಿಲ್ಲ. ಆದರೆ ಯೌವ್ವನಕ್ಕೆ ಬರುತ್ತಿದ್ದಂತೆ ಆಹಾರದ ಮೂಲಕ ಮೈಗೆ ಸೇರಿಕೊಂಡ ವರ್ಣದ್ರವ್ಯಗಳು ಅಲ್ಲಲ್ಲಿ ನಸು ಕೆಂಪು ಮಿಶ್ರಿತ ಗುಲಾಬಿ ಬಣ್ಣದಿಂದ ಬಹು ಆಕರ್ಷಕವಾಗಿ ಕಾಣುತ್ತವೆ. ವಿಶೇಷವೆಂದರೆ ಇವುಗಳ ರೆಕ್ಕೆಪುಕ್ಕಗಳ ತಿಳಿಗುಲಾಬಿ ಬಣ್ಣ ಇವು ತಿನ್ನುವ ಪಾಚಿ ಮತ್ತು ಸೀಗಡಿಗಳಿಂದ ಸಂಗ್ರಹವಾದ ಬಿಟಾ-ಕೆರೋಟಿನ್ ಎಂಬ ವರ್ಣದ್ರವ್ಯ ಗಳೆಂದು ಸಂಶೋಧನೆಯಿಂದ ತಿಳಿದುಬಂದಿದೆ.

ಕಾಣಸಿಗುವ ತಾಣಗಳು

- ರಾನ್ ಆಫ್ ಕಚ್, ಗುಜರಾತ್: ಈ ಭಾಗದಲ್ಲಿ ವಿಶಾಲವಾದ ಜೌಗು ಪ್ರದೇಶ ಮತ್ತು ಸ್ವಲ್ಪವೇ ನೀರಿರುವ ವಿಶಾಲ ಜಾಗವಿದೆ. ಚಳಿಗಾಲದಲ್ಲಿ ಇಲ್ಲಿ ಸಾವಿರಾರು ರಾಜಹಂಸಗಳನ್ನು ನೋಡಬಹುದು. ಇಲ್ಲಿನ ಜೌಗು ಪ್ರದೇಶದ ನೆಲದ ಮೇಲೆ ಇವು ಗೂಡು ನಿರ್ಮಿಸಿ, ಮರಿ ಮಾಡುವುದುಂಟು.
- ಚಿಲ್ಕಾ ಸರೋವರ, ಒಡಿಶಾ: ನಮ್ಮ ದೇಶದ ಅತಿ ದೊಡ್ಡ ಸರೋವರ ಎನಿಸಿರುವ ಚಿಲ್ಕಾ ಸರೋವರದಲ್ಲಿ ಸಾವಿರಾರು ರಾಜಹಂಸಗಳನ್ನು ನೋಡಬಹುದು. ಗ್ರೇಟರ್ ಮತ್ತು ಲೆಸ್ಸರ್ ಫ್ಲಾಮಿಂಗೋ ಎಂಬ ಎರಡೂ ಪ್ರಭೇದಗಳು ಇಲ್ಲಿ ನವೆಂಬರ್ ಮತ್ತು ಫೆಬ್ರವರಿಯ ನಡುವೆ ಕಾಣಸಿಗುತ್ತವೆ.
- ಮುಂಬಯಿ ನಗರದ ಸರಹದ್ದಿನಲ್ಲಿರುವ ಜೌಗು ಪ್ರದೇಶದಲ್ಲಿ, ಚಳಿಗಾಲದಲ್ಲಿ ರಾಜಹಂಸಗಳನ್ನು ನೋಡಬಹುದು. ಮಹಾರಾಷ್ಟ್ರದ ಉಜಾನಿ ಹಿನ್ನೀರಿನಲೂ ಇವು ಕಾಣಸಿಗುತ್ತವೆ. ಚಳಿಗಾಲದಲ್ಲಿ ಕರ್ನಾಟಕದಲ್ಲೂ ರಾಜಹಂಸಗಳನ್ನು ಕಾಣಬಹುದು. ಆಂಧ್ರಪ್ರದೇಶ ಮತ್ತು ತಮಿಳುನಾಡು ಗಡಿ ಪ್ರದೇಶದಲ್ಲಿರುವ ಪುಲಿಕಟ್ ಕೆರೆಯಲ್ಲೂ ರಾಜಹಂಸಗಳನ್ನು ನೋಡಬಹುದು.

ಮರಿಗಳಿಗಾಗಿ ಕೆಂಪು ಹಾಲು

ರಾಜಹಂಸ ಪೋಷಕರು ತಯಾರು ಮಾಡಿ ಮರಿಗಳಿಗೆ ಉಣಬಡಿಸುವ ಕೆಂಪು ಹಾಲು ಒಂದು ಅತ್ಯುನ್ನತ ಪೌಷ್ಠಿಕ ಆಹಾರ. ಇದರ ತಯಾರಿಕೆಯೆ ವಿಧಾನವೊಂದು ವೈಜ್ಞಾನಿಕ ಸೋಜಿಗ. ಕುತೂಹಲಕಾರಿ ಅಂಶವೆಂದರೆ ಈ ಹಾಲು ಪೋಷಕಾಂಶ ಗಳನ್ನೊಳಗೊಂಡ ರಾಜಹಂಸಗಳ ಜೀರ್ಣಾಂಗ ವ್ಯವಸ್ಥೆಯ ಗಂಟಲಿನಲ್ಲಿರುವ ಅನ್ನನಾಳದ ಭಾಗವಾಗಿರುವ ಕ್ರಾಪ್ ಎಂಬ ಚೀಲದಲ್ಲಿ ಉತ್ಪಾದನೆಯಾಗುವ ಕಡು ಕೆಂಪು ದ್ರವ. ರಕ್ತದಂತೆ ಕಂಡರೂ ಇದರಲ್ಲಿ ಕೆಂಪು ರಕ್ತ ಕಣಗಳಿರುವುದಿಲ್ಲ. ಇದರಲ್ಲಿ ಪ್ರೋಟಿನ್, ಕೊಬ್ಬು ಮತ್ತು ಪೋಷಕಾಂಶಗಳೂ ಇವೆ. ಪೋಷಕ ರಾಜಹಂಸಗಳು ತಮ್ಮ ಮರಿಗಳಿಗೆ ಮೊದಲಿಗೆ ನೀಡುವ ಜೀವ ದ್ರವವಿದು. ಬೆಳೆಯುವ ಮರಿಗಳಿಗೆ ಅಗತ್ಯವಾದ ಪೋಷಕಾಂಶ 'ವನ್ನು ಕೊಡುವ ಅದ್ಭುತ ಆಹಾರ.

ತಂದೆ-ತಾಯಿಯಿಬ್ಬರೂ ಈ ಕೆಂಪು ಹಾಲನ್ನು ಉತ್ಪಾದಿಸುತ್ತವೆ. ಇದು ಸ್ತನಿಗಳಲ್ಲಿ ಹಾಲು ಉತ್ಪಾದನೆಗೆ ಸಮನಾದ ಕ್ರಿಯೆ. ಆದರೆ ಸ್ತನಿಗಳಲ್ಲಿ ಹೆಣ್ಣು ಮಾತ್ರ ಎದೆಹಾಲು ನೀಡಬಲ್ಲದು. ರಾಜಹಂಸಗಳು ಈ ಕೆಂಪು ಹಾಲನ್ನು ಮರಿಗಳಿಗೆ ಆರು ತಿಂಗಳ ತನಕ ನೀಡಬಲ್ಲವು. ಕಾಲ ಕ್ರಮೇಣ ಕೆಂಪು ಹಾಲಿನ ಬಣ್ಣ ಸಹ ಕಡಿಮೆಯಾಗುತ್ತಾ ಕ್ರಮೇಣ ಇದರ ಉತ್ಪಾದನೆ ಸಹ ನಿಲ್ಲುವುದು. ಆ ಸಮಯದಲ್ಲಿ ಪೋಷಕರ ದೇಹದ ಬಣ್ಣವೂ ಕಡಿಮೆ ಆಗುತ್ತದೆ ಎಂಬ ಆಶ್ಚರ್ಯಕರವಾದ ಅಂಶವನ್ನು ದಾಖಲಿಸಲಾಗಿದೆ. ಅಷ್ಟು ಹೊತ್ತಿಗೆ ಮರಿಗಳು ಸ್ವತಂತ್ರವಾಗಿ ತಮ್ಮ ಆಹಾರವನ್ನು ತಾವೇ ಹುಡುಕಿ ತಿನ್ನುವ ಹಂತಕ್ಕೆ ಬಂದಿರುತ್ತವೆ. ಮುಂದಿನ ಸಂತಾನಾಭಿವೃದ್ಧಿ ಸಮಯದಲ್ಲಿ ಪೋಷಕರಲ್ಲಿ ಕೆಂಪು ಹಾಲಿನ ಉತ್ಪಾದನೆ ಮತ್ತೆ ಪ್ರಾರಂಭವಾಗುವುದು. ಇಂತಹ ಪೋಷಕ ವಿಜ್ಞಾನ ಪಕ್ಷಿ ಲೋಕದ ಸೋಜಿಗಗಳಲ್ಲೊಂದು.

ಎಲ್ಲಾ ಪ್ರಾಣಿಗಳಲ್ಲಿ ತಿನ್ನುವ ಆಹಾರದಿಂದ ಪಡೆದ ಪೋಷಕಾಂಶ ಗಳನ್ನು ಜೀವಿಸಲು ಅಗತ್ಯವಾದ ಇಂಧನ ತಯಾರಿಸಲು ಬಳಕೆಯಾದರೆ ರಾಜಹಂಸಗಳಲ್ಲಿ ಅದರ ಜೊತೆಗೆ ಆಹಾರದಲ್ಲಿನ ವರ್ಣದ್ರವ್ಯಗಳನ್ನು ದೇಹಕ್ಕೆ ಸೇರಿಸುವ ಮತ್ತು ಮರಿಗಳಿಗೆ ಅಗತ್ಯವಾದ ಕೆಂಪು ಹಾಲಿಗೆ ಸೇರಿಸುವ ಚಯಾಪಚಯ ಕ್ರಿಯೆ ಒಂದು ವಿಸ್ಮಯವೇ ಸರಿ. ಇದರ ಬಗೆಗಿನ ಸಂಶೋಧನಾ ಮಾಹಿತಿ ಹಲವಾರು ವಿಷಯಗಳ ಅರಿವಿಗೆ ಉತ್ತೇಜನ ನೀಡುವುದು. ಜೀವ ಜಗತ್ತಿನ ರಹಸ್ಯಗಳನ್ನು ಅರ್ಥಮಾಡಿಕೊಳ್ಳಲು ವೈಜ್ಞಾನಿಕ ಸಂಶೋಧನೆ ಸಹಕಾರಿಯಾಗುವುದು. ವಿಜ್ಞಾನ ಸತ್ಯಾನೇಷ್ವಣೆಯ ಮಾರ್ಗವೂ ಹೌದು. (ಚಿತ್ರಗಳು ಲೇಖಕರದ್ದು)(ಮರಿಗೆ ಹಾಲು ಕುಡಿಸುವ ಚಿತ್ರ ಕೃಪೆ: ಬರ್ಡ್‌ಫ್ಯಾಕ್ಟ್)•

ಕನ್ನಡ ಚಿತ್ರರಂಗದಲ್ಲಿ ಪೋಷಕ ಪಾತ್ರಗಳಿಗೆ ಘನತೆ ತಂದು ಕೊಟ್ಟು, ಹಿರಿತನಕ್ಕೆ ಭಾಷ್ಯ ಬರೆದು 'ನಾಗರ ಹಾವು' ಚಿತ್ರದ ಚಾಮಯ್ಯ ಮೇಷ್ಟ್ರ ಪಾತ್ರದ ಮೂಲಕ ಕನ್ನಡಿಗರ ಮನದಲ್ಲಿ ಸದಾ ಹಸಿರಾಗಿರುವವರು ಕೆ.ಎಸ್.ಅಶ್ವಥ್. ಪೋಷಕ ನಟ ಪಾತ್ರಗಳಿಗೆ ಅವರು ಜೀವತುಂಬುವ ಪರಿ ಯಾವ ರೀತಿ ಇರುತ್ತಿತ್ತೆಂದರೆ, ಅವರ ಅಭಿನಯದ ಎದುರು ಕೆಲವು ಬಾರಿ ಮುಖ್ಯ ನಟನೇ ಸಪ್ಪೆ ಎನಿಸುತ್ತಿದ್ದರು! ಜತೆಗೆ, ಕೆ.ಎಸ್.ಅಶ್ವಥ್ ಅವರು ಪೋಷಕನಟನಾಗಿ ಅಭಿನಯಿಸಿದರು, ಎಂದರೆ, ನಾಯಕ ನಟನ ವರ್ಚಸ್ಸು ಹೆಚ್ಚುತ್ತಿತ್ತು. ಹಲವು ಚಲನಚಿತ್ರಗಳ ಯಶಸ್ಸಿಗೆ ಪೋಷಕನಟರಾಗಿ ಕೆ.ಎಸ್.ಅಶ್ವಥ್ ಅವರ ಮನೋಜ್ಞ ಅಭಿನಯದ ಕೊಡುಗೆ ಅಪಾರ.

ನಮ್ಮ ಚಾಮಯ್ಯ ಮೇಷ್ಟ್ರು

» ಎನ್.ಎಸ್.ಶ್ರೀಧರ ಮೂರ್ತಿ

ಹುಟ್ಟಿದ್ದು ಹೊಳೆನರಸೀಪುರದ ಸಮೀಪವಿರುವ ಕರಗನ ಹಳ್ಳಿ. ತಂದೆ ಪುರೋಹಿತ ಸುಬ್ರಾಯಪ್ಪ. ಹುಟ್ಟಿದ ಎರಡೇ ವರ್ಷಕ್ಕೆ ತಾಯಿಯನ್ನು ಕಳೆದು ಕೊಂಡರು. ಇವರು ಹುಟ್ಟಿದಾಗ ತಂದೆಗೆ ಆಗಲೇ ಐವತ್ತು ವರ್ಷ, ನಾಲ್ಕು ಹೆಣ್ಣು ಮಕ್ಕಳು ಬೆಳೆದು ದೊಡ್ಡವರಾಗಿದ್ದರು. ಒಂದು ಗಂಡು ಮಗು ಬೇಕು ಎನ್ನುವ ಹಂಬಲಕ್ಕೆ ಇವರು ಭುವಿಗೆ ಬಂದಿದ್ದರು. ಬೆಳೆದಿದ್ದು ಸ್ಕೂಲ್ ಟೀಚರ್ ಆಗಿದ್ದ ಸೋದರತ್ತೆ ತಿಪ್ಪಮ್ಮನ ಆಶ್ರಯದಲ್ಲಿ. ಆಗಲೇ ಸಿನಿಮಾ ಹುಚ್ಚು, 'ಹಂಟರ್ ವಾಲಿ' ನೋಡಿ ಅನುಕರಿಸಲು ಹೋಗಿ ಬೆನ್ನು ಮುರಿದು ಕೊಂಡಿದ್ದೂ ಇದೆ.

ಕ್ವಿಟ್ ಇಂಡಿಯಾ ಚಳುವಳಿ ಅವರ ವಿದ್ಯಾಭ್ಯಾಸಕ್ಕೆ ವಿರಾಮ ಹಾಕಿತು. ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯಲ್ಲಿ ಗುಮಾಸ್ತರಾಗಿ ಉದ್ಯೋಗ ಪಡೆದರು. ಸೋದರತ್ತೆಯ ಮಗಳು ಶಾರದಾ ಅವರ ಜೊತೆ ವಿವಾಹವೂ ಆಯಿತು.

ಅಭಿನಯ 'ಹವ್ಯಾಸಿ ಕಲಾವಿದರ' ತಂಡದ ಮೂಲಕ ಒಂದು ರೂಪವನ್ನು ಪಡೆಯಿತು. ಇವರ ಅಭಿನಯ ಕಂಡು ಕೆ. ಸುಬ್ರಹ್ಮಣ್ಯಂ ತಮ್ಮ 'ಸ್ತ್ರೀ ರತ್ನ' ಚಿತ್ರದಲ್ಲಿ ನಾಯಕನ ಪಾತ್ರ ಕೊಟ್ಟರು. ಶಿವಶರಣೆ ನಂಬಿಯಕ್ಕ, ಕೋಕಿಲ ವಾಣಿ ಎರಡು ಚಿತ್ರಗಳು ಒಟ್ಟೊಟ್ಟಿಗೇ ಸಿಕ್ಕವು. ಬಣ್ಣದ ಬದುಕು ಸೆಳೆಯಿತು. ಅವಕಾಶ ಹುಡುಕಿ ಮದ್ರಾಸಿಗೆ ಹೊರಟೇ ಬಿಟ್ಟರು. ಹೆಂಡತಿಗೆ ಹೇಳದೆ ಸರ್ಕಾರಿ ಉದ್ಯೋಗವನ್ನೂ ಬಿಟ್ಟರು. ಅಡ್ವಾನ್ಸ್ ಕೊಟ್ಟು ಇರಲು ಒಂದು ಕೋಣೆಯನ್ನು ಪಡೆದರು. ಬೆಳಗ್ಗೆ ತಿಂಡಿಗಾಗಿ ಖರೀದಿಸಿದ ಇಡ್ಲಿ ಜೊತೆ ಕೊಟ್ಟ ಸಾಂಬಾರ್ ಉಳಿಸಿ, ರಾತ್ರಿಗೆ ಅನ್ನ ಬೇಯಿಸಿಕೊಂಡು ಬೆಳಗಿನ ಸಾಂಬಾರ್ ಬಳಸಿ ಊಟ. ಕೆಲವು ಸಲ ಅದೂ ಇಲ್ಲ. ಮಧ್ಯಾಹ್ನದ ಊಟವಂತೂ ಇಲ್ಲವೇ ಇಲ್ಲ. ಅವಕಾಶಕ್ಕೆ ಮದ್ರಾಸಿನ ಬೀದಿಗಳನ್ನು ಅಲೆದು ಚಪ್ಪಲಿ ಸವೆಯಿತು. ಕಿತ್ತು ಹೋದರೆ ಇನ್ನೊಂದು ಚಪ್ಪಲಿ ಕೊಳ್ಳಲೂ ಹಣವಿಲ್ಲ.

ಹೀಗಿರುವಾಗ ಹೆಂಡತಿ ಪತ್ರ ಬರೆಯುತ್ತಲೇ ಇದ್ದರು. ಯಾವುದಕ್ಕೂ ಉತ್ತರಿಸಲು ಧೈರ್ಯವಿಲ್ಲ. ಕೊನೆಗೆ ಹುಡುಕಿ ಕೊಂಡು ಬಂದೇ ಬಿಟ್ಟರು. ಅಶ್ವತ್ಥ್ ಸ್ಥಿತಿ ಕಂಡು ಕಣ್ಣೀರು ಹಾಕಿದರು.

ಆಗಿನ ಕಾಲದಲ್ಲಿ ವರ್ಷಕ್ಕೆ ಕೇವಲ ಐದಾರು ಚಿತ್ರಗಳು ಕನ್ನಡ ನಿರ್ಮಾಣವಾಗುತ್ತಿದ್ದ ಕಾಲದಲ್ಲಿ ಚಿತ್ರರಂಗವನ್ನೇ ನಂಬಿ ಬದುಕುವುದು ಕನ್ನಡದ ನಟರಿಗೆ ಸುಲಭವಾಗಿರಲಿಲ್ಲ. ಆದರೆ ಅಶ್ವಥ್ ಅವರ ತಪಸ್ಸೇ ಅವರನ್ನು ಗೆಲ್ಲಿಸಿತು. ಆಗೀಗ ನಾಟಕಗಳನ್ನು ಮಾಡುತ್ತಾ ಬದುಕಿನಲ್ಲಿ ಗಟ್ಟಿಯಾದರು. ನಂದಾದೀಪ, ಬೆಳ್ಳಿ ಮೋಡಗಳಲ್ಲಿ ತಂದೆಯ ಪಾತ್ರ ಸಿಕ್ಕಿತು. ಕ್ರಮೇಣ ಅಂತಹ ಪಾತ್ರಗಳೇ ಖಾಯಂ ಆದವು.

ಅಶ್ವಥ್ ನಿರಾಶರಾಗಲಿಲ್ಲ. ಸಿಕ್ಕ ಅವಕಾಶಗಳಿಗೆ ಜೀವ ತುಂಬಿದರು. ನ್ಯಾಯವೇ ದೇವರು, ಉಯ್ಯಾಲೆ, ಕಸ್ತೂರಿ ನಿವಾಸ, ಸರ್ವಮಂಗಳ, ನಾಗರ ಹಾವು ಹೀಗೆ ವೈವಿಧ್ಯಮಯ ಪಾತ್ರಗಳ ಮೂಲಕ ಬೆಳೆಯುತ್ತಾ ಹೋದರು.ಮಧ್ಯಮ ವರ್ಗದ ರೀತಿ ನೀತಿಗಳನ್ನು ಅವರು ಹತ್ತಿರದಿಂದ ಬಲ್ಲವರಾಗಿದ್ದರು. ಡಾ.ರಾಜ್ ಕುಮಾರ್ ಅವರ ಜೊತೆಗೆ ವಿಶೇಷ ಸಂಬಂಧ , ಅವರ ಜೋಡಿಯ ಪಾತ್ರಗಳದ್ದೇ ಒಂದು ಪರಂಪರೆ. ಅಶ್ವತ್ಥ್ ಅವರಿಗೆ ಡಾ.ರಾಜ್ ಕುಮಾರ್ ಪ್ರಶಸ್ತಿ ಬಂದಾಗ 'ಅಶ್ವಥ್ ಎಂದರೆ ವಿಶ್ವಕೋಶವಿದ್ದಂತೆ.. ಅವರ ಹೆಸರಿನ ಪ್ರಶಸ್ತಿ ನನಗೆ ಬರಬೇಕಿತ್ತು, ನನ್ನ ಹೆಸರಿನ ಪ್ರಶಸ್ತಿ ಅವರಿಗೆ ಬಂದಿರುವುದು ನಿಜಕ್ಕೂ ವಿಪರ್ಯಾಸ' ಎಂದು ಸ್ವತ: ರಾಜ್ ಕುಮಾರ್ ಅವರೇ ಹೃದಯ ತುಂಬಿ ಹೇಳಿದ್ದರು.

ಇವರು ಉಳ್ಳಾಗಡ್ಡಿ!

ಕಾದಂಬರಿಕಾರ ಚದುರಂಗ ಅವರ 'ಸರ್ವಮಂಗಳ' ಚಿತ್ರದಲ್ಲಿ ಅಶ್ವಥ್ ಅವರದು ಸುಬ್ರಾಯಿ ಎನ್ನುವ ವಿಚಿತ್ರ ಪಾತ್ರ. ಎಂ.ಆರ್.ವಿಠಲ್ ಈ ಪಾತ್ರವನ್ನು ಅಶ್ವಥ್ ಮಾಡಲಾರರು ಎಂದಿದ್ದರು. ಶೂಟಿಂಗ್ ದಿವಸ ಬಂದು ನೋಡಿದರೆ ಕುರುಚಲು ಕ್ರಾಫ್, ಜಗ್ಗಿ ಬಿಗಿದಿರುವ ಜುಟ್ಟು, ಒರಟು ಹುಬ್ಬು, ಪೊರಕೆ ಮೀಸೆ, ಕೊಳಕು ಪಂಚೆಯ ವಿಚಿತ್ರ ವ್ಯಕ್ತಿ ಬಂದರು. ಚದುರಂಗ 'ನೋಡಿ ಇವರು ಉಳ್ಳಾಗಡ್ಡಿ ಎಂದು ಉತ್ತರ ಕರ್ನಾಟಕ ರಂಗಭೂಮಿಯವರು. ಸುಬ್ರಾಯಿ ಪಾತ್ರಕ್ಕೆ ಆರಿಸಿದ್ದೇನೆ' ಎಂದರು. ವಿಠಲ್ ಬಹಳ ಸಂತೋಷದಿಂದ 'ಇದು ಸರಿಯಾದ ಆಯ್ಕೆ, ಅಶ್ವಥ್ ಕೈಯಿಂದ ಈ ಪಾತ್ರ ಖಂಡಿತಾ ಸಾಧ್ಯವಿರಲಿಲ್ಲ' ಎಂದರು. ಆದರೆ, ಮುಂದೆ ಅವರೇ ಅಶ್ವಥ್ ಎಂದು ತಿಳಿದಾಗ ವಿಠಲ್ ನಿಜಕ್ಕೂ ಬೆರಗಾಗಿ ಹೋಗಿದ್ದರು. 'ಶುಭಮಂಗಳ' ಚಿತ್ರದಲ್ಲಿ ಪುಟ್ಟಣ್ಣ, ಅಶ್ವಥ್ ಅವರಿಗೆ 'ನಿಮಗೇ ಆಯ್ಕೆ ಕೊಡ್ತೀನಿ ನನಗೆ ರಾಜ ಹಾಸ್ಯ ಬೇಕು' ಎಂದರು. ಅಶ್ವಥ್ ಕ್ಷಣಕಾಲದಲ್ಲಿ ದೃಶ್ಯವನ್ನು ಸಂಯೋಜಿಸಿ ವೈದ್ಯನೇ ರೋಗಿಯಾಗುವ ಅಭಿನಯ ತೋರಿಸಿ ಎಲ್ಲರನ್ನೂ ಬೆರಗಾಗಿಸಿದ್ದರು. 'ಪರಾಜಿತ' ಚಿತ್ರದಲ್ಲಿ ಸಿದ್ದಲಿಂಗಯ್ಯನವರು ಖಳ ಪಾತ್ರ ಎಂದಾಗ ಕೊಂಚ ಹಿಂಜರೆದರೂ ಆ ಪಾತ್ರಕ್ಕೇ ಹೊಸ ಆಯಾಮವನ್ನು ನೀಡಿದ್ದರು.

ನೋವಿನ ದಿನಗಳು

ಸಜ್ಜನಿಕೆಯ ಹಿನ್ನೆಲೆಯಿಂದ ಬಂದ ಅಶ್ವಥ್ ಅವರಿಗೆ ಚಿತ್ರರಂಗ ಪಡೆದು ಕೊಂಡ ತಿರುವು ನೋವನ್ನು ಕೊಟ್ಟಿತು. ಯಾವುದರಲ್ಲಿಯೂ ಬದ್ಧತೆ ಇಲ್ಲದೆ, ಹಿರಿತನಕ್ಕೆ ಗೌರವವಿಲ್ಲದೆ, ಹಿರಿಯ ಕಲಾವಿದರನ್ನು ನಡೆಸಿಕೊಳ್ಳುವುದು ಖೇದಕರ ಎನ್ನಿಸಿತು. ಇದನ್ನು ಕಂಡು ಒಂದು ಗಟ್ಟಿ ನಿರ್ಧಾರಕ್ಕೆ ಬಂದರು. 1994ರ ಜೂನ್ 1ರಂದು ಚಿತ್ರರಂಗಕ್ಕೆ ವಿದಾಯ ಹೇಳಿದರು. ಈ ಸುದ್ದಿ ಕೇಳಿ ಇಡೀ ನಾಡು ಬೆಚ್ಚಿ ಬಿದ್ದಿತು. ಅವರನ್ನು ಸಮಾಧಾನ ಪಡಿಸಲು ಹಲವರು ಪ್ರಯತ್ನಿಸಿದರು. ಆದರೆ ಅವರ ನಿರ್ಧಾರ ದೃಢವಾಗಿತ್ತು. ತಾವು ನಂಬಿದ ಮೌಲ್ಯಗಳು ಮುಖ್ಯ, ಆತ್ಮ ಗೌರವ ದೊಡ್ಡದು ಎಂದುಕೊಂಡರು. ಮುಂದೆ ಆರು ವರ್ಷ ಬಣ್ಣದ ಬದುಕಿನಿಂದ ದೂರವೇ ಉಳಿದರು. ಆರ್. ಎನ್.ಜಯಗೋಪಾಲ್ ಅವರಿಗಾಗಿ 'ಸ್ವಾತಿಮುತ್ತು' ಧಾರಾವಾಹಿಯಲ್ಲಿ ಮತ್ತು ರಾಜ್‌ಕುಮಾರ್ ಅವರಿಗಾಗಿ 'ಶಬ್ದವೇಧಿ' ಚಿತ್ರದಲ್ಲಿ ಅಭಿನಯಿಸಿದರು. ಆದರೆ ಚಿತ್ರರಂಗದ ಅಪಸವ್ಯಗಳೊಂದಿಗೆ ಅಂತರವನ್ನು ಕಾಪಾಡಿಕೊಂಡೇ ಬಂದರು. ಒಟ್ಟು 352 ಚಿತ್ರಗಳಲ್ಲಿ ಅಭಿನಯಿಸಿದ ಅವರು ರಾಜ್‌ಕುಮಾರ್ ಅವರ ಜೊತೆಗೇ 94 ಚಿತ್ರಗಳಲ್ಲಿ ಅಭಿನಯಿಸಿದರು.

ಕ್ರಿಕೆಟ್ ಮತ್ತು ಸಂಗೀತ

ಕೆ.ಎಸ್.ಅಶ್ವಥ್ ಅವರಿಗೆ ಬಹು ಪ್ರಿಯವಾದ ಎರಡು ಸಂಗತಿಗಳು ಕ್ರಿಕೆಟ್ ಮತ್ತು ಸಂಗೀತ. ಶೂಟಿಂಗ್ ನಡುವೆ ಸಮಯ ಸಿಕ್ಕರೆ ತಮ್ಮ ಚಿಕ್ಕ ಟ್ರಾನ್ಸಿಸ್ಟರ್‌ನಲ್ಲಿ ಒಂದೋ ಕಾಮೆಂಟರಿ ಕೇಳುತ್ತಿದ್ದರು, ಇಲ್ಲವೆ ಸಂಗೀತ ಕೇಳುತ್ತಿದ್ದರು. ಜಿ.ಆರ್.ವಿಶ್ವನಾಥ್ ಬ್ಯಾಟಿಂಗ್ ಎಂದರೆ ಪಂಚಪ್ರಾಣ. ಪತ್ರಿಕೆ ತೆಗೆದರೂ ಮೊದಲು ನೋಡುತ್ತಿದ್ದದ್ದು ಕ್ರಿಕೆಟ್ ಸುದ್ದಿಗಳನ್ನೇ! ಸಂಗೀತದಲ್ಲಿ ಅವರಿಗೆ ಸ್ವರ ಜ್ಞಾನ ಕೂಡ ಇತ್ತು. ಹಿಂದೂಸ್ತಾನಿ ಮತ್ತು ಕರ್ನಾಟಕಿ ಎರಡೂ ಪದ್ದತಿಗಳನ್ನು ಬಲ್ಲವರಾಗಿದ್ದರು. ತ್ಯಾಗರಾಜರ ಪಂಚರತ್ನ ಕೀರ್ತನೆಗಳನ್ನು ಬಹಳ ಇಷ್ಟ ಪಡುತ್ತಿದ್ದರು. ಆರಭಿ, ಹಿಂದೋಳ, ಮೋಹನ, ಶುದ್ಧ ಸಾವೇರಿ ಅವರಿಗೆ ಪ್ರಿಯವಾದ ರಾಗಗಳು. 'ಸನಾದಿ ಅಪ್ಪಣ್ಣ' ಚಿತ್ರ ಬಂದ ನಂತರ ರಾಜ್ ಕುಮಾರ್ ಹಾಕಿಕೊಂಡ ಮಾದರಿಯ 5-6 ಜುಬ್ಬಗಳನ್ನು ಹೊಲಿಸಿ ಕೊಂಡಿದ್ದರು. ಊಟದಲ್ಲಿ ಕೂಡ ಶುಚಿ ಮತ್ತು ರುಚಿ ಎರಡೂ ಇರಬೇಕು. ಬಿಸಿಬೇಳೆ ಬಾತ್, ಚಿತ್ರಾನ್ನ, ಕೊಸಂಬರಿ, ಸಜ್ಜಿಗೆ ಅವರಿಗೆ ಪ್ರಿಯವಾದ ತಿನಿಸುಗಳು. ಬೆಳಗಿನ ಜಾವ ನಾಲ್ಕೂವರೆಯೊಳಗೆ ಕಾಫಿ ಆಗ ಬೇಕು. ಆಗುಂಬೆಯಲ್ಲಿ ಚಿತ್ರೀಕರಣದ ಸಮಯದಲ್ಲಿ, ಅಲ್ಲಿ ಹೋಟಲ್ ಇಲ್ಲದೆ ಎಲ್ಲಾ ಕಲಾವಿದರಿಗೂ ವಾಸ್ತವ್ಯ ಕಷ್ಟವಾಗಿತ್ತು. ಅಶ್ವಥ್ ಅವರನ್ನು ಅಭಿಮಾನಿಯೊಬ್ಬರು ತಮ್ಮ ಮನೆಯಲ್ಲಿ ಉಳಿಯುವಂತೆ ಆಹ್ವಾನಿಸಿದರು. ಬೆಳಗಿನ ಕಾಫಿ ವಿಷಯ ಹೇಳಿದಾಗ ಅವರು ವ್ಯವಸ್ಥೆ ಮಾಡುವ ಆಶ್ವಾಸನೆ ಕೊಟ್ಟರು. ಮರುದಿನ ಅಭಿಮಾನಿಗಳು ಬೆಳಗಿನ ಜಾವ ನಾಲ್ಕು ಗಂಟೆಗೆ ಅಲಾರಾಂ ಇಟ್ಟು ಕಾಫಿ ಮಾಡಲು ಅಡುಗೆ ಮನೆಗೆ ಬಂದರೆ ಕಂಡಿದ್ದೇನು. ಅಶ್ವತ್ಥ್ ಆಗಲೇ ಎದ್ದು ಕಾಫಿ ಮಾಡಿ ಅಭಿಮಾನಿಗೂ ಒಂದು ಲೋಟ ಕಾಫಿ ಸಿದ್ಧಮಾಡಿಟ್ಟಿದ್ದರು!

ಗೌರವಗಳು

ನಮ್ಮ ಮಕ್ಕಳು (1968-69), ನಾಗರಹಾವು (1972-73) ಮುತ್ತಿನ ಹಾರ (1990-91) ಚಿತ್ರಗಳಿಗೆ ಶ್ರೇಷ್ಟ ಪೋಷಕ ನಟ ಗೌರವ ಪಡೆದ ಅವರಿಗೆ 1981ನೆಯ ಸಾಲಿನಲ್ಲಿ ರಾಜ್ಯೋತ್ಸವ ಗೌರವ ಲಭಿಸಿತು; ಮತ್ತು 1993-94ನೆಯ ಸಾಲಿಗೆ ಜೀವಮಾನ ದ ಸಾಧನೆಗಾಗಿ ಡಾ.ರಾಜ್ ಕುಮಾರ್ ಪ್ರಶಸ್ತಿಗೂ ಭಾಜನರಾದರು. ಇದಲ್ಲಕ್ಕಿಂತ ಮುಖ್ಯವಾಗಿ ಅವರು ಕನ್ನಡಿಗರ ಮನದಲ್ಲಿ ನೆಲೆ ನಿಂತಿರುವ ರೀತಿ ದೊಡ್ಡದು. 2010ರ ಜನವರಿ 18ರಂದು ನಮ್ಮನ್ನು ಅಗಲಿದದರು. ಕನ್ನಡ ಚಿತ್ರರಂಗದ ಈ ಮೇರು ಸಾಧಕನನ್ನು, ಅವರ ಜನ್ಮ ಶತಮಾನೋತ್ಸವದ ಈ ಸಂದರ್ಭದಲ್ಲಿ ಕನ್ನಡಿಗರು ವಿಶೇಷವಾಗಿ ಸ್ಮರಿಸಿಕೊಳ್ಳಬೇಕಾಗಿದೆ.•

ಪುಸ್ತಕ ವಿಮಾನ

ಸಂಕೀರ್ಣ ಕಾಲಘಟ್ಟದ ಚಿತ್ರಣ

» ಗೀತಾ ಕುಂದಾಪುರ

ಅಂತರಂಗದ ಸ್ವಗತ' ಇದು ಲೇಖಕಿ ಪಾರ್ವತಿ ಐತಾಳ್ ಅವರ ಆತ್ಮಕಥನ. 50-70ರ ದಶಕದ ಗ್ರಾಮೀಣ ಪ್ರದೇಶದ ಮಹಿಳೆಯರ ಧ್ವನಿಯನ್ನು ಈ ಕೃತಿ ಪ್ರತಿಧ್ವನಿಸುತ್ತದೆ. ಪಾರ್ವತಿ ಐತಾಳರು ಬರಹಗಾರ್ತಿ, ಅನುವಾದಕಿ, ವಿಮರ್ಶಕಿ. ಇವರು ಅನುವಾದಿಸಿದ ಮಲಯಾಳಂ ಕತೆಗಳು ತುಂಬಾ ಪ್ರಸಿದ್ಧಿ ಪಡೆದಿವೆ. ಕಷ್ಟಗಳ ನಡುವೆಯೂ ಆತ್ಮಬಲದಿಂದ ಎದ್ದು ಬಂದ ತನ್ನ ಆತ್ಮಕಥನ ತನ್ನಂತೆಯೇ ಅಡೆತಡೆಗಳನ್ನು ಎದುರಿಸುವವರಿಗೆ ಪ್ರೇರಣೆ ಸಿಗಬಹುದು ಎನ್ನುವ ಉದ್ದೇಶದಿಂದ ಬರೆದಿದ್ದೇನೆ ಎನ್ನುತ್ತಾರೆ.

ಕೃತಿಯು ಸ್ವಗತದಂತೆಯೇ ಸರಳ, ನೇರ, ಪಾರದರ್ಶಕ. ಪಾರ್ವತಿಯವರು ಬಾಲ್ಯ, ಯೌವನ, ಮಧ್ಯ ವಯಸ್ಸು, ಇಳಿವಯಸ್ಸಿನತ್ತ ಹೆಜ್ಜೆ ಹೀಗೆ ಎಲ್ಲಾ ಹಂತದಲ್ಲೂ ಆ ವಯಸ್ಸಿಗನುಣವಾಗಿ ಬಂದ ಭಾವನೆಗಳನ್ನು ಓದುಗರ ಮುಂದೆ ಫಿಲ್ಟರ್ ಇಲ್ಲದೆ ತೆರೆದಿಟ್ಟಿದ್ದಾರೆ. ಆ ಕಾಲದ ಗ್ರಾಮೀಣ ಪ್ರದೇಶದ ಚಿತ್ರಣ, ಕುಟುಂಬ ವ್ಯವಸ್ಥೆ, ಲಿಂಗ ತಾರತಮ್ಯ, ಮದುವೆ ಎಂಬ ವ್ಯವಸ್ಥೆಯಲ್ಲಿನ ಕೊರತೆ, ಉದ್ಯೋಗದಲ್ಲೂ ಹೊಟ್ಟೆಕಿಚ್ಚು, ಜಾತಿ, ಪಂಥಗಳ ಆಧಾರದ ಮೇಲೆ ನಡೆಯುವ ತಾರತಮ್ಯದ ಮೇಲೆ ಬೆಳಕು ಚೆಲ್ಲುತ್ತದೆ. ಇಂಗ್ಲೀಷ್ ಮೀಡಿಯಂ ಶಾಲೆ, ನಗರೀಕರಣದಲ್ಲಿ ಕೊಚ್ಚಿ ಹೋದವರಿಗೆ ಅಂದಿನ ವ್ಯವಸ್ಥೆಗೆ ಕನ್ನಡಿ ಹಿಡಿದು ತೋರಿಸುತ್ತದೆ. ಓದಿದ ಕೆಲವರಿಗಿದು ತಮ್ಮದೇ ಹಾಡು, ರಾಗ ಎನಿಸಿಬಹುದು.

ಅಂತರಂಗದ ಸ್ವಗತ
ಆತ್ಮ ಕಥೆ
ಲೇ: ಡಾ. ಪಾರ್ವತಿ ಜಿ ಐತಾಳ್
ಪ್ರ: ಅಂಕಿತ ಪುಸ್ತಕ ಬೆಂಗಳೂರು

'ಅಂತರಂಗದ ಸ್ವಗತ'ದ ಪುಟದಿಂದ ಪುಟಕ್ಕೆ ಜಾರುತ್ತಿದ್ದಂತೆ ನಾವೇ ಪಾರ್ವತಿ ಐತಾಳರ ಕುಟುಂಬದವರಲ್ಲೊಬ್ಬರಾಗಿ ಬಿಡುತ್ತೇವೆ, ಲೇಖಕಿಯೊಡನೆ ನಾವೂ ನಗುತ್ತೇವೆ, ಅವರ ನೋವು ನಮ್ಮದಾಗುತ್ತದೆ, ಅವರ ಸಂಕಟಕ್ಕೆ ನಾವೂ ಕಣ್ಣೀರು

ನಮ್ಮ ಸಮಾಜದ ಒಂದು ಪ್ರಮುಖ ಮತ್ತು ಸಂಕೀರ್ಣ ಕಾಲಘಟ್ಟದೊಂದಿಗೆ ಬೆಸೆದುಕೊಂಡ ವಸ್ತುನಿಷ್ಠ ಆತ್ಮವಲೋಕನ ಅಂತರಂಗದ ಸ್ವಗತ.

ಸುರಿಸುತ್ತೇವೆ. ಇಡೀ ಕೃತಿಯಲ್ಲಿ ನನ್ನನ್ನು ಅತಿ ಹೆಚ್ಚು ಕಾಡಿದ್ದು ಪಾರ್ವತಿಯವರ ವಿವಾಹ ಘಟ್ಟ. ಅಂದಿನ ಸಮಾಜದಲ್ಲಿ, ಮದುವೆ ಬಹು ಸಂಕೀರ್ಣ ವ್ಯವಸ್ಥೆ. ಅಂದು, ಗಂಡಿಗೆ, ಗಂಡಿನ ಮನೆಯವರಿಗೆ ಅತಿ ಪ್ರಾಮುಖ್ಯತೆ; ಹೆಣ್ಣಿನ ರೂಪಕ್ಕೇ ಪ್ರಾಮುಖ್ಯತೆ; ಅದರ ಮುಂದೆ ಗುಣ, ವಿದ್ಯೆ, ಉದ್ಯೋಗ ಗೌಣ. ಇಂತಹ ಸಂದರ್ಭದಲ್ಲಿ ಸಾಮಾನ್ಯ ರೂಪದ ಹೆಣ್ಣು ಅನುಭವಿಸುವ ಸಂದಿಗ್ಧ, ನೋವು, ನಿಂದನೆ, ಪರಿಸ್ಥಿತಿಯೊಂದಿಗೆ ಮಾಡಬೇಕಾದ ಹೊಂದಾಣಿಕೆ ಎಲ್ಲವೂ ಮನ ಕಲಕುತ್ತದೆ.

ಆತ್ಮಕಥನದ ಆರಂಭ ಕೇರಳದ ಧರ್ಮದಡ್ಕದ 'ಬಾಳಿಕೆ' ಮನೆಯಲ್ಲಿ ಪಾರ್ವತಿಯವರ ಹುಟ್ಟಿನೊಂದಿಗೆ ಆರಂಭವಾಗುತ್ತದೆ. ಆ ಕಾಲದಲ್ಲಿ ಅಪರೂಪವಾಗಿದ್ದ ನೈಲಾನ್, ನೈಲೆಕ್ಸ್ ಬಗೆಗಿನ ಅವರ ಪ್ರೀತಿ, ಅದರ ಚಿಕ್ಕ ತುಂಡನ್ನೂ ಜೋಪಾನವಾಗಿ ಇಡುವ ಪರಿ ನಗು ಉಕ್ಕಿಸುತ್ತದೆ. ಹಾಗೆಯೇ ಅವರು ಕಾಡು, ಗುಡ್ಡದ ದಾರಿಯಲ್ಲಿ ಸಾಗಿದಂತೆ ಹುರಿದ ಹುಣಸೆ ಬೀಜ, ಸಾಂತಣಿ ಹಣ್ಣು, ಚೆಪುಳಕ್ಕ ಹಣ್ಣು, ಗೇರು ಹಣ್ಣು, ಕುಟ್ಟಾಲ ಹಣ್ಣು, ಮುಳ್ಳ ಹಣ್ಣು, ಕಿಸ್ಕಾರ ಹಣ್ಣು, ಗೋಳಿ ಹಣ್ಣು, ನೆಲ್ಲಿಕಾಯಿ, ಮಾವಿನ ಮಿಡಿಯನ್ನು ತಾವು ತಿಂದದ್ದಲ್ಲದೆ ನಮಗೂ ಅದರ ರುಚಿ ತೋರಿಸುತ್ತಿದ್ದಾರೆ ಎನಿಸದಿರದು. ಕೇರಳ, ಕರ್ನಾಟಕದ ಗಡಿ ಪ್ರದೇಶಗಳಾದ ಧರ್ಮತ್ತಡ್ಕ, ವಿಟ್ಲ, ಕಾಸರಗೋಡಿನಲ್ಲಿನ ಅವರ ಬಾಲ್ಯ, ವಿದ್ಯಾಭ್ಯಾಸದಿಂದಾಗಿ ಎರಡು ರಾಜ್ಯಗಳ ಭಾಷೆ, ಸಂಸ್ಕೃತಿಯ ಪರಿಚಯವಾಗುತ್ತದೆ.

ಪಾರ್ವತಿಯವರು ವಯೋಸಹಜವಾಗಿ ಮನಸ್ಸಿನಲ್ಲೆದ್ದ ಭಾವನೆಗಳನ್ನು ಪ್ರಸ್ತುತ ಪಡಿಸಲು ಹಿಂದೇಟು ಹಾಕಿಲ್ಲ. ಇದಕ್ಕೆ ಉದಾಹರಣೆಯಾಗಿ ಹೇಳಬೇಕೆಂದರೆ ಕಾಲೇಜಿನಲ್ಲಿ ಮುಂದಿನ ಬೇಂಚಿನ ಪ್ರಸಾದನ ಮೇಲೆ ಪಕ್ಕನೆ ಹುಟ್ಟಿದ ಆಕರ್ಷಣೆ. 'ತಾನು ಪ್ರೀತಿಸದಿರುವವನೊಡನೆ ಒಂದು ಹೆಣ್ಣು ಸೆಕ್ಸನ್ನು ಇಷ್ಟಪಡುತ್ತಾಳೆ ಎನ್ನುವುದು ನಾನ್ಸೆನ್ಸ್' ಕಾಲೇಜಿನಲ್ಲಿ ಹುಡುಗಿಯರು ಹೇಳಿದ ಈ ಮಾತನ್ನು ಅನುಮೋದಿಸಿ ಸೆಕ್ಸ್ ಬಗ್ಗೆ ಇದೇ ತಮ್ಮ ಅಭಿಪ್ರಾಯ ಎನ್ನುತ್ತಾರೆ. ತನ್ನ ರೂಂಮೇಟ್ ಹಾಗೂ ಅಂತರಂಗದ ಗೆಳತಿ ಗಿರಿಜಾಳ ಭಗ್ನಪ್ರೇಮವನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾರೆ. ಝುರಾಕ್ಸ್ ಇಲ್ಲದ ಕಾಲದಲ್ಲಿ ನನ್ನ ಜಾತಕದ ಅದೆಷ್ಟು ಪ್ರತಿಗಳನ್ನು ಬರೆದಿದ್ದೇನೋ, ಅದೆಷ್ಟು ಹಣವನ್ನು ಫೋಟೋ ಪ್ರತಿಗಳಿಗಾಗಿ ಖರ್ಚು ಮಾಡಿದ್ದೇನೋಲೆಕ್ಕವಿಲ್ಲ ಎನ್ನುವ ವಾಕ್ಯ ಅವರ ವಿವಾಹದ ಘಟ್ಟವನ್ನು ವಿವರಿಸುತ್ತದೆ. ಕಡೆಗೂ ಕತೆ ಸುಖಾಂತ್ಯವಾಯಿತು ಎನಿಸಿದ್ದು ಗಂಗಧಾರ ಐತಾಳರನ್ನು ಮದುವೆಯಾಗಿ ಅವರ ದಾಂಪತ್ಯದ ಸಿಹಿ ನಮಗೆ ಬಡಿಸಿದಾಗಲೇ.

ಮುಂದಿನದು ಕುಂದಾಪುರದಲ್ಲಿ ಉದ್ಯೋಗಸ್ಥರಾಗಿದ್ದ ಕಾಲೇಜು ದಿನಗಳು. ಕುಟುಂಬ ಜೀವನ, ಉದ್ಯೋಗ, ಸಾಹಿತ್ಯ, ಹಾಡು, ನಾಟಕ ಎಲ್ಲದರಲ್ಲೂ ಕಷ್ಟಗಳು ಹಣಕಿದರೂ ಸುಖವಿತ್ತು, ಗೆಲವಿತ್ತು. ಎಲ್ಲವೂ ಕೈಗೆ ಬಂತು, ಕೀರ್ತಿಯ ಗರಿ ಒಂದೊಂದಾಗಿ ಮುಡಿಗೇರಿತು ಎನ್ನುವಾಗ ಸಹೋ ದ್ಯೋಗಿಗಳ ಹೊಟ್ಟೆಕಿಚ್ಚಿಗೆ ಬಲಿಯಾದ ಪರಿಸ್ಥಿತಿ. ತನ್ನದಲ್ಲದ ತಪ್ಪಿಗೆ ಬಂದ ಅರೆಸ್ಟ್ ವಾರಂಟ್‌ನ್ನು ತಪ್ಪಿಸಿಕೊಳ್ಳುವ ಗಡಿಬಿಡಿಯಲ್ಲಿ ಕಾಲು ಫ್ರೇಕ್ಚರ್ ಆಗಿ ಅನುಭವಿಸಿದ ಯಮಯಾತನೆ, ಡಯಾಬಿಟಿಸಿನಿಂದಾಗಿ ಸಿಹಿ ದೂರವಿರಿಸಬೇಕಾದ ಪರಿಸ್ಥಿತಿ, ಸಿಗಬೇಕಾದದ್ದು ಸಿಗದ ನೋವು ಎಲ್ಲವೂ ಅವರ ಜೀವನದ ಭಾಗವಾಗಿತ್ತು.

ಪುರುಷ ಪ್ರಧಾನವಾದ ಸಮಾಜದಲ್ಲಿ ಸಾಕಷ್ಟು ನೋವುಂಡಿದ್ದರೂ ತಮ್ಮ ಏಳಿಗೆಯಲ್ಲಿ ಗಂಡನ ಸಹಾಯವನ್ನು ನೆನೆಸುತ್ತಾರೆ. ನಿವೃತ್ತ ಜೀವನದಲ್ಲಿನ ದಂಪತಿಗಳ ದುಬೈ ಯಾತ್ರೆ ಖುಷಿ ಕೊಡುತ್ತದೆ. ಸುಖದೊಂದಿಗೆ ನೋವೂ ತಗಲಿಸಿಕೊಂಡೇ ಬರುತ್ತದೆ ಎಂಬಂತೆ ಗಂಡನ ಅನಾರೋಗ್ಯ, ಗಂಡನ ಅಗಲುವಿಕೆಯ ನೋವು ಅವರನ್ನು ತೀವ್ರವಾಗಿ ಕಾಡುತ್ತದೆ. ನಮ್ಮ ಸಮಾಜದ ಒಂದು ಪ್ರಮುಖ ಮತ್ತು ಸಂಕೀರ್ಣ ಕಾಲಘಟ್ಟದೊಂದಿಗೆ ಬೆಸೆದುಕೊಂಡ ವಸ್ತುನಿಷ್ಠ ಆತ್ಮವಲೋಕನ 'ಅಂತರಂಗದ ಸ್ವಗತ'.

ವಿಶ್ವವಾಣಿ ಅಂಕಿತ ಟಾಪ್ ಟೆನ್

1



ಮಿತ್ರಾರ್ಜಿತ
(ಪ್ರೊ.ಅ.ರಾ. ಮಿತ್ರರ ಅಭಿನಂದನಾಗ್ರಂಥ)
ಸಂ : ಎನ್. ರಾಮನಾಥ್,ಸೌಮ್ಯ ಮಿತ್ರ
ಪ್ರ: ತೇಜು ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ : ರೂ 450/-

2



ಯಾವುದು ಚರಿತ್ರೆ?
(ಆರ್ಯರಿಂದ ಔರಂಗಜೇಬನವರೆಗೆ)
ಲೇ: ಎಂ.ವಿ.ಆರ್.ಶಾಸ್ತ್ರಿ
ಅನು : ಬಾಬು ಕೃಷ್ಣಮೂರ್ತಿ
ಬೆಲೆ : ರೂ 395/-

3

ಅಂತರಂಗದ ಸ್ವಗತ
(ಆತ್ಮಕಥನ)
ಲೇ: ಡಾ। ಪಾರ್ವತಿ ಜಿ. ಐತಾಳ್
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 195/-

4



ಕುರುಕ್ಷೇತ್ರ ಯುದ್ಧದ ಕ್ಷಣ ಕ್ಷಣದ ಮಾಹಿತಿ)
ಲೇ: ಜಗದೀಶಶರ್ಮಾ ಸಂಪ
ಪ್ರ: ಸಾವಣ್ಣ ಎಂಟರ್ ಪ್ರೈಸಸ್, ಬೆಂಗಳೂರು
ಬೆಲೆ : ರೂ 300/-

5



ಅಂಪೈರ್ ಮೇಡಂ
(ಪುರಾತನ ಕಾಲದ ಹೆಂಗಸರನ್ನು ಕುರಿತ ಕಾದಂಬರಿ)
ಲೇ: ಕೆ. ಸತ್ಯನಾರಾಯಣ
ಪ್ರ: ಪುಸ್ತಕ ಮನೆ, ಕಾರ್ಕಳ
ಬೆಲೆ : ರೂ 220/-

6

ಜೈ ಭೀಮ್
(ಡಾ। ಬಿ.ಆರ್.ಅಂಬೇಡ್ಕರ್ ಜೀವನ ಚರಿತ್ರೆ)
ಲೇ: ಡಾ। ಎಂ.ವೆಂಕಟಸ್ವಾಮಿ
ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು
ಬೆಲೆ : ರೂ 350/-

7

ಮಿಥ್ಯಸುಖ
(ಕಾದಂಬರಿ)
ಲೇ: ಕಾವ್ಯಾ ಕಡಮೆ
ಪ್ರ: ಜೀರುಂಡೆ ಪ್ರಕಾಶನ, ಬೆಂಗಳೂರು
ಬೆಲೆ : ರೂ 365/-

8



ನನ್ನ ಕೃಷ್ಣ
(ಲೋಕೋತ್ತರ ನಾಯಕನ ಜೀವನಕಥನ)
ಲೇ: ಎಂ. ಶ್ರೀನಿವಾಸನ್
ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು
ಬೆಲೆ : ರೂ 325/-

9



ಧರ್ಮ ಮತ್ತು ಸಮಲೈಂಗಿಕತೆ
(ಸಮಲೈಂಗಿಕತೆ ಕುರಿತ ವಿವಿಧ ಧರ್ಮಗಳ ದೃಷ್ಟಿಕೋನಗಳ ವಿವರಣೆ)
ಲೇ: ದೇವದತ್ತ ಪಟ್ಟನಾಯಕ
ಅನು : ಪ್ರೊ.ಕಾಶೀನಾಥ ಅಂಬಲಗೆ
ಪ್ರ: ಬಹುರೂಪಿ, ಬೆಂಗಳೂರು
ಬೆಲೆ : ರೂ 170/-

10



ಬಿದಿಗೆ ಚಂದ್ರಮನ ಬಿಕ್ಕು
(ಕಥೆಗಳು)
ಲೇ: ಶುಭಶ್ರೀ ಭಟ್
ಪ್ರ: ಹರಿವು ಬುಕ್ಸ್, ಬೆಂಗಳೂರು
ಬೆಲೆ : ರೂ 170/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755 ಮೊಬೈಲ್ ನಂ: 9019190502

ಹೊಸ ಪತ್ತೇದಾರಿ ಕಾದಂಬರಿ



ನಿಭೃತ
ಲೇ: ನರೇಂದ್ರ ಎಸ್. ಗಂಗೊಳ್ಳಿ
ಪ್ರ: ಸಂಜೀವ ಪಾರ್ವತಿ ಪ್ರಕಾಶನ
ದೂ.9242127307

» ನಾಗೇಶ್ ಶೆಣೈ ಉಡುಪಿ

ಯುವ ಬರಹಗಾರ ನರೇಂದ್ರ ಎಸ್. ಗಂಗೊಳ್ಳಿ ಅವರ ಇತ್ತೀಚೆಗೆ ಬಿಡುಗಡೆಗೊಂಡ ನಿಭೃತ ಹೆಸರಿನ ಪತ್ತೇದಾರಿ ಕಾದಂಬರಿ ಕನ್ನಡ ಕಾದಂಬರಿಗಳ ಲೋಕದಲ್ಲಿ ಹೊಸ ಪ್ರಯತ್ನ. ಮೊದಲ ಪುಟದಿಂದ ಕೊನೆಯ ಪುಟದವರೆಗೂ ರಹಸ್ಯ ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಭಯ ಹುಟ್ಟಿಸುವ ನಿರೂಪಣೆಯೊಂದಿಗೆ ತೆರೆದುಕೊಳ್ಳುವ ಕೃತಿ ಕಾಲ ಕ್ರಮೇಣ ಸಸ್ಪೆನ್ಸ್ ಹಾದಿಯನ್ನು ಹಿಡಿಯುತ್ತೆ. ಮಾಚಿ ಮರ ಗುಡ್ಡದಲ್ಲಿ ದೊರೆತ ಹುಡುಗಿ ಒಬ್ಬಳ ಶವದ ಹಿಂದೆ ಇರುವ ಕೊಲೆಗಾರ ಯಾರು? ಎಂಬ ಪ್ರಶ್ನೆಗೆ ಓದುಗ ಉತ್ತರ ಕಂಡುಕೊಂಡೆ ಎನ್ನುವಾಗ ಕಥೆಯಲ್ಲಿ ಪುನಃ ತಿರುವು ಎದುರಾಗಿ ಓದುಗನ ಚಿಂತನೆಗೆ ಸವಾಲೆಸೆಯುತ್ತೆ ಕೃತಿ. ಕಾದಂಬರಿಯ ಉದ್ದಕ್ಕೂ ನೀಡಿರುವ ಇಂತಹ ತಿರುವುಗಳು ಕಾದಂಬರಿಯ ಕುತೂಹಲ ಹೆಚ್ಚಿಸುತ್ತಾ ಸಾಗುತ್ತವೆ. ಪ್ರತಿಯೊಂದು ಅಧ್ಯಾಯದ ಅಂತ್ಯದಲ್ಲಿ ಬಳಸಿರುವ ಅರ್ಥ ಪೂರ್ಣ ವಿಶಿಷ್ಟ ಸಾಲುಗಳು ಖುಷಿ ನೀಡುತ್ತದೆ. ಹಲವು ಪ್ರಶ್ನೆಗಳನ್ನು ಹೊತ್ತು ಸಾಗುವ ಕಥೆಯ ಅಂತ್ಯದಲ್ಲಿ ಜಾಣ್ಮೆ ಯಿಂದ ಎಲ್ಲದಕ್ಕೂ ಉತ್ತರ ನೀಡುವುದರ ಜೊತೆಗೆ ಒಂದೊಳ್ಳೆ ಸಂದೇಶ ವನ್ನು ಯುವ ಜನತೆಗೆ ನೀಡಿರುವುದು ಪ್ರಶಂಸನೀಯ. ಇದೊಂದು ಕಿರು ಪತ್ತೇದಾರಿ ಕಾದಂಬರಿ. ಮುಂದಿನ ದಿನಗಳಲ್ಲಿ ಇನ್ನೂ ವಿನೂತನ ಕಥಾವಸ್ತುಗಳನ್ನು ಒಳಗೊಂಡ ಕಾದಂಬರಿಗಳನ್ನು ನರೇಂದ್ರರ ಲೇಖನಿ ಯಿಂದ ನಿರೀಕ್ಷಿಸಬಹುದು.

ಕೌಟುಂಬಿಕ ಹಿನ್ನೆಲೆಯ ಕಥೆಗಳು

» ಪಾರ್ವತಿ ಜಿ.ಐತಾಳ್

ಈ ಸಂಕಲನದಲ್ಲಿರುವ ಎಲ್ಲ ಕಥೆಗಳು ಕೌಟುಂಬಿಕ ಕಥಾ ವಸ್ತುಗಳ ಮೇಲೆ ರಚಿತವಾದಂಥವು. ಎಲ್ಲವೂ ನಮ್ಮ-ನಿಮ್ಮ ಕಣ್ಮುಂದೆ ನಡೆಯುವಂಥವು. ಕುಟುಂಬದೊಳಗಿನ ಯಾವುದಾದರೂ ಒಂದು ಸಮಸ್ಯೆಯ ಎಳೆಯನ್ನು ಹಿಡಿದುಕೊಂಡು ಆರಂಭವಾಗುವ ಕಥೆಗಳು ಬರೆದು ಅನುಭವವುಳ್ಳ ಅವರ ನುರಿತ ಕೈಗಳಲ್ಲಿ ಸರಾಗವಾಗಿ ದಾರಿ ಕಂಡುಕೊಳ್ಳುತ್ತವೆ. ಸದಾ ಅಕ್ಷೇಪದ ದನಿಯೆತ್ತುತ್ತ ಗೊಣಗಾಡುವ, ಲಕ್ವಾ ಹೊಡೆದು ಹಾಸಿಗೆ ಹಿಡಿದ ಚಿಕ್ಕಮಾವನ ಚಾಕರಿ ಮಾಡಿ ಬೇಸತ್ತ ಭಾಗಮ್ಮ ಮಗಳ ಮದುವೆಯ ಸಂದರ್ಭದಲ್ಲಿ ಅನುಭವಿಸುವ ಆತಂಕ ಮತ್ತು ಆರ್ತತೆ ಎಂಥವರನ್ನೂ ನಡುಗಿಸುತ್ತದೆ. ಕಟು ವಾಸ್ತವದ ಯಥಾವತ್ ಚಿತ್ರಣ ಇಲ್ಲಿದೆ. ಕಥೆಗಾರ್ತಿ ತಮ್ಮ ಮೊದಲ ಮಾತುಗಳಲ್ಲಿ ಹೇಳಿಕೊಂಡಿರುವಂತೆ ಈ ಕಥೆಗಳು ಅವರ ಬರವಣಿಗೆಯ ಆರಂಭದ ದಿನಗಳಿಂದ ಹಿಡಿದು ತೀರಾ ಇತ್ತೀಚಿನ ವರೆಗೆ ವಿವಿಧ ಹಂತಗಳಲ್ಲಿ ಬರೆದಂಥವು. ಆದ್ದರಿಂದ ಕಥೆಗಾರ್ತಿಯ ಬೆಳವಣಿಗೆ ಯನ್ನು ಕೂಡಾ ಇಲ್ಲಿ ಗಮನಿಸಬಹುದಾಗಿದೆ. ಆರಂಭದ ಕಥೆ 'ಕೋರಿಕೆ'ಗೂ ಕೊನೆಯ ಭಾಗದಲ್ಲಿ ಬರುವ 'ಮಕ್ಕಳೆಂದರೆ ಹೀಗೇನೇ…' ಎಂಬ ಕಥೆಗೂ ಆಲೋಚನಾ ಕ್ರಮದಲ್ಲಿ ವ್ಯತ್ಯಾಸ ಕಾಣುತ್ತದೆ. ಭಾಗಮ್ಮನಲ್ಲಿ ಕಾಣುವ ಪ್ರತಿಭಟನೆಯ ದನಿಯು ದಂಪತಿಗಳ ವರ್ತನೆಯಲ್ಲಿ ಪ್ರೌಢತೆಯ ಹಂತವನ್ನು ತಲುಪಿದೆ. ನೇರ ನಿರೂಪಣೆಯ ಕಥೆಗಳ ಉದ್ದಕ್ಕೂ ಇರುವ ಎಲ್ಲಾ ವಿವರಗಳು ಫ್ಲ್ಯಾಶ್ ಬ್ಯಾಕ್ ತಂತ್ರದ ಮೂಲಕ ಒಂದು ಸಿದ್ಧ ಮಾದರಿಯಲ್ಲಿ ಸಾಗುತ್ತವೆ. ಸಣ್ಣ ಸಣ್ಣ ವಾಕ್ಯಗಳು - ಕೆಲವೊಮ್ಮೆ ಎರಡು ಮೂರು ಶಬ್ದಗಳ ವಾಕ್ಯಗಳು - ನಿರೂಪಣೆಗೆ ವೈವಿಧ್ಯ ಒದಗಿಸಿಕೊಟ್ಟಿವೆ. ಆರಂಭ - ಬೆಳವಣಿಗೆ - ಅಂತ್ಯಗಳ ಅಚ್ಚುಕಟ್ಟಾದ ರಚನಾ ಬಂಧವು ಕಥೆಗಳಿಗೆ ಒಂದು ಸಿದ್ಧ ಸೂತ್ರವನ್ನಿತ್ತಿದೆ. ಕಥಾ ರಚನಾ ಕಮ್ಮಟಗಳಲ್ಲಿ ಆರಂಭಿಕ ಬರಹಗಾರರಿಗೆ ಪರಿಚಯಿಸಬಲ್ಲ ಮಾದರಿ ಕಥೆಗಳಿವು.



ಒಳಮುಖಗಳು(ಕಥಾಸಂಕಲನ)
ಲೇ: ವೈ.ಕೆ.ಸಂಧ್ಯಾ ಶರ್ಮ
ಪ್ರ : ಶ್ರೀನಿವಾಸ ಪುಸ್ತಕ ಪ್ರಕಾಶನ
ಬೆಲೆ : ರು.200/- ಮೊ : 9448094949

"ಒಂದು ಮೂಗು ಬೊಟ್ಟನ್ನೂ ನನ್ನ ಅಪ್ಪ ನನಗೆ ಕೊಡಿಸಲಿಲ್ಲ ಎಂದು ಐವತ್ತು ವರ್ಷಗಳ ಕಾಲ ಹೇಳುತ್ತಾ ಬಂದ ನನಗೆ ಅಪ್ಪ ಕೊಟ್ಟಿದ್ದೇನು ಎಂದು ಅರ್ಥವಾಗಲು 50 ವರ್ಷಗಳ ಆಯ್ತಲ್ಲ!" ಹಿರಿಯ ವಕೀಲರು ರಚಿಸಿದ ಈ ಪುಸ್ತಕವು, ಓದುಗರಲ್ಲಿ ಹೊಸ ಕಥೆಗಳನ್ನು ಹುಟ್ಟುಹಾಕಬಲ್ಲದು.

ಅಪ್ಪಾ ಕೊಟ್ಟಿದ್ದೇನು?

» ಅಂಜಲಿ ರಾಮಣ್ಣ

ಲೇಖಕಿ ಎಸ್. ಸುಶೀಲ ಚಿಂತಾಮಣಿ ಅವರು ರಾಜ್ಯದ ಹಿರಿಯ ವಕೀಲರು. ಮೀಡಿಯೇಷನ್ ಕೇಂದ್ರದ ಮುಖ್ಯ ಸಂಧಾನಕಾರರು. ತಾವು ಕಂಡ, ನಿರ್ವಹಿಸಿದ ಪ್ರಕರಣಗಳನ್ನು 38 ಅಧ್ಯಾಯಗಳಲ್ಲಿ ಸಂಕ್ಷಿಪ್ತವಾಗಿ ಕಟ್ಟಿಕೊಟ್ಟಿದ್ದಾರೆ. ಅಧ್ಯಾಯಗಳ ಸಂಕ್ಷಿಪ್ತತೆ ನೋಡುವಾಗ ಅನಿಸಿದ್ದು ನೋವುಗಳನ್ನು ನಲಿವಿನಷ್ಟು ವಿಸ್ತರಿಸಲು ಅಕ್ಷರಗಳು ಶಕ್ಯವಲ್ಲ. ಈ ಪುಸ್ತಕದಲ್ಲಿ ಪದಗಳಿಗಿಂತ ಮೌನದ್ದೇ ಹೆಚ್ಚು ಕೆಲಸ. ಓದುಗನ ಕೊರಳುಬ್ಬಿ ಬರದಿದ್ದರೆ ಅಕ್ಷರತೆಯ ಮೇಲಾಣೆ.

ಲೇಖಕಿಯೇ ಹೇಳಿರುವಂತೆ ಇದು ಹೆಣ್ಣು ಮಕ್ಕಳ ಸುತ್ತಲಿನ ಕೆಲವು ಘಟನೆಗಳ ಸಂಕಲನ. ಈ ಘಟನೆಗಳಲ್ಲಿ ಹಲವು ನಮ್ಮ ನಿಮ್ಮ ಕಣ್ಣಿಗೆ ಬಿದ್ದ ಅಥವಾ ನಮ್ಮ ನಿಮ್ಮ ಜೀವನದ ಘಟನೆಗಳೇ ಹೌದೇನೋ ಎನ್ನಿಸಲೂಬಹುದು. ಎಲ್ಲೋ ಒಂದು ಕಡೆ ಇವುಗಳಲ್ಲಿ ಕೆಲವು ನಮ್ಮಂತಹ ಹಲವರ ಜೀವನದಲ್ಲಿ ಹಾದು ಹೋಗಿರುವ ಘಟನೆಗಳೇ ಇವು ಎನಿಸಬಹುದು

ಬುಡಕೋಚಿ ರಂಗಮ್ಮ ಎನ್ನುತ್ತಾ ಬೇರೆ ದಾರಿಯೇ ಕಾಣದೆ ನೇಣು ಬಿಗಿದುಕೊಂಡ ಶಶಿ, ಕಂಡದ್ದನ್ನು ಕಂಡ ಹಾಗೆಯೇ ಹೇಳಿ ಗೋಡೆಯ ಮೇಲಿನ ಜೀವವಾದ ಮತ್ತೊಬ್ಬಳು, ಬೆಕ್ಕು ಇಲಿಯ ಆಟ ನೋಡುತ್ತಲೇ ಅದರಲ್ಲೊಂದು ಪಾಠದ ಸೆಲೆ ಹಿಡಿದು ತನ್ನ ಬದುಕನ್ನು ನೆಮ್ಮದಿಯೆಡೆಗೆ ತೆಗೆದುಕೊಂಡು ಹೋದ ಶಶಿ, ಹಿಂಸೆ ಮಿತಿಮೀರಿದಾಗ ಕಾನೂನಿನ ಹಂಗು ತೊರೆದು ಮೌನ ಪ್ರತಿಭಟನೆಯಲ್ಲಿಯೇ ಹೆಣ್ಣುಬಾಕ ಗಂಡನನ್ನು ತೊರೆದು ತನ್ನ ಬದುಕನ್ನು ರೂಪಿಸಿಕೊಂಡ ಸೌಮ್ಯ, ವಿನಾಕಾರಣ ಇವಳನ್ನು ವಿಚ್ಛೇಧಿಸಿ ಅವನು ಬೇರೊಬ್ಬಳನ್ನು ಕಟ್ಟಿಕೊಂಡಾಗ ಸ್ವಾಭಿಮಾನಕ್ಕೆ ಹೊಸ ಭಾಷ್ಯ ಬರೆದ ಮತ್ತೊಬ್ಬಳು, ಜೀವನ ಪೂರ್ತಿ ಜೀವನಾಂಶಕ್ಕಾಗಿ ಎಡಕಾಡಿ ಮುಗಿದುಹೋದ ಗೀತಮ್ಮ, ಸತ್ತು ಬದುಕುವುದು ಹೇಗೆ ಎಂದು ತೋರಿಸಿ ಕೊಟ್ಟ ಲೇಖಕಿಯ ಸ್ನೇಹಿತೆ, ಉಸಿರೇ ಎತ್ತದೆ ಕೊನೆಯವರೆಗೂ ಕಷ್ಟಗಳ ಮಳೆಗೆ ಸಿಕ್ಕಿ ನೆನೆದು ತೊಪ್ಪೆಯಾದರೂ ನೋಟದಲ್ಲೇ ನಾದಿನಿಗೆ ತಪ್ಪಿನ ಅರಿವು ಮೂಡಿಸಲು ಪ್ರಯತ್ನ ಮಾಡಿದ ಸರೋಜಿ ಮನಸ್ಸನ್ನು ಮೃದುವಾಗಿಸುತ್ತಾರೆ.

ಅತ್ತೆಯೆದುರು ಬಗ್ಗಿ ಗಂಡನೆದುರು ತಗ್ಗಿದರೂ ಅವನ ಐಬಿನಿಂದಲೇ ತನಗೆ ಮಕ್ಕಳಾಗುತ್ತಿಲ್ಲ ಎಂದು ಮನವರಿಕೆ ಮಾಡಿಕೊಡಲು ಸೋತು ವಿಚ್ಛೇದನದ ನಂತರದ ಮದುವೆಯಲ್ಲಿ ಪಡೆದ ಇಬ್ಬರು ಮಕ್ಕಳ ಫೋಟೋ ಮತ್ತು ಚಿನ್ನದ ಕಟ್ಟಿನ ಕನ್ನಡಿಯನ್ನು ತನ್ನ ಮಾಜಿ ಅತ್ತೆ ಮತ್ತು ಗಂಡನಿಗೆ ಉಡುಗೊರೆ ಕೊಡುವ ರಮಾ, ತನ್ನನ್ನು ಒಂದು ವಸ್ತುವಿನ ಹಾಗೆ ನೋಡಿಕೊಂಡ ಗಂಡ ತನಗೆ ಜೀವವಿಲ್ಲದ ವಸ್ತುವಾಗಿ ಬೇಕಿಲ್ಲ, ಹಾರಬೇಕಾದರೆ ಮೊದಲು ಪಂಜರದಿಂದ ಹೊರ



ಅವಳ ಇವಳ ಸುತ್ತ
ಲೇ: ಎಸ್ ಸುಶೀಲ ಚಿಂತಾಮಣಿ
ಪ್ರ: ಸಪ್ನಾ ಬುಕ್ ಹೌಸ್
ಬೆಲೆ ರು.110/-

ಬರಬೇಕು ಮೈ ಒದರಬೇಕು ರೆಕ್ಕೆಗಳನ್ನು ಕುದುರಿಸಿಕೊಳ್ಳಬೇಕು ಪುಟ್ಟ ಪುಟ್ಟ ಹೆಜ್ಜೆ ಇಡಬೇಕು ಸಣ್ಣ ಸಣ್ಣ ಎತ್ತರಗಳಲ್ಲಿ ಹಾರಬೇಕು ಹಾಗೆ ಹಾರುತ್ತಾ ಹೋದಾಗ ಎಲ್ಲವೂ ಸಲೀಸಾಗುತ್ತದೆ ಎನ್ನುವ ಪ್ರೇಮಳ ಕಥೆ ಓದುವಾಗ ಏರೋಪ್ಲೇನ್‌ನಲ್ಲಿ ಹಾರಿದಷ್ಟೇ ಹಗುರ ಭಾವ.

ಗಂಡನನ್ನು ದಾನಿ ನೀಡಿದ ಹೆಂಡತಿ!

ಮೊಮ್ಮಕ್ಕಳ ಕೈ ಹಿಡಿದು ನಡೆವ ವಯಸ್ಸಿನಲ್ಲಿ ಪುರೋಹಿತ ಗಂಡ ಮತ್ತೊಬ್ಬಳನ್ನು ಇಟ್ಟುಕೊಂಡಾಗ ಅವಳ ಬಳಿಯೇ ಹೋಗಿ ಪತಿ ಭಿಕ್ಷೆ ಬೇಡುವ ಪುರೋಹಿತನ ಹೆಂಡತಿ, ಯಾವುದೂ ಬದಲಾಗದಾದಾಗ, ತೆಂಗಿನ ಕಾಯಿಯ ಮೇಲೆ ದಕ್ಷಿಣೆ ಇಟ್ಟು ಉದ್ದರಣೆ ನೀರು ಬಿಟ್ಟು ತನ್ನ ಗಂಡನನ್ನು ಇಟ್ಟುಕೊಂಡವಳಿಗೆ ಅಕ್ಷರಶಃ ದಾನವಾಗಿ ನೀಡಿ ಕಣ್ಮರೆಯಾಗುವ ಹೆಂಗಸು, ಅತ್ತೆಯ ಕಾಟ ಮುಗುಮ್ಮಗಿಯೇ ಇರುವ ಗಂಡ ಇಬ್ಬರನ್ನೂ ಸಹಿಸಿಕೊಂಡು ಹೋಗು ಎನ್ನುವ ಬುದ್ಧಿ ಮಾತು ಹೇಳುವವರಿಗೆ ಸಂಬಂಧವನ್ನು ಕಳಚಿಕೊಳ್ಳದೆಯೇ ಹೊಸ ರೀತಿಯಲ್ಲಿ ಬುದ್ಧಿ ತಿಳಿಸಿ ತನ್ನ ಅಸ್ತಿತ್ವವನ್ನು ಸಾರಿದ ತಾರಾ ಮತ್ತು ಬದುಕನ್ನು ತಮ್ಮದೇ ರೀತಿಯಲ್ಲಿ ಎದುರಿಸಿರುವ ಮತ್ತಷ್ಟು ಹೆಂಗಸರ ಜೀವನವನ್ನು ಓದುವಾಗ ಬದುಕಲೇ ಬೇಕು ಎನ್ನುವ ಮನಸ್ಸು ಮಾಡಿಬಿಟ್ಟರೆ ಆಯಿತು ಮತ್ತೆಲ್ಲಾ ಸಲೀಸು ಎನಿಸಿಬಿಡುತ್ತದೆ. ಎಲ್ಲಾ ಹೆಣ್ಣನಗಳ ಕಥನದ ನಡುವೆ ಬದುಕಿರುವ ಹೆಂಡತಿಯನ್ನು ಸತ್ತಿದ್ದಾಳೆ ಎಂದು ಹೇಳಿ ಅವಳ ಬೇಜವಾಬ್ದಾರಿತನವನ್ನು ವಕೀಲರುಗಳಿಗೆ ಮನವರಿಕೆ ಮಾಡಿಕೊಟ್ಟ ಕೆಂಪಣ್ಣ ಒಬ್ಬ ವಿಚಿತ್ರವಾದ ವಾಸ್ತವ. ಅವಳ ಇವಳ ಸುತ್ತಲೂ ಬರೆಯುತ್ತಲೇ ಲೇಖಕಿ ತಮ್ಮ ಜೀವನದ ಕೆಲವು ಘಟನೆಗಳನ್ನು ಅದರಿಂದಾದ ತಮ್ಮ ಕಲಿಕೆಯನ್ನೂ ಕಟ್ಟಿಕೊಟ್ಟಿದ್ದಾರೆ.

"ಅವರಿಂದ ಸ್ಕೇಲನ್ನು ತೆಗೆದುಕೊಂಡು ಉಪಯೋಗಿಸಿ ಮತ್ತೆ ಅದೇ ಜಾಗದಲ್ಲಿ ಇಡದೆ ಹೋದದ್ದಕ್ಕಾಗಿ ಎರಡನೇ ಡಿಗ್ರಿ ಓದುತ್ತಿದ್ದಾಗ ನನ್ನ ಸ್ನೇಹಿತರ ಮುಂದೆ ಅಪ್ಪ ಹುಡುಕಿ ತಂದ ಅದೇ ಸ್ಕೇಲಿನಿಂದ ನನ್ನನ್ನು ಥಳಿಸಿದಾಗ ನನಗಾದ ನೋವಿನ ನೆನಪಿದೆ. ನನಗೆ ಅಪ್ಪನ ಬಗ್ಗೆ ಮೆಚ್ಚುಗೆ ಇತ್ತು, ಪ್ರೀತಿ ಇರಲಿಲ್ಲ. ಪ್ರೀತಿ ಬರಲು ಸಾಧ್ಯವೇ ಇಲ್ಲ ಎನ್ನುವ ಗಟ್ಟಿ ತೀರ್ಮಾನಕ್ಕೆ ನಾನು ಬಂದು ಅದೆಷ್ಟೋ ವರ್ಷಗಳಾಗಿತ್ತು' ಎನ್ನುವ ಲೇಖಕಿ ಅಪ್ಪಾ ಕೊಟ್ಟಿದ್ದೇನು ಎನ್ನುವ ಲೇಖನವನ್ನು ಈ ಪುಸ್ತಕದ ಜೀವಾಳವಾಗಿಸಿದ್ದಾರೆ.

ಅವರು ಒಂದು ತರಬೇತಿ ನೀಡಲು ಹೋಗಿದ್ದಾಗ ಸಹತರಬೇತುದಾರೆ ಮೀನಾ "ಟ್ರೇನಿಂಗ್ ಮಾಡುವ ಕಲೆ ನಿನಗೆ ಎಲ್ಲಿಂದ ಬಂತು?" ಎಂದು ಕೇಳಿದಾಗ " ನಾನು ತುಂಬಾ ಓದಿದ್ದೇನೆ ತುಂಬಾ ಕೃಷಿ ಮಾಡಿದ್ದೇನೆ ಆಳವಾಗಿ ಸಾಧನೆ ಮಾಡಿದ್ದೇನೆ" ಎನ್ನುತ್ತಾರೆ ಲೇಖಕಿ "ಅವೆಲ್ಲ ನಾನು ಮಾಡಿದ್ದೇನೆ ಬೇರೆಯವರು ಮಾಡಿದ್ದಾರೆ ಆದರೆ ನೀನು ಪಾಠ ಮಾಡುವಂತೆ ನೀನು ಟ್ರೇನಿಂಗ್ ಕೊಟ್ಟಂತೆ ಯಾರು ಕೊಡಲಿಕ್ಕೆ ಆಗುತ್ತಿಲ್ಲ ನಿನ್ನಲ್ಲಿ ಬೇರೆ ಏನು ಇದೆ? ಅದನ್ನು ನಿನಗೆ ಯಾರು ಕೊಟ್ಟಿದ್ದಾರೆ. ನಿಮ್ಮ ಅಪ್ಪ ಕೊಟ್ಟಿರಬಹುದೇ"ಎನ್ನುತ್ತಾರೆ ಮೀನಾ. ಆಗ ಲೇಖಕಿ ಹೇಳುತ್ತಾರೆ, " ಹೌದಲ್ಲ ನನಗೆ ಇದನ್ನು ಯಾರು ಕೊಟ್ಟರು? ನನ್ನ ಅಪ್ಪ ನಲ್ಲವೇ! ಒಂದು ಮೂಗು ಬೊಟ್ಟನ್ನೂ ನನ್ನ ಅಪ್ಪ ನನಗೆ ಕೊಡಿಸಲಿಲ್ಲ ಎಂದು ಐವತ್ತು ವರ್ಷಗಳ ಕಾಲ ಹೇಳುತ್ತಾ ಬಂದ ನನಗೆ ಅಪ್ಪ ಕೊಟ್ಟಿದ್ದೇನು ಎಂದು ಅರ್ಥವಾಗಲು 50 ವರ್ಷಗಳ ಆಯ್ತಲ್ಲ" ಎನಿಸಿತು. "ಬದುಕಿದ್ದಾಗ ನಾನು ಪ್ರೀತಿಸದ ಅಪ್ಪನನ್ನು ಸತ್ತಮೇಲಾದರೂ ಪ್ರೀತಿಸುವಂತೆ ಮೀನಾ ಒಂದೇ ಒಂದು ಪ್ರಶ್ನೆಯಲ್ಲಿ ಮಾಡಿದಳಲ್ಲ ಎನಿಸಿತು" ಈ ಸಾಲುಗಳನ್ನು ಓದುವಾಗ ಇಲ್ಲಇಲ್ಲಗಳನ್ನೇ ಗೋಣು ಹಾಕಿಕೊಂಡು ಜೀವನದ ತಿಳಿನೀರನ್ನು ಬಗ್ಗಡಗೊಳಿಸಿಕೊಳ್ಳುವ ನಾವು ಇರುವುದರೆಡೆಗೆ ತುಡಿಯುವುದು ಮಾತ್ರ ನೆಮ್ಮದಿಗೆ ದಾರಿ ಮತ್ತು ರಹದಾರಿ ಎಂದುಕೊಳ್ಳುವುದು ಯಾವಾಗ ಎನ್ನುವ ಪ್ರಶ್ನೆ ಉಳಿದು ಹೋಗುತ್ತದೆ.

"ಅವಳ ಇವಳ ಸುತ್ತ" ಪುಸ್ತಕವನ್ನು ಬರೆದದ್ದು ಒಬ್ಬರು, ಒಂದೇ ಸಲ; ಆದರೂ, ಇದನ್ನು ಓದುವವರು, ಪ್ರತೀ ಓದಿನಲ್ಲೂ ಮತ್ತಷ್ಟು ಘಟನೆಗಳನ್ನು ಅದಕ್ಕೆ ಸೇರಿಸುತ್ತಾ ಪುಸ್ತಕದ ಗಾತ್ರವನ್ನು ಮಾತ್ರವಲ್ಲ ಅರ್ಥವನ್ನೂ, ಘನತೆಯನ್ನೂ ಹಿಗ್ಗಿಸುತ್ತಾರೆ. ಇಂತಹ ಜಾದೂಗಾರಿಕೆ ಈ ಪುಸ್ತಕ ಓದಿದರೆ ಮಾತ್ರ ನಡೆಯುವಂಥದ್ದು.

ಸೈನಿಕರ ಕಥೆಗಳು

» ಕಗ್ಗೆರೆ ಪ್ರಕಾಶ್

ಕನ್ನಡದಲ್ಲಿ ಸೈನಿಕರ ಕಥೆ ಹೇಳುವ ಪುಸ್ತಕಗಳು ವಿರಳ. ಇಂಥ ಕೊರತೆಯನ್ನು ನೀಗಿಸುವಲ್ಲಿ ಸ್ವತಃ ಸೈನಿಕರೂ ಆಗಿದ್ದ ಬೈಂದೂರು ಚಂದ್ರಶೇಖರ ನಾವಡ ಅವರ 'ಕಂಟೋನ್ಮೆಂಟ್ ಕಥೆಗಳು' ಪುಸ್ತಕ ಯಶಸ್ವಿಯಾಗಿದೆ. ಇಲ್ಲಿ ಸೈನಿಕರ ವೈವಿಧ್ಯಮಯ ಬದುಕನ್ನು ಚಿತ್ರಿಸುವ 15 ಕಥೆಗಳಿವೆ. ಇವೆಲ್ಲವೂ ಲೇಖಕರ ಅನುಭವ ತೆಕ್ಕೆಗೆ ಸಿಕ್ಕಿ ಬರೆದ ಕಥೆಗಳಾಗಿದ್ದರಿಂದ ಭಾವ-ಬಂಧ ಹರಳು ಕಟ್ಟಿಕೊಂಡು ಬಂದಿವೆ. 22 ವರ್ಷ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿದ ಬಳಿಕ ಬ್ಯಾಂಕ್ ಉದ್ಯೋಗಿಯಾಗಿರುವ ನಾವಡರು ಬರವಣಿಗೆಯಲ್ಲೂ ತೊಡಗಿಸಿಕೊಂಡಿದ್ದಾರೆ. 'ಮಹಾನ್ ಸೇನಾನಿ ಜನರಲ್ ಬಿಪಿನ್ ರಾವತ್', 'ಸೈನಿಕನ ಅಂತರ್ಯಾದ ಪಿಸುನುಡಿ' ಕೃತಿಗಳನ್ನೂ ರಚಿಸಿದ್ದಾರೆ. ಸೇನೆ ಮತ್ತು ಸೈನಿಕರ ಬದುಕಿನ ಕುರಿತ ಇವರ ಬರಹಗಳು ಅಧಿಕೃತವಾಗಿ ವಸ್ತುನಿಷ್ಠತೆಗೆ ಹೆಸರಾಗಿವೆ.



ಕಂಟೋನ್ಮೆಂಟ್ ಕಥೆಗಳು
ಲೇ : ಬೈಂದೂರು ಚಂದ್ರಶೇಖರ ನಾವಡ
ಪ್ರ : ನಿಡಸಾಲೆ ಪಿ. ವಿಜಯ್, ಬೆಂಗಳೂರು.
9740066842, ಬೆಲೆ : 150/-

ಕಂಟೋನ್ಮೆಂಟ್‌ನ ಸೈನಿಕರ ಬದುಕಿನ ಮೇಲೆ ಬೆಳಕು ಚೆಲುವ ಇಲ್ಲಿನ ಕಥೆಗಳು ಅವರ ಮನದ ತುಮುಲಗಳನ್ನು ಅನಾವರಣ ಮಾಡುತ್ತವೆ. ನೋವು, ಹತಾಶೆ, ಅಪಮಾನ, ಕೋಪ ಎಲ್ಲವನ್ನೂ ವಿಷಕಂಠನಂತೆ ನುಂಗಿ ದೇಶದ ಹಿತ ಕಾಯುವ ಸೈನಿಕರ ಇಲ್ಲಿನ ಕಥೆಗಳು ನಮ್ಮಲ್ಲಿ ಹೆಮ್ಮೆ ಮೂಡಿಸುತ್ತವೆ. ನಮ್ಮ ದೇಶದ ಸೈನ್ಯ ಕಂಟೋನ್ಮೆಂಟ್‌ಗಳು (ದಂಡು ಪ್ರದೇಶ) ಹೆಚ್ಚಾಗಿ ಉತ್ತರ ಭಾರತದಲ್ಲೇ ವ್ಯಾಪಿಸಿಕೊಂಡಿವೆ. ಕರ್ನಾಟಕದ ಬೆಂಗಳೂರು, ಬೆಳಗಾವಿ ನಗರ ಪ್ರದೇಶಗಳಲ್ಲಿ ಮಿಲಿಟರಿ ತರಬೇತಿ ಕೇಂದ್ರಗಳೂ ಹೊರವಲಯದಲ್ಲೇ ಇವೆ. ಆ ವಿಶಾಲ ಸೇನಾನೆಲೆಗಳಿಗೆ ಸುರಕ್ಷತಾ ಕಾರಣಗಳಿಂದ ಸಾರ್ವಜನಿಕರಿಗೆ ಮುಕ್ತ ಪ್ರವೇಶ ಇರುವುದಿಲ್ಲ. ಹೀಗಾಗಿ ಕಂಟೋನ್ಮೆಂಟ್‌ನ ಎತ್ತರದ ಗೋಡೆಗಳ ನಡುವೆ ಬದುಕು ಸವೆಸುವ ಸೈನಿಕರ ಬದುಕಿನ ವಾಸ್ತವ ಚಿತ್ರಣವೂ, ಅವರೊಂದಿಗಿನ ಮುಖಾಮುಖಿಯೂ ನಾಗರಿಕರಿಗೆ ಅಪರೂಪವೇ. ಸೇನೆ ಮತ್ತು ಸೈನಿಕರ ಬದುಕಿನ ಮಾಹಿತಿಯುಳ್ಳ ಸಾಹಿತ್ಯವೂ ಕನ್ನಡದಲ್ಲಿ ವಿರಳವೇ. ಈ ನಿಟ್ಟಿನಲ್ಲಿ ಇಲ್ಲಿನ 'ಕಂಟೋನ್ಮೆಂಟ್ ಕಥೆಗಳು' ದಾಖಲಾರ್ಹವಾಗಿವೆ.

» ಬಿ.ಕೆ.ಮೀನಾಕ್ಷಿ, ಮೈಸೂರು

ಸ್ಮೃತಿಪಟಲದ ನೆನಪುಗಳು

ಬಾಲ್ಯದ ದಿನಗಳನ್ನು ಬಂಗಾರದ ದಿನಗಳು ಎನ್ನುತ್ತಾರೆ. ಅದು ಹೇಗೇ ಇರಲಿ, ಬಾಲ್ಯ ಎಂದರೆ ಮಧುರ ನೆನಪುಗಳ ಕಾಲ.

ಭಾವ ಲಹರಿ

ನಾವು ಚಿಕ್ಕಂದಿನಲ್ಲಿ ಆಡಿದ ಎಲ್ಲ ಆಟಗಳೂ ಬೆಳೆದು ದೊಡ್ಡವರಾದಂತೆ ನಗು ತರಿಸುತ್ತವೆ. ಅದು ಕಳ್ಳತನವಾಗಿರಬಹುದು, ತಲೆಹೋಗುವ ಸುಳ್ಳಾಗಿರಬಹುದು, ಹಿರಿಯರನ್ನು ಬೈದು, ನಾವೂ ಬೈಸಿಕೊಂಡದ್ದಾಗಿರಬಹುದು. ಶಾಲೆಯಲ್ಲಿ ಚೆನ್ನಾಗಿ ಪೂಜೆ ಮಾಡಿಸಿಕೊಂಡು ನನ್ನನ್ನು ಹೊಗಳಿದರೆಂದು ಅಪ್ಪ ಅಮ್ಮನ ಮುಂದೆ ಕೊಚ್ಚಿಕೊಳ್ಳುವುದು, ಹೋಮ್‌ವರ್ಕ್ ಮಾಡದೆ, ಎಷ್ಟು ಚಂದ ಮಾಡಿದ್ದಾಳೆ ನೋಡಿ ಅಂತ ಶಹಬ್ಬಾಸ್‌ಗಿರಿ ಕೊಟ್ಟರೆಂದು ಬಾಯಿಗೆ ಬಂದದ್ದನ್ನೆಲ್ಲ ಹೇಳಿ ಖುಷಿ ಪಡಿಸಿ, ಕೊನೆಕೊನೆಗೆ ನಾವೂ ಆ ಸುಳ್ಳುಗಳನ್ನೇ ಸಾಧಿಸುತ್ತಾ ಹೋಗಿ ಅದೇ ನಿಜವೆಂದು ನಂಬಿಬಿಡುವುದು! ಇಂತಹ ಸಂದರ್ಭಗಳು ನಿಮಗೂ ಬಂದಿವೆ, ನನಗಂತೂ ದಿನಕ್ಕೆ ಬೇಕಾದಷ್ಟು ಬಂದಿವೆ.

ಸುಮಾರು ಇದು ಅರವತ್ತರ ದಶಕದ ಮಾತು. ಏನೇ ತರುವುದಿದ್ದರೂ ಹತ್ತಿರದ ಗಂಗಣ್ಣನ ಅಂಗಡಿಗೆ ಓಡುವುದು, ಅಮ್ಮ ಕೊಟ್ಟ ಕಾಸನ್ನು ಕೊಟ್ಟು ಇಂತದು ಕೊಡಬೇಕಂತೆ ಅನ್ನುವುದು. ಅವರು ಅದನ್ನು ಕೊಟ್ಟು, 'ಏ.... ಆ ಹುಡುಗಿಗೆ ತುಂಡುಬೆಲ್ಲ ಕೊಟ್ಟು ಕಳಿಸಿರೋ' ಎನ್ನುತ್ತಿದ್ದರು, ಗಲ್ಲಾದಲ್ಲಿ ಕುಳಿತ ಡುಮ್ಮ ಯಜಮಾನರು. ಇನ್ನೇನು ಕೀಳಬೇಕೆಂಬ ಹೆಜ್ಜೆ ಹಾಗೇ ಅಲ್ಲಿಯೇ ಅಂಟಿಕೊಂಡು ಕೊಡುವವರ ಮುಖ ನೋಡುತ್ತಾ ನಿಲ್ಲುವುದು! ನಾನು ಯಾರ ಮುಖ ನೋಡುತ್ತೇನೋ ಅವರು ಕೊಡುತ್ತಿರಲಿಲ್ಲ, ಬೇರೆ ಯಾರೋ ಕೊಡುತ್ತಿದ್ದರು. ಚಿಕ್ಕಮಕ್ಕಳಿಗೆ ಹೀಗೆ ಅಂಗಡಿಯಲ್ಲಿ ಪೆಪ್ಪರಮೆಂಟೋ ಶುಂಠಿ ಪೆಪ್ಪರಮೆಂಟೋ ಅದೂ ಇಲ್ಲದಿದ್ದರೆ ಹೀಗೆ ಬೆಲ್ಲದ ತುಂಡನ್ನು ಕೊಡುವುದು ವಾಡಿಕೆಯಾಗಿತ್ತು.

ಇನ್ನೂ ಕೆಲವೊಮ್ಮೆ ನಾನು ವಿಕ್ರಯಿಸಿದ ವಸ್ತುವಿನ ಜೊತೆಜೊತೆಗೇ ಬೆಲ್ಲದ ತುಂಡನ್ನೂ ಕೊಟ್ಟು ಸಾಗಹಾಕುತ್ತಿದ್ದರು. ಹಾಗಾಗಿ ಗಂಗಣ್ಣನ ಅಂಗಡಿಗೆ ಹೋಗುವುದೆಂದರೆ ನನಗೆ ಸಂಭ್ರಮವೋ ಸಂಭ್ರಮ! ಎಷ್ಟೊತ್ತಾದರೂ ಕೊಡದಿದ್ದರೆ ನಮ್ಮಣ್ಣಂದಿರು ನನ್ನನ್ನು ಕರೆಯಲು ಬರುತ್ತಿದ್ದರು. ಅವರಿಗೂ ಒಂದು ತುಂಡು ಬೆಲ್ಲ ಸಿಗುತ್ತಿತ್ತು. ಇದು ಗೊತ್ತಾಗುತ್ತಿದ್ದಂತೆ, ನಮ್ಮ ಗಣೇಶ, 'ಅಮ್ಮಾ, ಮರೀನ ಕರೆದುಬರಲಾ? ಇಷ್ಟೊತ್ತಾದರೂ ಬರಲಿಲ್ಲ?' ಅನ್ನುತ್ತಿದ್ದನು. ಸರಿ ಅವನು ಬಂದ ಮೇಲೆ ಅವನನ್ನು ಕರೆಯಲು ಇನ್ನೊಬ್ಬ ಅಣ್ಣ ಜಯಣ್ಣ! ಮೂವರೂ ಸಾಲಾಗಿ ಅಂಗಡಿ ಮುಂದೆ ನಿಲ್ಲುತ್ತಿದ್ದೆವು. 'ಏ....ಮಗಾ ಬೆಲ್ಲ ಕೊಟ್ಟಾಯ್ತಲ್ಲಾ ನಡಿ' ಎಂದರೆ, 'ಇವರಿಬ್ಬರಿಗೆ ಕೊಟ್ಟಿಲ್ಲ' ಅನ್ನುತ್ತಿದ್ದೆ. ಅವರು ಹುಸಿನಗುತ್ತಾ ಮೂವರಿಗೂ ಕೊಡುತ್ತಿದ್ದರು. ನನಗೆ ಮೊದಲೇ ಕೊಟ್ಟಿದ್ದರೂ ಮತ್ತೂ ಒಂದು ತುಂಡು ಕೊಡುತ್ತಿದ್ದರು. ಇವರಿಬ್ಬರೂ, 'ನೋಡು ಮಗಾ, ನಾವು ಕರೆಯಕ್ಕೆ ಬರೋವರ್ಗೂ ನೀನು ಗಂಗಣ್ಣನ ಅಂಗಡಿ ಬಾಗಿಲಲ್ಲೇ ನಿಂತಿರು' ಎಂದು ತಾಕೀತು ಮಾಡುತ್ತಿದ್ದರು. ನಾನೂ ಅವರು ಹೇಳಿದ್ದನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದೆ.

ಪಿಂಗಾಣಿ ತಟ್ಟೆಯ ಊಟ: ಇನ್ನೊಂದು ವಿಷಯ ಹೇಳಲೇ ಬೇಕಿದೆ. ಆಗ ಕ್ಷಾಮವೋ ಮತ್ತೇನೋ ಬಂದಿತ್ತಂತೆ. ಅಥವಾ ಪ್ಲೇಗು ರೋಗವೋ ನನಗೆ ಗೊತ್ತಿಲ್ಲ. ನಾವೆಲ್ಲ ಮನೆ ಬಿಟ್ಟು ತೆಂಗಿನ ತೋಪಿನಲ್ಲಿ ಗುಡಾರ ಹಾಕಿಕೊಂಡು ಅಲ್ಲಿ ವಾಸ ಮಾಡಿ ಸ್ವಲ್ಪ ದಿನದ ನಂತರ ವಾಪಸ್ಸು ಮನೆಗೆ ಬಂದೆವು. ಅಕ್ಕಿಗೆ ವಿಪರೀತ ಬರಗಾಲ. ನಮ್ಮನೆಯಲ್ಲಿ ಮುದ್ದೆ ಅಥವಾ ಅಂಬಲಿ ಮಾಡುತ್ತಿದ್ದರು. ನನಗೆ ಮಾತ್ರ ಅನ್ನ ಕೊಡುತ್ತಿದ್ದರು – ಚಿಕ್ಕವಳೆಂದು. ನಮ್ಮನೆಯಲ್ಲಿ ಒಂದು ಪಿಂಗಾಣಿ ತಟ್ಟೆಯಿತ್ತು. ನಮ್ಮಮ್ಮ ನನಗೆ ಅದರಲ್ಲೇ ಊಟ ಮಾಡಿಸುತ್ತಿದ್ದುದು. ನಾವೆಲ್ಲ ಅದನ್ನು ಗಾಜಿನ ತಟ್ಟೆ ಅನ್ನುತ್ತಿದ್ದೆವು. ಊಟಕ್ಕೆ ಕುಳಿತುಕೊಳ್ಳುವಾಗ, 'ಮಗೀನ್ ಪಕ್ಕ ನಾನು, ಮಗೀನ್ ಪಕ್ಕ ನಾನು' ಅಂತ ನನ್ನ ಅಣ್ಣಂದಿರು ಕಿತ್ತಾಡುತ್ತಿದ್ದರು. 'ನಿಂಗೆ ನಾನಿಷ್ಟನೋ? ಜಯಣ್ಣ ಇಷ್ಟನೋ?' ಅಂತ ಕೇಳಿದರೆ ಇಬ್ಬರೂ ಇಷ್ಟ ಅಂದುಬಿಟ್ಟು ನನ್ನ ಗುಂಡಿ ನಾನೇ ತೋಡಿಕೊಳ್ಳುತ್ತಿದ್ದೆ. ನಾನು ಮಧ್ಯ ಕುಳಿತು, 'ಗಣೇಶ ನೀನಿಲ್ ಬಾರೋ, ಜಯಣ್ಣ ನೀನಿಲ್ ಬಾರೋ' ಅಂತ ಎರಡೂ ಪಕ್ಕ ಕೂರಿಸಿಕೊಳ್ಳುತ್ತಿದ್ದೆ. ಇವರಿಬ್ಬರೂ ನನ್ನನ್ನು ಮಾತಾಡಿಸುತ್ತಾ ಏನೇನೋ ಕತೆ ಹೇಳುತ್ತಾ ಊಟ ಮಾಡುತ್ತಿದ್ದರು. ನಾನು ಅವರ ಮಾತನ್ನು ಮಂಗನಂತೆ ಕೇಳುತ್ತಾ ಸುಮ್ಮನೆ ಕೂರುತ್ತಿದ್ದೆ. ಈಕಡೆ ಇವನು, ಆಕಡೆ ಅವನು ಮೆಲ್ಲಗೆ ನನ್ನ ತಟ್ಟೆಯ ಅನ್ನವನ್ನೆಲ್ಲ ಕಬಳಿಸುತ್ತಿದ್ದರು. ನಮ್ಮಮ್ಮನ ಎದುರಿಗೆ ಕೊನೆಯಲ್ಲಿ, 'ಇದಿಷ್ಟೇ ತಿಂದು ಬಿಡವ್ವಾ ಮರಿ' ಅಂತ ಉಳಿದ ಕೊನೆಯತುತ್ತನ್ನು ಬಾಯಿಗೆ ತುರುಕುತ್ತಿದ್ದರು. ಇವರ ಆಟವೊಂದನ್ನೂ ತಿಳಿಯದ ನಾನು ಸ್ವಲ್ಪ ಹೊತ್ತಿಗೇ, 'ಅಮ್ಮಾ ಹೊಟ್ಟೆ ಹಸಿವು' ಅನ್ನುತ್ತಿದ್ದೆ.

ಆಗ ಷಡ್ಭುಜಾಕೃತಿಯ ಮೂರು ಪೈಸೆ ಹೊಸದಾಗಿ ಬಂದಿತ್ತು. ನಮ್ಮ ತಂದೆ ನನಗೆ ನನ್ನ ಮಡಿಲು ತುಂಬುವಷ್ಟು ಅವುಗಳನ್ನು ಕೊಡುತ್ತಿದ್ದರು. ನನ್ನ ಅಣ್ಣಂದಿರು ಅದನ್ನು ಕಂಡರೂ ಕಾಣದಂತೆ ಗಮನಿಸಿಕೊಂಡಿರುತ್ತಿದ್ದರು. ಮಾರನೇ ದಿನವೇ ಇವರ ಆಟ ಶುರು. ಇವರಿಬ್ಬದರೂ ಜಗುಲಿಯ ಕಂಬಗಳನ್ನು ಒರಗಿ ಕುಳಿತು, 'ಗಣೇಶ ಏನೋ ಅದು ತಿಂತಿರೋದು? ಅಂತ ಜಯಣ್ಣ, 'ಏ ಇದು ಫಾರಿನ್ನುದು ಕಣೋ. ಅದೇ ಅಮೆರಿಕಾ ಅಂತಾರಲ್ಲಾ ಅಲ್ಲಿದು. ಇವತ್ತು ಸ್ಕೂಲಿಗೆ ಹೋಗಿದ್ದಾಗ ಅವನು ಕೊಟ್ಟ. ಅಂತ ಯಾರದೋ ಹೆಸರು ಹೇಳುತ್ತಿದ್ದ. ಈ ಸಂಭಾಷಣೆ ನನ್ನ ಎದುರಿಗೇ ನಡೆಯುತ್ತಿತ್ತು. ನನಗೆ ಆಸೆಯಾಗಿ ಅವರಿಬ್ಬರ ಮುಂದೆ ಬಂದು 'ನನಗೂ ಕೊಡೋ ಅನ್ನುತ್ತಿದ್ದೆ. ಸಿಕ್ಕಾಪಟ್ಟೆ ಕಾಡಿಸಿ, ಸಾಸಿವೆಯಷ್ಟು ಕೊಟ್ಟು, 'ಇಷ್ಟಕ್ಕೇ ಎಂಟಾಣೆ ಕೊಟ್ಟು ತಗೊಂಡಿರೋದು ಗೊತ್ತಾ?' ಅಂತ ಕೊಡುತ್ತಿದ್ದನು. ನನಗೆ ಅದು ರುಚಿ ಹತ್ತಿ , ಗಣೇಶ ಕೊಡೋ ಅಂತ ದುಂಬಾಲು ಬೀಳುತ್ತಿದ್ದೆ. 'ಸರಿ, ಒಂದ್ಕೆಲ್ಸ ಮಾಡು ಆ ಮೂರ್ ಪೈಸಗಳಿದಾವಲ್ಲಾ ಕೊಡು. ಅವುಗಳನ್ನೆಲ್ಲ ಅವನಿಗೆ ಕೊಟ್ಟು ಇಷ್ಟು ದಪ್ಪ ಕೊಡ್ತೀನಿ' ಅಂತ ಕೈಯ್ಯಲ್ಲೇ ಕಾಣದಿರುವ ಹಾಗೆ ಇಟ್ಟುಕೊಂಡು ತೋರಿಸುತ್ತಿದ್ದ. ನಾನು ಓಡಿಹೋಗಿ ಎಲ್ಲವನ್ನೂ ತಂದು ಸುರಿಯುತ್ತಿದ್ದೆ. ಇಡೀ ರಾತ್ರಿಯೆಲ್ಲ ಅದನ್ನು ಸವಿದು ಸವಿದು ತಿನ್ನುತ್ತಿದ್ದೆ. ಆನಂತರ ಗೊತ್ತಾಯಿತು, ಅದು ಬೆಲ್ಲವೆಂದು, ಅದೂ ಯಾವಾಗ? ನನಗೂ ಬುದ್ಧಿ ಬೆಳೆದ ಮೇಲೆ.

ನಮ್ಮಮ್ಮ ನನಗೆ ಹೇಗಾದರೂ ಊಟ ಮಾಡಿಸುವ ಸಲುವಾಗಿ ಅನ್ನ ಕಲೆಸಿ ತುತ್ತು ಮಾಡಿಡುತ್ತಿದ್ದರು. ಇದು ನಿಂದು, ಇದು ಗಣೇಶಂದು, ಇದು ಜಯಣ್ಣಂದು, ಇದು ಪಾಪಚ್ಚಿದು, ಇದು ಕಾಳಿದು, ಇದು ರಾಜಣ್ಣಂದು ಅಂತ ತಟ್ಟೆಯ ಸುತ್ತಲೂ ತುತ್ತು ಮಾಡಿಟ್ಟು ಒಂದೊಂದನ್ನೇ ಅವರವರ ಹೆಸರು ಹೇಳಿ ತಿನ್ನಿಸುತ್ತಿದ್ದರು. ನಮ್ಮಮ್ಮ ಸ್ವಲ್ಪ ಮಾಯವಾದರೂ ಸರಿ, ಇವರಿಬ್ಬರೂ ಓಡಿ ಬರುತ್ತಿದ್ದರು. 'ಇದು ನಂದು ನಾನು ತಗೋತೀನಿ ಅಂತ ಒಬ್ಬ, 'ಇದು ನಂದು ನಾನ್ ತಗೋತೀನಿ.ಅಂತ ಇನ್ನೊಬ್ಬ. 'ರಾಜಣ್ಣ ಇಲ್ವಲ್ಲ, ಅದುನ್ನ ನಾನು ತಗೋತೀನಿ ಅಂತ ಒಬ್ಬ ನುಂಗಿದರೆ, 'ಪಾಪಚ್ಚಕ್ಕ ಇಲ್ವಲ್ಲ ಅದು ನಂಗೆ ಅಂತ ಇನ್ನೊಬ್ಬ. ನಮ್ಮಮ್ಮ ಬರುವಷ್ಟರಲ್ಲಿ ಇಡೀ ತಟ್ಟೆ ಖಾಲಿಯಾಗಿ ಹೋಗಿರುತ್ತಿತ್ತು. ನಮ್ಮಮ್ಮ ಅವರಿಬ್ಬರನ್ನೂ ತರಾಟೆಗೆ ತೆಗೆದುಕೊಂಡು, 'ಆ ಮಗೀಗೆ ಒಂಚೂರು ಅನ್ನ ತಿನ್ನಕ್ಕೂ ಬಿಡಲ್ವಲ್ರೋ, ಮುಂಡೇವಾ?' ಅಂತ ಬೈದು ಮತ್ತೆ ಒಂಚೂರು ಅನ್ನ ಕಲೆಸಿ ತಂದು ತಿನ್ನಿಸುತ್ತಿದ್ದರು. ಅನ್ನಕ್ಕೆ ಬರಗಾಲವಿದ್ದ ಆ ಕಾಲದಲ್ಲಿ ನನ್ನ ಅನ್ನಕ್ಕೆ ಇವರಿಬ್ಬರೂ ತತ್ವಾರ ತರುತ್ತಿದ್ದರು.

ಕದ್ದು ತಿಂದರೆ ರುಚಿ: ಶಾಲೆ ಬಿಟ್ಟಮೇಲೆ ಇವರಿಬ್ಬರೂ ಎಲ್ಲಿ ಹೋಗುತ್ತಿದ್ದರೋ ಅವರ ಹಿಂದೆ ನಾನೂ ಹೋಗುತ್ತಿದ್ದೆ. ಅವರು ಎಲ್ಲಿ ತಪ್ಪಿಸಿಕೊಂಡು ಬಚ್ಚಿಟ್ಟುಕೊಂಡರೂ ಬಿಡುತ್ತಿರಲಿಲ್ಲ. ಆಚಾರ್ರು ಮನೆಗೆ ಅಂತ ಚೀಲದಲ್ಲಿ ಕಾಳು ಕಡಿಗಳನ್ನು ತಂದು ಕೊಡುತ್ತಿದ್ದರು. ನಮಗದು ಬೇಕಾಗಿರಲಿಲ್ಲ. ಇವರಿಬ್ಬರೂ ಹೊಲಗಳಿಗೆ ನುಗ್ಗುತ್ತಿದ್ದರು. ಅವರ ಹಿಂದೆ ನಾನು! ಕಡ್ಲೆಕಾಯಿಗಿಡದ ಹೊಲಕ್ಕೆ ಸದಾ ನಮ್ಮ ಧಾಳಿ ಇರುತ್ತಿತ್ತು. ಹೊಲ ಕಾಯುವವರು ಎಲ್ಲಿದ್ದಾರೆಂದು ನೋಡಿಕೊಂಡು ಇವರುಗಳು ಕಡ್ಲೆಗಿಡ ಕೀಳುತ್ತಿದ್ದರು. ಹೊಲ ಕಾಯುವವರು, 'ಅಯ್ಯೋ ಆಚಾರಪ್ಪನ ಮಕ್ಕಳು, ಒಂದಿಷ್ಟು ಕಿತ್ತು ಕೊಟ್ಟು ಕಳಿಸ್ರೋ' ಎಂದರೆ ಅದು ನಮಗೆ ಆಗಿಬರದ ಮಾತು. ನಾವು ಕದ್ದೇ ತಿನ್ನಬೇಕು. ಹೆಸರು ಕಾಳು ಹಲಸಂದೆ ಕಾಳು, ಸೀಬೇಗಿಡಗಳು ಯಾವ ಹಸೀ ಪದಾರ್ಥಗಳೂ ನಾವಿಲ್ಲದೆ ಕೊಯ್ಲಿಗೆ ಹೋಗುತ್ತಿರಲಿಲ್ಲ! ನಾವೇ ಮೊದಲು ಅವುಗಳನ್ನು ಕೊಯ್ಯುವುದು. ಯಾವತ್ತೂ ಅವರೇಕಾಯಿ ನಮ್ಮನ್ನು ಆಕರ್ಷಿಸಲಿಲ್ಲ. ಅದರಲ್ಲಿ ನಮಗೇನೂ ಸ್ವಾರಸ್ಯವಿರಲಿಲ್ಲ. ಯಾಕೆನ್ನಿ....ಅವುಗಳನ್ನು ಸುಡುವುದಕ್ಕೆ ನಮಗೆ ಬರುತ್ತಿರಲಿಲ್ಲ, ಬೇಯಿಸಿ ತಿನ್ನಲು ಗೊತ್ತಿರಲಿಲ್ಲ. ಒಲೆ ಉರಿಸಲು ಕಷ್ಟ ಪಡಬೇಕಿತ್ತು.

ನಮ್ಮಯ್ಯ ನನಗೆ ದುಡ್ಡು ಕೊಟ್ಟರೆ ಸಾಕು ಮಾರನೇದಿನ ಇವರಿಬ್ಬರೂ ಈಜಲು ಹೋಗುತ್ತಿದ್ದರು. ಇದು ಇವರ ಇನ್ನೊಂದು ಪ್ಲಾನು. ನಮ್ಮೂರಲ್ಲಿ ಒಂದು ಕುಡಿಯುವ ನೀರಿನ ಅರಸನ ಬಾವಿಯಿತ್ತು. ಇವರು ಬೇಡವೆಂದರೂ ನಾನು ಹಿಂಬಾಲಿಸಿಕೊಂಡು ಅವರ ಹಿಂದೆಯೇ ಓಡುತ್ತಿದ್ದೆ. ಇವರಿಬ್ಬರೂ ಅರಸನಬಾವಿಯಲ್ಲಿ ಚೆನ್ನಾಗಿ ಈಜುತ್ತಿದ್ದರು. ಕೊನೆಗೆ ಮುಖ ಮೇಲೆ ಮಾಡಿ ಕಣ್ಣು ಮುಚ್ಚಿ ಗಣೇಶ ತೇಲುತ್ತಿದ್ದನು. ಆಗ ಜಯಣ್ಣ ಹೇಳುತ್ತಿದ್ದ, 'ಮರಿ ಗಣೇಶ ಸತ್ತೋದ' ಅಂತ. ನಾನು ಕಿರುಚಾಡಿ ಅಳುತ್ತಾ, 'ಗಣೇಶ ಮೇಲೆ ಬಾರೋ' ಅಂತ ಅಳುತ್ತಾ ಕೂಗುತ್ತಿದ್ದೆ. ಜಯಣ್ಣ, 'ಅವನಿಗೆ ದುಡ್ಡು ಕೊಟ್ಟರೆ, ಜೀವ ಬರುತ್ತಂತೆ. ಅನ್ನುತ್ತಿದ್ದ. ನಾನು ತಕ್ಷಣ, 'ಅಯ್ಯ ಕೊಟ್ಟಿರೋ ಕಾಸೆಲ್ಲ ಕೊಡ್ತಿನಿ. ಮೇಲ್ಬಾರೋ. ಅಂದ ಕೂಡಲೇ ಈಜು ಹೊಡೆಯುತ್ತಾ ಮೇಲೆ ಬಂದು ನನ್ನನ್ನು ಮನೆಗೆ ಎತ್ತಿಕೊಂಡೇ ಹೋಗುತ್ತಿದ್ದರು. 'ಕಾಸು ಕೊಡು. ಅನ್ನುತ್ತಿದ್ದಂತೆ ನನ್ನ ಸ್ಲೇಟಿನ ಚೀಲದಲ್ಲಿಟ್ಟುಕೊಂಡಿದ್ದ ಎಲ್ಲ ಚಿಲ್ಲರೆ ಕಾಸನ್ನೂ ಕೊಟ್ಟುಬಿಡುತ್ತಿದ್ದೆ.

ನಮ್ಮಯ್ಯ ತೀರಿಕೊಂಡಾಗ ನಾವೆಲ್ಲ ನಮ್ಮಣ್ಣ ಇದ್ದ ತಣಿಗೆಬೈಲಿಗೆ ಹೋದೆವು. ದಟ್ಟ ಕಾಡು, ಮೇಲೆ ನೋಡಿದರೆ ಕೆಮ್ಮಣ್ಣುಗುಂಡಿ, ಕೆಳಗೆ ಕಾರ್ಖಾನೆ, ಭದ್ರಾವತಿಯಿಂದ ಬಂದು ಹೋಗುವ ಒಂದು ಗೂಡ್ಸ್ ರೈಲು, ಮೇಲೆ ರೋಪ್ ವೇ, ಕೆಳಗೆ ಭೂಮಿ ಮೇಲೆ ಸಣ್ಣಗೆ ಹರಿವ ಝರಿ! ಕಾಡಿನಿಂದಾವೃತವಾದ ಸುಂದರ ತಣಿಗೆ ಬೈಲು! ಇವರಿಬ್ಬರೂ ಮಾತೆತ್ತಿದ್ರೆ ಕಾಡಿಗೆ ಓಡುತ್ತಿದ್ದರು. ಹಾಗೇ ಕೆಮ್ಮಣ್ಣುಗುಂಡಿಯನ್ನು ಹತ್ತಿ ಇಳಿಯುತ್ತಿದ್ದರು. ಇವರಿಬ್ಬರೂ ದಿನವೂ ನನ್ನ ಕಣ್ಣುತಪ್ಪಿಸಿ ಹೋಗುವುದನ್ನು ನಾನು ಕಂಡುಹಿಡಿದುಕೊಂಡೆ. ಯಾರದೂ ಟಿ.ಸಿ. ತಂದಿರಲಿಲ್ಲ. ಅರ್ಧವರ್ಷದಲ್ಲಿ ನಾವು ಊರು ಬಿಟ್ಟಿದ್ದರಿಂದ ಶಾಲೆಯಿಲ್ಲದೆ ಅಲೆದಾಟ ಶುರುವಾಗಿತ್ತು. ಒಂದುದಿನ ಇವರಿಬ್ಬರನ್ನೂ ಬೆಂಬತ್ತಿದೆ. ಇವರು ಕಾಡೊಳಗೆ ನುಗ್ಗಿಹೋಗಿ ಅದೆಲ್ಲಿ ಮಾಯವಾದರೋ ಗೊತ್ತಾಗದೆ ಅಳುತ್ತಾ ವಾಪಸ್ಸು ಬಂದೆ. ಪ್ರತಿದಿನವೂ ಹೀಗೇ ಆಗಿ ಕಡೆಗೊಂದು ದಿನ ನಮ್ಮಮ್ಮನ ಬಳಿ ದೂರು ಒಯ್ದೆ. ನಮ್ಮಮ್ಮ ನನ್ನನ್ನೂ ಕರೆದೊಯ್ಯಲು ಹೇಳಿದರು. ಸ್ವಲ್ಪದೂರ ಕರೆದುಕೊಂಡು ಹೋಗಿ, ಇವತ್ತು ಬಿಸಿಲು ತುಂಬಾ ಇದೆ. ಹೋಗೋದು ಬೇಡ ಅಂತ ನನ್ನನ್ನು ತಂದು ಮನೆಯಲ್ಲಿ ಬಿಟ್ಟು ಸ್ವಲ್ಪಹೊತ್ತು ನನ್ನನ್ನು ಏಮಾರಿಸಿ ಪರಾರಿಯಾಗಿರುತ್ತಿದ್ದರು.

ನಾನು ಪ್ರತಿದಿನ ಬೆಳಗ್ಗೆ ಬೇಗ ಎದ್ದು ನಮ್ಮ ಕ್ವಾರ್ಟರ್ಸ್ ಸಾಲಿನಲ್ಲೇ ರಾಘಣ್ಣನ ಮನೆಯ ಗುಲಾಬಿ ಹೂ ಕೀಳಲು ಹೋಗುತ್ತಿದ್ದೆ. ಕತ್ತಲಿರುತ್ತಿತ್ತು. ದಿನವೂ ಕಳ್ಳತನವಾಗುತ್ತಿದ್ದ ಹೂವುಗಳನ್ನು ಗಮನಿಸಿದ್ದರೋ ಏನೋ ಒಂದುದಿನ ಕಿಟಕಿಯಿಂದಲೇ ಕೈ ಹಾಕಿ ಹೂ ಕೀಳುತ್ತಿದ್ದ ನನ್ನ ಕೈ ಹಿಡಿದುಬಿಟ್ಟರು. ಇರು ರಾಜಣ್ಣಂಗೆ ಹೇಳ್ತಿನಿ. ಅಂತ ಹೆದರಿಸಲು ಶುರುವಿಟ್ಟರು. ನಾನು ಹೇಗೋ ಮಾಡಿ ಮನೆಗೆ ಓಡಿ ಬಂದೆ. ಇದನ್ನು ಇವರಿಬ್ಬರೂ ನೋಡಿಬಿಟ್ಟರು. ನಮ್ಮಮ್ಮ ಆಗೀಗ ತಾಮ್ರದ ಒಂದು ಪೈಸೆ ಚೌಕಾಕಾರದ ಐದು ಪೈಸೆ ಕೊಡುತ್ತಿದ್ದರು ನನಗೆ.. 'ನೀನು ಹೂವು ಕದ್ದಿದ್ದು ಇರು ರಾಜಣ್ಣಂಗ್ಹೇಳ್ತಿನಿ. ಅನ್ನುತ್ತಿದ್ದರು. 'ಐದುಪೈಸ ಕೊಟ್ರೆ ಹೇಳಲ್ಲ' ಅನ್ನುತ್ತಿದ್ದರು. ಹೀಗೆ ನನ್ನನ್ನು ಬ್ಲಾಕ್ ಮೇಲ್ ಮಾಡಿ ಅದನ್ನು ಲಪಟಾಯಿಸುತ್ತಿದ್ದರು.

ನಂತರ ಜಯಣ್ಣ ಬೆಂಗಳೂರಿಗೆ ಓದಲು ಹೋದನು. ಗಣೇಶ ಮತ್ತೆ ಶಾಲೆಗೆ ಸೇರಿ, ನಂತರ ವಿ ಐ ಎಸ್ ಎಲ್ ಸೇರಿಕೊಂಡ. ನಾನು ದಾವಣಗೆರೆಯಲ್ಲಿ ಓದು ಮುಂದುವರೆಸಿದೆ. ನಾವೆಲ್ಲರೂ ದೊಡ್ಡವರಾಗುತ್ತಿದ್ದಂತೆ ಹಳೆಯ ಯಾವ ಆಟಗಳೂ ನೆನಪಿನಲ್ಲಿರದೆ, ಜೀವನದತ್ತ ಮುಖ ಮಾಡಿದೆವು. ಗಣೇಶ ಮಹಾ ಕೋಪಿಷ್ಠ. ಯಾರದರೂ ಏನಾದರೂ ಅಂದರೆ, ತಿರುಗಿಸಿ ಬಾರಿಸಿಯೇ ಬರುತ್ತಿದ್ದ. ಅವನನ್ನು ಕಂಡರೆ ಎಲ್ಲರೂ ಹೆದರುತ್ತಿದ್ದವರೆ. ಅವರ ತುಂಟಾಟಗಳಿಗೆ ಗದರಿಸುತ್ತಿದ್ದ ಅಪ್ಪ ಅಮ್ಮನೂ ಇಲ್ಲ, ನನ್ನನ್ನು ಏಮಾರಿಸಲು ಆವರಿಬ್ಬರೂ ಈಗಿಲ್ಲ. ಆದರೆ ಸ್ಮೃತಿಪಟಲದಲ್ಲಿ ಇಬ್ಬರೂ ಚಿರಸ್ಥಾಯಿಯಾಗಿದ್ದಾರೆ. ಅವರ ತುಂಟಾಟಗಳು ಮಧುರ ನೆನಪುಗಳಾಗಿ ಹೃದಯದಲ್ಲಿ ಬಚ್ಚಿಟ್ಟುಕೊಂಡಿವೆ.

ಮನಸು ಗಾಂಧಿಬಜಾರು

ಕವಿ ಕೆ.ಎಸ್.ನಿಸಾರ್ ಅಹಮದ್ ಅವರ ಮನಸು ಗಾಂಧಿ ಬಜಾರು ಎಂದು ಕವನದಲ್ಲಿ ಈ ಕುರಿತು ಹೇಳಿದ್ದಾರೆ. ಅಲ್ಲೇ ಹುಟ್ಟಿ ಬೆಳೆದ ಹಿರಿಯ ತಲೆಮಾರಿನ ಕೆಲವರ ಮನಸಿನಲ್ಲಿ, ಗಾಂಧಿಬಜಾರಿನ ನೆನಪುಗಳು ಹುದುಗಿವೆ.

» ಕೆ.ಎಸ್.ಸೋಮೇಶ್ವರ

ಈ ಒಂದು ಸಾಲು ಕವಿ ಕೆ.ಎಸ್.ನಿಸಾರ್ ಅಹಮದ್ ರವರ ಒಂದು ಕವಿತೆಯ ಶೀರ್ಷಿಕೆ. ನನಗೆ, ಗಾಂಧಿ ಬಜಾರು ನಿತ್ಯೋತ್ಸವ. ಏಕೆಂದರೆ ನಾನು ಹುಟ್ಟಿದ್ದು, ಬೆಳೆದದ್ದು ಈ ಗಾಂಧಿಬಜಾರಿನ ಮಡಿಲಲ್ಲೇ. ಇಲ್ಲಿನ ವೃತ್ತದಲ್ಲಿರುವ ಒಂದು ಕಟ್ಟಡದಲ್ಲಿ ಇದ್ದದ್ದು ನನ್ನ ತಂದೆ ಕೆಲಸಮಾಡುತ್ತಿದ್ದ ಬಸವನಗುಡಿ ಕೋ ಆಪರೇಟಿವ್ ಸೊಸೈಟಿ. ಅದರ ಹಿಂಬದಿಯಲ್ಲೇ ಇದ್ದ ನಾಲ್ಕು ಅವರದೇ ಸಣ್ಣ ಮನೆಗಳಲ್ಲಿ ಒಂದರಲ್ಲಿ ನನ್ನ ಬಾಲ್ಯ.

ಆ ಕಟ್ಟಡದಲ್ಲಿ ಮೇಲಿನ ಮಹಡಿಯಲ್ಲಿ ಸೊಸೈಟಿಯ ಕಛೇರಿ ಇದ್ದರೆ ಕೆಳಗಡೆ ಈಗ ನೆಲೆಸಿರುವ ತಿಂಡಿ ಮನೆ ಭಾಗದಲ್ಲಿ ದೊಡ್ಡ ಕಿರಾಣಿ ವಿಭಾಗ ಮತ್ತುಒಂದು ಬಟ್ಟೆ ಮಾರಾಟದ ವಿಭಾಗ ಇದ್ದಿತು. ಅದರ ಇನ್ನೊಂದು ಬದಿಯಲ್ಲಿ ಒಂದು ವೈದ್ಯ ಶಾಲೆ. ಅಲ್ಲಿ ಸದಾ ಸಿದ್ಧವಿರುತ್ತಿದ್ದ ವೈದ್ಯ ಡಾ.ರಾಮಚಂದ್ರ ರಾಯರು ಮತ್ತು ಅವರ ಸಹಾಯಕ ಕೃಷ್ಣಸ್ವಾಮಿ ರಾವ್ (ಕಂಪೌಂಡರ್). ಅವರಿಗೊಬ್ಬ ಶಿಷ್ಯ ಬಸವ. ಅದರ ಒಂದು ಬದಿಯಲ್ಲಿ ದೊಡ್ಡ ತರಕಾರಿ ಅಂಗಡಿ. ಮತ್ತುಕಟ್ಟಡದ ಒಳಾಂಗಣದಲ್ಲಿ ಒಂದು ಮುದ್ರಣಾಲಯ. ಇದನ್ನು ನಡೆಸುತ್ತಿದ್ದವರು ಹೆಸರಾಂತ ನಾಟಕಕಾರ ಬಿ.ಎಸ್ ನಾರಾಯಣ ರಾವ್ ರವರು. ಇವರು ಮುಂದೆ ನನಗೆ ನ್ಯಾಷನಲ್ ಹೈಸ್ಕೂಲಿನಲ್ಲಿ ಡ್ರಾಮಟಿಕ್ಸ್ ಅಧ್ಯಾಪಕರೂ ಆಗಿದ್ದರು.

ನನ್ನ ಪ್ರೈಮರಿ ವಿದ್ಯಾಭ್ಯಾಸ ಅಲ್ಲೇ ಹತ್ತಿರದ ಕಸ್ತೂರಿ ಬಾ ಪ್ರಾಥಮಿಕ ಶಾಲೆಯಲ್ಲಿ. ಇದನ್ನು ನಡೆಸುತ್ತಿದ್ದವರು ತುಕಾಬಾಯಿ ಎಂಬುವರು. ಇವರು ಸ್ವಾತಂತ್ರ ಹೋರಾಟಗಾರರ ಮನೆತನದಿಂದ ಬಂದವರಾಗಿದ್ದರು. ಅದರ ಪಕ್ಕದಲ್ಲೇ ಇಬ್ಬರು ಅಣ್ಣ ತಮ್ಮಂದಿರು ಒಂದು ಸಂಗೀತ ಶಾಲೆ ನಡೆಸುತ್ತಿದ್ದರು. ಅವರ ಹೆಸರು ಗೋಪಾಲಕೃಷ್ಣ ಮತ್ತು ಸುಬ್ರಮಣ್ಯ. ಇದೇ ಮುಖ್ಯ ರಸ್ತೆ ಮಹಡಿ ಬಸ್ ಅಲ್ಲದೇ ರಸ್ತೆ– ರೈಲು ಬಸ್ ಗಳನ್ನೂ ಸ್ವಾಗತಿಸಿ ಓಡಾಡಿಸಿದೆ. ಹತ್ತಿರದಲ್ಲಿರುವ ಈಶ್ವರನ ದೇವಸ್ಥಾನ ಮತ್ತು ಅದರ ಇದಿರಿನ ಕಟ್ಟೆಯಲ್ಲಿ ಸಂಜೆಯ ವೇಳೆಯಲ್ಲಿ ಸೇರುತ್ತಿದ್ದ ಕನ್ನಡ ದಿಗ್ಗಜರು ಅಂದರೆ ಡಿ.ವಿ.ಗುಂಡಪ್ಪ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ಜಿ..ಪಿ ರಾಜರತ್ನಂ. ಇವರುಗಳ ದರ್ಶನವೇ ನನಗೆ ಒಂದು ಹೊಸ ಅನುಭವ ಎನಿಸುತ್ತಿತ್ತು!

ಶಾಲೆ ಮುಗಿದ ನಂತರ ಸಂಜೆ ವೇಳೆಯಲ್ಲಿ ವೈದ್ಯ ಶಾಲೆಯ ಪಕ್ಕದಲ್ಲಿದ್ದ ಕಟ್ಟೆಯಲ್ಲಿ ಕುಳಿತು ಅಲ್ಲಿ ಸಂಜೆ ವೇಳೆ ತರಕಾರಿ ಮತ್ತಿತರ ವ್ಯಾಪಾರಕ್ಕೆ ಬರುವ ಜನರನ್ನು ನೋಡುವ ಕೆಲಸ ನನ್ನದಾಗಿತ್ತು. ಅದೇ ರೀತಿಯಲ್ಲಿ ಕೆಲವು ಹಬ್ಬಗಳಲ್ಲಿ ನಡೆಯುತ್ತಿದ್ದ ಮೆರವಣಿಗೆಯಲ್ಲಿನ ಹುಲಿವೇಷ ಕುಣಿತ ಕೂಡ ಅನೇಕ ಬಾರಿ ನೋಡಿ ಕಣ್ತುಂಬಿಕೊಂಡಿದ್ದೇನೆ. ಅಲ್ಲಿನ ಮುಖ್ಯ ರಸ್ತೆ ಅಂದರೆ ಟ್ಯಾಗೋರ್ ವೃತ್ತದಿಂದ ಬುಲ್ ಟೆಂಪಲ್ (ಬಸವಣ್ಣನ ಗುಡಿ) ರಸ್ತೆ ತಿರುವಿನ ವರೆಗೂ ಇರುವ ರಸ್ತೆಯನ್ನುಸದಾ ಹಸಿರಿನ ತೋರಣವೆನ್ನಬಹುದಾಗಿದೆ. ಟ್ಯಾಗೋರ್ ವೃತ್ತದ ಬಳಿಯಲ್ಲಿದ್ದ ಟ್ಯಾಕ್ಸಿ ಸ್ಟಾಂಡ್ ಮತ್ತೆ ಮುಂದೆ ಇದ್ದಂತಹ ತರಕಾರಿ ಮತ್ತು ಹೂವಿನ ಅಂಗಡಿಗಳು, ಪುಸ್ತಕ ಅಂಗಡಿಗಳಾದ ವಿ.ಎಸ್. ಅಂಡ್ ಸನ್ಸ್. ಎಂ.ಎಸ್. ಅಂಡ್ ಸನ್ಸ್, ತಿನಿಸಿನ ಮಂದಿರಗಳಾದ ವಿದ್ಯಾರ್ಥಿ ಭವನ ಅದರ ಇದಿರಿನ ಸರ್ಕಲ್ ಲಂಚ್ ಹೋಂ, ಸ್ವಲ್ಪ ಮುಂದಿನ ಗೀತಾ ರೆಸ್ಟೊರೆಂಟ್ ಇವೆಲ್ಲ ನೆನಪಿನಲ್ಲೇ ಉಳಿದಿದೆ.

ನಮಗಳಿಗೆ ಆಗ ಹತ್ತಿರದ ಬ್ಯೂಗಲ್ ರಾಕ್ ಹತ್ತುವುದು, ದೊಡ್ಡ ಬಸವಣ್ಣನ ಗುಡಿ, ಮಲ್ಲಿಕಾರ್ಜುನ ಗುಡಿ ಮತ್ತು ದೊಡ್ಡ ಗಣಪತಿ ದೇವಸ್ಥಾನಗಳಿಗೆ ಹೋಗುವುದು ಬಹುಪಾಲು ದಿನಚರಿಯ ಭಾಗವಾಗಿತ್ತು. ಆ ಸಮಯದಲ್ಲಿ ಅಂದರೆ 1960 ರ ಮೊದಲಲ್ಲಿ ನಡೆದ ಒಂದೆರಡು ಸಂಗತಿಗಳು ಹೇಳಲೇ ಬೇಕು. ಮೊದಲನೆಯದು ಆಗ ನಡೆಯುತ್ತಿದ್ದ ಹಿಂದಿ ವಿರೋಧಿ ಚಳುವಳಿ. ಸಂಜೆಯ ವೇಳೆಯಲ್ಲಿ ಒಂದೆರಡು ಬಾರಿ ಕಾಲೇಜು ಹುಡುಗರು ಆ ಮುಖ್ಯ ರಸ್ತೆಯಲ್ಲಿ ಗುಂಪು ಗುಂಪಾಗಿ ಬಂದು ಘೋಷಣೆಗಳನ್ನು ಹಾಕುತ್ತಿದ್ದರು. ನನ್ನ ಜೀವನದ ಅತಿ ಮುಖ್ಯ ಘಟನೆ ಅಂದರೆ ಭೂದಾನ ಚಳುವಳಿಯ ಹರಿಕಾರ ಆಚಾರ್ಯ ವಿನೋಬಾ ಭಾವೆಯವರನ್ನು ಒಂದು ಬೆಳಗಿನ ಝಾವದಲ್ಲಿ ಆ ವೃತ್ತದಲ್ಲಿ ಹತ್ತಿರದಲ್ಲಿ ಕಂಡಿದ್ದು.

ನನ್ನ ಮುಂದಿನ ಬೆಳವಣಿಗೆ ಜಯನಗರದಲ್ಲಿ. ಆದರೂ, ನನಗೆ ಈಗಲೂ ಗಾಂಧಿ ಬಜಾರಿಗೆ ವಾರಕ್ಕೊಮ್ಮೆಯಾದರೂ ಬಂದು ಹೋಗುವ ಮನ ತೃಪ್ತಿ ಬೇರಾವ ಚಟುವಟಿಕೆಯಲ್ಲೂ ಸಿಕ್ಕಿಲ್ಲ. ಇದೆಲ್ಲ ಅರುವತ್ತರ ದಶಕ ಮತ್ತು ಆಸು ಪಾಸಿನ ದಿನಗಳ ಒಂದು ನೆನಪು. ಅಲ್ಲಿ ಈಗ ನಾವು ಕಾಣುತ್ತಿರುವುದು ಅಂದಿನ ಒಂದು ಸಣ್ಣ ಪ್ರತಿರೂಪ ಮಾತ್ರ. ಈಗ ಮೇಲೆ ಹೇಳಿರುವ ಕೆಲವು ಅಂಗಡಿಗಳು ಸೊಸೈಟಿಯಂತೆಯೇ ಮರೆಯಾಗಿದೆ; ವಿದ್ಯಾರ್ಥಿ ಭವನ ಇನ್ನೂ ಪ್ರಖ್ಯಾತವಾಗಿದೆ. ಹಳೆಯ ಗಾಂಧಿಬಜಾರ್ ಮೆಲುಕು ಹಾಕುವಷ್ಟು ತನ್ನತನವನ್ನು ಇಂದಿಗೂ ಉಳಿಸಿಕೊಂಡಿದೆ ಎನಿಸುತ್ತದೆ.

» ಶ್ರೀರಂಜನಿ ಅಡಿಗ

ಅಪ್ಪಣೆ ವಿನಃ ಪ್ರವೇಶವಿಲ್ಲ!

ಹಲವು ತಿನಿಸುಗಳನ್ನು ತಿನ್ನುತ್ತಾ, ಯುಟ್ಯೂಬ್ ಮಾಡುವುದು ಈಚೆಗೆ ಬಹು ಜನಪ್ರಿಯ. ಮೇಲ್ನೋಟಕ್ಕೆ ಚಂದ ಕಾಣುವ ಇಂತಹ ತಿಂಡಿತೀರ್ಥಗಳು ತಯಾರಾಗುವ ಅಡುಗೆಮನೆಯನ್ನೂ ತೋರಿಸಿದರೆ ಜನರಿಗೆ ನಂಬಿಕೆಮೂಡಬಹುದು.

ಲಹರಿ

ಬಿಟಿಎಸ್ ಎಂಬ ಶಬ್ದವನ್ನು ಕೇಳದವರಾರು? ಈಗಿನ ಹುಡುಗರನ್ನು ಕೇಳಿದರೆ ಅದೊಂದು ಕೊರಿಯನ್ ಬ್ಯಾಂಡಿನ ಹೆಸರು, ಅದರ ಹಾಡುಗಳು ಜಗತ್ಪ್ರಸಿದ್ಧ ಎಂದು ಹೇಳುವರು, ನಿಮ್ಮಲ್ಲಿ ಅನೇಕರು ಅದರ ಅಭಿಮಾನಿಗಳಿರಬಹುದು. ನಾನು ಹೇಳಹೊರಟಿದ್ದು ಆ ಬಿಟಿಎಸ್ ಬಗ್ಗೆ ಅಲ್ಲ. ಓ! ಹಾಗಾದರೆ ಈಗಿನ ಬಿಎಂಟಿಸಿ ಮುಂಚೆ ಅದು ಬಿಟಿಎಸ್ ಆಗಿತ್ತು. ಅದರ ನೆನಪುಗಳು/ ಪ್ರಯಾಣದ ಘಟನೆಗಳ ಬಗ್ಗೆ ಬರೆಯಬಹುದು ಎಂದು ನೀವಂದುಕೊಂಡರೆ ಅದೂ ತಪ್ಪು. ನಾನು ಹೇಳಹೊರಟಿದ್ದು ಈ ಎರಡೂ ಬಿಟಿಎಸ್ ಬಗ್ಗೆ ಅಲ್ಲ. ಸಿನೆಮಾ, ಧಾರಾವಾಹಿಗಳು, ನಾಟಕಗಳ ಪ್ರದರ್ಶನದ ಅಂತ್ಯದಲ್ಲಿ ತಾಲೀಮಿನಲ್ಲಾದ ಚುಟುಕು ಸಂಗತಿಗಳನ್ನು, ರಸನಿಮಿಷಗಳನ್ನು ಸಣ್ಣ ವಿಡಿಯೋ ಮಾಡಿ ತೋರಿಸುತ್ತಾರಲ್ಲವೇ? ಅದಕ್ಕೆ ಬಿಟ್ವೀನ್ ದ ಸೀನ್ ಅಂದರೆ ಬಿಟಿಎಸ್ ಎಂಬ ಹೆಸರಿದೆ. ಈಗಲೂ ನಾನು ಹೇಳಹೊರಟಿದ್ದು ಯಾವುದೇ ನಾಟಕ ಗಳ ಬಿಟಿಎಸ್ ಅಲ್ಲ. ಹೋಟೆಲ್ಲುಗಳ ಬಿಟಿಎಸ್ ಬಗ್ಗೆ,

ಇತ್ತೀಚೆಗೆಷ್ಟೇ ಟೀಪುಡಿ, ಮಸಾಲಪುಡಿಗಳಲ್ಲಿ ವಿಷಕಾರಕಗಳಿವೆ ಎಂಬ ಸುದ್ದಿ ಬಂತು, ಅದರ ನಂತರ ಗೋಬಿಮಂಚೂರಿ, ಮಸಾಲಪುರಿಗಳಲ್ಲಿ ಬಣ್ಣ, ಟೇಸ್ಟಿಂಗ್ ಪೌಡರ್ ಇದೆ ಎಂದಾಯಿತು. ಮೊನ್ನೆಮೊನ್ನೆ ಪ್ಲಾಸ್ಟಿಕ್ ಹಾಳೆ ಮೇಲೆ ಇಡ್ಲಿ ಬೇಯಿಸುತ್ತಾರೆ, ಹೋಳಿಗೆಯನ್ನು ಪ್ಲಾಸ್ಟಿಕ್ ಹಾಳೆ ಮೇಲೆ ತಟ್ಟುತ್ತಾರೆ ಅಂತ ಬಂದು ಎಲ್ಲವುದಕ್ಕೂ ನಿಷೇಧ ಹೇರಬೇಕು ಎಂಬ ಕೂಗು ಕೇಳಿಬಂತು. ಇನ್ನು ಪ್ಲಾಸ್ಟಿಕ್ ಬಾಟಲಿಯ ನೀರೂ ಒಳ್ಳೆಯದಲ್ಲ ಎಂದಿರುವಾಗ ಪ್ಲಾಸ್ಟಿಕ್ ಗ್ಲೌಸನ್ನು ಹಾಕಿಕೊಂಡು ಬ್ರೆಡ್, ಪಾವು ಕಾಯಿಸುವುದು/ ಬಡಿಸುವುದು ಮಾಡಿದರೆ ಹೈಜೀನ್ ಎಂದುಕೊಳ್ಳುವುದು ನಮ್ಮ ಪೆದ್ದುತನದ ಪರಮಾವಧಿಯಲ್ಲವೇ?

ಇದನ್ನೆಲ್ಲಾ ಕಂಡೂ ಕಾಣದವರಂತೆ, ಚಪ್ಪರಿಸಿ ತಿಂದು ವಿಧಿಯಿಲ್ಲದೆ ಇರುಳು ಕಂಡು ಬಾವಿಗೆ ಹಗಲು ಬಿದ್ದವರು ನಾವು. ಕಣ್ಣೆದುರೇ ರಾಜೋರೋಷವಾಗಿ ಜನರ ಜೀವದೊಂದಿಗೆ ಚೆಲ್ಲಾಟವಾಡುವ ಇವರು ಇನ್ನು ಅಡುಗೆಮನೆಯಲ್ಲಿ ಏನು ಮಾಡುತ್ತಾರೆ ಎಂದು ಊಹಿಸಿಕೊಂಡರೆ?

ಯುಟ್ಯೂಬಿನ ವಿಡಿಯೋಗಳಲ್ಲಿ ಜಾಸ್ತಿ ವ್ಯೂವ್ಸ್ ಬರುವುದರಲ್ಲಿ ಫುಡ್ ಸ್ಟೋರಿಗಳದ್ದೂ ಪಾಲಿದೆ. ಅದೇಕೋ, ವಿಡಿಯೋಗಳಲ್ಲಿ ವಿವಿಧ ರೀತಿಯ ತಿನಿಸುಗಳನ್ನು ನೋಡಿದರೆ, ನೋಡುಗರ ಬಾಯಲ್ಲೂ ನೀರೂರುತ್ತದೆ ಎನಿಸುತ್ತದೆ : ಅದಕ್ಕೆಂದೇ ಅಂತಹ ವಿಡಿಯೋಗಳನ್ನು ಮತ್ತೆ ಮತ್ತೆ ನೋಡುತ್ತಾರೆ. ಹಾಗಾಗಿ ವ್ಯೂಸ್ ಜಾಸ್ತಿಯಾಗುತ್ತದೆ, ಅಂತಹ ವಿಡಿಯೋ ಮಾಡಿ, ಅಂತರ್ಜಾಲದಲ್ಲಿ ತೇಲಿ ಬಿಟ್ಟವರಿಗೂ ಇದರಿಂದ ಲಾಭ! ಅಂತಹ ವ್ಯೂಸ್ ಜಾಸ್ತಿಯಾದಷ್ಟೂ, ವಿಡಿಯೋ ಅಪ್ ಲೋಡ್ ಮಾಡಿದವರಿಗೆ, ಹಣವೂ ಬರುತ್ತದಂತೆ! ದೋಸೆಯ ಫೋಟೋ ತೋರಿಸಿ, ಹಣ ಗಳಿಸುವ ಈ ವಿಧಾನವಂತೂ ಈಗಿನ ತಲೆಮಾರಿನವರ ಮೆಚ್ಚಿನ ಹವ್ಯಾಸ. ಅದು ಬೇರೆ ವಿಚಾರ.

ಅಡುಗೆ ವಿಧಾನದ ವಿಡಿಯೋಗಳ ಜೊತೆಗೆ ವಿವಿಧ ಪ್ರಕಾರದ ರೆಸ್ಟಾರೆಂಟ್‌ಗಳ ಮಾಹಿತಿ ಕೊಡುವ ವ್ಲಾಗುಗಳನ್ನು ಜನರು ಹೆಚ್ಚು ಇಷ್ಟಪಟ್ಟುನೋಡುತ್ತಾರೆ. ಈಗಂತೂ ಬೀದಿಗೊಂದು, ಹೆಜ್ಜೆಗೊಂದು ರೆಸ್ಟಾರೆಂಟ್ ಮತ್ತು ಫುಟಾಣಿ ಹೋಟೆಲ್ಲುಗಳಿರುವುದರಿಂದ ನಿಮಿಷಕ್ಕೊಂದು ವಿಡಿಯೋ ಅಪ್‌ಲೋಡ್ ಆಗುತ್ತಲೇ ಇರುತ್ತವೆ, ದೋಸೆ ಕೆಂಪಗಾಗಿದ್ದು ಗರಿಗರಿಯಾಗಿದೆ; ಇಡ್ಲಿ ಹೂವಿನಂತಿದೆ; ಚಟ್ನಿಗೆ ಬೆಳ್ಳುಳ್ಳಿ ಹಾಕಿದ್ದಾರೆ ಎನ್ನುತ್ತಾ ಬಾಯಿಗಿಟ್ಟೊಡನೆ 'ಹೂಂ' ಎಂದೋ, 'ಇದಕ್ಕೆ ಒಂದು ಸೆಪರೇಟ್ ಆದ ಫ್ಯಾನ್ ಬೇಸ್ ಇದೆ' ಎಂದೋ; 'ಫಿಂಗರ್ ಲಿಕಿಂಗ್ ಗುಡ್' ಎಂದು ಸರ್ಟಿಫಿಕೆಟ್ ಕೊಡುತ್ತಲೇ ನೋಡುಗರ ಬಾಯಲ್ಲಿ ನೀರೂರಿಸುತ್ತಾರೆ! ಇದು ಹಗಲಿನ ಬೆಳಕಿನಷ್ಟೇ ಸತ್ಯವಿರಬಹುದು.

ಆದರೆ ಈಗ ಇವುಗಳ ಜೊತೆಗೆ ವ್ಲಾಗರುಗಳಿಗೆ ಹೊಸ ರೀತಿಯ ವಿಡಿಯೋ ಮಾಡುವ ಸಮಯ ಬಂದಿದೆ ಅನ್ನಿಸುತ್ತಿದೆ, ರಾಜಾರೋಷವಾಗಿ ನಮ್ಮ ಕಣ್ಣೆದುರೇ ನಮ್ಮನ್ನು ವಿಷಕಂಠರನ್ನಾಗಿಸುತ್ತಿರುವವರು ಇನ್ನು ತೆರೆಮರೆಯಲ್ಲಿ ಏನು ಮಾಡುತ್ತಾರೆ ಎನ್ನುವುದನ್ನು ಊಹಿಸಿಕೊಳ್ಳಲೂ ಭಯವಾಗುತ್ತದೆ. ವಿಡಿಯೋದಲ್ಲಿ ಕಂಡ ಚಿತ್ರಗಳು ಬಾಯಲ್ಲಿ ನೀರೂರಿಸುವಂತೆ ಇದ್ದರೂ, ಅದನ್ನು ತಯಾರಿಸುವ ವಿಧಾನವು ಅದೇ ವಿಡಿಯೋದಲ್ಲಿ ಇರುವುದಿಲ್ಲವಲ್ಲ! ಅದನ್ನು ತಯಾರಿಸುವವರು ನಮ್ಮ ಆರೋಗ್ಯ ಕಾಪಾಡಲು ಬದ್ಧರಾಗಿಬೇಕೆಂದು ಇಲ್ಲವಲ್ಲ! ಅವರಿಗೆ ರುಚಿಕರವಾಗಿ, ಹೆಚ್ಚು ವ್ಯಾಪಾರವಾಗಿರುವಂತಿದ್ದರೆ ಸಾಕಲ್ಲವೆ! ಹೀಗಾಗಿ ಇಂತಹ ಜನಪ್ರಿಯ ರೆಸ್ಟಾರೆಂಟುಗಳಲ್ಲಿ ತಿಂಡಿತೀರ್ಥ ತಯಾರಾಗುವ ಅಡುಗೆ ಮನೆಯನ್ನೂ ತೋರಿಸಿದರೆ ಜನರಿಗೆ ನಂಬಿಕೆ ಮೂಡಬಹುದು. ಅಕ್ಕಿ, ಉದ್ದಿನಬೇಳೆಯನ್ನು ಎಷ್ಟು ಬಾರಿ ತೊಳೆಯುತ್ತಾರೆ ಅಥವಾ ತೊಳೆಯುವುದೇ ಇಲ್ಲವೋ, ಮಸಾಲೆ ದೋಸೆಗೆ ಬಳಸುವ ಆಲೂಗಡ್ಡೆ ಮತ್ತು ಈರುಳ್ಳಿಯನ್ನು ಚೊಕ್ಕಟಮಾಡುತ್ತಾರೋ? ತರಕಾರಿ ಮತ್ತು ಸೊಪ್ಪನ್ನು ಹಾಗೇ ಹಾಕುತ್ತಾರೋ? ಉತ್ತಮ ಗುಣಮಟ್ಟದ ಬೆಣ್ಣೆಯನ್ನೇ ಬಳಸುತ್ತಾರೋ ಅಥವಾ ಮಾಜರಿನೋ? ಕರಿಯಲು ಯಾವ ಎಣ್ಣೆ ಅಥವಾ ವನಸ್ಪತಿ ಬಳಸುತ್ತಾರೆ? ಉತ್ತಮ ಬ್ರಾಂಡಿನದ್ದೇ? ನಂದಿನಿ ಬೆಣ್ಣೆಯನ್ನೇ ಬಳಸುತ್ತಾರೋ, ಅಥವಾ ಅದರ ಪ್ಯಾಕೆಟ್‌ನ್ನು ಎದುರಿನಲ್ಲಿಟ್ಟುಕೊಂಡು, ಅದಾವುದೋ ಡೂಪ್ಲಿಕೇಟ್ ಬೆಣ್ಣೆ ಹಾಕುತ್ತಾರೋ? ಅಥವಾ ಪದೇ ಪದೇ ಕರಿದ ಎಣ್ಣೆಯಿಂದಲೇ ಮತ್ತೆ ಕರಿಯುತ್ತಾರಾ? ಕಾಫಿ ಟೀಗೆ ನಂದಿನಿ ಹಾಲನ್ನೇ ಬಳಸುತ್ತಾರಾ ಅಥವಾ ಸಾಬೂದಾನ ಗಂಜಿಯನ್ನೇ ಅಥವಾ ಎರಡೂ ಮಿಕ್ಸ್ ಮಾಡುತ್ತಾರಾ ಎಂದು ಫ್ಯಾಕ್ಟ್‌ಚೆಕ್ ಮಾಡಿ ಜನರಿಗೆ ಸತ್ಯದರ್ಶನ ಮಾಡಿಸುವ ಮನಸ್ಸು ಮಾಡಬೇಕು. ಬರೀ ಶೂಟಿಂಗ್ ಸಮಯದಲ್ಲಿ ಒಂದು ತೋರಿಸಿ ನಂತರ ಕಳಪೆ ದರ್ಜೆಯದನ್ನು ಬಳಸದ ಎಚ್ಚರಿಕೆಯನ್ನು ತೆಗೆದುಕೊಂಡಿದ್ದರೆ ಉತ್ತಮ.

ಇದನ್ನೇ ಪರಿಚಿತ ಹೋಟೆಲ್ ಮಾಲೀಕರಿಗೆ ಯುಟ್ಯೂಬರುಗಳು ಬಂದಾಗ ಇಂಥ ಚ್ಯಾಲೆಂಜನ್ನು ಏಕೆ ತೆಗೆದುಕೊಳ್ಳಬಾರದು ಎಂದು ಕೇಳಿದೆ. ಅದಕ್ಕೆ ಅವರು 'ಇಂದಿನ ವಾತಾವರಣದಲ್ಲಿ, ದಿನಾ ರಾಶಿ ರಾಶಿ ತಯಾರು ಮಾಡುತ್ತಿರುವಾಗ ಯಾರೀ ಪೂರ್ತಿ ತೊಳೀತಾ ಕೂತಿರ್ತಾರೆ? ರುಚಿ ಇದ್ರೆ ಸಾಕು ಅಲ್ವಾ? ಇದನ್ನೆಲ್ಲಾ ಪ್ರತ್ಯಕ್ಷವಾಗಿ ತೋರಿಸುವಂತಿದ್ದರೆ ನಾವ್ಯಾಕೆ ಅಡುಗೆಮನೆಯೆದುರು 'ಅಪ್ಪಣೆ ವಿನಃ ಪ್ರವೇಶವಿಲ್ಲ' ಎಂಬ ಬೋರ್ಡು ತೂಗುಹಾಕುತ್ತಿದ್ದೆವು?' ಎನ್ನುವುದೇ?

ಎಲ್ಲರೂ ಹೀಗೆ ಮಾಡುತ್ತಾರಂತಲ್ಲ, ಕೆಲವರಾದರೂ ಈ ರೀತಿ ನಿರ್ಲಕ್ಷ್ಯದಿಂದ ತಿಂಡಿಗಳನ್ನು ತಯಾರಿಸಿ, ಗ್ರಾಹಕರ ಹೊಟ್ಟೆಗೆ ಸೇರಿಸುವುದುಂಟು! ಇವೆಲ್ಲವೂ ಯುಟ್ಯೂಬ್ ವಿಡಿಯೋದಲ್ಲೂ ಬರುವಂತಿರಬೇಕು! ಅಲ್ಲವೆ?

ಪ್ರತಿಕ್ರಿಯಿಸಿ

ವಿರಾಮ ಪುರವಣಿಯು ಹೊಸ ಅವತಾರದಲ್ಲಿ ಓದುಗರಿಗೆ ಹೊಸ ಮೋದ ಮುದವನ್ನು ಉಂಟು ಮಾಡುತ್ತಿದೆ.

16-03-25ರ ಪುರವಣಿಯಲ್ಲಿ ಮುಯ್ಯಿ ಕುರಿತ ಬರೆಹ ಗಮನ ಸೆಳೆಯಿತು. ಈ ಕುರಿತು ನನ್ನ ಅನುಭವ ಹೀಗಿದೆ. ನನ್ನ ಸ್ನೇಹಿತರೊಬ್ಬರು ಯಾವುದೇ ಸಭೆ ಸಮಾರಂಭಗಳಿಗೆ ಬರಿಗೈಯಲ್ಲಿ ಬರುತ್ತಿದ್ದರು. ಏಕೆ ಎಂದು ಕೇಳಿದಾಗ, 'ನಾನು ಕೊಟ್ಟರೆ ಅವರೂ ಕೊಡಬೇಕಾಗುತ್ತದೆ, ನಾನು ಕೊಡುವುದೂ ಬೇಡ, ಅವರಿಂದ ನಿರೀಕ್ಷೆಯೂ ಬೇಡ' ಎನ್ನುವ ಮಾತನ್ನಾಡಿದ್ದರು. ಇನ್ನೊಬ್ಬ ಮಿತ್ರರು, ಮಗನ ಮದುವೆಯ ಸಂದರ್ಭದಲ್ಲಿ ಯಾವುದೇ ಉಡುಗೊರೆ ಸ್ವೀಕರಿಸುವುದಿಲ್ಲವೆಂದು ಮುದ್ರಿಸಿದ್ದರೂ, ಹಲವರು ಉಡುಗೊರೆಗಳ ಸಮೇತವೇ ಬಂದಿದ್ದರು. ಆದರೆ ನನ್ನ ಮಿತ್ರ ಯಾವುದೇ ತರಹದ ಬಲವಂತ, ಆಗ್ರಹಕ್ಕೆ ಮಣಿಯದೆ ಅವುಗಳನ್ನು ಸ್ವೀಕರಿಸದೇ ವಾಪಸ್ ಕಳಿಸಿದರು! ಭೈರಪ್ಪನವರೊಂದಿಗೆ ಸಂತೆಶಿವರದಲ್ಲಿ ನಡೆದ ವಿದ್ಯಮಾನಗಳ ಕುರಿತ ಬರಹವು, ಸ್ವತಃ ಅಲ್ಲಿಗೆ ಹೋಗಲಾಗದ ಭೈರಪ್ಪನವರ ಮತ್ತು ಅವರ ಸಾಹಿತ್ಯದ ನನ್ನಂತಹ ಅನೇಕ ಅಭಿಮಾನಿಗಳಿಗೆ ತೃಪ್ತಿಯನ್ನು ಉಂಟುಮಾಡಿದರು. ಆದರೆ ಕೆಲವು ತಪ್ಪುಗಳು ನುಸುಳಿವೆ. ಹತ್ತಳ್ಳಿ, ಬಿದ್ದೋಗಿ, ನೀರುಬತ್ತೋಗಿ, ಒಣ್ಗೋಗಿ .. ಇವು ಕ್ರಮವಾಗಿ ಹತ್ತ್ಹಳ್ಳಿ, ಬಿದ್ಹೋಗಿ, ಬತ್ತ್ಹೋಗಿ, ಒಣ್ಗ್ಹೋಗಿ... ಎಂದಿರಬೇಕಿತ್ತಲ್ಲವೇ! ಹಾಗೆಯೋ ಗ್ರಂಥಾಲಯ ಎನ್ನುವ ಸುಂದರ ಪದವಿರುವೆಡೆ ಲೈಬ್ರರಿ ಎನ್ನುವ ಪದ ಬೇಕೇ?

• ರಾಘವೇಂದ್ರ ರಾಯಲಪಾಡು
ಬೂರಗಮಾಕಲಹಳ್ಳಿ

****

ಸಂತೆ ಶಿವರದಲ್ಲಿ ಭೈರಪ್ಪನವರೊಂದಿಗೆ' ಲೇಖನದಲ್ಲಿ ಬಿ. ಕೆ. ಮೀನಾಕ್ಷಿ ಅವರು ಸಂತೆ ಶಿವರದಲ್ಲಿ ನಡೆದ ಅಭಿನಂದನಾ ಸಮಾರಂಭದ ಸನ್ನಿವೇಶವನ್ನು ಓದುಗರ ಕಣ್ಣುಮುಂದೆ ಬಿಚ್ಚಿಟ್ಟಿದ್ದು ಇಷ್ಟವಾಯಿತು. ಖ್ಯಾತ ಕಾದಂಬರಿಕಾರರಾದ ಭೈರಪ್ಪನವರ ಕನಸಾದ ತಮ್ಮೂರಿನ ಕೆರೆಗೆ ನೀರು ತುಂಬಿಸುವ ಅಭಿಯಾನದಲ್ಲಿ ಯಶಸ್ಸು ನಿಜಕ್ಕೂ ಅನುಕರಣೀಯ.

• ಬೆಂ. ಮು. ಮಾರುತಿ

****

ವಿರಾಮದಲ್ಲಿ ಪ್ರಕಟಗೊಂಡ 'ಸಂತೆಶಿವರದಲ್ಲಿ ಭೈರಪ್ಪನವರೊಂದಿಗೆ' ಲೇಖನ ಇಷ್ಟವಾಯಿತು. ಕಾದಂಬರಿಕಾರರಾದ ಭೈರಪ್ಪನವರು, ಪ್ರಸ್ತುತ ತಾವು ಜನಿಸಿದ ಹಳ್ಳಿಯಲ್ಲಿ ವಾಸವಾಗದೇ ಇದ್ದರೂ, ತಮ್ಮ ಹಳ್ಳಿಯ ಕೆರೆಗೆ ನೀರನ್ನು ಹರಿಸಲು ಅವರು ನಡೆಸಿದ ಪ್ರಯತ್ನ ನಿಜಕ್ಕೂ ವಿಶೇಷ. ಕನ್ನಡದ ಇತರ ಸಾಹಿತಿಗಳು ಇಂತಹ ಜನಸ್ನೇಹಿ ಕಾರ್ಯಗಳನ್ನು ಮಾಡಲಿ ಎಂದು ಆಶಿಸುತ್ತೇನೆ.

• ಕೆ.ಎಸ್.ಹೆಬ್ಬಾರ್, ಜೆ.ಪಿ.ನಗರ

ನಮ್ಮ ವಿಳಾಸ: ವಿಶ್ವವಾಣಿ, ಪುರವಣಿ ವಿಭಾಗ, ಎರಡನೇ ಮಹಡಿ, ನಂ.1687, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್,ರಾಘವೇಂದ್ರ ಸ್ವಾಮಿ ದೇವಾಲಯದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು- 560098 .
ಇ-ಮೇಲ್: viramapost@gmail.com

ಗುಜರಾತಿನಲ್ಲಿ ಮಹಿಳಾ ಸಬಲೀಕರಣ!



» ಸಿ.ಎ.ವಿಲಾಸ ನಾ ಹುದ್ದಾರ



ಗುಜರಾತ್ ಮಾಡೆಲ್ ಎಂದು ಹಲವು ವಿಭಾಗಗಳಲ್ಲಿ ಹೆಸರು ಪಡೆದಿರುವ ಈ ರಾಜ್ಯದಲ್ಲಿ ನಮ್ಮ ರಾಜ್ಯದಿಂದ ಪ್ರವಾಸಕ್ಕೆ ಹೋದವರು ನೋಡಿ ತಿಳಿಯುವ ಹಲವು ವಿಶೇಷಗಳಿವೆ.

ಗುಜರಾತ ರಾಜ್ಯದ ಪ್ರವಾಸದಲ್ಲಿ ಮೊದಲಿಗೆ ನೋಡಲು ಹೋಗಿದ್ದು ಕೇವಡಿಯಾದಲ್ಲಿರುವ ಸರದಾರ ವಲ್ಲಭಭಾಯಿಯವರ ಏಕತಾ ಪ್ರತಿಮೆಯನ್ನು. ಕೇವಡಿಯಾದ ಪಾರ್ಕಿಂಗ್ ಸ್ಥಳಕ್ಕೆ ತಲುಪಿದಾಗ ಮುಂಜಾನೆಯ 10.00. ಪ್ರತಿಮೆಯ ಬಳಿಗೆ ಹೋಗಲು ಅಲ್ಲಿ ನಿರಂತರವಾಗಿ ಚಲಿಸುತ್ತಿರುವ ವಿದ್ಯುತ್ ಚಾಲಿತ ಬಸ್ಸುಗಳ ಸೇವೆ ಉಪಯೋಗಿಸಿದೆ. ಪ್ರತಿಮೆಯಿರುವ ಭಾಗದಲ್ಲಿ ಜಂಗಲ್ ಸಫಾರಿ, ಅಣೆಕಟ್ಟಿನ ಭಾಗ, ಸೆಲ್ಫಿ ಪಾಯಿಂಟ್, ಫ್ಲಾವರ್ ವ್ಯಾಲಿ ಮುಂತಾದವುಗಳು ಇರುತ್ತವೆ. ಸನಿಹದ ಜಂಗಲ್ ಸಫಾರಿ ಆಕರ್ಷಿಸಿತು.

ಜಂಗಲ್ ಸಫಾರಿಯಲ್ಲಿ ವಿವಿಧ ಭಾಗಗಳಿವೆ. ಒಂದು ಭಾಗದಿಂದ ಮುಂದಿನ ಭಾಗಕ್ಕೆ ಹೋಗಲು ವಿದ್ಯುತ ಚಾಲಿತ ಸಣ್ಣ ವಾಹನಗಳಿಗೆ (ಬಗ್ಗಿ) ಆನ್ ಲೈನ್ ಚೀಟಿ ಪಡೆಯಬಹುದು. ಮೊದಲಿನ ಭಾಗದಲ್ಲಿ ಆಫ್ರಿಕಾದ ಕಾಡು ಬೆಕ್ಕು ತನ್ನ ಪಂಜರದಲ್ಲಿ ಸುತ್ತಾಡುತ್ತಿತ್ತು. ಏಷಿಯಾದ ಸಿಂಹ ಆಲಸ್ಯದಿಂದ ಮಲಗಿದಂತಿತ್ತು. ಚಿರತೆ, ಬಿಳಿ ಸಿಂಹ, ಬೆಂಗಾಲ ಹುಲಿ, ಘೆಂಡಾ ಮೃಗ ತಮ್ಮ ತಮ್ಮ ಪಂಜರದಲ್ಲಿ ಓಡಾಡುತ್ತಿದ್ದವು. ಮುಂದಿನದು ವಿವಿಧ ಹಾವುಗಳಿರುವ ವಿಭಾಗ. ಪಕ್ಷಿಗಳಿರುವ ಧಾಮದಲ್ಲಿ ವಿವಿಧ ಪಕ್ಷಿ ಸಂಕುಲಗಳು ಕಂಡು ಬಂದವು. ಮುಂದಕ್ಕೆ ಸಾಗುತ್ತಿದ್ದಂತೆಯೇ ಸಾರಂಗ,ಚಿಗರೆಗಳು ಕಾಣ ಸಿಗುವವು. ಸೋಮಾರಿ ಕರಡಿಗಳನ್ನು ಅವುಗಳ ವಿಭಾಗದಲ್ಲಿ ನೋಡಬಹುದು. ಮೊಸಳೆಗಳು, ಓರಾಂಗುಟನ್, ಹಿಪ್ಪೋಪೊಟಾ ಮಸ್, ಸೌತ್ ಅಮೇರಿಕನ್ ಕೋಟಿ, ಕಾಡುಕೋಣಗಳ, ಜಿರಾಫೆ ಮೊದಲಾದ ಪ್ರಾಣಿಗಳು, 'ನಮ್ಮನ್ನು ಏಕೆ ಇಲ್ಲಿ ಬಂಧಿಸಿದ್ದೀರಿ?' ಎಂದು ನನ್ನನ್ನು (ಮನುಜನನ್ನು) ಕೇಳುವಂತಿತ್ತು.

ಗುಲಾಬಿ ಬಣ್ಣದ ಇ ರಿಕ್ಷಾ: ಜಂಗಲ್ ಸಫಾರಿ ಮುಗಿಸಿ ಹೊರಗಡೆ ಬಂದಾಗ ಗುಲಾಬಿ ವರ್ಣದ ಇ-ರಿಕ್ಷಾ ಸಾಲಾಗಿ ನಿಂತಿದ್ದವು. ಅವುಗಳ ಚಾಲಕರೆಲ್ಲ ಮಹಿಳೆಯರು! ಮಹಿಳಾ ಸಬಲೀಕರಣದ ಅಂಗವಾಗಿ ಗುಜರಾತಿನಲ್ಲಿ ಈ ವ್ಯವಸ್ಥೆ ಮಾಡಿದ್ದಾರೆ. ಈ ರಿಕ್ಷಾಗಳು ಅಣೆಕಟ್ಟಿನವರೆಗೆ ಬಿಟ್ಟು ಬರುತ್ತವೆ, ಸ್ವಲ್ಪ ಹೆಚ್ಚು ಹಣ ನೀಡಿದರೆ ಎಲ್ಲಾ ಸ್ಥಳಗಳಿಗೆ ಕರೆದುಕೊಂಡು ಹೋಗುತ್ತಾರೆ. ನಾನು ಸಂಪೂರ್ಣ ಸ್ಥಳಗಳನ್ನು ನೋಡಲು ರಿಕ್ಷಾ ಹತ್ತಿ ಕುಳಿತೆ. ನೀರಿಲ್ಲದ ಆಣೆಕಟ್ಟನ್ನು ನೋಡುವದಷ್ಟೇ ನನ್ನ ಭಾಗ್ಯವಾಯಿತು. ಅದರ ಕೆಳಗಡೆ ವಿದ್ಯುತ ಉತ್ಪಾದಿಸುವ ಕೇಂದ್ರ ಇದೆ. ನನ್ನ ಬಲಬದಿಗೆ ಇದ್ದ ಕಾಲುವೆಯಲ್ಲಿ ನೀರು ಹರಿಯುತ್ತ ಕಣ್ಣುಗಳಿಗೆ ತಂಪನ್ನೀಯುತ್ತಿತ್ತಲ್ಲದೇ ತಂಗಾಳಿಯು ಮೈ ಮನಸ್ಸನ್ನು ಉಲ್ಲಸಿತಗೊಳಿಸಿತು. ಕಾಲುವೆಯಗುಂಟ ಇದ್ದ ಎತ್ತರದ ಪ್ರದೇಶದಲ್ಲಿ ಕೆಳಗಿನ ಸಾಲಿನಲ್ಲಿ ನಾನಾ ಪ್ರಕಾರದ ಹೂ ಗಿಡಗಳನ್ನು ಬೆಳೆಸಿದ್ದರು. ಮುಂದಕ್ಕೆ ಸಾಗಿದರೆ ದೋಣಿ ವಿಹಾರದ ಸ್ಥಳ ಕಂಡಿತು. ಅದರ ಪಕ್ಕದಲ್ಲಿಯೇ ಸಾಲಾಗಿ ಸೆಲ್ಫೀ ಪಾಯಿಂಟ್‌ಗಳನ್ನು ಮಾಡಿದ್ದಾರೆ. ಅಲ್ಲಿ ವಿಶಾಲವಾಗಿ ಹರಡಿರುವ ನೀರಿನ ಹಿನ್ನೆಲೆಯಲ್ಲಿ ನಿಂತು ಒಂದು ಫೋಟೊ ತೆಗೆಸಿಕೊಂಡೆ.

ರಸ್ತೆಯ ಆಚೆಯ ಬದಿಗೆ ಇರುವದೇ ಟೆಂಟ್ ಸಿಟಿ. ವಿವಿಧ ಪ್ರಕಾರದ ಚೆಂದದ ಟೆಂಟ್‌ಗಳನ್ನು ನಿರ್ಮಿಸಿ ಪ್ರವಾಸಿಗರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಕೊನೆಗೆ ಸಿಗುವದೇ ರ್‍ಯಾಫ್ಟಿಂಗ್ ಪಾಯಿಂಟ್. ಮೇಲಿನಿಂದ ನೋಡಿದಾಗ ರಭಸವಾಗಿ ನೀರು ಮುನ್ನುಗ್ಗುತ್ತಿರುವುದು ಕಂಡು ಬಂದಿತು. ಸುಮಾರು ಒಂದು ಗಂಟೆ ಈ ಸ್ಥಳಗಳನ್ನೆಲ್ಲ ತೋರಿಸಿ ರಿಕ್ಷಾ ನನ್ನನ್ನು ವ್ಯಾಲಿ ಆಫ್ ಫ್ಲಾವರ್ಸ್ ಇರುವ ಸ್ಥಳಕ್ಕೆ ತಂದು ಬಿಟ್ಟಿತು.

ವ್ಯಾಲಿ ಆಫ್ ಫ್ಲಾವರ್ಸ್: ಪ್ರದೀಪಕುಮಾರ ಎಂಬ ಶಿಲ್ಪಿ ನಿರ್ಮಿಸಿದ ಒಂದು ಅರ್ಥಪೂರ್ಣ ಶಿಲ್ಪವು, ವ್ಯಾಲಿ ಆಫ್ ಫ್ಲಾವರ್ಸ್‌ಗೆ ಸ್ವಾಗತಿಸುತ್ತದೆ. ವಿವಿಧ ವಿರೋಧಾತ್ಮಕ ವಿಚಾರಗಳನ್ನು ಈ ಶಿಲ್ಪವು ಪ್ರದರ್ಶಿಸುತ್ತದೆ ಎಂದು ಅಲ್ಲಿದ್ದ ಫಲಕದ ಮೇಲೆ ಬರೆಯಲಾಗಿದೆ. ವಿವಿಧ ಪ್ರಕಾರದ ಅಂದಚೆಂದದ ಹೂಗಳು, ವಿವಿಧ ಆಕಾರದಲ್ಲಿ ಕತ್ತರಿಸಿದ ಬಳ್ಳಿಗಳಳು ಇಲ್ಲಿನ ವಿಶೇಷ. ಇದರ ಕೊನೆಯಲ್ಲಿ ಏಕತಾ ಪ್ರತಿಮೆ ಕಂಡು ಬರುತ್ತದೆ. ಇಲ್ಲಿ ಸೆಲ್ಫಿ ಪಾಯಿಂಟ್ ಮಾಡಿದ್ದಾರೆ. ವ್ಯಾಲಿ ಆಫ್ ಫ್ಲಾವರ್ಸ್ ಪಕ್ಕದಲ್ಲಿ ಮೆರ್ಝ್ ಗಾರ್ಡನ್ ಇದೆ (ಭೂಲ ಭುಲೈಯಾ).

ಸರದಾರ ಅವರ ಪ್ರತಿಮೆಯ ಕೆಳಗಿನ ಮಹಡಿಯಲ್ಲಿ ವಸ್ತುಸಂಗ್ರಾಹಲಯವಿದೆ. ಅದರ ಹಿಂದುಗಡೆಯೆ ಒಂದು ಕಿಯೋಸ್ಕ ಇದ್ದು ನಿಮಗೆ ಏಕತಾ ಪ್ರತಿಮೆಯ ಕಲ್ಪನೆ , ಸ್ಥಳದ ಆಯ್ಕೆ, ಯೋಜನೆ , ನಿರ್ಮಿಸುವಾಗಿನ ಎಲ್ಲರ ಸಹಕಾರ, ನಿರ್ಮಾಣದ ಹಂತಗಳು ಮತ್ತಿತರ ವಿಷಯಗಳನ್ನು ಸಂಕ್ಷಿಪ್ತವಾಗಿ ಪರದೆಯ ಮೇಲೆ ತೋರಿಸುತ್ತ ಹೇಳುತ್ತದೆ. ಈ ವಸ್ತುಸಂಗ್ರಹಾಲಯವು ಗುಜರಾತಿನ ವಿವಿಧ ಜನಾಂಗಗಳ, ಸರದಾರರ ಜೀವನದಲ್ಲಿ ನಡೆದ ಮಹತ್ವದ ಘಟ್ಟಗಳ ಮತ್ತು ಅವರ ವೈಯಕ್ತಕ ಜೀವನದ ಪರಿಚಯ ಮಾಡಿಕೊಡುತ್ತದೆ. ಕೊನೆಗೆ ಒಂದು ಸಭಾಂಗಣದಲ್ಲಿ ಅವರ ಜೀವನದ ಮುಖ್ಯ ಸಂಗತಿಗಳನ್ನು ವಿಡಿಯೋ ಮುಖಾಂತರ ಹೇಳುವ ಪ್ರಯತ್ನ ಮಾಡಲಾಗುತ್ತದೆ. ಸರಳ ಜೀವನ ನಡೆಸಿ, ಸಮಯ ಬಂದಾಗ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವ ಇವರ ವ್ಯಕ್ತಿತ್ವ ಈಗಿನ ರಾಜಕಾರಣಿಗಳು ಅಳವಡಿಸಿಕೊಂಡರೆ ಗಾಂಧೀಜಿಯ ರಾಮರಾಜ್ಯದ ಕನಸು ನನಸಾಗದೇ ಇರದು.

ಪರಿಸರ ರಕ್ಷಣೆಗೆ ಒತ್ತು: ಅಮೆರಿಕದ ಸ್ಟ್ಯಾಚ್ಯು ಆಫ್ ಲಿಬರ್ಟಿ ಹೆಸರನ್ನು ನೆನಪಿಸುವ ಸ್ಟ್ಯಾಚ್ಯು ಆಫ್ ಯುನಿಟಿ, ಸರದಾರ್ ಪಟೇಲರ ಸಾಹಸವನ್ನು ಗೌರವಿಸುತ್ತದೆ. 565 ಸಂಸ್ಥಾನಗಳಲ್ಲಿ ಹಂಚಿಹೋಗಿದ್ದ ಭಾರತವನ್ನು ಒಗ್ಗೂಡಿಸಿ ಏಕತ್ರ ಭಾರತದ ಕನಸನ್ನು ನನಸಾಗಿಸಿದರು. ಹೈದರಾಬಾದ ಮತ್ತು ಜುನಾಘಡ ಸಂಸ್ಥಾನಗಳು ಒಗ್ಗೂಡಲು ನಿರಾಕರಿಸಿದಾಗ ಶಕ್ತಿಪ್ರದರ್ಶನ ಮಾಡಿ ಏಕತೆಯನ್ನು ಸಾಧಿಸಿದರು. ಯುಕ್ತಿ ಮತ್ತು ಶಕ್ತಿ ಎರಡೂ ಇವರ ಸಾಮರ್ಥ್ಯವಾಗಿದ್ದವು. ಆದ್ದರಿಂದಲೇ ಅವರಿಗೆ ಉಕ್ಕಿನ ಮನುಷ್ಯ ಎಂದರು. ಈ ಪ್ರತಿಮೆಯ ಎತ್ತರ 183 ಮೀ. (597 ಅಡಿ) ಇದ್ದು ಜಗತ್ತಿನ ಅತೀ ಎತ್ತರದ ಪ್ರತಿಮೆ ಎಂದು ಪ್ರಸಿದ್ಧಿ ಪಡೆದಿದೆ. ಇದರ ಕಲ್ಪನೆ, ನಿರ್ಮಾಣ,ಯೋಜನೆ ಎಲ್ಲವೂ ಭಾರತೀಯ. ಲಿಫ್ಟ ಮುಖಾಂತರ ಪ್ರತಿಮೆಯ ಹೃದಯದ ಭಾಗಕ್ಕೆ (ಒಳಗಿನ) ಹೋದಾಗ ಹೃದಯದ ಭಾಗದಿಂದ ನೋಡಿದಾಗ ನರ್ಮದೆ ರಮಣೀಯವಾಗಿ ಮುಂದಕ್ಕೆ ಹರಿಯುತ್ತಿರುವುದು, ಆಣೆಕಟ್ಟು ಮತ್ತು ಪರ್ವತ ಶ್ರೇಣಿಗಳು ಕಂಡರೆ ಬೆನ್ನಿನ ಕಡೆಯಿಂದ ನೋಡಿದರೆ ನರ್ಮದೆ ನಿಮ್ಮ ಕಡೆಗೇ ಹರಿಯುತ್ತಿರುವಳೋ ಎಂದು ಅನಿಸುವದು. ಈ ಪ್ರತಿಮೆಯ ಸುತ್ತಲೂ ಪರಿಸರ ರಕ್ಷಣೆಗೆ ಒತ್ತು ನೀಡಿದ್ದು ಗಮನ ಸೆಳೆಯುತ್ತದೆ.

ಬೆಳಕು ಮತ್ತು ಶಬ್ದದ ಪ್ರದರ್ಶನ ವೀಕ್ಷಿಸಲು ಪ್ರತಿಮೆಯ ಎದುರಿಗೆ ಎಡಭಾಗದಲ್ಲಿ ಬೆಂಚುಗಳನ್ನು ಅಳವಡಿಸಿದ್ದಾರೆ. ಸ್ವಲ್ಪ ಬೇಗ ಹೋಗಿ ಕುಳಿತರೆ ನಿಮಗೆ ನಿಮ್ಮ ಎಡಗಡೆಗೆ ಪರ್ವತಗಳ ನಡುವೆ ಅದ್ಭುತ ಸುರ್ಯಾಸ್ತ ಕಂಡುಬರುವದು.

ನರ್ಮದಾ ಆರತಿ: ಗಂಗಾ ಆರತಿ ಮಾದರಿಯಲ್ಲಿ ನರ್ಮದಾ ತೀರದಲ್ಲಿ ನರ್ಮದಾ ಆರತಿ ಮತ್ತು ಬೆಳಕು ಮತ್ತು ಶಬ್ದದ ಪ್ರದರ್ಶನವನ್ನು ಏರ್ಪಡಿಸಿದ್ದಾರೆ. ನರ್ಮದೆಯ ತೀರದಲ್ಲಿ ಆಗುತ್ತಿರುವ ಆರತಿಯನ್ನು ನೋಡುತ್ತ

ಮತ್ತು ಸುಂದರವಾದ ಆರತಿ ಹಾಡುಗಳನ್ನು ಕೇಳುತ್ತ ಮನವು ಭಕ್ತಿ ಭಾವದಿಂದ ತುಂಬಿ ಹೋಯಿತು. ಅಲ್ಲಿ ಮೊಳಗಿದ ಶಂಖನಾದ, ಗಂಟೆಯ ನಾದ , ಭಕ್ತರ ಚಪ್ಪಾಳೆ ಭಕ್ತಿಪರವಶವನ್ನಾಗಿ ಮಾಡುವವು. ಆರತಿ ಮುಗಿಯುತ್ತಿದ್ದಂತೆಯೇ ನಮ್ಮ ಎದುರಿಗೆ ನದಿಯಲ್ಲಿ ಮೂರು ಕಾರಂಜಿಗಳು ವರ್ತುಲಾಕಾರದಲ್ಲಿ ಚಿಮ್ಮಲಾರಂಭಿಸಿದವು. ಆ ಕಾರಂಜಿಗಳೇ ಪರದೆಗಳಾಗಿ ಅವುಗಳ ಮೇಲೆ ರಾವಣನ ಗರ್ವಭಂಗದ ದೃಶ್ಯಗಳು ಮತ್ತು ಶಿವನ ತಾಂಡವ ನೃತ್ಯದ ದೃಶ್ಯಗಳು ಮೂಡಲಾರಂಬಿಸಿದಾಗ ಅಲೌಕಿಕವಾದ ಭಾವನೆಗಳು ನಮ್ಮ ಹೃದಯವನ್ನು ಆವರಿಸಿದವು. ಶಿವ ತಾಂಡವ ನೃತ್ಯವಂತೂ ಮೈಮನಗಳನ್ನು ರೋಮಾಂಚಗೊಳಿಸಿತು. ಆ ಪರಿಸ್ಥಿತಿಯಲ್ಲಿ ನಾವು ಅನುಭವಿಸಿದ ಭಾವಗಳನ್ನು ವರ್ಣಿಸಲು ಶಬ್ದಗಳೇ ಇಲ್ಲಾ. ಅನುಭವಿಸಿಯೇ ತಿಳಿದುಕೊಳ್ಳಬೇಕು.

ನರ್ಮದಾ ಆರತಿ ಮುಗಿದಾಗ ರಾತ್ರಿ 9.00 ಆಗಿತ್ತು. ಪೂರ್ತಿ ದಿನ ವಿವಿಧ ಸ್ಥಳಗಳನ್ನೂ ವೀಕ್ಷಿಸಿ ದಣಿವಾಗಿದ್ದರೂ ಮನಸ್ಸಿಗಾಗಿದ್ದ ಸಂತೃಪ್ತಿ ಅದನ್ನೆಲ್ಲ ಮರೆಸಿತ್ತು.

ಎ ಐ ಹೊರಟಿದೆ ಎಲ್ಲಿಗೆ?

» ಜಿ ಕೆ ವೆಂಕಟೇಶಮೂರ್ತಿ

ಇತ್ತೀಚಿಗೆ ಪ್ರಧಾನಿ ಮೋದಿ ಅವರು ಅಮೆರಿಕಾದ ಪಾಡ್ ಕ್ಯಾಸ್ಟರ್ ಲೆಕ್ಸ್ ಫಿಡ್ಮನ್ ಅವರೊಂದಿಗೆ ಮಾತನಾಡಿದರು; ಫೀಡ್ ಮನ್ ಅವರು ಇಂಗ್ಲೀಷ್ ನಲ್ಲಿ ಕೇಳುತ್ತಿದ್ದ ಪ್ರಶ್ನೆಗಳಿಗೆ ಮೋದಿಯವರು ಹಿಂದಿಯಲ್ಲಿ ಉತ್ತರಿಸುತ್ತಿದ್ದರು!ಆದರೆ ಭಾರತದಲ್ಲಿ ಈ ಪಾಡ್ ಕ್ಯಾಸ್ಟ್ ಅನ್ನು ವೀಕ್ಷಿಸಿದ ಜನರಿಗೆ ಫೀಡ್ಮನ್ ಸೊಗಸಾದ ಹಿಂದಿಯಲ್ಲಿ ಪ್ರಶ್ನೆ ಕೇಳುವುದು ಕಾಣಿಸಿತು! ವಿದೇಶಗಳಲ್ಲಿ ಇದರ ಇಂಗ್ಲೀಷ್ ವರ್ಷನ್ ಕೇಳಿದವರಿಗೆ ಮೋದಿಯವರು ಸೊಗಸಾದ ಇಂಗ್ಲಿಷ್‌ನಲ್ಲಿ ಮಾತನಾಡುತ್ತಿರುವುದು ಕಂಡುಬಂತು.

ಜಗತ್ತಿನಾದ್ಯಂತ ವಿವಿಧ ದೇಶಗಳಲ್ಲಿ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಕುರಿತು ಸಂಶೋಧನೆಗಳು ನಡೆಯುತ್ತಿವೆ. ಈ ಎಲ್ಲಾ ಸಂಶೋಧನೆಗಳ ಫಲ ಹೇಗೆ ಜನಸಾಮಾನ್ಯರನ್ನು ಮುಟ್ಟುತ್ತಿದೆ ಎನ್ನಲು ಈ ಪಾಡ್‌ಕಾಸ್ಟ್ ಒಂದು ಉತ್ತಮ ಸಾಕ್ಷಿಯಾಗಿದೆ.

ಈ ರೀತಿ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಡಬ್ ಮಾಡುವುದು ಹೊಸತಲ್ಲ. ಆದರೆ ಈ ಪಾಡ್ ಕ್ಯಾಸ್ಟ್ ನಲ್ಲಿ ಉಪಯೋಗಿಸಿದ ಕೃತಕ ಬುದ್ಧಿಮತ್ತೆ ಆಧರಿಸಿದ ತಂತ್ರಜ್ಞಾನ ಮೇಲ್ಮಟ್ಟದ್ದಾಗಿತ್ತು. ಇಲ್ಲಿ ಮೋದಿಯವರು ಇಂಗ್ಲಿಷ್‌ನಲ್ಲಿ ಮಾತನಾಡುತ್ತಿರುವುದನ್ನು ಕೇಳಿದಾಗ ಸ್ವತಃ ಮೋದಿಯವರೇ ಇದನ್ನು ಮಾತನಾಡುತ್ತಿರುವಂತೆ ಅನ್ನಿಸಿತು. ಇದು ಕೇವಲ ಭಾಷಾಂತರ ಆಗಿರಲಿಲ್ಲ. ಮೋದಿಯವರ ಮೂಲ ಹಿಂದಿ ಭಾಷೆಯ ''ಭಾವ'' ಇಲ್ಲಿ ಕೇಳುಗರು ಅನುಭವಿಸಬಹುದಾಗಿತ್ತು. ಧ್ವನಿಯ ಏರಿಳಿತ ಮತ್ತು ಆಗಾಗ್ಗೆ ಮೋದಿಯವರು ಸ್ವಲ್ಪ ನಿಲ್ಲಿಸುತ್ತಿದ್ದು ಕೂಡ ಯಥಾವತ್ತಾಗಿ ಇಂಗ್ಲಿಷ್ ನಲ್ಲಿ ಕಂಡುಬಂತು.

ಇದಕ್ಕಾಗಿ ಕೃತಕ ಬುದ್ಧಿಮತ್ತೆಯ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ನ್ಯೂಯಾರ್ಕ್‌ನ ''ಇಲವೆನ್ ಲ್ಯಾಬ್ಸ್'' ಎಂಬ ಸಂಸ್ಥೆಯ ಸಹಾಯ ಪಡೆಯಲಾಗಿತ್ತು. ಜಗತ್ತಿನಾದ್ಯಂತ 11 ಪ್ರಮುಖ ಭಾಷೆಗಳಲ್ಲಿ ಈ ಪಾಡ್ ಕ್ಯಾಸ್ಟ್ ಪ್ರಸಾರ ಆಯಿತು. ಈ ಪಾಡ್ ಕ್ಯಾಸ್ಟ್ ಅನ್ನು ಸ್ವತಹ ಡೊನಾಲ್ಡ್ ಟ್ರಂಪ್ ತಾವೇ ಇತ್ತೀಚಿಗೆ ಪ್ರಾರಂಭಿಸಿರುವ ''ಟ್ರುತ್'' ಎಂಬ ಸೋಶಿಯಲ್ ಮೀಡಿಯಾ ಪ್ಲ್ಯಾಟ್ ಫಾರಂಗೆ ಅಪ್ಲೋಡ್ ಮಾಡಿದ್ದಾರೆ! ಸಂದರ್ಶನದಲ್ಲಿ ಮೋದಿಯವರು ಚೀನಾದ ಬಗ್ಗೆ ಆಡಿರುವ ಒಂದೆರಡು ಒಳ್ಳೆಯ ಮಾತಿನಿಂದಾಗಿ ಚೀನಾದಲ್ಲೂ ಈ ಪಾಡ್ ಕ್ಯಾಸ್ಟ್ ಜನಪ್ರಿಯವಾಗಿದೆ.

ಈಗಾಗಲೇ ಇಂತಹ ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನವನ್ನು ಕೆಲವು ಎಲೆಕ್ಟ್ರಾನಿಕ್ ಮಾಧ್ಯಮಗಳು ಬಳಸುತ್ತಿವೆ. ನಮ್ಮ ದೇಶದಲ್ಲಿ ಅತಿ ಹೆಚ್ಚು ವೀಕ್ಷಣೆ ಹೊಂದಿರುವ ಇಂಡಿಯಾ ಟಿವಿ ಅವರ ''ಆಪ್ ಕಾ ಅದಾಲತ್'' ಎಂಬ ಕಾರ್ಯಕ್ರಮವು ಈಗ ಡಬ್ ಆಗಿ ಕನ್ನಡ, ತೆಲುಗು ಮುಂತಾದ ಭಾಷೆಗಳಲ್ಲೂ ಪ್ರಸಾರ ಆಗುತ್ತಿದೆ. ಒಂದೆರಡು ತಿಂಗಳ ಹಿಂದೆ ರಿಪಬ್ಲಿಕ್ ಟಿವಿ ಯ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ ಮೋದಿಯವರು ಕೃತಕ ಬುದ್ಧಿಮತ್ತೆಯ ಈ ತಂತ್ರಜ್ಞಾನ ಉಪಯೋಗಿಸಿ ಇತರ ಭಾರತೀಯ ಭಾಷಿಕರನ್ನು ತಲುಪುವಂತೆ ಅವರಿಗೆ ಸಲಹೆ ನೀಡಿದ್ದರು.

ಕಳೆದ ಡಿಸೆಂಬರ್ ನಲ್ಲಿ ಸೋಶಿಯಲ್ ಮೀಡಿಯಾ ಕ್ಷೇತ್ರದಲ್ಲಿ ಬಹುದೊಡ್ಡ ಹೆಸರಾದ ಯೂಟ್ಯೂಬ್ ನವರು ಕೂಡ ಈ ಡಬ್ಬಿಂಗ್ ಆಪ್ಶನ್ ಅನ್ನು ಅಳವಡಿಸಿದ್ದಾರೆ. ಅಂದರೆ ಈಗ ಕನ್ನಡ ಭಾಷೆಯ ಯೂಟ್ಯೂಬರ್ ಗಳು ತಮ್ಮ ವಿಡಿಯೋವನ್ನು ಅಪ್ಲೋಡ್ ಮಾಡುವಾಗ ಈ ಡಬ್ಬಿಂಗ್ ಆಪ್ಷನ್ ಅನ್ನು ''ಎನೇಬಲ್'' ಮಾಡಿದರೆ ಇನ್ನೂ ಹಲವಾರು ಭಾಷೆಯವರಿಗೆ ತಮ್ಮ ವಿಡಿಯೋ ತಲುಪಲು ಸಾಧ್ಯವಾಗುತ್ತದೆ. ಅವರ ವಿಡಿಯೋದ ವೀಕ್ಷಣೆ ಮಾಡುವವರ ಸಂಖ್ಯೆಯೂ ಹೆಚ್ಚಾಗುತ್ತದೆ!

ಭಾಷಣಿ: ನಮ್ಮ ಕೇಂದ್ರ ಸರ್ಕಾರದವರು ''ಭಾಷಣಿ'' ಎಂಬ ಒಂದು ಆ್ಯಪ್ ಅಭಿವೃದ್ಧಿಪಡಿಸಿದ್ದಾರೆ. ಇದು ಕೇಂದ್ರ ಸರ್ಕಾರದವರೇ ಕೃತಕ ಬುದ್ಧಿಮತ್ತೆ ಆಧರಿಸಿ ಅಭಿವೃದ್ಧಿ ಪಡಿಸಿದ್ದು, ಸುರಕ್ಷಿತ ಮತ್ತು ಉಚಿತ. ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ಲೋಡ್ ಮಾಡಿಕೊಳ್ಳಬಹುದು.

ಬ್ಯಾಂಕಿಗೆ ಹೋದಾಗ, ಅಲ್ಲಿ ಕನ್ನಡ ಅರ್ಥವಾಗದ ಸಿಬ್ಬಂದಿ ಇರುತ್ತಾರೆ ಎಂದು ಭಾವಿಸಿ. ಈ ಆಪ್ ಮೂಲಕ ನೀವು ಅವರೊಡನೆ ನಿರಾಯಾಸವಾಗಿ ಚಾಟ್ ಮಾಡಬಹುದು. ನೀವು ಕನ್ನಡದಲ್ಲಿ ಮಾತನಾಡಿದದನ್ನು ಅವರಿಗೆ ಹಿಂದಿಯಲ್ಲಿ ಹೇಳುವ ಈ ಆ್ಯಪ್ ಅವರು ಹಿಂದಿಯಲ್ಲಿ ಮಾತನಾಡಿದುದನ್ನು ನಿಮಗೆ ಕನ್ನಡದಲ್ಲಿ ಹೇಳುತ್ತದೆ! ತಮಿಳುನಾಡಿಗೆ ಪ್ರವಾಸ ಹೋದಾಗ, ಅಲ್ಲಿನ ಆಟೊ ಡ್ರೈವರ್ ಜತೆ, ಈ ಆ್ಯಪ್ ಬಳಸಿ ಸುಲಲಿತವಾಗಿ ಸಂಭಾಷಣೆ ಮಾಡಬಹುದು.

ಕೃತಕ ಬುದ್ಧಿಮತ್ತೆಯು ಜನಸಾಮಾನ್ಯರಿಗೆ ಹೇಗೆ ಸಹಾಯ ಮಾಡಬಲ್ಲದು ಎಂಬುದಕ್ಕೆ ಇದು ಒಂದು ಪುಟ್ಟ ಉದಾಹರಣೆ.

ಕುಡಿಯದವರೂ ಈ ಪುಸ್ತಕವನ್ನು ಓದಬಹುದು!

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ಕೆ.ಸಿ.ಪಾಟೀಲ, ದಾವಣಗೆರೆ

• **ಸಂಪಾದಕರೇ, ಇತ್ತೀಚಿಗೆ ನೀವು ಬರೆದ 'ಕುಡಿಯೋಣು ಬಾರಾ' ಪುಸ್ತಕವನ್ನು ಖರೀದಿಸಿದೆ. ಆದರೆ ಇನ್ನೂ ಓದಲು ಆರಂಭಿಸಿಲ್ಲ. ಒಂದು ಪತ್ರಿಕೆಯ ಸಂಪಾದಕರಾಗಿ ನೀವು 'ಕುಡಿಯಿರಿ' ಎಂದು ಆಹ್ವಾನ ಕೊಡುವುದು ಎಷ್ಟು ಸರಿ? ಈ ವಿಷಯದಲ್ಲಿ ನನಗೆ ನಿಮ್ಮ ಅಭಿಪ್ರಾಯ ಬೇಕು. ನಂತರವೇ ಆ ಪುಸ್ತಕವನ್ನು ಓದಲಾರಂಭಿಸುತ್ತೇನೆ.**

-ಪಾಟೀಲರೇ, ಮೊದಲು ನೀವು ಈ ಪುಸ್ತಕವನ್ನು ಓದಬೇಕಿತ್ತು. ಆಗ ಈ ಪ್ರಶ್ನೆಗಳೇ ಏಳುತ್ತಿರಲಿಲ್ಲ. ಕಾರಣ, ನಾನು ನಿಮ್ಮ ಪ್ರಶ್ನೆಗೆ ಅದರಲ್ಲಿ ಉತ್ತರಿಸಿದ್ದೇನೆ. ಆರಂಭದಲ್ಲಿ ನಾನು ಬರೆದ ಸಾಲುಗಳನ್ನು ಗಮನಿಸಿ - ಇವು ಕುಡಿತವನ್ನು ಉತ್ತೇಜಿಸುವ ಅಥವಾ ಪ್ರಚೋದಿಸುವ ಅಥವಾ ವಿರೋಧಿಸುವ ಬರಹಗಳಲ್ಲ. ಕಾರಣ ನಾನು ಕುಡಿತದ ಪರವೂ ಅಲ್ಲ, ವಿರೋಧಿಯೂ ಅಲ್ಲ. ನಾನು ಸಾರಾಯಿ ಸೇರಿದಂತೆ, ಜಗತ್ತಿನ ಎಲ್ಲ ಪ್ರಕಾರಗಳ ಮದ್ಯಗಳ 'ರುಚಿ' ನೋಡಿದ್ದೇನೆ. ಅವುಗಳ ಕಿಕ್ ಅನುಭವಿಸಿದ್ದೇನೆ. ಅಷ್ಟಾಗಿಯೂ ಅವುಗಳಿಂದ ಸುರಕ್ಷಿತ ಅಂತರ ಕಾಪಾಡಿಕೊಂಡಿದ್ದೇನೆ. ಕೆಲವು ಸಲ ನಾಲ್ಕೈದು ತಿಂಗಳು ಅದನ್ನು ಮುಟ್ಟುವುದೂ ಇಲ್ಲ.

'ನಾನು ಗುಂಡು ಹಾಕುತ್ತೇನೆ' ಎಂದು ಹೇಳಿದರೆ ನನ್ನ ಅನೇಕ ಮಿತ್ರರು ನಂಬುವುದಿಲ್ಲ. ಹಾಗಂತ ಕದ್ದುಮುಚ್ಚಿ ಕುಡಿಯುತ್ತೇನೆ ಎಂದು ಭಾವಿಸಬೇಕಿಲ್ಲ. ನನಗೆ ಅದರ ಮೇಲೆ ಮೋಹ, ಮೊಹಬ್ಬತ್ತು ಇಲ್ಲ. ಹಾಗಂತ ಧಿಕ್ಕಾರ, ತಿರಸ್ಕಾರವೂ ಇಲ್ಲ. ಕುಡಿಯುವವರು ಕೆಟ್ಟವರು, ಕುಡಿಯದವರು ಬಹಳ ಒಳ್ಳೆಯವರು ಎಂಬ ಭಾವನೆಯಂತೂ ಇಲ್ಲವೇ ಇಲ್ಲ. ಕಾರಣ ಕುಡಿತ ಒಳ್ಳೆಯದೂ ಅಲ್ಲ, ಕೆಟ್ಟದ್ದೂ ಅಲ್ಲ. ಹದಿನೈದು ದಿನ, ತಿಂಗಳಿಗೊಮ್ಮೆ, ಒಂದು ಪೆಗ್ ಹೀರಿದರೆ ತಪ್ಪೇನಿಲ್ಲ. ಅದನ್ನೇ ಚಟವಾಗಿ ಮಾಡಿಕೊಳ್ಳುವುದು ತಪ್ಪು. ಗುಂಡು ಹಾಕುವುದಕ್ಕೆ ಅಥವಾ ಹಾಕದಿರುವುದಕ್ಕೆ ಇದಕ್ಕಿಂತ ಮಿಗಿಲಾದ ಫಿಲಾಸಫಿ ಇದೆ ಎಂದು ನನಗೆ ಅನಿಸಿಲ್ಲ.

'ಕುಡಿಯೋಣು ಬಾರಾ' ಪುಸ್ತಕವನ್ನು ನಾನು ನಾಲ್ವರಿಗೆ ಅರ್ಪಿಸಿದ್ದೇನೆ. ಅದನ್ನು ಗಮನಿಸಿದರೆ ನಿಮಗೆ ಈ ಕೃತಿಯ ತಿರುಳು ತಿಳಿದೀತು - ಬದುಕಿನಲ್ಲಿ ಒಂದು ದಿನ ಸಹ ಬಿಡದೇ ನಿರಂತರ ಐವತ್ತೆಂಟು ವರ್ಷ ಗುಂಡು ಹಾಕಿದ ಪತ್ರಕರ್ತ ವೈಎನ್ಕೆ ಅವರಿಗೆ, ಕುಡಿದವರ ನೆರಳು ಸೋಂಕಿದರೂ ಸ್ನಾನ ಮಾಡಿ, ಸಂಧ್ಯಾವಂದನೆ ಮಾಡಿ ಬರುತ್ತಿದ್ದ ವೇದಬ್ರಹ್ಮ ಹಿರಿಯೂರು ಶೇಷಾಚಲ ವಿಷ್ಣುಮೂರ್ತಿ ಜೋಯಿಸ ಅವರಿಗೆ, ಬದುಕಿನುದ್ದಕ್ಕೂ ಜಾನಿ ವಾಕರ್ ಬ್ಲಾಕ್ ಲೇಬಲ್ ಬಿಟ್ಟು ಬೇರೇನನ್ನೂ ಕುಡಿಯದ ನಟ ಅಂಬರೀಷ್ ಅವರಿಗೆ ಮತ್ತು ಜೀವನದಲ್ಲಿ ಕುಡಿದರೆ ಗಂಗಾಜಲವನ್ನಲ್ಲದೇ ಬೇರೇನನ್ನೂ ಕುಡಿಯದ ವೇದಶ್ರೀ ಕಾಶೀ ನಂಜುಂಡ ಭಟ್ಟರಿಗೆ.

ಕುಡಿತದ ಸುತ್ತ ಇರುವ ಸಂಪ್ರದಾಯ, ಪರಂಪರೆ, ಸಾಂಸ್ಕೃತಿಕ ಆಯಾಮಗಳನ್ನು ಹೇಳುವುದಷ್ಟೇ ಆ ಕೃತಿಯ ಆಶಯ. ಇದು ಕುಡಿಯುವವರಿಗಾಗಿ ಮಾತ್ರ ಬರೆದ ಪುಸ್ತಕ ಅಲ್ಲ. ಕುಡಿಯದವರೂ ಈ ಪುಸ್ತಕವನ್ನು ಓದಬಹುದು. ಒಂದಷ್ಟು ಮಜಾ, ಮತ್ತಿನ, ಗಮ್ಮತ್ತಿನ ಕ್ಷಣಗಳಿಗೆ ಆ ಪುಸ್ತಕದ ಅಕ್ಷರಗಳನ್ನು ಸಿಪ್ ಮಾಡಬಹುದು.

ಅಂದ ಹಾಗೆ ಪುಸ್ತಕ ಓದಿ, ನಿಮ್ಮ ಅಭಿಪ್ರಾಯ ತಿಳಿಸಿ.

ರಾಘವೇಂದ್ರ, ಆಚಾರ್ಯ, ಕತ್ತರಿಗುಪ್ಪೆ

• **ಸಂಪಾದಕರೇ, ಇತ್ತೀಚಿನ ದಿನಗಳಲ್ಲಿ ನಾನು ಮೊಬೈಲ್‌ನಲ್ಲಿ ಹೆಚ್ಚು ಸಮಯ ಕಳೆಯುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಪ್ರತಿ ದಿವಸ ನಾಲ್ಕು ತಾಸಿಗಿಂತ ಅಧಿಕ ಸಮಯ ಮೊಬೈಲ್‌ನಲ್ಲಿ ಸೋರಿ ಹೋಗುತ್ತಿದೆ. ವಾಟ್ಸಪ್‌ಗಳಲ್ಲಿ ಬರುವ ಮೆಸೇಜುಗಳಿಗಂತೂ ಲೆಕ್ಕವೇ ಇಲ್ಲ. ಪ್ರತಿದಿನ ಬರುವ ಮೊಬೈಲ್ ಕರೆಗಳು ಕಮ್ಮಿಯೇನಲ್ಲ. ನನಗೆ ನನ್ನ ಮೊಬೈಲು ಬಹಳ ಕಿರಿಕಿರಿ ಕೊಡುತ್ತಿದೆ. ಇದನ್ನು ನಾನು ಹೇಗೆ ನಿಭಾಯಿಸಬೇಕು ?**

-ರಾಘವೇಂದ್ರ ಅವರೇ, ಇದು ನಿಮ್ಮದೊಂದೇ ಕಥೆಯಲ್ಲ. ಮೊಬೈಲ್ ಇಟ್ಟುಕೊಂಡವರೆಲ್ಲರ ಗೋಳೂ ಹೌದು. ಮೊಬೈಲ್ ನಮಗೆ ಎಷ್ಟು ಸಹಕಾರಿಯೋ ಅಷ್ಟೇ ಕಿರಿಕಿರಿಗಳನ್ನು ಕೊಡುತ್ತದೆ. ಈ ದಿನಗಳಲ್ಲಿ ಮೊಬೈಲ್ ಇಲ್ಲದೇ ಬದುಕಿಲ್ಲ ಎಂಬಷ್ಟರ ಮಟ್ಟಿಗೆ ಅದು ಅನಿವಾರ್ಯವಾಗಿಬಿಟ್ಟಿದೆ. ಅದರಲ್ಲೂ ನೀವು ಸೋಶಿಯಲ್ ಮೀಡಿಯಾ ಮತ್ತು ವಾಟ್ಸಾಪ್‌ಗಳನ್ನು ಹೆಚ್ಚು ಹೆಚ್ಚು ಬಳಸಿದರಂತೂ ಮುಗಿದೇ ಹೋಯಿತು. ಪ್ರತಿ ದಿವಸ ನಾವು ಮೊಬೈಲಿನಲ್ಲಿ ಎಷ್ಟು ಸಮಯವನ್ನು ಕಳೆಯುತ್ತೇವೆ ಎಂಬುದನ್ನು ಮೊಬೈಲ್ ನಲ್ಲಿರುವ ಸ್ಕ್ರೀನ್ ಟೈಮ್‌ನಿಂದ ತಿಳಿದುಕೊಳ್ಳಬಹುದು. ಪ್ರತಿ ದಿವಸ ರಾತ್ರಿ ಮಲಗುವ ಮುನ್ನ ನೀವು ಎಷ್ಟು ಹೊತ್ತು ಮೊಬೈಲ್ ಬಳಸಿದ್ದೀರಿ ಎಂಬುದನ್ನು ಗಂಭೀರವಾಗಿ ಪರಿಗಣಿಸಿದರೆ, ನಿಜಕ್ಕೂ ಮುಂದೊಂದು ನೀವು ಮೊಬೈಲನ್ನು ಬಳಸುವುದಿಲ್ಲ! ಆ ಪ್ರಮಾಣದಲ್ಲಿ ನಾವು ಪ್ರತಿ ದಿವಸ ಮೊಬೈಲ್ ಬಳಸುತ್ತೇವೆ.

ದಿನದಲ್ಲಿ ಅತಿ ಹೆಚ್ಚು ಸಮಯ ನಿದ್ದೆ ಮತ್ತು ವಿಶ್ರಾಂತಿಗೆ ಹೋದರೆ ನಂತರದ ಸ್ಥಾನ ಮೊಬೈಲ್ ಬಳಕೆಗೆ ಅಂದರೆ ನಿಮಗೆ ಆಶ್ಚರ್ಯ ಮತ್ತು ಆಘಾತ ಆದೀತು. ಮೊಬೈಲ್ ಇಲ್ಲದೆ ಈ ದಿನಗಳಲ್ಲಿ ಬದುಕುವುದು ಕಷ್ಟ. ಹಾಗಂತ ಅದಿಲ್ಲದಿದ್ದರೆ ಬದುಕೇ ಇಲ್ಲ ಎಂದು ಭಾವಿಸಬೇಕಾಗಿಲ್ಲ. ಅತಿಯಾಗಿ ಸೇವಿಸಿದರೆ ಅಮೃತವೂ ವಿಷವಾಗುವುದಂತೆ. ಮೊಬೈಲ್ ವಿಷಯದಲ್ಲಂತೂ ಈ ಮಾತು ನೂರಕ್ಕೆ ನೂರು ಸತ್ಯ.

ನಾವು ಬಳಸುವ ವಸ್ತು ಅಥವಾ ನಮಗೆ ಸಹಾಯಕವಾಗುವ ಸಂಗತಿಗಳು ಮಾರಕವಾಗಲೂಬಹುದು ಎಂಬುದಕ್ಕೆ ಸ್ಮಾರ್ಟ್‌ಫೋನ್ ದೊಡ್ಡ ನಿದರ್ಶನ. ಇಷ್ಟೆಲ್ಲಾ ಆದ ಬಳಿಕ ನೀವು ಮೊಬೈಲ್ ಬಳಕೆಯನ್ನು ಕಡ್ಡಾಯವಾಗಿ ಮಿತಿಗೊಳಿಸಲೇಬೇಕು. ಈ ದಿನಗಳಲ್ಲಿ ಸ್ಮಾರ್ಟ್‌ಫೋನ್ ಬಳಸದಿರಲು ಸಾಧ್ಯವೂ ಇಲ್ಲ. ಬರೀ ಫೋನಿಗೆ ಮಾತ್ರ ಸೀಮಿತವಾಗಿರುವ ತೀರಾ ಆರ್ಡಿನರಿ ಡಬ್ಬಾ ನೋಕಿಯಾ ಫೋನ್ ಇಟ್ಟುಕೊಳ್ಳಲೂ ಆಗುವುದಿಲ್ಲ. ಈ ವಿಷಯದಲ್ಲಿ ಸ್ವಯಂ ನಿಯಂತ್ರಣವೊಂದೇ ಉಪಾಯ. ಬಾರ್ ನಲ್ಲಿ ಮದ್ಯ ಸುರುವಿ ಕೊಡುವ bartenderನನ್ನು ಗಮನಿಸಿದ್ದೀರಾ ? ಆತ ಎಲ್ಲರಿಗೂ ಮದ್ಯವನ್ನು ಸುರುವಿಕೊಡುತ್ತಾನೆ, ಆದರೆ ತಾನು ಕುಡಿಯುವುದಿಲ್ಲ. ಸ್ಮಾರ್ಟ್‌ಫೋನ್ ಇಟ್ಟುಕೊಂಡ ಕ್ಷಣ ಅದರಲ್ಲಿ ಮುಳುಗಿ ಹೋಗಬೇಕು, ಕಳೆದು ಹೋಗಬೇಕು ಎಂದೇನೂ ಇಲ್ಲ. ಸ್ಮಾರ್ಟ್ ಫೋನ್ ಬಳಸುವುದು ಹೇಗೆ ಎಂಬ ಸ್ಮಾರ್ಟ್‌ನೆಸ್ ನಮಗೆ ಗೊತ್ತಿರಬೇಕು. ನಿಮ್ಮ ಸಮಯ ಸ್ಮಾರ್ಟ್‌ಫೋನ್ ಬಳಸುವುದರಲ್ಲಿ ಹೆಚ್ಚು ವ್ಯಯ ಆಗುತ್ತಿದ್ದರೆ ಆ ಕುರಿತು ನೀವು ಗಂಭೀರವಾಗಿ ಯೋಚಿಸುವುದು ಒಳ್ಳೆಯದು.

ಯೋಗಿ ದುರ್ಲಭಜೀ ಹೇಳುತ್ತಿದ್ದ ಒಂದು ಮಾತನ್ನು ಹೇಳುತ್ತೇನೆ – Put your phone down; the world has better graphics! ಮೊಬೈಲಿಗಿಂತ ಈ ಬದುಕು ಸುಂದರ. ಅದಕ್ಕಿಂತ ಮನುಷ್ಯರೂ ಇನ್ನೂ ಆಸಕ್ತಿದಾಯಕ. Mobiles have airplane mode—try activating 'human mode' for a change! ಮೊಬೈಲಿಗೆ ವೈಫೈ ಬೇಕು. ಆದರೆ ಮನುಷ್ಯರೊಂದಿಗೆ ಕನೆಕ್ಟ್ ಆಗಲು ವೈಫೈ ಬೇಡ. ಪ್ರತಿಯೊಂದು ಲೈಕ್ ನಿಮ್ಮ ಖುಷಿ ಅಲ್ಲ, ನಿಮ್ಮ ನಗುವೇ ನಿಮ್ಮ ನಿಜವಾದ ಖುಷಿ. ಬದುಕಿನಲ್ಲಿ ಮೊಬೈಲ್ ಹೊರತಾಗಿ ಸಾಕಷ್ಟು ಒಳ್ಳೆಯ ಸಂಗತಿಗಳಿವೆ. ಅದನ್ನೇ ಸ್ಟೇಟಸ್ ಮಾಡಿಕೊಳ್ಳುವುದು ಒಳ್ಳೆಯದು. More screen time, less dream time—choose wisely. ಮೊಬೈಲ್ ಸ್ಕ್ರೀನ್ ಸ್ಪರ್ಶಿಸುವುದಕ್ಕಿಂತ ಮನುಷ್ಯರನ್ನು ಸ್ಪರ್ಶಿಸುವುದು ಲೇಸು.

ಕೊನೆಯಲ್ಲಿ, ಒಂದು ಮಾತು ಹೇಳುತ್ತೇನೆ Your social life shouldn't depend on battery percentage. Your phone battery isn't the only thing that needs recharging—your life does too!

ಆಶಾ, (ಇಮೇಲ್ ಮೂಲಕ)

• **ಭಟ್ರೇ, ನಾನು ಪ್ರೀತಿಸುವ ಹುಡುಗ ಬರೀ ವಾಟ್ಸಪ್‌ನಲ್ಲಿ ಚಾಟ್ ಮಾಡುತ್ತಾನೆ. ನಿಜ ಹೇಳಬೇಕೆಂದರೆ, ನನಗೆ ಅದರಲ್ಲಿ ಹೆಚ್ಚು ಆಸಕ್ತಿ ಇಲ್ಲ. ಆತ ನನಗೆ ನಿತ್ಯವೂ ಪ್ರೇಮ ಪತ್ರ ಬರೆಯಬೇಕೆಂಬುದು ಬಯಸುತ್ತೇನೆ. ಅವನ್ನೆಲ್ಲ ನಾನು ಜೋಪಾನವಾಗಿ ಕಾಪಿಟ್ಟುಕೊಳ್ಳಬಹುದಲ್ಲ, ಈ ಕುರಿತು ಎಷ್ಟು ಹೇಳಿದರೂ ಆತ ಕಾಗದದಲ್ಲಿ ಪ್ರೇಮ ಪತ್ರ ಬರೆಯುವುದೇ ಇಲ್ಲ. ಆತ ನನಗೆ ಪ್ರೇಮ ಪತ್ರ ಬರೆಯುವಂತೆ ಮಾಡಲು ನಾನು ಏನು ಮಾಡಬೇಕು? ಯಾಕೆಂದರೆ, ಪ್ರೇಮಪತ್ರ ಬರುತ್ತದೆಂದು ಕಾಯುವುದ ರಲ್ಲೇ ಮಜಾ ಇದೆ. ನೀವೇನು ಹೇಳುತ್ತೀರಿ?**

-ಆಶಾ ಅವರೇ, ಈ ದಿನಗಳಲ್ಲಿ ಸಾಮಾನ್ಯವಾಗಿ ಯಾರೂ ಪ್ರೇಮಪತ್ರವನ್ನು ಬರೆಯುವುದಿಲ್ಲ. ಕಾರಣ ಅದನ್ನು ಬರೆಯುವುದು, ಅಂಚೆ ಡಬ್ಬಿಗೆ ಹಾಕುವುದು, ಎರಡು ದಿನಗಳ ನಂತರ ಅದು ನಿಮ್ಮ ಪ್ರಿಯಕರನನ್ನು ಸೇರುವುದು, ನಂತರ ಆತ ಉತ್ತರಿಸುವುದು, ಅದು ನಿಮಗೆ ಎರಡು ದಿನಗಳ ನಂತರ ಸೇರುವುದು... ಇವೆಲ್ಲ ದೀರ್ಘವಾದ ಕ್ರಿಯೆಗಳು. ಆ ನಾಲ್ಕು ದಿನಗಳಲ್ಲಿ ನೀವು ಎಷ್ಟೊಂದು ಚಾಟ್ ಮಾಡಬಹುದಲ್ಲ?

ಈ ದಿನಗಳಲ್ಲಿ ಯಾರಿಗೂ ಅಷ್ಟೊಂದು ಪುರುಸೊತ್ತು ಇರುವುದಿಲ್ಲ. ಈಗ ಪ್ರೇಮ ನಿವೇದನೆ, ಪ್ರೇಮಪತ್ರ ಬರೆಯುವುದು ಮತ್ತು ಪ್ರೇಮ ವಿನಿಮಯಗಳೆಲ್ಲವೂ ವಾಟ್ಸಾಪ್ ಚಾಟ್ ಅಥವಾ ವಿಡಿಯೋ ಚಾಟ್ ಗಳಲ್ಲಿ ಮುಗಿದು ಹೋಗುತ್ತವೆ. ನೀವೇ ಯೋಚಿಸಿ, ಪ್ರೇಮಪತ್ರ ಬರೆಯಲು ಯಾರಿಗೆ ಸಮಯವಿದೆ? ಅದರ ಬದಲು, ನೀವು ಉದ್ದವಾದ ಪ್ರೇಮಪತ್ರ ಬರೆದು, ಸ್ಕ್ಯಾನ್ ಮಾಡಿ, ಪಿಡಿಎಫ್ ಫಾರ್ಮ್ಯಾಟಿನಲ್ಲಿ ವಾಟ್ಸಾಪ್ ಮೂಲಕವೇ ಕಳಿಸಬಹುದಲ್ಲ... ಅದು ಶಾಶ್ವತವಾಗಿ ನಿಮ್ಮ ಕಂಪ್ಯೂಟರಿನಲ್ಲಿಯೇ ಇರುತ್ತದೆ.

ಹಿಂದಿನ ಕಾಲದಲ್ಲಿ ಬೇರೆ ಮಾರ್ಗಗಳಿರಲಿಲ್ಲ. ಹೀಗಾಗಿ ಪ್ರೇಮಪತ್ರ ಬರೆದು ಅಂಚೆಗೆ ಹಾಕುತ್ತಿದ್ದರು. ಪ್ರೇಮ ಪತ್ರಕ್ಕಾಗಿ ಕಾಯುವುದರಲ್ಲಿ ಏನೋ ಒಂಥರಾ ಮಜಾ ಇದ್ದಿರಬಹುದು. ಆದರೆ ನೀವು ಬರೆದ ಪ್ರೇಮಪತ್ರ ಈ ಸೋಷಿಯಲ್ ಮೀಡಿಯಾ ಜಮಾನದಲ್ಲಿ ಬೇರೆಯವರಿಗೆ ಸಿಕ್ಕರೆ ಏನಾಗಬಹುದು ಎಂದು ಯೋಚಿಸಿದ್ದೀರಾ? ಪ್ರೀತಿಯಲ್ಲಿ ಬಿದ್ದಿರುವವರು ಹುಚ್ಚು ಹುಚ್ಚಾಗಿ ಯೋಚಿಸುತ್ತಾರೆ ಅನ್ನೋದು ಗೊತ್ತು. ಹುಚ್ಚು ಹುಚ್ಚಾಗಿ ಯೋಚಿಸುವುದು ತಪ್ಪಲ್ಲ. ಆದರೆ ಪಕ್ಕಾ ಹುಚ್ಚರೇ ಆಗುವುದು ತಪ್ಪು. ಪ್ರಾಕ್ಟಿಕಲ್ ಆಗಿ ಯೋಚಿಸಿ.

ವಿಶ್ವಾಸ ಬಿ.ಹೆಗಡೆ, ಬೆಂಗಳೂರು

• **ಭಟ್ರೇ, ನಾನು ಕನ್ನಡದ ಬಹುತೇಕ ಎಲ್ಲ ಸಾಹಿತಿಗಳ ಪ್ರಮುಖ ಪುಸ್ತಕಗಳನ್ನು ಓದಿಕೊಂಡಿದ್ದೇನೆ. ನನ್ನ ಕನ್ನಡ ಭಾಷೆ ಚೆನ್ನಾಗಿದೆ ಮತ್ತು ನಾನು ಚೆನ್ನಾಗಿ ಬರೆಯಬಲ್ಲೆ ಎಂದು ನನಗೆ ಅನಿಸಿದೆ. ಆದರೆ ನಾನು ಇಲ್ಲಿ ತನಕ ಯಾವ ಪತ್ರಿಕೆಗೂ ಬರೆದಿಲ್ಲ. ನಿಮ್ಮ ಪತ್ರಿಕೆಗೆ ನನ್ನನ್ನು ಅಂಕಣಕಾರನ್ನಾಗಿ ಸೇರಿಸಿಕೊಳ್ಳುತ್ತೀರಾ ?**

-ವಿಶ್ವಾಸ ಅವರೇ, ಅಂಕಣಕಾರರಾಗಲು ಪತ್ರಿಕೆಗಳಲ್ಲಿ ಸಾಕಷ್ಟು ಬರೆದಿರಬೇಕು ಎಂಬ ನಿಯಮವೇನೂ ಇಲ್ಲ. ಉದಾಹರಣೆಗೆ, ನಮ್ಮ ಪತ್ರಿಕೆಯಲ್ಲಿ ಬರೆಯುವ ಶ್ರೀವತ್ಸ ಜೋಶಿ, ಕಿರಣ್ ಉಪಾಧ್ಯಾಯ, ಶಿಶಿರ್ ಹೆಗಡೆ ಮುಂತಾದವರು ಮೂಲತಃ ಪತ್ರಕರ್ತರಲ್ಲ. ಅವರು ಅಂಕಣಕಾರ ಆಗುದಕ್ಕಿಂತ ಮುಂಚೆ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದವರೂ ಅಲ್ಲ. ಅವರು ತಮ್ಮ ಪಾಡಿಗೆ ಬೇರೆ ಬೇರೆ ದೇಶ, ಊರುಗಳಲ್ಲಿ ಉದ್ಯೋಗ ಮಾಡಿಕೊಂಡಿದ್ದವರು. ಆದರೆ ಅವರು ಇಂದು ನಮ್ಮ ಪತ್ರಿಕೆಯ ಜನಪ್ರಿಯ ಅಂಕಣಕಾರರಾಗಿದ್ದಾರೆ ಹಾಗೂ ಸಾಕಷ್ಟು ಅಭಿಮಾನಿಗಳನ್ನು ಕಟ್ಟಿಕೊಂಡಿದ್ದಾರೆ. ಆ ಅಂಕಣಗಳನ್ನು ಸಂಗ್ರಹಿಸಿ ಪುಸ್ತಕಗಳನ್ನು ಪ್ರಕಟಿಸುವ ಮೂಲಕ ಸಾಕಷ್ಟು ಸಾಹಿತ್ಯ ಅಭಿಮಾನಿಗಳ ಪ್ರಶಂಸೆಗೂ ಪಾತ್ರರಾಗಿದ್ದಾರೆ.

ಅಂಕಣಕಾರರಿಗೆ ಮುಖ್ಯವಾಗಿ ಬೇಕಾಗುವುದು ಸಾಕಷ್ಟು ಜೀವನ ಅನುಭವ, ವೈವಿಧ್ಯಮಯ ವಿಷಯಗಳ ಆಯ್ಕೆ, ಉತ್ತಮ ಭಾಷೆ, ಸುಂದರ ನಿರೂಪಣೆ, ಆಕರ್ಷಕ ಶೈಲಿ ಹಾಗೂ ಓದಿಸಿಕೊಂಡು ಹೋಗುವ ಧಾಟಿ ಮತ್ತು ಬರೆದಷ್ಟೂ ಖಾಲಿಯಾಗದ ಸರಕು, ಪಕ್ವತೆ, ಸ್ವಾರಸ್ಯ ಕಾಪಾಡಿಕೊಳ್ಳುವ ಗುಣ. ಇವು ನಿಮ್ಮಲ್ಲಿದೆ ಎಂದು ನಿಮಗೆ ಖಾತ್ರಿಯಾದರೆ ಖಂಡಿತವಾಗಿಯೂ ನಾನು ನಿಮಗೆ ಅಂಕಣವನ್ನು ನೀಡಬಹುದು.

ಗೊತ್ತಿರಲಿ, ಅಷ್ಟಕ್ಕೂ ಅಂಕಣ ಬರೆಯುವುದು ಸುಲಭವಲ್ಲ. ಅದು ಪ್ರತಿ ವಾರದ ಪ್ರಸವ. ಬಸಿರಾಗುವುದು ಸುಲಭ ಹಡೆಯುವುದು ಕಷ್ಟ ಅಂತಾರಲ್ಲ, ಹಾಗೆಯೇ ಅಂಕಣ ಬರೆಯುವುದೂ ಕೂಡ. ಅಂಕಣ ಬರಹ ಸಾಕಷ್ಟು ಅಧ್ಯಯನ, ಚರ್ಚೆ, ಓದು, ಪ್ರವಾಸ, ಚಿಂತನೆಯನ್ನು ಅಪೇಕ್ಷಿಸುತ್ತದೆ. ಆನಂತರ ಕನಿಷ್ಠ ಮೂರರಿಂದ ನಾಲ್ಕು ತಾಸು ಪಟ್ಟಾಗಿ ಕುಳಿತು ಬರೆಯಬೇಕಾಗುತ್ತದೆ. ಅಂಕಣವನ್ನು ಆರಂಭಿಸುವುದು ಸುಲಭ, ಆದರೆ ಮುನ್ನಡೆಸಿಕೊಂಡು ಹೋಗುವುದು ಸವಾಲು. ಹಾಗಂತ ನಾನು ನಿಮ್ಮ ಉತ್ಸಾಹಕ್ಕೆ ತಣ್ಣೀರೆರಚುತ್ತಿಲ್ಲ. ಯಾವುದಕ್ಕೂ ನೀವು ನಿಮ್ಮ ನಾಲ್ಕೈದು ಅಂಕಣ ಬರಹಗಳನ್ನು ಕಳುಹಿಸಿ, ನಿಮ್ಮ ಬರಹಗಳ taste ನೋಡುತ್ತೇನೆ. ಚೆನ್ನಾಗಿದ್ದರೆ ಖಂಡಿತವಾಗಿಯೂ ನಿಮಗೆ ಅವಕಾಶ ನೀಡುತ್ತೇನೆ. 'ಮುಟ್ಟಿ ಮುಟ್ಟಿ ಮೈಯ ಹಾದಿ ಸುಗಮ, ಮೆಟ್ಟಿ ಮೆಟ್ಟಿ ಮಣ್ಣಿನ ಹಾದಿ ಸುಗಮ' ಅಂತಾರಲ್ಲ, ಅಂಕಣ ಬರಹವೂ ಹಾಗೆ. ಪ್ರಯತ್ನಿಸಿ.

ಕೆ.ಶ್ರೀಶ, (ಇಮೇಲ್ ಮೂಲಕ)

• **ಸಂಪಾದಕರೇ, ನಾನು ಕಳೆದ ಐದು ತಿಂಗಳಿಂದ ಒಬ್ಬಳನ್ನು ಪ್ರೀತಿಸುತ್ತಿದ್ದೇನೆ. ನನಗೆ ಅವಳ ರೂಪ, ಗುಣ ಎಲ್ಲವೂ ಸೇರಿ ಬರುತ್ತಿದೆ. ಆದರೆ ಅವಳ ಒಂದು ಸ್ವಭಾವ ಯಾಕೋ ಇಷ್ಟವಾಗುತ್ತಿಲ್ಲ. ಕಾರಣ ನಾನು ಹೇಳಿದ ಎಲ್ಲ ಸಂಗತಿಗಳನ್ನು ಅವಳು ಒಪ್ಪುವುದಿಲ್ಲ. ಅದರ ಬದಲು ತನ್ನ ವಾದವೇ ಸರಿ ಎಂದು ನನ್ನ ಜತೆಗೆ ವಾದಕ್ಕಿಳಿಯುತ್ತಾಳೆ, ಪ್ರಶ್ನಿಸುತ್ತಾಳೆ. ಮುಂದೆ ನಾನು ಅವಳ ಗಂಡನಾಗುವವನು ಎಂಬ ಗೌರವವು ಇಲ್ಲದೇ ನನ್ನ ಜತೆಗೆ ವಾದಿಸುತ್ತಾಳೆ. ಅವಳ ಈ ಸ್ವಭಾವವನ್ನು ಅಡ್ಜಸ್ಟ್ ಮಾಡಿಕೊಳ್ಳುವುದು ಹೇಗೆ, ಗೊತ್ತಾಗುತ್ತಿಲ್ಲ. ದಯವಿಟ್ಟು ನಿಮ್ಮ ಸಲಹೆ ಬೇಕು.**

– ಶ್ರೀಶ ಅವರೇ, ನೀವು ಹೇಳಿದ್ದನ್ನೆಲ್ಲ ಮರು ಮಾತಿಲ್ಲದೇ ಒಪ್ಪಿಕೊಳ್ಳಬೇಕು ಎಂಬ ಮನಸ್ಥಿತಿ ಒಳ್ಳೆಯದಲ್ಲ. ಇಬ್ಬರ ನಡುವೆ ಯಾವತ್ತೂ ಆರೋಗ್ಯಕರವಾದ ವಾದ-ಚರ್ಚೆ ನಡೆಯುತ್ತಿರಬೇಕು. ಹಾಗೆ ನೋಡಿದರೆ ಆರೋಗ್ಯಕರವಾದ ಚರ್ಚೆ, ನಿಷ್ಕರ್ಷೆಗಳಿಲ್ಲದೇ ಯಾವ ಸಂಗತಿಗಳೂ ಇತ್ಯರ್ಥವಾಗಬಾರದು. ನಿಮ್ಮ ಕೈಹಿಡಿಯುವವಳು ನಿಮ್ಮ ಜತೆಗೆ ವಾದ ಮಾಡುವುದು ತಪ್ಪೇನೂ ಅಲ್ಲ. ಅದನ್ನು ನೀವು, ಅವಳು ಹೆಜ್ಜೆ ಹೆಜ್ಜೆಗೂ ಪ್ರಶ್ನಿಸುತ್ತಾಳೆ ಎಂದು ಭಾವಿಸಬಾರದು.

ನಿಮ್ಮ ಸಂಗಾತಿ ನಿಮ್ಮ ಆದೇಶವನ್ನು ಕುರುಡಾಗಿ ಪಾಲಿಸುವ ಅಡಿಯಾಳು ಎಂದು ಭಾವಿಸಬಾರದು. ಅವಳು ಎತ್ತುವ ಪ್ರಶ್ನೆಗಳಿಗೆ ಸಮಾಧಾನಕರವಾದ ಉತ್ತರವನ್ನು ನೀಡಬೇಕಾದುದು ನಿಮ್ಮ ಕರ್ತವ್ಯ. ಯಾವುದೇ ವಿಷಯವನ್ನಾದರೂ ಬೇರೆಯವರಿಗೆ ಮನವರಿಕೆ ಮಾಡಿಕೊಡುವುದು ಹಾಗೂ ಅವರನ್ನು ಒಪ್ಪಿಸುವುದು ಒಂದು ಅಪರೂಪ ಕಲೆ. ಅದನ್ನು ಬೆಳೆಸಿಕೊಳ್ಳಲು ನಿಮ್ಮ ಸಂಗಾತಿಯಾಗುವವಳು ನಿಮಗೆ ಅವಕಾಶ ನೀಡುತ್ತಿದ್ದಾಳೆ ಎಂದು ಭಾವಿಸಿ. ನಮ್ಮನ್ನು ಪ್ರಶ್ನಿಸುವವರು ನಮ್ಮ ವಿರೋಧಿಗಳೂ, ಅಲ್ಲ ವೈರಿಗಳೂ ಅಲ್ಲ.

ಈ ವಿಷಯದಲ್ಲಿ ನೀವು ಉದಾರ ಭಾವ ತಾಳುವುದು ಅಗತ್ಯ. No one is dumb who is curious. The people who don't ask questions remain clueless throughout their lives ಎಂಬ ಮಾತನ್ನು ನೀವು ಕೇಳಿರಬಹುದು. To question a wise man is the beginning of wisdom ಎಂಬ ಮಾತನ್ನು ನೀವು ಒಪ್ಪಿದರೆ ನೀವು wise man ಆಗುತ್ತೀರಿ.

ಆಕೆ ವಿಷಯವನ್ನು ತಿಳಿದುಕೊಳ್ಳುವ ಬಯಕೆಯಿಂದ ಪ್ರಶ್ನಿಸುವುದಕ್ಕೂ, ಸಂದೇಹಿಸುವುದಕ್ಕೂ ವ್ಯತ್ಯಾಸವಿದೆ. ಆಗಲೂ ಅವಳು ಕೇಳುವ ಪ್ರಶ್ನೆಗಳಿಗೆ ಉತ್ತರಿಸಬೇಕಾದುದು ನಿಮ್ಮ ಧರ್ಮ. ಅಷ್ಟಕ್ಕೂ ಹೇಳುತ್ತೇನೆ, ಪ್ರಶ್ನಿಸದಿರುವ ಸಂಗಾತಿ ಇಲ್ಲವೇ ಇಲ್ಲ. ಪ್ರಶ್ನಿಸುವುದು ಹೆಂಗಸರ ಹುಟ್ಟು ಗುಣ. If you ask a stupid question, you may feel stupid; if you don't ask a stupid question, you remain stupid ಎಂಬ ಮಾತನ್ನೂ ತಳ್ಳಿ ಹಾಕುವಂತಿಲ್ಲ.